f prajavani.net | prajavani

ಶುಕ್ರವಾರ, ಜುಲೈ 3, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 183 | ಪುಟ 18

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಇಗಾ ಮುನ್ನಡೆ

ಪೋಲೆಂಡ್‌ನ ಇಗಾ ಶ್ವಾಂಟೆಕ್ ವಿಂಬಲ್ಡನ್‌ನಲ್ಲಿ ನಡೆದ ಮಹಿಳೆಯರ ಸಿಂಗಲ್ಸ್ ಎರಡನೇ ಸುತ್ತಿನ ಪಂದ್ಯದಲ್ಲಿ ಜೆಕ್ ಗಣರಾಜ್ಯದ ಕರೊಲಿನಾ ಪ್ಲಿಸ್ಕೊವಾ ವಿರುದ್ಧ ಗೆದ್ದರು

ಸೆನ್ಸೆಕ್ಸ್ 77,502 | ನಿಫ್ಟಿ 24,175 | $/₹ 95.35 | ಚಿನ್ನ (Std. 10g) ₹1,48,800 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2.43 ಲಕ್ಷ (ಬೆಂಗಳೂರು)

ನೀರಿಲ್ಲ, ಬೆಳೆ ಬೆಳೆಯಬೇಡಿ: ಸಿ.ಎಂ

ಭೀಕರ ಬರಗಾಲದ ಮುನ್ಸೂಚನೆ ಸಂಪುಟ ಸಭೆಯಲ್ಲಿ ಚರ್ಚೆ ರೈತರಿಗೆ ಡಿ.ಕೆ.ಶಿವಕುಮಾರ್ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಭೀಕರ ಬರಗಾಲ ಎದುರಾಗುವ ಮುನ್ಸೂಚನೆ ಇದೆ. ಬಹುತೇಕ ಜಲಾಶಯಗಳಲ್ಲಿ ಒಳಹರಿವು ಶೂನ್ಯಕ್ಕೆ ತಲುಪಿದೆ. ಆದ್ದರಿಂದ, ರೈತರು ಅಣೆಕಟ್ಟು ನೀರು ನಂಬಿಕೊಂಡು ಯಾವುದೇ ಕಾರಣಕ್ಕೂ ಬೆಳೆಗಳನ್ನು ಬೆಳೆಯಬಾರದು. ನೀರು ಹರಿಸುವಂತೆ ಒತ್ತಡ ಹೇರಬಾರದು ಎಂದು ಸರ್ಕಾರ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಕುರಿತು ವಿಸ್ತೃತ ಚರ್ಚೆ ನಡೆದಿದ್ದು, ಎಲ್ಲಾ ಸಚಿವರು ತಮಗೆ ವಹಿಸಿರುವ ಜಿಲ್ಲೆಗಳಿಗೆ ತೆರಳಿ ಮಳೆ ಕೊರತೆಯಿಂದ ಉಂಟಾಗಿರುವ ಪರಿಸ್ಥಿತಿಯನ್ನು ಪರಿಶೀಲನೆ ನಡೆಸುವಂತೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸೂಚಿಸಿದ್ದಾರೆ.

ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶಿವಕುಮಾರ್, 'ಈ ವರ್ಷ ರಾಜ್ಯವೂ ಸೇರಿದಂತೆ ಇಡೀ ದೇಶದಲ್ಲಿ ಭೀಕರ ಬರಗಾಲ ಎದುರಾಗುವ ಮುನ್ಸೂಚನೆಯಿದೆ. ಬಹುತೇಕ ಜಲಾಶಯಗಳಲ್ಲಿ ಒಳಹರಿವು ಶೂನ್ಯಕ್ಕೆ ತಲುಪಿದೆ. ಹೀಗಾಗಿ ಅಣೆಕಟ್ಟು ನೀರು ನಂಬಿಕೊಂಡು ಯಾವುದೇ ಕಾರಣಕ್ಕೂ ಬೆಳೆಗಳನ್ನು ಬೆಳೆಯಬೇಡಿ' ಎಂದು ರೈತರಿಗೆ ಮನವಿ ಮಾಡಿದರು.

ಡಿ ಕೆ ಶಿವಕುಮಾರ್

'ನೀರು ಹರಿಸುವ ವಿಚಾರದಲ್ಲಿ ರೈತರು ಒತ್ತಡ ಹಾಕಬಾರದು. ನೀರು ಇಲ್ಲದೆ ನೀರು ಹರಿಸಲು ಸಾಧ್ಯವಿಲ್ಲ. ಮುಂದಿನ ದಿನಗಳಲ್ಲಿ ಮಳೆ ನೋಡಿಕೊಂಡು ಆಲೋಚನೆ ಮಾಡಿ. ಮಳೆ ಬಂದರೆ ನೀರು ಪೂರೈಸುತ್ತೇವೆ. ಜಲಾಶಯಗಳು ಭರ್ತಿಯಾಗದ ಹೊರತು ಬೆಳೆಗಳನ್ನು ಹಾಕಲು ಹೋಗಬೇಡಿ' ಎಂದು ಸಲಹೆ ನೀಡಿದರು.

'ರಾಜ್ಯದಲ್ಲಿ ಬರ ಪರಿಸ್ಥಿತಿ ಗಂಭೀರವಾಗುತ್ತಿದ್ದು, ಹಲವು ಜಲಾಶಯಗಳಲ್ಲಿ ಒಳಹರಿವು ಶೇ 20ಕ್ಕಿಂತಲೂ ಕಡಿಮೆಯಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ತುಂಗಭದ್ರಾ, ಘಟಪ್ರಭಾ, ಮಲಪ್ರಭಾ, ನಾರಾಯಣಪುರ, ವಾಣಿವಿಲಾಸ ಅಣೆಕಟ್ಟುಗಳ ಒಳಹರಿವಿನ ಪ್ರಮಾಣ ಶೂನ್ಯವಾಗಿದೆ. ಕಾವೇರಿ ನದಿಪಾತ್ರದಲ್ಲಿ ಮಳೆ ಪ್ರಮಾಣ ಕುಸಿದಿದೆ. ಹೀಗಾಗಿ, ಕಾವೇರಿ ಕೊಳ್ಳದ ಜಲಾಶಯಗಳಲ್ಲೂ ಸಮಸ್ಯೆಯಿದೆ' ಎಂದರು.

'ಕಳೆದ ವರ್ಷ ಇದೇ ಅವಧಿಯಲ್ಲಿ ಹೇಮಾವತಿಯಲ್ಲಿ 80 ಟಿಎಂಸಿ ಅಡಿ ನೀರು ಇತ್ತು. ಈ ವರ್ಷ 40 ಟಿಎಂಸಿ ಅಡಿಗೆ ಕುಸಿದಿದೆ. ಕೆಆರ್‌ಎಸ್‌ನಲ್ಲಿ 100 ಟಿಎಂಸಿ ಅಡಿ ಇದ್ದ ನೀರು ಈಗ 22 ಟಿಎಂಸಿ ಅಡಿಯಷ್ಟಿದೆ. ಕಬಿನಿಯಲ್ಲಿ 79 ಟಿಎಂಸಿ ಅಡಿ ಇತ್ತು, ಈಗ 26 ಟಿಎಂಸಿ ಅಡಿಗೆ ಇಳಿದಿದೆ. ಈ ಅಣೆಕಟ್ಟುಗಳಲ್ಲಿ ಒಳಹರಿವಿನ ಪ್ರಮಾಣ ಶೇ 20ಕ್ಕೆ ಕುಸಿದಿರುವುದರಿಂದ ಸಮಸ್ಯೆ ಹೆಚ್ಚುವ ಸಾಧ್ಯತೆ ಇದೆ' ಎಂದು ಆತಂಕ ವ್ಯಕ್ತಪಡಿಸಿದರು.

'ಪ್ರಕೃತಿ ವಿಕೋಪ ಸಂಭವಿಸಿದಾಗ ನಿರ್ವಹಣೆಯ ಮೇಲುಸ್ತುವಾರಿಗೆ ಸಚಿವರನ್ನು ಈಗಾಗಲೇ ನಿಯೋಜಿಸಲಾಗಿದೆ. ಜವಾಬ್ದಾರಿ ನೀಡಿರುವ 2-3 ಜಿಲ್ಲೆಗಳಿಗೆ ತೆರಳಿ ಪರಿಶೀಲನೆ ನಡೆಸುವಂತೆ ಸಚಿವರಿಗೆ ಸೂಚನೆ ನೀಡಿದ್ದೇನೆ. ನಾನು ನಾಲ್ಕು ಕಂದಾಯ ವಿಭಾಗಗಳಿಗೂ ತೆರಳಿ ಪರಿಶೀಲನೆ ಮಾಡುತ್ತೇನೆ. ಜಿಲ್ಲಾ ಕೇಂದ್ರಗಳಿಗೂ ಹೋಗುತ್ತೇನೆ' ಎಂದರು.

'ದೇಶದಲ್ಲೇ ಭೀಕರ ಬರಗಾಲ ಬರಲಿದೆ ಎಂದು ಕೇಂದ್ರ ಸರ್ಕಾರ ಸಂದೇಶ ನೀಡಿದೆ. ನೀರು ಹಾಗೂ ವಿದ್ಯುತ್ ವಿಚಾರವಾಗಿ ಪ್ರಧಾನಿ ಈಗಾಗಲೇ ಎಚ್ಚರಿಕೆ ನೀಡಿದ್ದಾರೆ. ವಿದ್ಯುತ್ ವಿಚಾರವಾಗಿ ಇಂಧನ ಇಲಾಖೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದೇನೆ. ಮೇವು ಹಾಗೂ ಕುಡಿಯುವ ನೀರಿನ ವಿಚಾರವಾಗಿ ಜಿಲ್ಲಾ ಸಚಿವರಿಗೆ ಪ್ರವಾಸ ಕೈಗೊಳ್ಳುವಂತೆ ಸೂಚನೆ ನೀಡಿದ್ದೇನೆ. ಹಣದ ಕೊರತೆ ಇಲ್ಲ. ಅಗತ್ಯ ಇರುವ ಕಡೆಗಳಲ್ಲಿ ತುರ್ತಾಗಿ ಕೊಳವೆ ಬಾವಿ ಕೊರೆಯಲು ಕೂಡಾ ಸೂಚಿಸಲಾಗಿದೆ. ಈ ಸಂದರ್ಭದಲ್ಲಿ ನಾವು ಎಚ್ಚರಿಕೆಯಿಂದ ಇರಬೇಕು' ಎಂದರು.

'ಪ್ರಜಾಸೇವೆ'ಗೆ ಉಸ್ತುವಾರಿ ಸಚಿವರ ಭೇಟಿ ಕಡ್ಡಾಯ'

'ಜಿಲ್ಲಾ ಉಸ್ತುವಾರಿ ಸಚಿವರು ಕಡ್ಡಾಯವಾಗಿ ತಿಂಗಳಿಗೆ ಎರಡು ದಿನ (ಮೊದಲ ಹಾಗೂ ಮೂರನೇ ಶನಿವಾರ) ತಮ್ಮ ಜಿಲ್ಲೆಯ ಎರಡು ವಿಧಾನಸಭಾ ಕ್ಷೇತ್ರಗಳಿಗೆ ಭೇಟಿ ನೀಡಿ 'ಪ್ರಜಾಸೇವೆ' ಅಭಿಯಾನದಲ್ಲಿ ಭಾಗವಹಿಸಬೇಕು' ಎಂದು ಮುಖ್ಯಮಂತ್ರಿ ತಿಳಿಸಿದರು.

'ಈ ಅಭಿಯಾನ ನಡೆಯುವ ಜಾಗದಲ್ಲಿ ಎಲ್ಲ ಇಲಾಖೆಗಳ ಶಾಖೆಗಳನ್ನು ತೆರೆಯಲಾಗುವುದು. ಜಿಲ್ಲೆಗೆ ಸಂಬಂಧಿಸಿದ ಅಧಿಕಾರಿಗಳು ಅಲ್ಲಿ ಉಪಸ್ಥಿತರಿರಬೇಕು. ಕ್ಷೇತ್ರದ ಜನರಿಗೆ ಈ ಸಭೆಯ ಕುರಿತು ಮೊದಲೇ ಮಾಹಿತಿ ನೀಡಲಾಗುವುದು. ಸರ್ಕಾರವೇ ಜನರ ಮನೆ ಬಾಗಿಲಿಗೆ ಹೋಗುವಂತಾಗಬೇಕು. ನಾನು ಕೂಡ ಕೆಲವು ತಾಲ್ಲೂಕುಗಳಿಗೆ ಭೇಟಿ ನೀಡುತ್ತೇನೆ' ಎಂದರು.

'ದೂರು, ಸಮಸ್ಯೆಗಳನ್ನು, ಸಂಬಂಧಪಟ್ಟ ಇಲಾಖೆಗಳಿಗೆ ಹಾಗೂ ಜಿಲ್ಲಾ ಸಚಿವರಿಗೆ ತಲುಪಿಸುವ ಕೆಲಸವನ್ನು 'ಪ್ರಜಾಸೇವೆ' ಇಲಾಖೆ ಮಾಡಲಿದೆ. ಇದಕ್ಕೆ ಪ್ರತ್ಯೇಕ ಸಚಿವಾಲಯ ರೂಪಿಸುತ್ತಿದ್ದು, ಅದಕ್ಕೆ ಸಚಿವರನ್ನು ನೇಮಿಸಲಾಗುವುದು. ಐಎಎಸ್ ಅಧಿಕಾರಿಯನ್ನು ಕಾರ್ಯದರ್ಶಿಯಾಗಿ ನಿಯೋಜಿಸಿ, ಅಗತ್ಯ ಅಧಿಕಾರಿಗಳನ್ನು ನೀಡಲು ತೀರ್ಮಾನಿಸಲಾಗಿದೆ. ಎಲ್ಲೇ ಪ್ರತಿಭಟನೆ ನಡೆದರೂ ಅವರ ಅರ್ಜಿ ಸ್ವೀಕರಿಸಿ ಕಾನೂನುಬದ್ಧವಾಗಿ ಸಹಾಯ ಮಾಡಲು ಅವಕಾಶವಿದ್ದರೆ, ಆ ಕೆಲಸವನ್ನು ಮಾಡುತ್ತೇವೆ' ಎಂದೂ ಮುಖ್ಯಮಂತ್ರಿ ಹೇಳಿದರು.

'ವಿದ್ಯುತ್ ಪೂರೈಕೆ ಖಾಸಗೀಕರಣಕ್ಕೆ ಸಹಮತವಿಲ್ಲ'

'ವಿದ್ಯುತ್ ಪೂರೈಕೆಯ ಖಾಸಗೀಕರಣಕ್ಕೆ ಸರ್ಕಾರದ ಸಹಮತ ಇಲ್ಲ. ವಿದ್ಯುತ್ ಪೂರೈಕೆಯನ್ನು ಖಾಸಗಿಯವರಿಗೆ ನೀಡುವುದನ್ನು ವಿರೋಧಿಸಿ ಕೆಇಆರ್‌ಸಿಗೆ ಆಕ್ಷೇಪಣೆ ಸಲ್ಲಿಸುವಂತೆ ಎಲ್ಲ ಎಸ್ಕಾಂಗಳಿಗೆ ಸೂಚನೆ ನೀಡಲಾಗಿದೆ' ಎಂದು ಮುಖ್ಯಮಂತ್ರಿ ತಿಳಿಸಿದರು.

'ಹಿಂದೆ ಬಿಜೆಪಿ ಸರ್ಕಾರ ಖಾಸಗಿಯವರಿಗೆ ಪರವಾನಗಿ ಪಡೆಯಲು ಅವಕಾಶ ನೀಡಿತ್ತು. ಅದರ ಆಧಾರದಲ್ಲಿ ಟಾಟಾ ಸಂಸ್ಥೆಯವರು ಕೆಇಆರ್‌ಸಿಗೆ ಅರ್ಜಿ ಹಾಕಿದ್ದಾರೆ. ಕೆಇಆರ್‌ಸಿಯವರು ಎಸ್ಕಾಂಗಳಿಗೆ ತಿಳಿಸಿದ್ದು, ಸರ್ಕಾರದ ತೀರ್ಮಾನವನ್ನು ಎಸ್ಕಾಂಗಳಿಗೆ ತಿಳಿಸಲಾಗಿದೆ. ಈ ಬಗ್ಗೆ ಕೆಇಆರ್‌ಸಿ ತೀರ್ಮಾನ ತೆಗೆದುಕೊಳ್ಳಲಿದೆ' ಎಂದರು.

ಮಾದಾಪಟ್ಟಣದ ಕಲ್ಲು ಕ್ವಾರಿಯಲ್ಲಿ ಬಂಡೆ ಕುಸಿದು ಟ್ರಾಕ್ಟರ್‌ಗಳು ನಜ್ಜುಗುಜ್ಜಾಗಿವೆ

ಬಂಡೆ ಕುಸಿದು 7 ಕಾರ್ಮಿಕರ ಸಾವು

ಮಾದಾಪಟ್ಟಣದ ಕ್ವಾರಿಯಲ್ಲಿ ಘಟನೆ: ನಾಲ್ವರ ಸ್ಥಿತಿ ಗಂಭೀರ

ಪ್ರಜಾವಾಣಿ ವಾರ್ತೆ

ರಾಮನಗರ: ಕಲ್ಲು ಕ್ವಾರಿಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಮೇಲೆ ಬೃಹತ್ ಬಂಡೆಯೊಂದು ಕುಸಿದು ಬಿದ್ದು 7 ಕಾರ್ಮಿಕರು ಮೃತಪಟ್ಟಿದ್ದು, ನಾಲ್ವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಇದು ಬೆಂಗಳೂರು ದಕ್ಷಿಣ ತಾಲ್ಲೂಕು ತಾವರೆಕೆರೆ ಹೋಬಳಿ ಮಾದಾಪಟ್ಟಣ ಬಳಿಯ ಕ್ವಾರಿಯಲ್ಲಿ ಗುರುವಾರ ಸಂಭವಿಸಿದೆ.

ಯಾದಗಿರಿ ಜಿಲ್ಲೆಯ ರಾಮು ನಾಯ್ಕ (44), ಛತ್ತೀಸಗಢದ ರಾಜ್‌ಪಾಲ್ ಸಿಂಗ್ (36), ಧರ್ಮೇಶ್ ಸಿಂಗ್ (28), ಮಧ್ಯಪ್ರದೇಶದ ಸತ್ಯನಾರಾಯಣ ಸಿಂಗ್ (32), ರಾಮವತನ್ ಸಿಂಗ್ (33), ಭುವನೇಶ್ವರ್ ಸಿಂಗ್ (37) ಹಾಗೂ ರಾಜೇಶ್ ಪ್ರಸಾದ್ (28) ಮೃತರು.

▶ 11

> ಕ್ರಷರ್ ಮಾಲೀಕರ ನಿರ್ಲಕ್ಷ್ಯ ಹಾಗೂ ನಿಯಮ ಉಲ್ಲಂಘನೆ ಆಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ತಾತ್ಕಾಲಿಕವಾಗಿ ಇಬ್ಬರೂ ಮಾಲೀಕರ ಪರವಾನಗಿ ರದ್ದುಪಡಿಸಲಾಗುವುದು
>
> **ಕೃಷ್ಣವೇಣಿ,** ಉಪ ನಿರ್ದೇಶಕಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬೆಂಗಳೂರು ನಗರ

> ಹಿಟಾಚಿ ಆಪರೇಟರ್ ನಿರ್ಲಕ್ಷ್ಯದಿಂದಾಗಿ ಈ ಅವಘಡ ನಡೆದಿರುವುದು ಕಂಡುಬಂದಿದೆ. ಸಂಬಂಧಪಟ್ಟವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಎಲ್ಲಾ ಆಯಾಮದಿಂದಲೂ ತನಿಖೆ ನಡೆಸಲಾಗುವುದು
>
> **ಗಿರೀಶ್,** ಡಿಐಜಿ, ಕೇಂದ್ರ ವಲಯ

ಬೇಕಾಬಿಟ್ಟಿ ಬಂಡೆ ಒಡೆದಿದ್ದೇ ಕಾರಣ

ಕಲ್ಲು ಗಣಿಗಾರಿಕೆ ನಡೆಸುತ್ತಿದ್ದ ಆನಂದಸ್ವಾಮಿ ಮತ್ತು ಉದಯ್ ಶಂಕರ್ ಇಬ್ಬರೂ ಗಣಿಗಾರಿಕೆ ಮಾನದಂಡಗಳನ್ನು ಗಾಳಿಗೆ ತೂರಿ ಕ್ವಾರಿ ನಡೆಸುತ್ತಿದ್ದರು ಎಂಬ ಆರೋಪ ಕೇಳಿ ಬಂದಿದೆ. ಗಣಿಗಾರಿಕೆ ನಡೆಸುವಾಗ ಕಡ್ಡಾಯವಾಗಿ ಬಿಡಬೇಕಾದ ಬಫರ್ ವಲಯ ಬಿಟ್ಟಿರಲಿಲ್ಲ ಎಂದು ಮೂಲಗಳು ತಿಳಿಸಿವೆ.

▶ 11

ನಕಲಿ ಪ್ರಮಾಣಪತ್ರ ಜೋರು

ಸೈಬರ್ ಕೇಂದ್ರಗಳಲ್ಲಿ ಸಾರ್ವಜನಿಕರಿಗೆ ಭಾರಿ ವಂಚನೆ

• ನಾಗರಾಜ್ ಬಿ.ಎನ್.

ಹುಬ್ಬಳ್ಳಿ: ರಾಜ್ಯದಲ್ಲಿ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕಾರ್ಯ ಆರಂಭವಾಗುತ್ತಿದ್ದಂತೆಯೇ, ನಕಲಿ ದಾಖಲೆಪತ್ರಗಳ ಸೃಷ್ಟಿ ಹೆಚ್ಚಾಗುತ್ತಿದೆ. ಕೆಲ ಸೈಬರ್ ಕೇಂದ್ರದವರು ಜನನ ಪ್ರಮಾಣ ಪತ್ರ, ವಾಸ ಸ್ಥಳ ದೃಢೀಕರಣ ಪತ್ರ ಹೀಗೆ ಇನ್ನಿತರ ದಾಖಲೆಪತ್ರಗಳನ್ನು ನೀಡುವುದಾಗಿ ನಂಬಿಸಿ ಅಮಾಯಕರಿಂದ ಸಾವಿರಾರು ರೂಪಾಯಿ ವಸೂಲಿ ಮಾಡತೊಡಗಿದ್ದಾರೆ.

ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ, ವಾಸ ಸ್ಥಳ ದೃಢೀಕರಣ ಪತ್ರ ಇಲ್ಲದವರು ಜನನ ಪ್ರಮಾಣ ಪತ್ರ ಅಥವಾ ಇತರೆ ದಾಖಲೆಗಳನ್ನು ಎಸ್‌ಐಆರ್‌ಗೆ ಒದಗಿಸಬೇಕು. ಅಧಿಕೃತ ಪ್ರಮಾಣ ಪತ್ರಗಳನ್ನು ಹೇಗೆ ಪಡೆಯಬೇಕು ಎಂಬ ಮಾಹಿತಿಯಿಲ್ಲದ ಕೆಲವರು, ಕೆಲ ಸೈಬರ್ ಕೇಂದ್ರಗಳಿಂದ ವಂಚನೆಗೆ ಒಳಗಾಗಿದ್ದಾರೆ. ₹5 ಸಾವಿರದಿಂದ ₹10 ಸಾವಿರ ಹಣ ಕಳೆದುಕೊಂಡಿದ್ದಾರೆ.

ಸೈಬರ್ ಕೇಂದ್ರದವರಿಗೆ ಜನ್ಮದಿನಾಂಕ, ಹುಟ್ಟಿದ ಸ್ಥಳದ ಜೊತೆಗೆ ಹೇಳಿದಷ್ಟು ಹಣ ನೀಡಿದರೆ ಸಾಕು, ಅರ್ಧ ಗಂಟೆಯಲ್ಲಿ ಗಣಕೀಕೃತ ಜನನ ಪ್ರಮಾಣ ಪತ್ರ ಸಿಗುತ್ತದೆ. ಅದರಲ್ಲಿ ನೋಂದಣಿ ಸಂಖ್ಯೆ, ಯಾವುದೋ ಒಂದು ಆಸ್ಪತ್ರೆ ಹೆಸರು ಹಾಗೂ ಸಂಬಂಧಪಟ್ಟ ಅಧಿಕಾರಿಯ ಡಿಜಿಟಲ್ ಸಹಿ ಸಹ ಇರುತ್ತದೆ.

▶ 10

> ಎಸ್‌ಐಆರ್ ಪ್ರಕ್ರಿಯೆ ವೇಳೆ ನೀಡುವ ಪ್ರತಿ ದಾಖಲೆಯನ್ನು ಪರಿಶೀಲಿಸುತ್ತೇವೆ. ನಕಲಿ ದಾಖಲೆ ನೀಡಿದವರು ಮತ್ತು ಅವುಗಳನ್ನು ಸೃಷ್ಟಿಸಿದವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು
>
> **ರುದ್ರೇಶ ಘಾಳಿ**
>
> ಎಸ್‌ಐಆರ್ ನೋಡಲ್ ಅಧಿಕಾರಿ

> ಜನನ ಪ್ರಮಾಣ ಪತ್ರ ಇಲ್ಲದಿದ್ದರೂ, ಎಸ್‌ಐಆರ್‌ನಲ್ಲಿ ಕೇಳಿದ ಕೆಲ ದಾಖಲೆಪತ್ರಗಳನ್ನು ನೀಡಬಹುದು. ಸೇವಾಸಿಂಧು ಪೋರ್ಟಲ್ ಹಾಗೂ ಅಧಿಕೃತ ಕಚೇರಿಯಲ್ಲೇ ಪ್ರಮಾಣ ಪತ್ರ ಪಡೆಯಬೇಕು
>
> **ಮಹೇಶ ಗಸ್ತೆ,** ತಹಶೀಲ್ದಾರ್, ಹುಬ್ಬಳ್ಳಿ ಶಹರ

ಪಿ.ಎಫ್ ಕ್ಲೇಮ್ ಇತ್ಯರ್ಥ ತಡವಾದರೆ ದಂಡಬಡ್ಡಿ

ನವದೆಹಲಿ (ಪಿಟಿಐ): ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯವು 'ನೌಕರರ ಭವಿಷ್ಯ ನಿಧಿ ಯೋಜನೆ 2026' ಅನ್ನು ಅಧಿಸೂಚನೆಯಲ್ಲಿ ಪ್ರಕಟಿಸಿದ್ದು, ಪಿ.ಎಫ್. ಕ್ಲೇಮ್ ಅರ್ಜಿಗಳನ್ನು 20 ದಿನಗಳಲ್ಲಿ ಇತ್ಯರ್ಥಪಡಿಸುವುದಕ್ಕೆ ಸಂಬಂಧಿಸಿದ ನಿಯಮಗಳನ್ನು ಬಿಗಿಗೊಳಿಸಿದೆ. ಪಿ.ಎಫ್. ಕ್ಲೇಮ್ ಅರ್ಜಿ, ಪಿಂಚಣಿ ಮತ್ತು ಗುಂಪು ವಿಮಾ ಸೌಲಭ್ಯಕ್ಕೆ ಸಂಬಂಧಿಸಿದ ಅರ್ಜಿಗಳನ್ನು ಇಪಿಎಫ್‌ಒ ಅಧಿಕಾರಿಗಳು 20 ದಿನಗಳಲ್ಲಿ ಇತ್ಯರ್ಥ ಪಡಿಸದೆ ಇದ್ದರೆ ಶೇ 12ರಷ್ಟು ದಂಡ ಬಡ್ಡಿ ಪಾವತಿ ಮಾಡಬೇಕಾಗುತ್ತದೆ. ಆಯುಕ್ತರು ಸಕಾರಣ ಇಲ್ಲದೆ ಕ್ಲೇಮ್ ಅರ್ಜಿಯನ್ನು 20 ದಿನಗಳಲ್ಲಿ ಇತ್ಯರ್ಥಪಡಿಸುವಲ್ಲಿ ವಿಫಲರಾದರೆ, ಆ ದಿನದ ನಂತರದ ವಿಳಂಬಕ್ಕೆ ಆಯುಕ್ತರೇ ಹೊಣೆ ಆಗುತ್ತಾರೆ. ಕ್ಲೇಮ್ ಮೊತ್ತಕ್ಕೆ ಶೇ 12 ರಷ್ಟನ್ನು ದಂಡಬಡ್ಡಿಯಾಗಿ ವಿಧಿಸಬಹುದು ಎಂದು ನಿಯಮಗಳಲ್ಲಿ ಹೇಳಲಾಗಿದೆ.

▶ 10

ನೀಟ್/ಜೆಇಇ: ಬೋರ್ಡ್ ಪರೀಕ್ಷೆಗೆ ಶೇ 50ರಷ್ಟು ವೇಟೇಜ್

ನವದೆಹಲಿ (ಪಿಟಿಐ): ವೈದ್ಯಕೀಯ, ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕೆ ನಡೆಯುವ ನೀಟ್/ಜೆಇಇ ಪರೀಕ್ಷೆಗೆ ಶೇ 50 ಮತ್ತು ಬೋರ್ಡ್ ಪರೀಕ್ಷೆಗೆ ಶೇ 50ರಷ್ಟು 'ವೇಟೇಜ್' ನೀಡುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಪ್ರಶ್ನೆಪತ್ರಿಕೆ ಸೋರಿಕೆ, ಮೌಲ್ಯಮಾಪನ ದೋಷ ಸೇರಿದಂತೆ ಹಲವು ಬಗೆಯ ಅಕ್ರಮಗಳಿಂದ ಪರೀಕ್ಷಾ ವ್ಯವಸ್ಥೆಯ ವಿಶ್ವಾಸಾರ್ಹತೆ ಬಗ್ಗೆ ಚರ್ಚೆಗಳು ನಡೆಯುತ್ತಿರುವ ಬೆನ್ನಲ್ಲೇ ಶಿಕ್ಷಣ ಸಚಿವಾಲಯ ಈ ಕುರಿತು ಯೋಜಿಸುತ್ತಿದೆ ಎಂದು ಗೊತ್ತಾಗಿದೆ.

ನೀಟ್/ಜೆಇಇ ಮೆರಿಟ್ ಮಾಪನದ ವೇಳೆ ಬೋರ್ಡ್ ಪರೀಕ್ಷೆಯ ಶೇ 50ರಷ್ಟು ಅಂಕಗಳನ್ನೂ ಗಣನೆಗೆ ತೆಗೆದುಕೊಳ್ಳುವುದರಿಂದ ಕೋಚಿಂಗ್ ಕೇಂದ್ರಗಳ ಮೇಲಿನ ಅವಲಂಬನೆ ಕಡಿಮೆ ಆಗುತ್ತದೆ. ಅಲ್ಲದೆ ಕೆಲ ವಿದ್ಯಾರ್ಥಿಗಳು ಹಲವು ಬಾರಿ ಈ ಪ್ರವೇಶ ಪರೀಕ್ಷೆಗಳನ್ನು ಬರೆಯುವುದೂ ತಪ್ಪುತ್ತದೆ ಎಂದು ಮೂಲಗಳು ತಿಳಿಸಿವೆ.

ಪ್ರಸ್ತುತ, ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಾತಿ ಪ್ರಕ್ರಿಯೆಯು ಪ್ರವೇಶ ಪರೀಕ್ಷೆಗಳಲ್ಲಿ ಪಡೆಯುವ ಅಂಕಗಳನ್ನು ಆಧರಿಸಿವೆ. ಜತೆಗೆ ಅಭ್ಯರ್ಥಿಗಳು ಬೋರ್ಡ್ ಪರೀಕ್ಷೆಗಳಲ್ಲಿ ನಿರ್ದಿಷ್ಟ ಅರ್ಹತಾ ಅಂಕಗಳನ್ನು ಪಡೆದಿರಬೇಕು ಎಂಬ ನಿಯಮವೂ ಇದೆ.

ಕೋಚಿಂಗ್ ಕೇಂದ್ರಗಳ ಅವಲಂಬನೆ ಕಡಿಮೆ ಗೊಳಿಸುವ, 'ಡಮ್ಮಿ ಕಾಲೇಜುಗಳ' ಹರಡುವಿಕೆಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಕಳೆದ ವರ್ಷ ಶಿಕ್ಷಣ ಸಚಿವಾಲಯ ರಚಿಸಿದ್ದ ಸಮಿತಿ ಈ ಸುಧಾರಣೆಗಳ ಶಿಫಾರಸಿಗೆ ಮುಂದಾಗಿದೆ ಎಂದು ಮೂಲಗಳು ತಿಳಿಸಿವೆ.

ಸಾರಿಗೆ ನೌಕರರಿಗೆ ವೇತನ ಹೆಚ್ಚಳ: ಜುಲೈಯಿಂದ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ನಿಗಮಗಳ ನೌಕರರಿಗೆ ಶೇ 12.5ರಷ್ಟು ಮೂಲವೇತನ ಹೆಚ್ಚಳವು 2025ರ ಏಪ್ರಿಲ್‌ನಿಂದ ಅನ್ವಯವಾಗುವಂತೆ ಈ ತಿಂಗಳಿನಿಂದಲೇ ಜಾರಿಯಾಗಲಿದೆ. ಪರಿಷ್ಕೃತ ವೇತನವು ಆಗಸ್ಟ್ ಮೊದಲ ವಾರದಲ್ಲಿ ನೌಕರರ ಕೈ ಸೇರಲಿದೆ.

ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಕೆಕೆಆರ್‌ಟಿಸಿ, ಎನ್‌ಡಬ್ಲ್ಯುಆರ್‌ಟಿಸಿ ನೌಕರರ ವೇತನ ಪರಿಷ್ಕರಿಸಲು ರಾಜ್ಯ ಸರ್ಕಾರವು ಮೇ 12ರಂದು ಅನುಮೋದನೆ ನೀಡಿ ಆದೇಶ ಹೊರಡಿಸಿತ್ತು. ಪರಿಷ್ಕೃತ ವೇತನವನ್ನು ಶ್ರೇಣಿಗಳಿಗೆ ಸರಿಯಾಗಿ ನಿಗದಿ ಮಾಡುವ ವಿಧಾನದ ಬಗ್ಗೆ ಕೆಎಸ್‌ಆರ್‌ಟಿಸಿಯ ಮುಖ್ಯ ಲೆಕ್ಕಾಧಿಕಾರಿ ಆಂತರಿಕ ಸುತ್ತೋಲೆ ಹೊರಡಿಸಿದ್ದಾರೆ.

2025ರ ಮಾರ್ಚ್ 31ರಲ್ಲಿದ್ದ ಮೂಲ ವೇತನಕ್ಕೆ ಶೇ 12.50ರಷ್ಟನ್ನು ಕುಟುಂಬ ಯೋಜನೆಯ ವಿಶೇಷ ಭತ್ಯೆಯನ್ನು ಹೊರತುಪಡಿಸಿ ಕೂಡಿಸಲಾಗುವುದು ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಕೆ.ಬಿ. ಶಿವಕುಮಾರ್ ತಿಳಿಸಿದ್ದಾರೆ.

▶ 10

ಚಿನಕುರುಳಿ ಪ್ರಕಾಶ್ ಶೆಟ್ಟಿ

ಸುದರ್ಶನ್ ಸಿಲ್ಕ್ಸ್
ಆರ್. ಆರ್. ನಗರ
ಹೊಸ ಶೋರೂಮ್‌ಗೆ ಸ್ವಾಗತ
5 ಮಹಡಿಗಳು
ಅನಂತ ವೈವಿಧ್ಯ
ಒಂದೇ ವಿಶ್ವಾಸ
ಬನ್ನಿ
ಈ ಸಂಭ್ರಮಾಚರಣೆಯಲ್ಲಿ ಕುಟುಂಬ ಸಮೇತರಾಗಿ ಭಾಗವಹಿಸಿ, ನಮ್ಮ ವಿಶೇಷ ಕೊಡುಗೆಗಳ ಪ್ರಯೋಜನವನ್ನು ಪಡೆದುಕೊಳ್ಳಿ.
ನೆಲ ಮಹಡಿ ಡಿಸೈನರ್ ಸೀರೆಗಳು
ಹಬ್ಬ, ಮದುವೆ ಮತ್ತು ವಿಶೇಷ ಸಂದರ್ಭಗಳಿಗೆ ಅದ್ಭುತ ಸಂಗ್ರಹ.
1 ನೇ ಮಹಡಿ ಹೆರಿಟೇಜ್ ಕಲೆಕ್ಷನ್ಸ್
ಸಂಪ್ರದಾಯದ ಸೊಬಗನ್ನು ಹೊತ್ತ ಅಪರೂಪದ ನೇಯ್ಗೆಗಳು.
2 ನೇ ಮಹಡಿ ಮಹಿಳೆಯರ ಕೌಟೂರ್
ಆಧುನಿಕತೆ ಮತ್ತು ಸೊಬಗಿನ ವಿಶೇಷ ಉಡುಪುಗಳ ಲೋಕ.
3 ನೇ ಮಹಡಿ ಪುರುಷರ ಎಡಿಟ್
ಸಾಂಪ್ರದಾಯಿಕ ಹಾಗೂ ಟ್ರೆಂಡಿ ಪುರುಷರ ವಸ್ತ್ರಗಳ ವೈವಿಧ್ಯ.
4 ನೇ ಮಹಡಿ ಫುಡ್ ಲೌಂಜ್
ಶಾಪಿಂಗ್ ಜೊತೆಗೆ ರುಚಿಕರ ವಿರಾಮ.
1944 ರಿಂದ ವಿಶ್ವಾಸದ ಪರಂಪರೆ...
ಈಗ ಆರ್. ಆರ್. ನಗರದಲ್ಲೂ ಅದೇ ಗುಣಮಟ್ಟ,
ಅದೇ ನಂಬಿಕೆ, ಅದೇ ಅದ್ಭುತ ಶಾಪಿಂಗ್ ಅನುಭವ.
ಸುದರ್ಶನ್ ಸಿಲ್ಕ್ಸ್
Sudarshan Silks
avoncreativeforum.com
VALET PARKING | 1134, 2ND MAIN RD, BEML LAYOUT 3RD STAGE, R R NAGAR , BENGALURU -98 | 080-49929966

ಗಂಗಾನಗರದಲ್ಲಿ ಪಾದಚಾರಿ ಮಾರ್ಗ ಒತ್ತುವರಿಯನ್ನು ತೆರವು ಗೊಳಿಸಲಾಯಿತು
– ಪ್ರಜಾವಾಣಿ ಚಿತ್ರ

ವ್ಯಾಪಾರಿಗಳಿಂದ ವಿರೋಧ

ಪಾದಚಾರಿ ಮಾರ್ಗಗಳಲ್ಲಿ ಒತ್ತುವರಿ ತೆರವು ಕಾರ್ಯಾಚರಣೆಗೆ ಕೆಲವು ವ್ಯಾಪಾರಿಗಳು, ಅಂಗಡಿ ಮಾಲೀಕರು, ಬೀದಿಬದಿ ವ್ಯಾಪಾರಿಗಳು ವಿರೋಧ ವ್ಯಕ್ತಪಡಿಸಿದರು. ಆದರೆ, ವಿರೋಧವನ್ನು ಲೆಕ್ಕಿಸದೇ ಅಧಿಕಾರಿಗಳು ಕಾರ್ಯಾಚರಣೆ ಮುಂದವರಿಸಿದರು.

ನ್ಯಾಯಾಲಯಗಳ ನಿರ್ದೇಶನಗಳಂತೆ ಪಾದಚಾರಿ ಮಾರ್ಗಗಳನ್ನು ಪಾದಚಾರಿಗಳಿಗೇ ಲಭ್ಯವಾಗುವಂತೆ ಮಾಡಲು 'ಸುರಕ್ಷಿತ ಪಾದಚಾರಿ ಮಾರ್ಗ ಅಭಿಯಾನ'ವನ್ನು ಮುಂದುವರಿಸುವುದಾಗಿ ಜಿಬಿಎ ಅಧಿಕಾರಿಗಳು ತಿಳಿಸಿದ್ದಾರೆ.

ಒತ್ತುವರಿ ತೆರವು ಎರಡನೇ ದಿನವೂ ಮುಂದುವರಿಕೆ

ಶಿವಾಜಿನಗರ, ಗಾಂಧಿನಗರ, ಚಿಕ್ಕಪೇಟೆ, ಬ್ಯಾಟರಾಯನಪುರ ಸೇರಿ ಹಲವೆಡೆ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೀದಿ ಬದಿ ವ್ಯಾಪಾರಿಗಳ ವಿರೋಧದ ನಡುವೆಯೇ 'ಸುರಕ್ಷಿತ ಪಾದಚಾರಿ ಮಾರ್ಗ ಅಭಿಯಾನ' ಎರಡನೇ ದಿನವಾದ ಗುರುವಾರವೂ ಮುಂದುವರಿಯಿತು. ಶಿವಾಜಿನಗರ, ಗಾಂಧಿನಗರ, ಚಿಕ್ಕಪೇಟೆ, ಚಾಮರಾಜಪೇಟೆ, ಬ್ಯಾಟರಾಯನಪುರ, ಪುಲಕೇಶಿನಗರ, ಸರ್ವಜ್ಞ ನಗರ, ವಿದ್ಯಾರಣ್ಯಪುರ ಸಹಿತ ನಗರದ ವಿವಿಧೆಡೆ ಪಾದಚಾರಿ ರಸ್ತೆಯ ಒತ್ತುವರಿಗಳನ್ನು ತೆರವು ಮಾಡಲಾಯಿತು.

ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಪೌರ ಕಾರ್ಮಿಕರು ಮತ್ತು ಅಧಿಕಾರಿಗಳು ಒತ್ತುವರಿ ತೆರವು ಕಾರ್ಯಾಚರಣೆಯನ್ನು ಮುಂದುವರಿಸಿದ್ದು, ಮುಂದಿನ ಎಂಟು ದಿನ ನಡೆಯಲಿದೆ.

ಮೊದಲ ದಿನವಾದ ಬುಧವಾರ ಹೆಚ್ಚಾಗಿ ಬೀದಿ ಬದಿಯ ವ್ಯಾಪಾರಿಗಳ ಮೇಲೆ ಕೇಂದ್ರೀಕೃತವಾಗಿದ್ದರೆ, ಗುರುವಾರದ ಕಾರ್ಯಾಚರಣೆಯು ಅಂಗಡಿಗಳ ವಿಸ್ತರಣೆಗಳು, ಕೈಗಾಡಿಗಳು, ಲೋಹದ ಶೀಟ್‌ಗಳು ಮತ್ತು ಅಂಗಡಿಗಳು, ಪಾದಚಾರಿ ಮಾರ್ಗಗಳ ಮೇಲೆ ನಿರ್ಮಿಸಲಾದ ಮೆಟ್ಟಿಲುಗಳು, ರ್‍ಯಾಂಪ್‌ಗಳು, ಜಾಹೀರಾತು ಫಲಕಗಳು, ತಾತ್ಕಾಲಿಕ ಮಳಿಗೆಗಳು ಮತ್ತು ಇತರ ಅನಧಿಕೃತ ನಿರ್ಮಾಣಗಳನ್ನು ಕೇಂದ್ರೀಕರಿಸಿ ನಡೆಯಿತು.

ಜೆಸಿಬಿ, ಟ್ರ್ಯಾಕ್ಟರ್ ಮತ್ತು ಸಿಬ್ಬಂದಿಯನ್ನು ಬಳಸಿಕೊಂಡು ಪ್ರಮುಖ ಮತ್ತು ಉಪ-ಮುಖ್ಯ ರಸ್ತೆಗಳ ಪಾದಚಾರಿ ಮಾರ್ಗಗಳ ಒತ್ತುವರಿಯನ್ನು ತೆರವುಗೊಳಿಸಲಾಯಿತು.

ಪಾದಚಾರಿ ಮಾರ್ಗಗಳನ್ನು ಆಕ್ರಮಿಸಿಕೊಂಡಿದ್ದ ಶಾಶ್ವತ ಮತ್ತು ಅರೆ-ಶಾಶ್ವತ ಅಡೆತಡೆಗಳನ್ನು ತೆಗೆದುಹಾಕುವ ಮೂಲಕ ಪಾದಚಾರಿಗಳಿಗೆ ಜಾಗವನ್ನು ಮರುಸ್ಥಾಪಿಸುವುದಕ್ಕೆ ಹೆಚ್ಚಿನ ಒತ್ತು ನೀಡಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ 80 ಸಿಬ್ಬಂದಿ, ಆರು ಜೆಸಿಬಿಗಳು, 20 ಟ್ರ್ಯಾಕ್ಟರ್‌ಗಳು ಮತ್ತು ಐದು ಟಿಪ್ಪರ್‌ಗಳನ್ನು ನಿಯೋಜಿಸಿ 8.55 ಕಿ.ಮೀ ವ್ಯಾಪ್ತಿಯನ್ನು ಮುಕ್ತಗೊಳಿಸಲಾಯಿತು.

ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ 127 ಸಿಬ್ಬಂದಿ ಮತ್ತು 30 ಟ್ರ್ಯಾಕ್ಟರ್‌ಗಳನ್ನು ಬಳಸಿಕೊಂಡು 10.4 ಕಿ.ಮೀ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಯಿತು. ಜಯದೇವ ಆಸ್ಪತ್ರೆಯಿಂದ ಬನ್ನೇರುಘಟ್ಟ ರಸ್ತೆ, ಜಯನಗರದ ಕೆಲವು ಭಾಗಗಳು ಮತ್ತು ಪಕ್ಕದ ರಸ್ತೆಗಳನ್ನು ಒಳಗೊಂಡಿತ್ತು.

ಉತ್ತರ ನಗರ ಪಾಲಿಕೆ ವ್ಯಾಪ್ತಿಯಲ್ಲಿ 108 ಸಿಬ್ಬಂದಿ, ಒಂಬತ್ತು ಜೆಸಿಬಿಗಳು, 28 ಟ್ರ್ಯಾಕ್ಟರ್‌ಗಳು ಮತ್ತು ಒಂದು ಟಿಪ್ಪರ್ ಬಳಸಿ 12.7 ಕಿ.ಮೀ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಯಿತು.

ಪೂರ್ವ ನಗರ ಪಾಲಿಕೆಯ ಐಟಿಪಿಎಲ್ ಮುಖ್ಯ ರಸ್ತೆ, ಹೂಡಿ ಫ್ಲೈಓವರ್‌ನಿಂದ ಅಯ್ಯಪ್ಪನಗರ, ಕಾಡುಬೀಸನಹಳ್ಳಿ ಸೇತುವೆ, ಗಣೇಶ ದೇವಸ್ಥಾನ ಮತ್ತು ಮಹದೇವಪುರ ಕಾರಿಡಾರ್ ಸೇರಿದಂತೆ 7.5 ಕಿ.ಮೀ ವ್ಯಾಪ್ತಿಯಲ್ಲಿ ತೆರವುಗೊಳಿಸಲಾಯಿತು.

ಪಶ್ಚಿಮ ನಗರ ಪಾಲಿಕೆಯಲ್ಲಿ ಸುಮಾರು 5 ಕಿ.ಮೀ ವ್ಯಾಪ್ತಿಯನ್ನು ಒಳಗೊಂಡಿದ್ದು, ಇಲ್ಲಿನ ತಂಡಗಳು ತಾತ್ಕಾಲಿಕ ಮಳಿಗೆಗಳು ಮತ್ತು ಪಾದಚಾರಿ ಮಾರ್ಗದ ಅಡೆತಡೆಗಳನ್ನು ತೆಗೆದುಹಾಕಿದವು.

ಹೋಪ್ ಫಾರ್ಮ್-ವರ್ತೂರು ಕೋಡಿ ರಸ್ತೆಯಲ್ಲಿ ರೂಫ್-ಟಾಪ್ ವಿಸ್ತರಣೆಗಳು ಮತ್ತು ಜಾಹೀರಾತು ಫಲಕಗಳನ್ನು ತೆರವುಗೊಳಿಸಲಾಯಿತು. ಗಂಗಾನಗರ 5ನೇ ಮುಖ್ಯ ರಸ್ತೆಯಲ್ಲಿ ಅಂಗಡಿಗಳ ಮುಂಭಾಗದ ವಿಸ್ತರಣೆಗಳನ್ನು ಮುಕ್ತಗೊಳಿಸಲಾಯಿತು. ಹೆಸರಘಟ್ಟ ಮುಖ್ಯ ರಸ್ತೆಯಲ್ಲಿ ಅನಧಿಕೃತ ನಾಮಫಲಕಗಳನ್ನು ತೆರವುಗೊಳಿಸಲಾಯಿತು. ಕೊತ್ತನೂರಿನಲ್ಲಿ ಜ್ಯೂಸ್ ಸ್ಟಾಲ್‌ಗಳು ಸೇರಿದಂತೆ ತಾತ್ಕಾಲಿಕ ಮಳಿಗೆಗಳನ್ನು ತೆಗೆದುಹಾಕಲಾಯಿತು.

ಬನಶಂಕರಿಯಲ್ಲಿ ಅಂಗಡಿಗಳ ಒತ್ತುವರಿಯನ್ನು ತೆರವುಗೊಳಿಸಲಾಯಿತು. ಜಯನಗರದ 11ನೇ ಮುಖ್ಯ ರಸ್ತೆ ಮತ್ತು ರಾಚೇನಹಳ್ಳಿ ಮುಖ್ಯ ರಸ್ತೆಯಲ್ಲೂ ಇದೇ ರೀತಿಯ ಕ್ರಮ ಕೈಗೊಳ್ಳಲಾಗಿದ್ದು, ಪಾದಚಾರಿ ಮಾರ್ಗಕ್ಕೆ ಅಡ್ಡಿಯಾಗಿದ್ದ ಲೋಹದ ಶೀಟ್‌ಗಳನ್ನು ಕಿತ್ತು ಹಾಕಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗದಲ್ಲಿದ್ದ ಗೂಡಂಗಡಿಯನ್ನು ತೆರವು ಮಾಡಲಾಯಿತು

15ರಿಂದ ಗಿಡಗಂಟಿ ತೆರವು ಕಾರ್ಯಾಚರಣೆ

ನಗರದಲ್ಲಿರುವ ಬೃಹತ್ ಕಟ್ಟಡ ತ್ಯಾಜ್ಯ ಹಾಗೂ ಗಿಡಗಂಟಿಗಳ ತೆರವು ಅಭಿಯಾನವನ್ನು ಜುಲೈ 15ರ ನಂತರ ಆರಂಭಿಸಲು ಯೋಜನೆ ರೂಪಿಸಬೇಕು. ಈ ಅಭಿಯಾನವನ್ನು ನಗರ ಪಾಲಿಕೆ, ಮೆಟ್ರೊ ಹಾಗೂ ರೈಲ್ವೆ ಇಲಾಖೆಗಳ ಸಹಯೋಗದಲ್ಲಿ ನಡೆಸಬೇಕು ಎಂದು ಸಚಿವ ಕೃಷ್ಣ ಬೈರೇಗೌಡ ಹೇಳಿದರು.

'ಬೀದಿಬದಿ ವ್ಯಾಪಾರಿಗಳ ತೆರವು ಅಲ್ಲ, ಸ್ಥಳಾಂತರ'

ಸಚಿವ ಸ್ಪಷ್ಟನೆ

ಬೀದಿ ಬದಿ ವ್ಯಾಪಾರಿಗಳನ್ನು ತೆರವು ಮಾಡುತ್ತಿಲ್ಲ. ಮುಖ್ಯ ರಸ್ತೆ, ಉಪ ಮುಖ್ಯ ರಸ್ತೆಗಳಿಂದ ವಾರ್ಡ್ ರಸ್ತೆಗಳಿಗೆ ಸ್ಥಳಾಂತರ ಮಾಡಲಾಗುತ್ತಿದೆ ಎಂದು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಸ್ಪಷ್ಟನೆ ನೀಡಿದರು.

ಒತ್ತುವರಿ ತೆರವು ಕಾರ್ಯಾಚರಣೆ ಕುರಿತ ಅಧಿಕಾರಿಗಳ ಜೊತೆ ನಡೆದ ವರ್ಚುವಲ್ ಸಭೆಯಲ್ಲಿ ಅವರು ಮಾತನಾಡಿದರು. ಪಾದಚಾರಿ ಮಾರ್ಗಗಳ ತೆರವು ಕಾರ್ಯಾಚರಣೆಗೆ ಸಂಬಂಧಿಸಿದಂತೆ ಬೀದಿ ಬದಿ ವ್ಯಾಪಾರಿಗಳ ಸಂಘಟನೆ ಸಹಿತ ಹಲವರ ವಿರೋಧ ವ್ಯಕ್ತವಾದ ಮರುದಿನವೇ ಈ ಸ್ಪಷ್ಟನೆ ಬಂದಿದೆ.

ಬೀದಿ ಬದಿ ವ್ಯಾಪಾರಿಗಳನ್ನಷ್ಟೇ ಗುರಿಯಾಗಿಸಿಕೊಳ್ಳದೆ, ಪಾದಚಾರಿ ಮಾರ್ಗಗಳಲ್ಲಿರುವ ಅಡೆತಡೆಗಳನ್ನು, ಅನಾಥ ವಾಹನಗಳನ್ನು, ಕಾನೂನುಬಾಹಿರವಾಗಿ ನಿಲ್ಲಿಸಿದ ವಾಹನಗಳನ್ನು ತೆರವುಗೊಳಿಸಬೇಕು. ಹಂತ ಹಂತವಾಗಿ ಎಲ್ಲ ತರಹದ ಒತ್ತುವರಿಗಳನ್ನು ತೆರವು ಮಾಡಬೇಕು ಎಂದು ಹೇಳಿದರು.

ಪ್ರಮುಖ ಮತ್ತು ಎರಡನೇ ಪ್ರಮುಖ ರಸ್ತೆಗಳನ್ನು ಹೊರತುಪಡಿಸಿ ಉಳಿದ ವಾರ್ಡ್ ರಸ್ತೆಗಳಲ್ಲಿ ಬೀದಿ ಬದಿ ವ್ಯಾಪಾರಕ್ಕೆ ಅವಕಾಶ ಕಲ್ಪಿಸಿಕೊಡಬೇಕು. ಇರುವ ವ್ಯವಸ್ಥೆಯನ್ನು ಸಮರ್ಪಕವಾಗಿ ಬಳಸಿಕೊಂಡು ಕಾರ್ಯ ನಿರ್ವಹಿಸಿದರೆ ಸಾರ್ವಜನಿಕರ ಬೆಂಬಲವೂ ದೊರೆಯುತ್ತದೆ. ಅಸಾಧ್ಯವೆನಿಸುವ ಕೆಲಸವನ್ನೂ ಸಾಧಿಸಬಹುದು ಎಂದು ತಿಳಿಸಿದರು.

ಪಾದಚಾರಿ ಮಾರ್ಗಗಳ ಒತ್ತುವರಿ ತೆರವುಗೊಳಿಸಿದ ರಸ್ತೆಗಳಲ್ಲಿ ತಕ್ಷಣವೇ ಅಭಿವೃದ್ಧಿ ಕಾಮಗಾರಿಗಳನ್ನು ಆರಂಭಿಸಬೇಕು. ಇತರೆ ರಸ್ತೆಗಳಲ್ಲಿ ಪಾದಚಾರಿ ಮಾರ್ಗಗಳ ಒತ್ತುವರಿಯನ್ನು ನಿರಂತರವಾಗಿ ತೆರವುಗೊಳಿಸುವ ಕಾರ್ಯವೂ ಸಮಾನಾಂತರವಾಗಿ ನಡೆಯಬೇಕು ಎಂದು ಸೂಚಿಸಿದರು.

ಮನೆಗಳು ಹಾಗೂ ವಾಣಿಜ್ಯ ಕಟ್ಟಡಗಳ ಮುಂಭಾಗದಲ್ಲಿ ವಾಹನಗಳ ಪ್ರವೇಶಕ್ಕಾಗಿ ಪಾದಚಾರಿ ಮಾರ್ಗಗಳ ಮೇಲೆ ರ್‍ಯಾಂಪ್‌ಗಳನ್ನು ನಿರ್ಮಿಸಲಾಗಿದೆ. ಇದರಿಂದ ಪಾದಚಾರಿಗಳ ಓಡಾಟಕ್ಕೆ ತೀವ್ರ ತೊಂದರೆಯಾಗುತ್ತಿದೆ. ಮುಂದಿನ ಹಂತದಲ್ಲಿ ಇಂತಹ ರ್‍ಯಾಂಪ್‌ಗಳನ್ನು ತೆರವುಗೊಳಿಸುವ ವಿಶೇಷ ಕಾರ್ಯಾಚರಣೆಯನ್ನು ಕೈಗೆತ್ತಿಕೊಳ್ಳುವಂತೆ ನಿರ್ದೇಶನ ನೀಡಿದರು. ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್, ನಗರ ಪಾಲಿಕೆಗಳ ಆಯುಕ್ತರಾದ ರಮೇಶ್ ಡಿ.ಎಸ್., ಪೊಮ್ಮಲ ಸುನೀಲ್ ಕುಮಾರ್, ಜಿ. ಜಗದೀಶ್, ರಮೇಶ್ ಕೆ.ಎನ್., ರಾಜೇಂದ್ರ ಕೆ.ವಿ. ಉಪಸ್ಥಿತರಿದ್ದರು.

10ರಿಂದ ಅನಾಥ ವಾಹನಗಳ ತೆರವು ಅಭಿಯಾನ

ನಗರದ ರಸ್ತೆ ಬದಿಗಳಲ್ಲಿ ನಿಂತಿರುವ ವಾರಸುದಾರರಿಲ್ಲದ ವಾಹನಗಳ ತೆರವು ಕಾರ್ಯಾಚರಣೆಯನ್ನು ಜುಲೈ 10ರಿಂದ ಆರಂಭಿಸಬೇಕು ಎಂದು ಸಚಿವ ಕೃಷ್ಣ ಬೈರೇಗೌಡ ಅಧಿಕಾರಿಗಳಿಗೆ ಸೂಚಿಸಿದರು.

ನಗರ ಪಾಲಿಕೆ ಹಾಗೂ ಸಂಚಾರ ವಿಭಾಗದ ಪೊಲೀಸರ ಸಮನ್ವಯದೊಂದಿಗೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ವ್ಯವಸ್ಥಿತ ಕಾರ್ಯಯೋಜನೆ ರೂಪಿಸಿ ಅಭಿಯಾನವನ್ನು ಪರಿಣಾಮಕಾರಿಯಾಗಿ ನಡೆಸಬೇಕು ಎಂದರು.

ಬೀದಿಬದಿ ವ್ಯಾಪಾರಿಗಳಿಗೆ ವಾಹನ ವಿತರಣೆ – ಸಿ.ಎಂ

'ಬೀದಿಬದಿ ವ್ಯಾಪಾರಿಗಳಿಗೆ ವಾಹನ ವಿತರಣೆ ಯೋಜನೆ ಶೀಘ್ರದಲ್ಲಿ ಜಾರಿಗೆ ತರಲಾಗುವುದು' ಎಂದು ಸಿ.ಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಪಾದಚಾರಿ ಮಾರ್ಗದ ಒತ್ತುವರಿ ತೆರವು ಕುರಿತು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿ, 'ಸುಪ್ರೀಂ ಕೋರ್ಟ್ ಆದೇಶ ಅನುಸಾರ ಪಾದಚಾರಿ ಮಾರ್ಗ ಒತ್ತುವರಿ ತೆರವಿಗೆ ಎಲ್ಲ ಪಕ್ಷಗಳ ಶಾಸಕರು ಒಪ್ಪಿಗೆ ನೀಡಿದ್ದಾರೆ' ಎಂದರು.

'ಬೆಂಗಳೂರು ನಗರಾಭಿವೃದ್ಧಿ ಸಚಿವರು ಬೀದಿ ಬದಿ ವ್ಯಾಪಾರಿಗಳ ವಿಚಾರವಾಗಿ ಎಲ್ಲ ಮಾಹಿತಿಗಳನ್ನು ಹಂಚಿಕೊಂಡಿದ್ದಾರೆ. ಈ ವಿಚಾರವಾಗಿ ವಿರೋಧ ಪಕ್ಷದ ಶಾಸಕರ ಜೊತೆ ಹಿಂದೆ ಚರ್ಚೆ ಮಾಡಿದ್ದೆ' ಎಂದರು.

'37 ಸಾವಿರ ಜನ ಬೀದಿಬದಿ ವ್ಯಾಪಾರಿಗಳು ನೋಂದಣಿ ಮಾಡಿಸಿಕೊಂಡಿದ್ದು, ಅವರಿಗೆ ವಾಹನ ವಿತರಿಸಲು ನಾವು ಮುಂದಾಗಿದ್ದೇವೆ. ಸುಮಾರು 60 ಸಾವಿರ ಬೀದಿಬದಿ ವ್ಯಾಪಾರಿಗಳ ಸಮೀಕ್ಷೆ ಮಾಡಿದ್ದೇವೆ. ವ್ಯಾಪಾರಿಗಳನ್ನು ತೆರವುಗೊಳಿಸುವಂತೆ ಜನರಿಂದಲೂ ಒತ್ತಡ ಇತ್ತು. ಅವರಿಗೆ ಮುಖ್ಯ ರಸ್ತೆಗಳ ಬದಲಿಗೆ ಬೇರೆಡೆ ಅವಕಾಶ ಕಲ್ಪಿಸುವೆವು' ಎಂದರು.

ಹೊರ ವರ್ತುಲ ರಸ್ತೆಯಲ್ಲಿ ತಡರಾತ್ರಿ ಪರಿಶೀಲನೆ

ಅಧಿಕಾರಿಗಳಿಗೆ ಸಚಿವ ಕೃಷ್ಣ ಬೈರೇಗೌಡ ತರಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೊಡ್ಡನೆಕ್ಕುಂದಿ ಜಂಕ್ಷನ್ ಬಳಿ ಸರ್ವೀಸ್ ರಸ್ತೆಯಲ್ಲಿ ಗುಂಡಿಗಳನ್ನು ಯಾಕೆ ಮುಚ್ಚಿಲ್ಲ ಎಂದು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಗುರುವಾರ ರಾತ್ರಿ ಪರಿಶೀಲನೆ ನಡೆಸಿದ ಅವರು, 'ವಾಹನಗಳ ಸಂಚಾರಕ್ಕೆ ಸಮಸ್ಯೆ ಆಗುತ್ತಿದೆ. ರಸ್ತೆ ದುರಸ್ತಿ ಮಾಡುವುದು ನಿಮ್ಮ ಆದ್ಯ ಕರ್ತವ್ಯ. ಕೆಲಸ ಮಾಡಲು ನಾವು ಬಂದು ಹೇಳಬೇಕಾ?' ಎಂದು ಪ್ರಶ್ನಿಸಿದರು.

'ರಸ್ತೆ ಅಗೆಯಲು ಯಾಕೆ ಅವಕಾಶ ಕೊಟ್ಟಿದ್ದೀರಿ, ಸುಳ್ಳು ಹೇಳಲು ಇತಿಮಿತಿ ಇರಬೇಕು, ಬೆಸ್ಕಾಂ ಅವರಿಗೆ ಯಾಕೆ ಅಗೆಯಲು ಬಿಟ್ಟಿದ್ದೀರಿ' ಎಂದು ತರಾಟೆಗೆ ತೆಗೆದುಕೊಂಡರು.

'ಡಾಂಬರೀಕರಣ ಮಾಡಿ 6 ತಿಂಗಳು ಆದ ಬಳಿಕ, ರಸ್ತೆ ಅಗೆಯಲು ಯಾಕೆ ಬಿಟ್ಟಿದ್ದೀರಿ? ರಾತ್ರೋ ರಾತ್ರಿ ರಸ್ತೆ ಅಗೆದಿದ್ದಾರೆ. ಕೂಡಲೆ ರಸ್ತೆ ಪುನಶ್ಚೇತನ ಕಾರ್ಯ ಆಗಬೇಕು. ಬೆಸ್ಕಾಂನವರು ಅನುಮತಿ ತೆಗದುಕೊಂಡಿಲ್ಲ ಎಂದರೆ ಹೇಗೆ? ಇದರಲ್ಲಿ ನಿಮ್ಮ ಪಾತ್ರ ಇಲ್ಲವೇ?' ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು.

ಹೊರವರ್ತುಲ ರಸ್ತೆಯ ಲೌರಿ ಜಂಕ್ಷನ್‌ನಿಂದ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗೂ ಮತ್ತು ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಲೌರಿ ಜಂಕ್ಷನ್‌ವರೆಗೂ ಎರಡೂ ಕಡೆಯ ಪಥದ ಸ್ಥಳ ಪರಿವೀಕ್ಷಣೆ ನಡೆಸಿದರು.

ಬಿ-ಸ್ಮೈಲ್ ವತಿಯಿಂದ ಸಿಲ್ಕ್ ಬೋರ್ಡ್‌ನಿಂದ ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದವರೆಗೆ 17.1 ಕಿ.ಮೀ. ಉದ್ದದ ರಸ್ತೆಯನ್ನು ಜಾಗತಿಕ ಮಟ್ಟದ ವಿನ್ಯಾಸಕ್ಕೆ ತಕ್ಕಂತೆ ಅಭಿವೃದ್ಧಿಪಡಿಸಲು ಯೋಜನೆ ರೂಪಿಸಲಾಗಿದೆ. ಅದನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದಕ್ಕಾಗಿ ಅಧಿಕಾರಿಗಳ ಜೊತೆ ಪರಿಶೀಲನೆ ಕಾರ್ಯ ಹಮ್ಮಿಕೊಳ್ಳಲಾಗಿದೆ ಎಂದು ಸಚಿವರು ಮಾಹಿತಿ ನೀಡಿದರು.

ಪಾದಚಾರಿ ಮಾರ್ಗ ಒತ್ತುವರಿ ಆಗಿದೆಯೇ ಎಂದು ಪರಿಶೀಲಿಸಿ, ಕ್ರಮವಹಿಸಬೇಕು. ಬೆಸ್ಕಾಂನ ವಿದ್ಯುತ್ ತಂತಿಗಳು ನಾಗರಿಕರ ತಲೆಗೆ ತಾಗುವ ರೀತಿ ಇರುವುದನ್ನು ಸರಿಪಡಿಸಿ ಎಂದು ಸಚಿವರು ಸೂಚನೆ ನೀಡಿದರು.

ಪರಿಶೀಲನೆಯ ವೇಳೆ ಮುಖ್ಯ ಆಯುಕ್ತ ಎಂ. ಮಹೇಶ್ವರ್ ರಾವ್, ಜಲಮಂಡಳಿ ಅಧ್ಯಕ್ಷೆ ಎನ್. ಮಂಜುಳಾ, ವಿಶೇಷ ಆಯುಕ್ತ ನಿತೀಶ್, ಹೆಚ್ಚುವರಿ ಆಯುಕ್ತ ಲೋಖಂಡೆ ಸ್ನೇಹಲ್ ಸುಧಾಕರ್, ಬಿ-ಸ್ಮೈಲ್ ತಾಂತ್ರಿಕ ನಿರ್ದೇಶಕ ಬಿ.ಎಸ್ ಪ್ರಹ್ಲಾದ್ ಉಪಸ್ಥಿತರಿದ್ದರು.

ಸಚಿವ ಕೃಷ್ಣ ಬೈರೇಗೌಡ ಅವರು ಗುರುವಾರ ರಾತ್ರಿ ಬೆಂಗಳೂರಿನ ಹೊರವರ್ತುಲ ರಸ್ತೆಯಲ್ಲಿ ಪರಿಶೀಲನೆ ನಡೆಸಿದರು

ನಾಳೆಯಿಂದ ಜಾದೂಗಾರ ವಿಕ್ಕಿ ಕ್ರಿಶ್ ಶೋ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಿಯಾಸ್ ಗಾಟ್ ಟ್ಯಾಲೆಂಟ್ ಖ್ಯಾತಿಯ ಜಾದೂಗಾರ ವಿಕ್ಕಿ ಕ್ರಿಶ್ ಅವರು ಮ್ಯಾಜಿಕ್, ಮೈಂಡ್ ರೀಡಿಂಗ್, ಮನೋವಿಜ್ಞಾನ, ಹಾಸ್ಯ ಹಾಗೂ ಭವ್ಯ ಭ್ರಮಾ ಕಲೆಗಳ ಸಮನ್ವಯದೊಂದಿಗೆ ವಿಶಿಷ್ಟ ಮನರಂಜನಾ ಪ್ರದರ್ಶನವನ್ನು ನಗರದ ಟೌನ್‌ಹಾಲ್‌ನಲ್ಲಿ ಜುಲೈ 4ರಿಂದ ಆಯೋಜಿಸಿದ್ದಾರೆ.

ಐದು ವಾರಾಂತ್ಯಗಳಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಪ್ರೇಕ್ಷಕರನ್ನೇ ಪ್ರದರ್ಶನದ ಭಾಗವಾಗಿಸುವ ವಿನೂತನ ಪರಿಕಲ್ಪನೆಯನ್ನು ಪರಿಚಯಿಸಲಾಗಿದೆ. ಪ್ರತೀ ಶನಿವಾರ ಹಾಗೂ ಭಾನುವಾರ ಮಧ್ಯಾಹ್ನ 4 ಮತ್ತು ಸಂಜೆ 7 ಗಂಟೆಗೆ ತಲಾ ಎರಡು ಪ್ರದರ್ಶನಗಳು ನಡೆಯಲಿವೆ.

ಅತ್ಯಾಧುನಿಕ ಬೆಳಕು, ಧ್ವನಿ ವ್ಯವಸ್ಥೆ ಹಾಗೂ ಭವ್ಯ ವೇದಿಕೆ ವಿನ್ಯಾಸದೊಂದಿಗೆ ಪ್ರದರ್ಶನಗಳು ಮೂಡಿ ಬರಲಿದ್ದು, ಕುಟುಂಬ ಸಮೇತರಾಗಿ ವೀಕ್ಷಿಸಬಹುದಾದ ಹಲವು ಅಚ್ಚರಿಯ ಪ್ರಯೋಗಗಳನ್ನು ಒಳಗೊಂಡಿದೆ ಎಂದು ವಿಕ್ಕಿ ಕ್ರಿಶ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಶ್ವೇತಾ ಹಾಗೂ ಕಾರ್ತಿಕ್ ಉಪಸ್ಥಿತರಿದ್ದರು.

4.67 ಲಕ್ಷ ಹೆಕ್ಟೇರ್‌ಗೆ ಅನುಕೂಲ

ಮೇಕೆದಾಟು

ಪ್ರಜಾವಾಣಿ ವಾರ್ತೆ

ನವದೆಹಲಿ: ಮೇಕೆದಾಟು ಯೋಜನೆಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿ ಅನುಮೋದನೆ ನೀಡಬಹುದು ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಅವರು ಕೇಂದ್ರ ಅರಣ್ಯ ಸಚಿವಾಲಯಕ್ಕೆ ಬುಧವಾರ ಶಿಫಾರಸು ಮಾಡಿದ್ದಾರೆ.

ಈ ಯೋಜನೆಗೆ ಅರಣ್ಯ, ಪರಿಸರ ಹಾಗೂ ವನ್ಯಜೀವಿ ಮಂಡಳಿ ಅನುಮೋದನೆಗಳನ್ನು ಪಡೆಯಬೇಕಿದೆ. ಯೋಜನೆಯು ಹುಲಿ ಸಂರಕ್ಷಿತ ಪ್ರದೇಶದಲ್ಲಿ ಅನುಷ್ಠಾನಗೊಳ್ಳುತ್ತಿರುವುದರಿಂದ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯಿಂದ ವನ್ಯಜೀವಿ ಅನುಮೋದನೆ ಪಡೆಯುವುದು ಅತೀ ಅಗತ್ಯ. ಬೆಂಗಳೂರಿನ ಕುಡಿಯುವ ನೀರಿನ ದಾಹ ಇಂಗಿಸುವ ಹಾಗೂ ತಮಿಳುನಾಡಿಗೂ ಅನುಕೂಲವಾಗುವ ಈ ಯೋಜನೆಗೆ ಅನುಮೋದನೆ ಕೊಡಬಹುದು ಎಂದು ಪಿಸಿಸಿಎಫ್ ಶಿಫಾರಸಿನಲ್ಲಿ ತಿಳಿಸಿದ್ದಾರೆ.

ಸುಪ್ರೀಂ ಕೋರ್ಟ್ ಮಾರ್ಪಡಿಸಿದ ಕಾವೇರಿ ನ್ಯಾಯಮಂಡಳಿಯ ತೀರ್ಪಿನ ಪ್ರಕಾರ, ಪ್ರತಿ ವರ್ಷ ಫೆಬ್ರುವರಿಯಿಂದ ಮೇವರೆಗೆ ಬಿಳಿಗುಂಡ್ಲುವಿನಲ್ಲಿ ಪರಿಸರ ಹರಿವಿನ ಪ್ರಕಾರ 10 ಟಿಎಂಸಿ ಲಭ್ಯವಿರಬೇಕು. ಈ ಯೋಜನೆಯ ಯಶಸ್ವಿ ಅನುಷ್ಠಾನವು ನೀರಿನ ಅನಗತ್ಯ ಹರಿವು ನಿಯಂತ್ರಿಸಲು ಮತ್ತು ತಮಿಳುನಾಡಿಗೆ ಪರಿಸರ ಹರಿವಿಗೆ 10 ಟಿಎಂಸಿ ಸೇರಿದಂತೆ 192 ಟಿಎಂಸಿ ನೀರು ಒದಗಿಸುವ ಬದ್ಧತೆ ಪೂರೈಸಲು ಅನುವು ಮಾಡಿಕೊಡುತ್ತದೆ ಎಂದು ಕರ್ನಾಟಕ ಸರ್ಕಾರ ಸ್ಪಷ್ಟಪಡಿಸಿದೆ.

ಸಮತೋಲನ ಜಲಾಶಯ ನಿರ್ಮಾಣದಿಂದ ಬೆಂಗಳೂರು ನಗರ ಜಿಲ್ಲೆಯ 302 ಹಳ್ಳಿಗಳ 46,800 ಹೆಕ್ಟೇರ್ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ 1632 ಹಳ್ಳಿಗಳ 4.20 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಅನುಕೂಲವಾಗಲಿದೆ ಎಂದು ರಾಜ್ಯ ಸರ್ಕಾರ ತಿಳಿಸಿದೆ.

ಯೋಜನೆಯ ಜಾರಿ ಸಂದರ್ಭದಲ್ಲಿ ಐದು ಹಳ್ಳಿಗಳ 221 ಕುಟುಂಬಗಳನ್ನು ಸ್ಥಳಾಂತರಿಸಿ ಪುನರ್ವಸತಿ ಕಲ್ಪಿಸಲು ಯೋಜಿಸಲಾಗಿದೆ. ಜತೆಗೆ, ಯೋಜನೆಯಿಂದಾಗಿ 396 ಕುಟುಂಬಗಳು ಬಾಧಿತವಾಗಲಿವೆ ಎಂದೂ ಸರ್ಕಾರ ಹೇಳಿದೆ.

ಅಂಕಿ ಅಂಶಗಳು

970 ಮಿ.ಮೀ
ಯೋಜನಾ ಪ್ರದೇಶದಲ್ಲಿ ಸರಾಸರಿ ಮಳೆ

5,016 ಎಂಸಿಎಂ (ಮಿಲಿಯನ್ ಘನ ಮೀಟರ್), ನೀರಿನ ಲಭ್ಯತೆ

ಯೋಜನೆಯಿಂದ ಮುಳುಗಡೆ ಎಷ್ಟು? (ಹೆಕ್ಟೇರ್‌ಗಳಲ್ಲಿ)

ಮೀಸಲು ಅರಣ್ಯ	198
ಸಂರಕ್ಷಿತ ಅರಣ್ಯ	4,879
ಕಂದಾಯ ಭೂಮಿ	190
ಒಟ್ಟು	5,267

ಯೋಜನೆಗೆ ಯಾವ ಜಿಲ್ಲೆಯಿಂದ ಎಷ್ಟು ಜಾಗ (ಹೆಕ್ಟೇರ್‌ಗಳಲ್ಲಿ)



'ಆರೋಗ್ಯ ಕ್ಷೇತ್ರ ಸುಧಾರಣೆಗೆ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ ಆರೋಗ್ಯ ಕ್ಷೇತ್ರ ಸುಧಾರಣೆಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಮುಖ್ಯ ಆಯುಕ್ತ ಎಂ.ಮಹೇಶ್ವರ ರಾವ್ ತಿಳಿಸಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರ-ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಹಮ್ಮಿಕೊಂಡಿದ್ದ ರಾಷ್ಟ್ರೀಯ ವೈದ್ಯರ ದಿನಾಚರಣೆ ಮತ್ತು ಪಾಲಿಕೆಯಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿರುವ ಆರೋಗ್ಯಾಧಿಕಾರಿಗಳು, ಅಧಿಕ್ಷಕರು, ವೈದ್ಯಾಧಿಕಾರಿ, ವೈದ್ಯರಿಗೆ ಧನ್ವಂತರಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ಆರೋಗ್ಯವಂತ ಸಮಾಜ ನಿರ್ಮಾಣ ಮಾಡಬೇಕು. ಜನನ ಪ್ರಮಾಣ ಉತ್ತಮವಾಗಿರಬೇಕು. ಮರಣ ಪ್ರಮಾಣ ಕಡಿಮೆ ಆಗಬೇಕೆಂದರೆ ವೈದ್ಯಕೀಯ ವ್ಯವಸ್ಥೆ ಸಮರ್ಪಕವಾಗಿ ಇರಬೇಕು. ಆಹಾರ ಪದ್ಧತಿ ಹಾಗೂ ಆಧುನಿಕ ಔಷಧಗಳ ಶೋಧನೆ ಯಾಗಬೇಕು' ಎಂದರು.

ಮಹೇಶ್ವರ ರಾವ್

'ನಮ್ಮ ಆಸ್ಪತ್ರೆಗಳ ಗುಣಮಟ್ಟ ಉತ್ತಮವಾಗಿದೆ. ವೈದ್ಯರ ಸಹಕಾರ ಇದ್ದರೆ ಉತ್ತಮ ವೈದ್ಯಕೀಯ ಸೌಲಭ್ಯ ನಾಗರಿಕರಿಗೆ ಸಿಗಲು ಸಾಧ್ಯ' ಎಂದು ಅಭಿಪ್ರಾಯಪಟ್ಟರು.

ಕೇಂದ್ರ ನಗರ ಪಾಲಿಕೆ ಆಯುಕ್ತ ಜಿ. ಜಗದೀಶ್ ಮಾತನಾಡಿ, 'ಪಾಲಿಕೆ ವ್ಯಾಪ್ತಿಯಲ್ಲಿನ ಆಸ್ಪತ್ರೆಗಳನ್ನು ಹೈಟೆಕ್ ಆಸ್ಪತ್ರೆಗಳಾಗಿ ಮಾಡಲು ತಾವೆಲ್ಲರೂ ಸಹಕಾರ ಕೊಡಿ' ಎಂದು ಮನವಿ ಮಾಡಿದರು.

ಆರೋಗ್ಯಾಧಿಕಾರಿ ಡಾ.ಮನೋರಂಜನ್ ಹೆಗ್ಡೆ, ಆರೋಗ್ಯ ವೈದ್ಯಾಧಿಕಾರಿಗಳಾದ ಡಾ.ಟಿ. ವೆಂಕಟೇಶ್, ಡಾ.ಕೋಮಲಾ ಕೆ.ಆರ್., ಡಾ. ಮಂಜುಳಾ ಡಿ., ಡಾ. ನವೀನ್ ಕುಮಾರ್, ಡಾ.ರಾಜೇಶ್ ಎನ್., ಡಾ. ಅನುಪಮಾ ಜಿ., ವೈದ್ಯಕೀಯ ಅಧೀಕ್ಷಕರಾದ ಡಾ.ಲತಾ ಎಫ್. ಜೆ., ಡಾ.ಮಂಜುಳಾ, ಡಾ.ಲಲಿತಾ, ಡಾ.ಭಾರತಿ ಜೆ.ಪಿ., ಅರಿವಳಿಕೆ ತಜ್ಞೆ ಡಾ.ಅನುಪಮಾ ಸಿ.ವಿ., ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯರಾದ ಡಾ.ಸುಜಾತಾ, ಡಾ.ವಿ.ಜಿ. ನವೀನ್ ಅವರಿಗೆ ಧನ್ವಂತರಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ವಿಶೇಷ ಆಯುಕ್ತ ವೆಂಕಟಾಚಲಪತಿ, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಷಡಕ್ಷರಿ, ಜಿಬಿಎ-ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎ.ಅಮೃತ್‌ರಾಜ್, ಮುಖ್ಯ ಆರೋಗ್ಯಧಿಕಾರಿಗಳಾದ ಡಾ.ಸೈಯದ್ ಸಿರಾಜುದ್ದೀನ್ ಮದನಿ, ಡಾ.ನಿರ್ಮಲಾ ಬುಗ್ಗಿ ಉಪಸ್ಥಿತರಿದ್ದರು.

ಬಿಜೆಪಿ ರೈತ ಮೋರ್ಚಾ: ಕಡತನಮಲೆ ಸತೀಶ್ ಉಚ್ಚಾಟನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಪಕ್ಷ ವಿರೋಧಿ ಚಟುವಟಿಕೆ ಹಾಗೂ ನಾಯಕರ ವಿರುದ್ಧ ಬಹಿರಂಗ ಹೇಳಿಕೆಗಳನ್ನು ನೀಡಿರುವ ಆರೋಪದ ಕಾರಣದಿಂದ ಬಿಜೆಪಿ ರೈತ ಮೋರ್ಚಾ ರಾಜ್ಯ ಘಟಕದ ಕಾರ್ಯದರ್ಶಿ ಕಡತನಮಲೆ ಸತೀಶ್ ಅವರನ್ನು ಪಕ್ಷದಿಂದ ಆರು ವರ್ಷ ಉಚ್ಚಾಟಿಸಲಾಗಿದೆ.

ಬಿಜೆಪಿ ರಾಜ್ಯ ಶಿಸ್ತು ಸಮಿತಿ ಅಧ್ಯಕ್ಷ ಲಿಂಗರಾಜು ಪಾಟೀಲ್ ಆದೇಶ ಹೊರಡಿಸಿದ್ದು, ಸತೀಶ್ ಅವರನ್ನು ಪಕ್ಷದ ಎಲ್ಲ ಹುದ್ದೆಗಳು ಹಾಗೂ ಜವಾಬ್ದಾರಿಗಳಿಂದ ಮುಕ್ತಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

ಇದೇ ವೇಳೆ, ಯಲಹಂಕ ಗ್ರಾಮಾಂತರ ಮಂಡಲದ ಬಿಜೆಪಿ ಮಾಜಿ ಅಧ್ಯಕ್ಷ ಎಚ್. ಬಿ.ಹನುಮಯ್ಯ ಅವರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟಿಸಲಾಗಿದೆ ಎಂದು ಯಲಹಂಕ ಗ್ರಾಮಾಂತರ ಮಂಡಲ ಅಧ್ಯಕ್ಷ ಎಂ.ಜಿ. ರಾಮಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಳೆದ ಒಂದು ವರ್ಷದಿಂದ ಎಚ್. ಬಿ.ಹನುಮಯ್ಯ ಅವರು ಪಕ್ಷ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿ ಪಕ್ಷಕ್ಕೆ ಮುಜುಗರ ಉಂಟು ಮಾಡುತ್ತಿರುವ ಬಗ್ಗೆ ಹಲವು ಬಾರಿ ಪತ್ರ, ನೋಟಿಸ್ ಹಾಗೂ ವಾಟ್ಸ್ ಆ್ಯಪ್ ಮೂಲಕ ಸ್ಪಷ್ಟೀಕರಣ ಕೇಳಲಾಗಿತ್ತು. ಆದರೂ ಯಾವುದೇ ಸಮರ್ಪಕ ಉತ್ತರ ನೀಡದೆ ಪಕ್ಷವಿರೋಧಿ ಚಟುವಟಿಕೆಗಳನ್ನು ಮುಂದುವರಿಸಿದ್ದಾರೆ ಎಂದು ಪ್ರಕಟಣೆಯಲ್ಲಿ ಆರೋಪಿಸಲಾಗಿದೆ.

ಯುಜಿ, ಪಿಜಿ ಕೋರ್ಸ್: ಪ್ರವೇಶ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದನಪಲ್ಲಿ ಸಮೀಪದ ಮಿಟ್ಸ್ ಡೀಮ್ಡ್ ಟು ಬಿ ಯುನಿವರ್ಸಿಟಿಯಲ್ಲಿ 2026–27ನೇ ಶೈಕ್ಷಣಿಕ ವರ್ಷದ ಪದವಿ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶ ಪ್ರಕ್ರಿಯೆ ಆರಂಭಗೊಂಡಿದೆ ಎಂದು ವಿಶ್ವವಿದ್ಯಾಲಯದ ಕುಲಸಚಿವ ಡಿ. ಪ್ರದೀಪ್ ಕುಮಾರ್ ತಿಳಿಸಿದ್ದಾರೆ.

ಬಿ.ಟೆಕ್, ಎಂ.ಟೆಕ್, ಬಿಬಿಎ, ಬಿಸಿಎ, ಎಂಬಿಎ, ಎಂಸಿಎ ಹಾಗೂ ಪಿಎಚ್.ಡಿಗೆ ಪ್ರವೇಶ ಲಭ್ಯವಿದ್ದು, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶೇಕಡ 100ರಷ್ಟು ವಿದ್ಯಾರ್ಥಿ ವೇತನ ಹಾಗೂ ಅರ್ಹತೆಯ ಆಧಾರದ ಮೇಲೆ ಶುಲ್ಕ ರಿಯಾಯಿತಿ ನೀಡಲಾಗುತ್ತಿದೆ ಎಂದು ಹೇಳಿದರು.

ಮೂರು ವರ್ಷಗಳಲ್ಲಿ ವಿಶ್ವವಿದ್ಯಾಲಯದ 3,854 ವಿದ್ಯಾರ್ಥಿಗಳು ದೇಶ ಹಾಗೂ ವಿದೇಶದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಉದ್ಯೋಗ ಪಡೆದಿದ್ದಾರೆ. ಇತ್ತೀಚೆಗೆ ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿನಿ ಟಿ.ಆರ್. ದೀಕ್ಷಾ ಅವರು ಅಮೆಜಾನ್‌ನಲ್ಲಿ ₹29.53 ಲಕ್ಷ ವಾರ್ಷಿಕ ವೇತನದ ಉದ್ಯೋಗ ಪಡೆದಿದ್ದಾರೆ.

ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ (ಸೈಬರ್ ಸೆಕ್ಯೂರಿಟಿ), ಅಲ್ಲದೇ ಬಿಬಿಎ ಹಾಗೂ ಬಿಸಿಎ ಕೋರ್ಸ್‌ಗಳಿಗೂ ಪ್ರವೇಶಗಳು ಲಭ್ಯವಿವೆ. ವಿದೇಶಿ ವಿಶ್ವವಿದ್ಯಾಲಯಗಳೊಂದಿಗೆ ಒಡಂಬಡಿಕೆ, ಇಂಟರ್ನ್‌ಶಿಪ್, ವಿದೇಶದಲ್ಲಿ ಉನ್ನತ ಶಿಕ್ಷಣದ ಅವಕಾಶಗಳು, ಅತ್ಯಾಧುನಿಕ ಪ್ರಯೋಗಾಲಯದ ವ್ಯವಸ್ಥೆ ಇದೆ. ಕುಲಪತಿ ಸಿ. ಯುವರಾಜ್ ಮಾತನಾಡಿ, 'ಕುಲಾಧಿಪತಿ ಎನ್. ವಿಜಯ ಭಾಸ್ಕರ್ ಚೌಧರಿ ಅವರ ನಾಯಕತ್ವದಲ್ಲಿ ಮಿಟ್ಸ್ ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಪಡೆದಿದೆ' ಎಂದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಲಘು ಪ್ರಮಾಣದಲ್ಲಿ ಮಳೆಯಾಗುವ ಸಾಧ್ಯತೆ ಇದೆ.

ಎಸ್ಐಆರ್: 8.65 ಲಕ್ಷ ನಮೂನೆಗಳ ವಿತರಣೆ

ಬೆಂಗಳೂರು: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಯ ಅಂಗವಾಗಿ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬಿಎಲ್ಒಗಳು ಮನೆ-ಮನೆಗೆ ಭೇಟಿ ನೀಡಿ ಮತದಾರರಿಗೆ ಗಣತಿ ನಮೂನೆಗಳನ್ನು ವಿತರಿಸುವ ಕಾರ್ಯ ಮುಂದುವರಿಸಿದ್ದಾರೆ.

ಜೂನ್ 30ರಿಂದ ಜುಲೈ 29ರವರೆಗೆ ನಡೆಯುತ್ತಿರುವ ಈ ವಿಶೇಷ ಅಭಿಯಾನದಲ್ಲಿ ಮೂರು ದಿನಗಳಿಂದ ಒಟ್ಟು 8,65,118 ನಮೂನೆಗಳನ್ನು ಮತದಾರರಿಗೆ ವಿತರಿಸಲಾಗಿದೆ.

ಮತದಾರರು ಬಿಎಲ್ಒಗಳಿಗೆ ಅಗತ್ಯ ದಾಖಲೆಗಳೊಂದಿಗೆ ಭರ್ತಿ ಮಾಡಿದ ನಮೂನೆಗಳನ್ನು ನಿಗದಿತ ಅವಧಿಯೊಳಗೆ ಸಲ್ಲಿಸುವಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮನವಿ ಮಾಡಿದೆ.

‘ರಾಜಾಜಿನಗರ: ಕಾಮಗಾರಿಗಳಲ್ಲಿ ಅಕ್ರಮ’

ಕಾಂಗ್ರೆಸ್‌ನ ಸೂರ್ಯ ಮುಕುಂದರಾಜು ಆರೋಪ • ಲೋಕಾಯುಕ್ತಕ್ಕೂ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜಾಜಿನಗರ ವಿಧಾನ ಸಭಾ ಕ್ಷೇತ್ರದಲ್ಲಿ, 2020ರ ಅವಧಿಯಲ್ಲಿ ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಅನುದಾನ ಹಾಗೂ ಬಿಬಿಎಂಪಿ ವತಿಯಿಂದ ಕೈಗೊಳ್ಳಲಾದ ವಿವಿಧ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗಳಲ್ಲಿ ಭಾರಿ ಅಕ್ರಮ ಎಸಗಲಾಗಿದೆ’ ಎಂದು ವಕೀಲ ಸೂರ್ಯ ಮುಕುಂದರಾಜು ಆರೋಪಿಸಿದರು.

ಈ ಕುರಿತು ಲೋಕಾಯುಕ್ತರಿಗೆ ಗುರುವಾರ ದೂರು ನೀಡಿದ ನಂತರ ಅವರು ಸುದ್ದಿಗಾರರ ಜತೆ ಮಾತನಾಡಿದರು.

‘2020ರಲ್ಲಿ ₹72.25 ಕೋಟಿ ಮೊತ್ತದ ರಸ್ತೆ ಮತ್ತು ಚರಂಡಿ ಕಾಮಗಾರಿಗಳ ಟೆಂಡರ್‌ನಲ್ಲಿ ಅತ್ಯಂತ ಕಡಿಮೆ ಮೊತ್ತಕ್ಕೆ ಬಿಡ್ ಮಾಡಿದ್ದ ಅರ್ಹ ಗುತ್ತಿಗೆದಾರರನ್ನು ತಪ್ಪಿಸಲು ರಾಜಾಜಿನಗರ ಕ್ಷೇತ್ರದ ಶಾಸಕ ಸುರೇಶ್ ಕುಮಾರ್ ಅವರು ಅಧಿಕಾರಿಗಳ ಮೇಲೆ ದೂರವಾಣಿ ಮೂಲಕ ಒತ್ತಡ ಹೇರಿದ್ದಾರೆ. ಬಿಬಿಎಂಪಿಯ ಟಿವಿಸಿಸಿ ಮುಖ್ಯ ಎಂಜಿನಿಯರ್ ಅವರ ಕಚೇರಿ ಟಿಪ್ಪಣಿಯಲ್ಲೇ ಶಾಸಕರ ದೂರವಾಣಿ ಕರೆ ವಿಚಾರವನ್ನು ಉಲ್ಲೇಖಿಸಲಾಗಿದೆ’ ಎಂದು ಮಾಹಿತಿ ನೀಡಿದರು. ಕಚೇರಿ ಟಿಪ್ಪಣಿಯ ಪ್ರತಿಯನ್ನು ಲೋಕಾಯುಕ್ತಕ್ಕೆ ಸಲ್ಲಿಸಿದ್ದಾರೆ.

‘ಶಾಸಕರು ಕೇಳಿದ ಮಾಹಿತಿಗಳನ್ನು ಟಿವಿಸಿಸಿ ಮುಖ್ಯ ಎಂಜಿನಿಯರ್ ಕಚೇರಿಯು ಸಲ್ಲಿಸಿದ್ದು, ಆ ನಂತರ ಎಲ್-1 ಬಿಡ್ಡರ್ ಅವರನ್ನು ಟೆಂಡರ್ ಪ್ರಕ್ರಿಯೆಯಿಂದ ಕೈಬಿಡಲಾಗಿದೆ. ಎಲ್-2 ಬಿಡ್ಡರ್ ಟೆಂಡರ್ ಒಪ್ಪಿಕೊಳ್ಳಲು ನಿರಾಕರಿಸಿದ ಕಾರಣಕ್ಕೆ, ಟೆಂಡರ್ ಮೊತ್ತವನ್ನು ₹53 ಕೋಟಿಯಿಂದ ₹67 ಕೋಟಿಗೆ ಹೆಚ್ಚಿಸಲಾಗಿದೆ. ಇದರಿಂದಾಗಿ ಸರ್ಕಾರಕ್ಕೆ ₹14 ಕೋಟಿ ನಷ್ಟವಾಗಿದೆ. ಶಾಸಕರು ತಮ್ಮ ಬೇನಾಮಿಗಳಿಗಾಗಿ ಹೀಗೆ ಮಾಡಿಸಿದ್ದಾರೆ’ ಎಂದು ಆರೋಪಿಸಿದರು.

‘2022-23ನೇ ಸಾಲಿನಲ್ಲಿ ರಾಜಾಜಿನಗರ ಕ್ಷೇತ್ರದಲ್ಲಿ ಕೈಗೊಳ್ಳಲಾದ ₹150 ಕೋಟಿ ಮೊತ್ತದ ಬೃಹತ್ ಕಾಮಗಾರಿಗಳು ಹಾಗೂ 2025-26ನೇ ಸಾಲಿನ ₹10 ಕೋಟಿ ಮತ್ತು ₹9 ಕೋಟಿ ವೆಚ್ಚದ ಸರಣಿ ಟೆಂಡರ್‌ಗಳಲ್ಲೂ ನಿಯಮಾವಳಿಗಳನ್ನು ಗಾಳಿಗೆ ತೂರಿ ಮುಕ್ತ ಸ್ಪರ್ಧೆಯನ್ನು ನಿರ್ಬಂಧಿಸಿ, ಏಕೈಕ ಬಿಡ್‌ದಾರರಿಗೆ ಅನುಕೂಲ ಮಾಡಿಕೊಡಲಾಗಿದೆ’ ಎಂದು ದೂರಿದರು.

‘ಎಲ್-1 ಬಿಡ್‌ದಾರರನ್ನು ಅನರ್ಹಗೊಳಿಸಲು ಅನಗತ್ಯವಾದ ತಾಂತ್ರಿಕ ಷರತ್ತುಗಳನ್ನು ಹಾಕಲಾಗಿದೆ. ಯಾರು ಎಷ್ಟು ಮೊತ್ತಕ್ಕೆ ಬಿಡ್ ಸಲ್ಲಿಸುತ್ತಾರೆ ಎಂಬುದನ್ನು ತಿಳಿದುಕೊಳ್ಳಲು, ಟೆಂಡರ್‌ನ ಅಂದಾಜು ಮೊತ್ತದ ವ್ಯತ್ಯಾಸದ ಹಣವನ್ನು ಡಿ.ಡಿ ಮೂಲಕ ಸಲ್ಲಿಸಿ ಎಂದು ಷರತ್ತು ಹಾಕಿದ್ದಾರೆ. ಈ ಮೂಲಕ ಕೊನೆಯ ಕ್ಷಣದಲ್ಲಿ ಎಲ್ಲರಿಗಿಂತ ಕಡಿಮೆ ಮೊತ್ತದ ಬಿಡ್ ಸಲ್ಲಿಸಿ, ತಮಗೆ ಬೇಕಾದವರಿಗೆ ಗುತ್ತಿಗೆ ಸಿಗುವಂತೆ ಮಾಡಿದ್ದಾರೆ’ ಎಂದು ವಿವರಿಸಿದರು.

‘ಲೋಕಾಯುಕ್ತ ಸಂಸ್ಥೆಯು ದೂರು ಸ್ವೀಕರಿಸಿದ್ದು, ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ನೀಡುತ್ತದೆ ಎಂಬ ವಿಶ್ವಾಸವಿದೆ’ ಎಂದರು.

ಹುರುಳಿಲ್ಲದ ಆರೋಪ: ಸುರೇಶ್ ಕುಮಾರ್

‘ಆಕಸ್ಮಿಕವಾಗಿ ವಕೀಲ ವೃತ್ತಿಯನ್ನೂ ಮಾಡುತ್ತಿರುವ ಕಾಂಗ್ರೆಸ್ ಕಾರ್ಯಕರ್ತ ಸೂರ್ಯ ಮುಕುಂದರಾಜು ಅವರು ನನ್ನ ವಿರುದ್ಧ ಲೋಕಾಯುಕ್ತಕ್ಕೆ ದೂರು ನೀಡಿರುವ ಸುದ್ದಿ ನನಗೆ ಮಾಧ್ಯಮಗಳಿಂದ ಗೊತ್ತಾಯಿತು. ನಾನು ಅಧಿಕಾರ ದುರುಪಯೋಗ ಮಾಡಿಕೊಂಡು, ನನ್ನ ಬೇನಾಮಿ ಗುತ್ತಿಗೆದಾರರಿಗೆ ಲಾಭ ಮಾಡಿಕೊಟ್ಟಿದ್ದೇನೆ ಮತ್ತು ಸರ್ಕಾರದ ಖಜಾನೆಗೆ ನಷ್ಟ ಉಂಟು ಮಾಡಿದ್ದೇನೆ ಎಂದು ಆರೋಪಿಸಿದ್ದಾರೆ. ಈ ಆರೋಪಗಳಲ್ಲಿ ಹುರುಳಿಲ್ಲ’ ಎಂದು ಬಿಜೆಪಿ ಶಾಸಕ ಎಸ್.ಸುರೇಶ್ ಕುಮಾರ್ ಅವರು ಪ್ರತಿಕ್ರಿಯೆ ನೀಡಿದ್ದಾರೆ.

‘ಕಾಂಗ್ರೆಸ್‌ನ ಸೂರ್ಯ ಮುಕುಂದರಾಜು ಅವರು ಲೋಕಾಯುಕ್ತಕ್ಕೆ ಸಲ್ಲಿಸಿರುವ ದೂರಿನ ಆಧಾರದಲ್ಲಿ ಲೋಕಾಯುಕ್ತ ಸಂಸ್ಥೆಯು ದೂರು ವಿವರಣೆ ಕೇಳದೇ ಇದ್ದರೂ, ಆ ದೂರಿನಲ್ಲಿ ಎತ್ತಿರುವ ಪ್ರಶ್ನೆಗಳಿಗೆ ಸುದೀರ್ಘ ಉತ್ತರ ನೀಡುತ್ತೇನೆ’ ಎಂದಿದ್ದಾರೆ.

‘ಸೂರ್ಯ ಮುಕುಂದರಾಜು ಅವರ ಹಿನ್ನೆಲೆ, ಅವರ ಉದ್ದೇಶ, ಅವರು ಯಾರ ಪರವಾಗಿ ಈ ಎಲ್ಲಾ ಕಾರ್ಯಾಚರಣೆ ಮಾಡುತ್ತಿದ್ದಾರೆ ಎಂಬುದು ನನಗೆ ಸ್ಪಷ್ಟವಾಗಿ ಗೊತ್ತಿದೆ. ಇದೊಂದು ಪೂರ್ಣ ಸುಳ್ಳಿನಿಂದ ಕೂಡಿರುವ, ಶುದ್ಧ ಹಾಸ್ಯಾಸ್ಪದ ದೂರು. ಅವರ ದೂರಿನ ಪ್ರತಿಯೊಂದು ಅಂಶವನ್ನು ಕೂಲಂಕಷವಾಗಿ ಅಧ್ಯಯನ ಮಾಡಿ, ಇನ್ನೆರಡು ದಿನಗಳಲ್ಲಿ ಉತ್ತರ ನೀಡುವೆ’ ಎಂದಿದ್ದಾರೆ.

‘ದೂರಿನಲ್ಲಿರುವ ಪ್ರತಿಯೊಂದು ಅಂಶದ ಕುರಿತಾಗಿಯೂ ಲೋಕಾಯುಕ್ತ ಸಂಸ್ಥೆಯು ತನಿಖೆ ನಡೆಸಲಿ. ಅಕ್ರಮ ನಡೆದಿದ್ದರೆ, ಇಡೀ ಜಗತ್ತಿಗೆ ಗೊತ್ತಾಗಲಿ. ದೂರು ನೀಡಿದ್ದವರ ದುರುದ್ದೇಶವೂ ಜನರಿಗೆ ಗೊತ್ತಾಗಲಿ’ ಎಂದಿದ್ದಾರೆ.

‘ನೇಮಕಾತಿಯಲ್ಲಿ ಅಕ್ರಮ: ತನಿಖೆ ನಡೆಸಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಒಕ್ಕಲಿಗರ ಸಂಘದ ವಿವಿಧ ಹುದ್ದೆಗಳ ನೇಮಕಾತಿ ತೀರ್ಮಾನವನ್ನು ನಾನು ತೆಗೆದುಕೊಂಡಿದ್ದಾಗಿ ಖಜಾಂಚಿ ಕೆ.ವಿ.ಶ್ರೀಧರ್ ನೀಡಿರುವ ಹೇಳಿಕೆ ಅಸತ್ಯವಾಗಿದ್ದು, 2025ರ ಸೆಪ್ಟೆಂಬರ್ 17ರ ಸಭೆಗೆ ಗೈರಾಗಿದ್ದೇನೆ. ಯಾವುದೇ ಆದೇಶವನ್ನೂ ನೀಡಿಲ್ಲ’ ಎಂದು ಸಂಘದ ನಿರ್ದೇಶಕ ಟಿ.ಕೋನಪ್ಪರೆಡ್ಡಿ ಸ್ಪಷ್ಟಪಡಿಸಿದರು.

ಬುಧವಾರ ಇಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನಾನು ಗೈರಾಗಿರುವುದಾಗಿ ಸಭೆಯ ನಡಾವಳಿಯಲ್ಲೇ ಉಲ್ಲೇಖವಾಗಿದೆ’ ಎಂದು ದಾಖಲೆಗಳ ಪ್ರತಿ ತೋರಿಸಿದರು.

‘ಸಭೆಯ ನಡಾವಳಿಗೆ ಅಧ್ಯಕ್ಷರ ಸಹಿ ಮಾತ್ರವೇ ಇದೆ. ಅಂದಿನ ಸಭೆಯಲ್ಲಿ ಕಿಮ್ಸ್ ವಿದ್ಯಾಲಯ ಮತ್ತು ಆಸ್ಪತ್ರೆಗೆ 18 ಕಂಪ್ಯೂಟರ್ ಆಪರೇಟರ್‌ಗಳ ನೇಮಕಾತಿ ಸೇರಿದಂತೆ ವಿವಿಧ ತೀರ್ಮಾನ ಕೈಗೊಳ್ಳಲಾಗಿದೆ. ವೃಂದ ಮತ್ತು ನೇಮಕಾತಿ ನಿಯಮ ಉಲ್ಲಂಘಿಸಿ, ಯಾವುದೇ ಪತ್ರಿಕೆಯಲ್ಲಿ ಜಾಹೀರಾತು ನೀಡದೆ ವಿವಿಧ ನೇಮಕಾತಿ ಪ್ರಕ್ರಿಯೆ ನಡೆದಿದೆ’ ಎಂದು ಆರೋಪಿಸಿದರು.

‘ಉದ್ಯೋಗಾಕಾಂಕ್ಷಿಗಳು, ಸಿಬ್ಬಂದಿ ತಮ್ಮ ಮೊಬೈಲ್ ಅನ್ನು ಆಚೆ ಇಟ್ಟು ಅಧ್ಯಕ್ಷರ ಕಚೇರಿಗೆ ಹೋಗಬೇಕಿತ್ತು. ಬೋಧಕ, ನರ್ಸಿಂಗ್ ನೇಮಕಾತಿ ಹಾಗೂ ಬಡ್ತಿಯಲ್ಲೂ ಅಕ್ರಮ ನಡೆದಿದೆ’ ಎಂದು ದೂರಿದರು.

‘ಕಾಮಗಾರಿಗಳ ಟೆಂಡರ್ ನೀಡುವಾಗಲೂ ಪಾರದರ್ಶಕತೆ ಪಾಲಿಸಿಲ್ಲ. ಕಪ್ಪುಪಟ್ಟಿಗೆ ಸೇರಿದ್ದ ಗುತ್ತಿಗೆದಾರರಿಗೇ ನೀಡಲಾಗಿದೆ. ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆ ನಡೆಯಬೇಕು’ ಎಂದು ಒತ್ತಾಯಿಸಿದರು.

FARNAZ

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

Our client intends to purchase land together with construction standing thereon of New No. 6, formerly a portion of Old No. 18, Aga Abbas Ali Road, now known as Aga Abbas Ali Road First Cross, Ulsoor, Bangalore-560042 morefully described in the Schedule hereunder, from Smt. Zareena Begum, r/at # New No. 6, Aga Abbas Ali Road 1st Cross, Ulsoor, Civil Station, Bangalore-560 042.

This is to give notice to the Public that any person/s who claim any right, title or interest of any nature in or any lien, charge or enforceable right in relation to the Schedule property and/ or has any objections of any nature to the transaction should lodge such claim and / or objections in writing with the undersigned together with supporting documents within ten days from this date, failing which it will be presumed that no valid claims or objections subsist and our clients would proceed to complete the transaction, subject to compliance with the other formalities.

SCHEDULE PROPERTY

All that Piece and Parcel of land together with construction standing thereon of New No. 6, formerly a portion of Old No. 18, Aga Abbas Ali Road, now known as Aga Abbas Ali Road First Cross, Ulsoor, Bangalore-560 042, **ePID No. 5581685903,** measuring **East:** 50 ft; **West :** 50ft; North: 20 ft and **South :** 27 ft, in all 1350 sq ft, and bounded on the: **East by :** Private Property New NO. 5, Site Old No. 18/2, Aga Abbas Ali Road I Cross, **West by :** Private Property New No. 7, Aga Abbas Ali Road I Cross **North by:** Public Road **South by:** Private Property

LEGAL AXIS,
M.D.RAGHUNATH,
Skanda Kumar ADVOCATES,
No. 109, Ist Floor, Dharamaraja Koil Street, Shivajinagar, Bangalore-1.
Ph: 9845131550
legalaxis@ymail.com

PUBLIC NOTICE

This is to inform the concerned that, in accordance with the Record Retention and Destruction Policy of V Care Hospital, the medical records of patients for the period 2007 to 2015 have been destroyed after the completion of the prescribed retention period and in compliance with the hospital's management policy. Accordingly, these records are no longer available with the hospital.

Management
V-CARE HOSPITAL
No.29, 1st Main Road, 1st 'A' Cross, Devegowda Road, R.T. Nagar, Bangalore-560 032.
Ph: 080-2343 4372/73/74

REAL ESTATE SELLING

Commerical

BTM Layout

FOR SALE commercial building 17250 sq.ft. newly constructed building on site 4500 sqft. Near Hulimavu Lake. Price Expected 17.5Cr. Contact +91 6360919527

Flat

Banashankari

KATHRIGUPPE EAST, GH RESIDENCY, 3BHK FLATS For Sale, Ready to Move. 9000/ SFT.94482-58218 / 80507-27159

Sites

Bannerghatta Road

KHB Sites Near India 2nd International Cricket Stadium
Jigani, Electronic city, Bommasandra, Ready for Registration, SBI Bank loan avbl, Land owner Sites Call: 70260 13388

Vishweshwariah Layout

EAST FACING 30x40 site 4th Block | 120m from SMV 4th Block Double Road | 210m from Puneeth Rajkumar Park | 1.8 Cr. | Contact/WhatsApp Owner 9845712577 between 10 AM - 7 PM | Brokers excuse

Industrial & Factory

Peenya

SALE, PEENYA Prime Location. Half Acre Industrial KIADB Land with Building/ Power. 'PEENYA ESTATES' 9844039416

Villas/Bunglows

Sarjapur Road

4 BEDROOM boutique villa with attached bathrooms + staff room with toilet on an East facing 3000 Sq.Ft site off Sarjapur Road, Bangalore. Contact 9740037445, 9845538518.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

TO-LET OFFICE Space 2000Sft Built up Area Available for Rent in Madhavanagar, Adj:Race Course, Bengaluru Contact No-8296346977

JOB OPPORTUNITIES

Hospital & Medical Jobs

WANTED FOR NURSING STAFF Contact: Chaitanya Hospital No.80/117 P&T Colony R.T.Nagar Bangalore:5600032 Call: 9900520357

Teachers/ Professors

MODERN PUBLIC ENGLISH SCHOOL, R.T.Nagar Bangalore-32 requires TRAINED TEACHERS for KINDERGARTEN, PRE-PRIMARYand PT INSTRUCTORS. WhatsApp CV:9739981605

Office Boys/ Peon

WANTED: STAFF (BASIC COMPUTER) & OFFICE BOY. MALE & FEMALE. OFFICE LOCATED AT SANJAYNAGAR 9035883017

CONNECT

PERSONAL

Change of Name

CHANGE OF NAME
I, **MAHIRAJ KHATOON** (in 10th Std. School TC) and **MEHER** (in other documents Aadhar, Pan Card, Voter Id) W/o Noushad Pasha, residing at # 262, 4th Cross, 4th Main, Andrahalli Main Road, Hegganahalli, Vishwaneedam, Bengaluru- 560091, declare that the above names pertain to me only. Henceforth I shall be known as **MEHER,** vide affidavit dated 01-07-2026 before notary R. Shivanna Chari, Bengaluru.

CHANGE OF NAME
I, **ALIYA** D/o Munivenkata Gowda, residing at # 04, 5th Cross, Kadirenahalli New Colony, BSK 2nd Stage, Bengaluru-560070, have changed my name to **GOWRAMMA,** vide affidavit dated 01-07-2026 before notary L. Puttaraju, Bengaluru. Henceforth I shall be known as **GOWRAMMA** only.

CHANGE OF NAME
I, **NAVEENA D** Residing at No.132, Uttarahalli Kengeri Main Road, Near JSS College, Royal Reflex Layout, Mylasandra, Kengeri, Bengaluru-560060, have changed my name to **NAVEEN I D** vide affidavit dated 02.07.2026 before Notary B.V. Nagabhushana, Balaguru, Henceforth I shall be known as **NAVEEN I D** only.

CHANGE OF NAME
I, **PUSHPA B** D/o Basavarajappa, residing at Narasapura Post & Village, Shikaripura Taluk, Talagunda Hobli, Shimogga Dist. have changed my name to **PARINITA B,** vide affidavit dated 29-06-2026 before notary Onkarappa N R, Bengaluru. Henceforth I shall be known as **PARINITA B** only.

I, MRS. BASEERATH, have changed my name to Mrs. BALQUIS SULTANA, vide affidavit dated 01/07/2026 before notary M.Rajendra, Bangalore.

CHANGE OF NAME
I, Army No. SL-03796M, Rank: Lt Col (Retd) JUGENDRA SINGH VERMA, Residing at No. B707 Uber Verdant Phase 2, Carmelram, Janatha Colo: Carmelaram Po: Carmelaram, Bengaluru- 35 declare that have changed my spouse name from **SHAKUNTALA VERMA** to **SHAKUNTALA JUGENDRA VERMA** vide affidavit dated 01.07.2026 before XXIX Add. Chief Judical Magistrate, Bangaluru City.

Lost

DOCUMENT LOST
I, **Rathamma,** residing at Hemmigepura, Kengeri Hobli, Bengaluru South, have lost my **Original Land Documents of Survey no 6/2 RRN-1-02578-2009-10, 29/3 RRN-1-03265-2010-11 & 35/8 RRN-1-03264-2010-11, Hemmigepura, Kengeri Hobli, Bengaluru.** While in transit. If found please contact: **9845427675**

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ASTRO YATRA

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್:ಯು40109ಕೆಎ1999ಎಸ್‌ಜಿಸಿ025521)

ಸಂ:ಬಿ31/ಅಇಂ(ಐಟಿ)/ಕಾನಿಇಂ(ಐಟಿ-3)/76444/2026-27 ದಿನಾಂಕ:02.07.2026

ಟೆಂಡರ್ ಪ್ರಕಟಣೆ

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯಲ್ಲಿ ಟೆಂಡರ್ ಪ್ರಕಟಣೆ ಸಂಖ್ಯೆ: B31/SEE(IT)/76420/2026-27 ರ ಅನ್ವಯ **“Design, Supply, Installation, Configuration, Integration, Testing and Commissioning of an Integrated Secure Infrastructure Solution Across KPTCL sub-stations and Centralized Locations”** ಮಾಡುವ ಸಲುವಾಗಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಬಿಡ್‌ನ್ನು ಆಹ್ವಾನಿಸಿದೆ.

ಬಿಡ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಮಾತ್ರ ಸ್ವೀಕರಿಸಲಾಗುವುದು. ಹೆಚ್ಚಿನ ವಿವರಗಳಿಗಾಗಿ ಕವಿಪ್ರನಿನಿಯ ವೆಬ್‌ಸೈಟ್ **https://kptcl.karnataka.gov.in** ನ ಹೈಪರ್‌ಲಿಂಕ್ ‘ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ’ ಅಥವಾ **https://kppp.karnataka.gov.in** ನಲ್ಲಿ **ದಿನಾಂಕ: 03.07.2026** ರಿಂದ ಪಡೆಯಬಹುದು. ಹೆಚ್ಚುವರಿ ಮಾಹಿತಿಗಾಗಿ ಈ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/- ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ),
ನಿಗಮ ಕಛೇರಿ, ಕವಿಪ್ರನಿನಿ, 11ನೇ ಮಹಡಿ, ಇಂಧನ ಭವನ, ಆನಂದ್‌ರಾವ್ ವೃತ್ತ, ಇಂಧನ ಭವನ, ಬೆಂಗಳೂರು-09

ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ

ನಂ.5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು - 560 009.
ದೂ: 080-22341230/35 E-mail: bmicapa@gmail.com

ಸಂಖ್ಯೆ:ಬಿಎಂಐಸಿಎಪಿಎ/ಭೂಉಬ-01/22/2026-27/546 ದಿನಾಂಕ:02-07-2026

ಸಾರ್ವಜನಿಕ ಪ್ರಕಟಣೆ

[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಪ್ರಕಾರ]

ಶ್ರೀ ಮಹೇಶ್.ಕೆ.ಎಂ ಬಿನ್ ಮಹಾಲಿಂಗಯ್ಯ, ಶ್ರೀ ಶಿವಕುಮಾರ್.ಎಂ ಬಿನ್ ಮರುಳುಸಿದ್ದಪ್ಪ, ಶ್ರೀ ಆರ್.ಶಿವಮಾದಯ್ಯ ಬಿನ್ ಲೇಟ್ ರೇವಣ್ಣ, ಶ್ರೀ ಮುನಿಕೃಷ್ಣ .ಡಿ ಬಿನ್ ಲೇಟ್ ದೊಡ್ಡಪ್ಪಯ್ಯ, ಶ್ರೀಮತಿ ಶಿವಮ್ಮ ಕೋಂ ಮರುಳು ಸಿದ್ದಪ್ಪ ಮತ್ತು ಶ್ರೀ ರಮೇಶ್.ಡಿ ಬಿನ್ ಲೇಟ್ ದೊಡ್ಡಪ್ಪಯ್ಯ ಇವರುಗಳು ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕುಂಬಳಗೋಡು ಗೊಲ್ಲಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:129ರ 02ಎಕರೆ, ಸರ್ವೆ ಸಂಖ್ಯೆ: 137ರ 03ಎ-27ಗು ಪೈಕಿ 02ಎ-14 1/4ಗು ಮತ್ತು ಸರ್ವೆ ಸಂಖ್ಯೆ:138ರ 03ಎ-37ಗು ಪೈಕಿ 02ಎ-13 1/4ಗು ಒಟ್ಟು 06ಎ-27 1/2ಗು ವಿಸ್ತೀರ್ಣದ ಜಮೀನನ್ನು ಕೆಟಿಸಿಪಿ ಕಾಯ್ದೆ, 1961ರ ಕಲಂ 14(ಎ)ರಡಿಯಲ್ಲಿ "**ವ್ಯವಸಾಯ**" ವಲಯದಿಂದ "**ವಸತಿ**" ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಮನವಿ ಸಲ್ಲಿಸಿರುತ್ತಾರೆ. ಸದರಿ ಜಮೀನನ್ನು ಅನುಮೋದಿತ ಮಹಾಯೋಜನೆಯಲ್ಲಿ **ವ್ಯವಸಾಯ** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ಅರ್ಜಿದಾರರು ತಿಳಿಸಿರುತ್ತಾರೆ.

1) ಈ ಜಮೀನಿನಲ್ಲಿ **ವಸತಿ** ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ, ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ದೊರಕುತ್ತವೆ.
2) ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ.
3) ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ.
4) ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ನಾಗರೀಕ ಸೌಲಭ್ಯಗಳಾದ ಉತ್ತಮ ರಸ್ತೆಗಳು, ಒಳಚರಂಡಿ, ವಿದ್ಯುತ್ ಸೌಲಭ್ಯ ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ.

ಸಾರ್ವಜನಿಕರಿಂದ ಆಕ್ಷೇಪಣೆಗಳಿದ್ದಲ್ಲಿ ಆಹ್ವಾನಿಸಲಾಗಿದೆ. ಯಾವುದೇ ವ್ಯಕ್ತಿಯು ಈ ಪ್ರಕಟಣೆಯ ದಿನಾಂಕದಿಂದ **15 ದಿನಗಳೊಳಗೆ** ಸದಸ್ಯ ಕಾರ್ಯದರ್ಶಿ, ಬಿ.ಎಂ.ಐ.ಸಿ.ಪಿ.ಎ., ಬೆಂಗಳೂರು ಇವರಿಗೆ ಲಿಖಿತವಾಗಿ ಆಕ್ಷೇಪಣೆ ಸಲ್ಲಿಸಬಹುದು. ನಿಗದಿತ ಅವಧಿಯ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-
ಸದಸ್ಯ ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಪಿ.ಎ., ಬೆಂಗಳೂರು

ಡಿಐಪಿಆರ್/ಸಿಪಿ/1457/ಸಿಸಿಎಲ್/2026-27

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ವಿಶೇಷ ಭೂಸ್ವಾಧೀನಾಧಿಕಾರಿಗಳು ಕೆ.ಐ.ಎ.ಡಿ.ಬಿ. ಕೇಂದ್ರ ಕಛೇರಿ, ನಂ.14/3, ಸಿ.ಎಫ್.ಸಿ. ಕಟ್ಟಡ, ಮಹರ್ಷಿ ಅರವಿಂದ ಭವನ, 1ನೇ ಮಹಡಿ, ನೃಪತುಂಗ ರಸ್ತೆ, ಬೆಂಗಳೂರು-560001.
ಸಂಖ್ಯೆ: ಕೆಐಎಡಿಬಿ/ವಿ.ಭೂ.ಅ./570/2026-27 ದಿನಾಂಕ: 02.07.2026

ಸಾರ್ವಜನಿಕ ನೋಟೀಸ್

ಈ ಮೂಲಕ ಸಾರ್ವಜನಿಕರಿಗೆ ಹಾಗೂ ಸಂಬಂಧಪಟ್ಟ ಜಮೀನಿನ ಖಾತೆದಾರರು/ ಅನುಭವದಾರರು/ ಹಿತಾಸಕ್ತದಾರರಿಗೆ ತಿಳಿಸುವುದೇನೆಂದರೆ, **ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕು, ಕಸಬಾ ಹೋಬಳಿ, ಜಕ್ಕಸಂದ್ರ, ಶಿವಾರ ಪಟ್ಟಣ, ರಾಮೇನಹಳ್ಳಿ, ಕಣಿವೇನಹಳ್ಳಿ, ಹುಂಗೇನಹಳ್ಳಿ ಮತ್ತು ವರದೇನಹಳ್ಳಿ ಗ್ರಾಮದ ಒಟ್ಟು ವಿಸ್ತೀರ್ಣ 1637-21½ ಎ/ಗು ಖರಾಬು 490-15½ ಎ/ಗು ಉಳಿಕೆ 1147-06 ಎ/ಗು ಜಮೀನಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಉದ್ದೇಶಕ್ಕಾಗಿ** ಪ್ರಾಥಮಿಕ ಅಧಿಸೂಚನೆ ಸಂಖ್ಯೆ: ಸಿಐ79 ಎಸ್‌ಪಿಕ್ಯೂ 2024 ದಿನಾಂಕ:10.09.2024ರಂತೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಚುರಪಡಿಸಿರುತ್ತದೆ. ಸದರಿ ಭೂಸ್ವಾಧೀನಕ್ಕೆ ಒಳಪಟ್ಟ ಜಮೀನುಗಳಿಗೆ **ದಿನಾಂಕ: 07.07.2026 ರಿಂದ 14.07.2026 ರವರೆಗೂ** ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಕೇಂದ್ರ ಕಛೇರಿ, ಬೆಂಗಳೂರು ವತಿಯಿಂದ ಜೆ.ಎಂ.ಸಿ. ಕಾರ್ಯವನ್ನು ನಡೆಸುವುದರಿಂದ ಸದರಿ ಕಾರ್ಯಕ್ಕೆ ಸಿಬ್ಬಂದಿಯನ್ನು ನಿಯೋಜಿಸಿದ್ದು, ಸದರಿ ದಿನದಂದು ಸ್ಥಳದಲ್ಲಿದ್ದು, ಸ್ಥಳ ತನಿಖೆಗೆ ಸಾರ್ವಜನಿಕರು ಸಹಕಾರ ನೀಡಲು ಕೋರಿದೆ.

ಸಹಿ/- ವಿಶೇಷ ಭೂಸ್ವಾಧೀನಾಧಿಕಾರಿ, ಕೆಐಎಡಿಬಿ (ಕೇಂದ್ರ ಕಛೇರಿ)

SCHOOL FOR CHILDREN WITH SPECIAL NEEDS (CWSN), GC CRPF, YELAHANKA BENGALURU-560064

Contact No:- 9448514105, 08029567730

WALK IN INTERVIEW

Name of the Post	Number of Vacancies	Salary	Date and time of Walk in interview	Eligibility Conditions for teachers
Special Teacher / Educator (at least 05 years of experience)	01	Rs. 25,000/-	07/07/2026 at 10.30 AM	Diploma/ Graduation in special education (Children With Special Needs / Autism Spectrum Disorder)
Occupational Cum Speech Therapists (at least 05 years of experience)	01	Rs. 25,000/-		Diploma / Graduation in occupational / physical and speech therapy from recognised institutions with relevant experience
Ayah/ Nanny	02	Rs. 10,000/-		10th Pass

ಮಕ್ಕಳ ಜವಾಬ್ದಾರಿ ಶಾಲೆಯ ಬಾಧ್ಯತೆ: ಕೋರ್ಟ್

ಬಸ್ಸಿನಲ್ಲಿ ಮರಳುತ್ತಿದ್ದ ಮಗು ಕಣ್ಣು ಕಳೆದುಕೊಂಡ ವ್ಯಥೆಯ ಗಾಥೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಮದ್ದೂರು ತಾಲ್ಲೂಕಿನ ದಿವ್ಯಜ್ಯೋತಿ ಶಾಲೆಯ ಘಟನೆ
- ಕ್ರಿಮಿನಲ್ ಪ್ರಕರಣ ರದ್ದುಪಡಿಸಲು ನಕಾರ

ಬೆಂಗಳೂರು: 'ಮಕ್ಕಳಿಗೆ ಶಾಲಾ ಬಸ್ ಸೌಕರ್ಯ ಕಲ್ಪಿಸಿ ನಾವೇನೋ ಉಪಕಾರ ಮಾಡುತ್ತಿದ್ದೇವೆ ಅಥವಾ ಅವರಿಗೆ ಅನುಕೂಲ ಕಲ್ಪಿಸಿದ್ದೇವೆ ಎಂಬ ಶಾಲೆಯವರ ಧೋರಣೆ ಯಾವುದೇ ಕಾರಣಕ್ಕೂ ಒಪ್ಪತಕ್ಕದ್ದಲ್ಲ. ಇದು ಮಕ್ಕಳ ರಕ್ಷಣೆಯ ಬಗ್ಗೆ ಶಾಸನದ ಅಡಿಯಲ್ಲಿ ಕಡ್ಡಾಯಗೊಳಿಸಲಾದ ಗಂಭೀರ ಬಾಧ್ಯತಾ ವಿಷಯ' ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ಸ್ಪಷ್ಟಪಡಿಸಿದೆ.

'ನಮ್ಮ ವಿರುದ್ಧ ಮದ್ದೂರು ತಾಲ್ಲೂಕಿನ ಗೊಲ್ಲರದೊಡ್ಡಿ ಗ್ರಾಮದ ಕೊಪ್ಪ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿ 'ದಿವ್ಯಜ್ಯೋತಿ ಶಾಲಾ ಆಡಳಿತ ಮಂಡಳಿ' ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ತಳ್ಳಿ ಹಾಕಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಪ್ರಕರಣ: 'ದಿವ್ಯಜ್ಯೋತಿ ಶಾಲೆಯಲ್ಲಿ 4ನೇ ತರಗತಿಯಲ್ಲಿ ಓದುತ್ತಿದ್ದ ವಿದ್ಯಾರ್ಥಿಯೊಬ್ಬ 2025ರ ಆಗಸ್ಟ್ 1ರಂದು ಶಾಲೆಯ ಬಸ್ಸಿನಲ್ಲಿ ಇತರೆ ಮಕ್ಕಳೊಂದಿಗೆ ಮನೆಗೆ ಹಿಂದಿರುಗುತ್ತಿದ್ದ. ಈ ವೇಳೆ ಕೆಲವು ಮಕ್ಕಳು ಬಸ್ಸಿನೊಳಗೆ ಬಣ್ಣದ ಕಾಗದದ ಚೂರುಗಳು ಅಥವಾ ಬೆಳಕು ಚೆಲ್ಲುವ ಪಟಾಕಿಯನ್ನು (ಸ್ಪಾರ್ಕ್ಲರ್) ಸಿಡಿಸಿದ್ದರು. ಆಗ ಸಂತ್ರಸ್ತ ಮಗುವಿನ ಕಣ್ಣಿಗೆ ಕಿಡಿಗಳು ಸಿಡಿದು ಒಂದು ಕಣ್ಣಿನ ದೃಷ್ಟಿ ಕಳೆದುಕೊಂಡಿದೆ ಮಾತ್ರವಲ್ಲ ದೇಹದ ಶೇ 40ರಷ್ಟು ಭಾಗ ಅಂಗವಿಕಲತೆಗೆ ಒಳಗಾಗಿದೆ' ಎಂಬುದು ಆರೋಪ.

ಮೇಲ್ನೋಟಕ್ಕೆ 'ಇದು ಮಕ್ಕಳ ಸುರಕ್ಷತೆ, ಶಾಲೆಯ ಅಜಾಗರೂಕತೆಯ ಕಥನ. ಒಂದು ಮಗು ತನ್ನ ಒಂದು ಕಣ್ಣಿನ ದೃಷ್ಟಿಯನ್ನೇ ಕಳೆದುಕೊಂಡಿದೆ. ಶೇ 40ರಷ್ಟು ಅಂಗವೈಕಲ್ಯಕ್ಕೆ ಒಳಗಾಗಿದ್ದು ತೀರಾ ದುರದೃಷ್ಟಕರ
ಎಂ.ನಾಗಪ್ರಸನ್ನ, ನ್ಯಾಯಮೂರ್ತಿ

ಈ ಸಂಬಂಧ ದಿವ್ಯಜ್ಯೋತಿ ಶಾಲೆಯ ಆಡಳಿತ ಮಂಡಳಿ ವಿರುದ್ಧ; ಭಾರತೀಯ ನ್ಯಾಯ ಸಂಹಿತಾ–2023ರ (ಬಿಎನ್ಎಸ್) ಕಲಂ 125(ಎ) ಅಡಿಯಲ್ಲಿ ಕೊಪ್ಪ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ. ಇದನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದ ಶಾಲೆಯು, 'ಮದ್ದೂರು ಹೆಚ್ಚುವರಿ ಸಿವಿಲ್ ಜಡ್ಜ್ (ಕಿರಿಯ ವಿಭಾಗ) ಜೆಎಂಎಫ್‌ಸಿ ಕೋರ್ಟ್‌ನಲ್ಲಿರುವ ಪ್ರಕರಣ ವಿಚಾರಣೆ ಹಂತದಲ್ಲಿದ್ದು ಇದನ್ನು ರದ್ದುಪಡಿಸಬೇಕು' ಎಂದು ಮನವಿ ಮಾಡಿತ್ತು.

ವಿಚಾರಣೆ ನಡೆಸಿದ ನ್ಯಾಯಪೀಠ ಅರ್ಜಿಯನ್ನು ವಜಾಗೊಳಿಸಿ, 'ಘಟನೆ ನಡೆದ ಸಮಯದಲ್ಲಿ ಬಸ್ಸಿನಲ್ಲಿ ಒಬ್ಬ ಸಹಾಯಕ ಅಥವಾ ಭದ್ರತಾ ಸಿಬ್ಬಂದಿ ಇದ್ದರೋ ಹೇಗೆ? ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿತ್ತೇ? ಅಳವಡಿಸಿದ್ದರೂ ಅದು ಕೆಲಸ ಮಾಡುತ್ತಿತ್ತೇ? ನಿಷೇಧಿತ ಅಥವಾ ಅಪಾಯಕಾರಿ ವಸ್ತುಗಳನ್ನು ಸಾಗಿಸಲು ಮಕ್ಕಳಿಗೆ ಹೇಗೆ ಅನುಮತಿ ನೀಡಲಾಗಿತ್ತು? ಶಾಲೆಯು ಅಗತ್ಯ ಸುರಕ್ಷತಾ ಸೂಚನೆಗಳನ್ನು ನೀಡಿರಲಿಲ್ಲವೇ? ಮತ್ತು ಅವುಗಳನ್ನು ಜಾರಿಗೊಳಿಸಿತ್ತೇ? ಆಡಳಿತ ಮಂಡಳಿಯು ತನ್ನ ಮೇಲ್ವಿಚಾರಣೆಯ ಕರ್ತವ್ಯದಲ್ಲಿ ವಿಫಲವಾಗಿದೆಯೇ..? ಎಂಬೆಲ್ಲಾ ಅಂಶಗಳು ತನಿಖೆಗೆ ಒಳಪಡಬೇಕಾದ ಅಗತ್ಯ ವಿಷಯಗಳಾಗಿವೆ' ಎಂದು ಅಭಿಪ್ರಾಯಪಟ್ಟಿದೆ.

'ಶಾಲಾ ಆಡಳಿತ ಮಂಡಳಿ ಸಂಪೂರ್ಣವಾಗಿ ದೋಷಮುಕ್ತ ಎಂಬ ವಾದವನ್ನು ಈ ಹಂತದಲ್ಲಿ ಒಪ್ಪಿಕೊಳ್ಳಲಾಗುವುದಿಲ್ಲ. ಅಪರಾಧದ ನಿಖರ ರೂಪರೇಷೆಗಳು ಏನಿದ್ದರೂ ತನಿಖೆಯ ನಂತರವೇ ನಿರ್ಧಾರವಾಗಬೇಕು. ಆದರೆ, ಆರಂಭದಲ್ಲೇ ತನಿಖೆಯ ಕತ್ತು ಹಿಸುಕಿ ಯಾವುದೇ ತೀರ್ಮಾನ ಈ ಹಂತದಲ್ಲಿ ದಾಖಲಿಸಲಾಗದು. ಇದೊಂದು ವಿದ್ಯಾರ್ಥಿ ಪ್ರಕರಣ. ಜೀವನದಲ್ಲಿ ಬಾಳಿ ಬೆಳಗಬೇಕಿದ್ದ ವಯಸ್ಸಿನ ಮುಗ್ಧ ಮಗುವೊಂದು, ಶಾಶ್ವತ ದೃಷ್ಟಿಹೀನತೆಗೆ ಒಳಗಾಗಿ ಬದುಕಬೇಕಾಗಿ ಬಂದಿರುವುದು ಶೋಚನೀಯ' ಎಂದು ನ್ಯಾಯಪೀಠ ವ್ಯಥಿತ ಭಾವನೆಯನ್ನು ಆದೇಶದಲ್ಲಿ ಉಲ್ಲೇಖಿಸಿದೆ.

ಕಲಂ 125(ಎ) ಹೇಳುವುದೇನು?

ಇತರರ ಜೀವಕ್ಕೆ ಅಥವಾ ವೈಯಕ್ತಿಕ ಸುರಕ್ಷತೆಗೆ ಅಪಾಯವನ್ನು ಉಂಟು ಮಾಡುವಂತಹ ನಿರ್ಲಕ್ಷ್ಯದ ಅಥವಾ ದುಡುಕಿನ ಕೃತ್ಯಗಳ ವಿರುದ್ಧದ ಅಪರಾಧ. ನಿರ್ದಿಷ್ಟವಾಗಿ ವಾಹನ ಚಾಲನೆ ಅಥವಾ ಇತರೆ ಕೆಲಸಗಳಲ್ಲಿ ಬೇಜವಾಬ್ದಾರಿಯಿಂದ ವರ್ತಿಸಿ ಯಾರಿಗಾದರೂ ಗಾಯವನ್ನು ಉಂಟುಮಾಡಿದರೆ ಈ ಕಲಂ ಅನ್ವಯವಾಗುತ್ತದೆ.

ಹೊಸ ಮಾರ್ಗಸೂಚಿ: ಪ್ರಿಯಾಂಕ್ ಖರ್ಗೆ

'ಕಾನೂನು ಸುವ್ಯವಸ್ಥೆಗೆ ಸಂಬಂಧಿಸಿದ ಮಾಹಿತಿಯನ್ನು ಜವಾಬ್ದಾರಿಯುತವಾಗಿ ಮತ್ತು ಸಮನ್ವಯದೊಂದಿಗೆ ಸಾರ್ವಜನಿಕರಿಗೆ ತಲುಪಿಸುವ ಉದ್ದೇಶ'

ಪೊಲೀಸ್ ಇಲಾಖೆಯ ಮಾಹಿತಿ ಹಂಚಿಕೆಗೆ ಏಕೀಕೃತ ಮಾರ್ಗಸೂಚಿ

ಬೆಂಗಳೂರು: ತಮ್ಮ ವ್ಯಾಪ್ತಿಯಲ್ಲಿನ ಘಟನೆಗಳಿಗೆ ಸಂಬಂಧಿಸಿದ ಅಧಿಕೃತ ಮಾಹಿತಿಯನ್ನು ಜಿಲ್ಲಾ ಮಟ್ಟದಲ್ಲಿ ಪೊಲೀಸ್ ವರಿಷ್ಠಾಧಿಕಾರಿ, ನಗರ ಪ್ರದೇಶಗಳಲ್ಲಿ ಪೊಲೀಸ್ ಕಮಿಷನರ್ ಹಾಗೂ ವಿಶೇಷ ಘಟಕಗಳ ಮುಖ್ಯಸ್ಥರು ಮಾಧ್ಯಮಗಳಿಗೆ ನೀಡಲಿದ್ದಾರೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಈ ಸಂಬಂಧ ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಹೊಸ ಮಾರ್ಗ-ಸೂಚಿಗಳನ್ನು ಹೊರಡಿಸಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ, ಅಪರಾಧ ತನಿಖೆ, ಸಾರ್ವಜನಿಕ ಸುರಕ್ಷತೆಗೆ ಸಂಬಂಧಿಸಿದ ಮಾಹಿತಿಯನ್ನು ಜವಾಬ್ದಾರಿಯುತವಾಗಿ ಮತ್ತು ಸಮನ್ವಯದೊಂದಿಗೆ ಸಾರ್ವಜನಿಕರಿಗೆ ತಲುಪಿಸುವ ಉದ್ದೇಶದಿಂದ ಸರ್ಕಾರ ಮಹತ್ವದ ಕ್ರಮ ಕೈಗೊಂಡಿದೆ ಎಂದು ತಿಳಿಸಿದ್ದಾರೆ.

ಠಾಣಾ ಮಟ್ಟದಲ್ಲಿ ಪಿಎಸ್ಐ, ವೃತ್ತ ನಿರೀಕ್ಷಕರು, ಠಾಣಾಧಿಕಾರಿಗಳು ತಮ್ಮ ವ್ಯಾಪ್ತಿಯ ಘಟನೆಗಳಿಗೆ ಸಂಬಂಧಿಸಿದಂತೆ ಪ್ರಾಥಮಿಕ ಮಾಹಿತಿಯನ್ನಷ್ಟೇ ಹಂಚಿ-ಕೊಳ್ಳಲಿದ್ದಾರೆ ಎಂದು ಹೇಳಿದ್ದಾರೆ.

ರಾಜ್ಯದಾದ್ಯಂತ ಪೊಲೀಸ್ ಠಾಣೆಗಳು, ಜಿಲ್ಲಾ ಪೊಲೀಸ್ ಕಚೇರಿಗಳು, ನಗರ ಪೊಲೀಸ್ ಕಮಿಷನರ್ ಕಚೇರಿಗಳು, ವಿಶೇಷ ಘಟಕಗಳಲ್ಲಿ ಪ್ರಕರಣಗಳ ಮಾಹಿತಿ ಹಂಚುವ ಸಂದರ್ಭದಲ್ಲಿ ಏಕೀಕೃತ ವಿಧಾನ ಅನುಸರಿಸಲಾಗುವುದು. ಇದರಿಂದ ತಪ್ಪು ಮಾಹಿತಿ ಹರಡುವುದನ್ನು ತಡೆಯುವ ಜೊತೆಗೆ ತನಿಖೆಯ ಗೋಪ್ಯತೆ ಕಾಪಾಡಲು ಸಹಾಯ ಆಗಲಿದೆ ಎಂದೂ ಹೇಳಿದ್ದಾರೆ.

ಅಪರಾಧ ಪ್ರಕರಣಗಳ ತನಿಖೆ, ಗುಪ್ತಚರ ಮಾಹಿತಿ, ಸಂವೇದನಾಶೀಲ ಪ್ರಕರಣಗಳು, ಸೈಬರ್ ಅಪರಾಧಗಳು, ಸಂಘಟಿತ ಅಪರಾಧ ಚಟುವಟಿಕೆಗಳು ಹಾಗೂ ಕಾನೂನು ಪ್ರಕ್ರಿಯೆಗೆ ಸಂಬಂಧಿಸಿದ ಮಾಹಿತಿಯನ್ನು ಅನುಮತಿ ಇಲ್ಲದೆ ಬಹಿರಂಗ ಪಡಿಸದಂತೆ ಸ್ಪಷ್ಟ ಸೂಚನೆ ನೀಡಲಾಗಿದೆ. ಪ್ರಕರಣದ ತನಿಖೆಗೆ ಧಕ್ಕೆಯಾಗುವ ರೀತಿಯ ಮಾಹಿತಿ, ಸಾಕ್ಷ್ಯಾಧಾರಗಳು, ಆರೋಪಿಗಳ ಹೇಳಿಕೆಗಳು, ಗುಪ್ತಚರ ಮಾಹಿತಿ, ಪ್ರಥಮ ವರ್ತಮಾನ ವರದಿ ಅಥವಾ ಕೇಸ್ ಡೈರಿಗಳಂತಹ ದಾಖಲೆಗಳನ್ನು ಅನುಮತಿಯಿಲ್ಲದೆ ಹಂಚಿಕೊಳ್ಳುವುದಕ್ಕೆ ನಿರ್ಬಂಧ ವಿಧಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ವಾಲಿದ ಎರಡು ಅಂತಸ್ತಿನ ಕಟ್ಟಡ ನೆಲಸಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಟನ್ ಪೇಟೆಯ ಭಕ್ಷಿ ಗಾರ್ಡನ್‌ನಲ್ಲಿ ಐವತ್ತು ವರ್ಷದ ಎರಡು ಅಂತಸ್ತಿನ ಕಟ್ಟಡ ಗುರುವಾರ ವಾಲಿದ ಕಾರಣ ಅಕ್ಕಪಕ್ಕದ ಮನೆಯ ನಿವಾಸಿಗಳಲ್ಲಿ ಕೆಲಕಾಲ ಆತಂಕ ಉಂಟಾಗಿತ್ತು. ಕಟ್ಟಡದ ಒಂದು ಭಾಗ ವಾಲಿ ರಸ್ತೆ ಮೇಲೆ ಕುಸಿದ ಪರಿಣಾಮ ರಸ್ತೆ ಬದಿಯಲ್ಲಿ ನಿಲ್ಲಿಸಿದ ಆಟೊ ಜಖಂಗೊಂಡಿತು.

ಕಟ್ಟಡದಲ್ಲಿ ಖಾಸಗಿ ಕ್ಲಿನಿಕ್ ನಡೆಸಲಾಗುತ್ತಿತ್ತು. ಕಟ್ಟಡದೊಳಗೆ ಸಿಲುಕಿಕೊಂಡಿದ್ದ ಇಬ್ಬರನ್ನು ಪೊಲೀಸರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ರಕ್ಷಣೆ ಮಾಡಿದ್ದಾರೆ. ಬಳಿಕ ಕಟ್ಟಡದ-ಲ್ಲಿದ್ದ ಕೆಲವು ವಸ್ತುಗಳನ್ನು ಅಗ್ನಿಶಾಮಕ ಸಿಬ್ಬಂದಿ ಹೊರಗೆ ಸಾಗಿಸಿದರು.

ಹಳೆಯ ಕಟ್ಟಡ ವಾಲಿರುವ ಕುರಿತು ಸ್ಥಳೀಯರು ಪೊಲೀಸರಿಗೆ ಮತ್ತು ಅಗ್ನಿಶಾಮಕ ದಳದ ಅಧಿಕಾರಿಗಳಿಗೆ ಮಾಹಿತಿ ನೀಡಿದರು. ಬಳಿಕ ಪಾಲಿಕೆ ಕಾರ್ಯಪಾಲಕ ಎಂಜಿನಿಯರ್ ಭಾಸ್ಕರ್ ರೆಡ್ಡಿ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಸ್ಥಳೀಯರ ಜತೆಗೂ ಕೆಲಕಾಲ ಸಮಾಲೋಚನೆ ನಡೆಸಿದರು. ಅಲ್ಲದೆ ಕಟ್ಟಡ ಮಾಲೀಕರ ಜತೆಗೂ ಚರ್ಚೆ ನಡೆಸಿದರು. ಎರಡು ಜೆಸಿಬಿಗಳನ್ನು ಬಳಸಿ ಕಟ್ಟಡವನ್ನು ನೆಲಸಮಗೊಳಿಸಲಾಯಿತು. ಈ ವೇಳೆ ಅಪಾರ ಸಂಖ್ಯೆಯಲ್ಲಿ ಜನರು ಜಮಾವಣೆಗೊಂಡಿದ್ದರು.

ಕಾಟನ್‌ಪೇಟೆಯ ಭಕ್ಷಿ ಗಾರ್ಡನ್‌ನಲ್ಲಿ ವಾಲಿದ ಎರಡು ಅಂತಸ್ತಿನ ಕಟ್ಟಡವನ್ನು ನೆಲಸಮಗೊಳಿಸಲಾಯಿತು ಪ್ರಜಾವಾಣಿ ಚಿತ್ರ ಕಿಶೋರ್ ಕುಮಾರ್ ಬೋಳಾರ್

'ನೀರು ಸೋರುತ್ತಿತ್ತು'

'ಕಟ್ಟಡದ ಎರಡನೇ ಅಂತಸ್ತಿನಲ್ಲಿ ನಾನು, ಪತಿ, ಮಕ್ಕಳು, ಅತ್ತೆ ವಾಸವಿದ್ದೆವು. ಬೆಳಿಗ್ಗೆ ನಾನು ಕೆಲಸಕ್ಕೆ ಹೋಗಿದ್ದೆ. ಪತಿ ಮಲಗಿದ್ದರು. ಕ್ಲಿನಿಕ್‌ನಲ್ಲಿ ನೀರು ಸೋರುತ್ತಿತ್ತು. ಸಿಮೆಂಟ್ ಪ್ಲಾಸ್ಟಿಂಗ್ ಕೆಲಸ ನಡೆಯುತ್ತಿತ್ತು. ಆಗಲೇ ಡ್ರಿಲ್ಲಿಂಗ್ ಮಷಿನ್‌ನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಕಟ್ಟಡ ವಾಲಿದೆ' ಎಂದು ಶ್ಯಾಮಲಾ ತಿಳಿಸಿದರು.

'ತಕ್ಷಣ ಅಕ್ಕಪಕ್ಕದ ನಿವಾಸಿಗಳು ಹಾಗೂ ಕಟ್ಟಡದ ಮಾಲೀಕರು ಕರೆ ಮಾಡಿ ವಿಷಯ ತಿಳಿಸಿದರು. ಬಂದು ನೋಡಿದಾಗ ಕಟ್ಟಡ ವಾಲಿತ್ತು. ಮನೆಯಲ್ಲಿದ್ದ ವಸ್ತುಗಳನ್ನು ಹೊರಗೆ ತರಲು ಆಗಲಿಲ್ಲ. ಎಲ್ಲವೂ ಹಾಳಾಯಿತು' ಎಂದು ಬೇಸರ ವ್ಯಕ್ತಪಡಿಸಿದರು.

ಬಿಡದಿ ಟೌನ್‌ಶಿಪ್: 4 ದಿನಗಳ ನಂತರ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಡದಿ ಟೌನ್‌ಶಿಪ್ ಯೋಜನೆಯನ್ನು ಪ್ರಶ್ನಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ದಸ್ತಾವೇಜು ಕಚೇರಿ ಪರಿಶೀಲನೆಗೆ ಒಳಪಡಿಸಿದ ನಂತರ ವಿಚಾರಣೆಗೆ ದಿನ ನಿಗದಿಪಡಿಸಲಾಗುವುದು ಎಂದು ಹೈಕೋರ್ಟ್ ತಿಳಿಸಿದೆ.

'ಟೌನ್‌ಶಿಪ್ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರ ಹೊರಡಿಸಿರುವ ಅಧಿಸೂಚನೆ ರದ್ದುಪಡಿಸುವಂತೆ ಕೋರಿರುವ ಈ ಅರ್ಜಿಯನ್ನು ತ್ವರಿತವಾಗಿ ವಿಚಾರಣೆಗೆ ಪರಿಗಣಿಸಬೇಕು' ಎಂದು ಅರ್ಜಿದಾರರು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠಕ್ಕೆ ಗುರುವಾರ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಕಚೇರಿಯು ಅರ್ಜಿ ಪರಿಶೀಲನೆ ನಡೆಸಿದ ನಂತರ ನಾಲ್ಕು ದಿನಗಳ ಬಳಿಕ ವಿಚಾರಣೆಗೆ ನಿಗದಿಪಡಿಸಲಾಗುವುದು' ಎಂದು ತಿಳಿಸಿತು. ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲ್ಲೂಕಿನ ಸಾಮಾಜಿಕ ಕಾರ್ಯಕರ್ತ ರಾಜೇಶ್ ಕಂಪಲಾಪುರ ಬಸವಣ್ಣ ಈ ಅರ್ಜಿ ಸಲ್ಲಿಸಿದ್ದಾರೆ.

ಮನವಿ: 'ರಾಮನಗರ ಜಿಲ್ಲೆಯ ಬಿಡದಿ ತಾಲ್ಲೂಕಿನ ಕೆಂಪಯ್ಯನ ಪಾಳ್ಯದ 384.22, ಮಂಡಲಹಳ್ಳಿಯ 71.13 ಮತ್ತು ವಡೇರಹಳ್ಳಿಯ 63.10 ಎಕರೆ ಸೇರಿದಂತೆ ಒಟ್ಟು 519 ಎಕರೆ ಭೂಸ್ವಾಧೀನಕ್ಕೆ ನಗರಾಭಿವೃದ್ಧಿ ಇಲಾಖೆ ಹೊರಡಿಸಿರುವ ಅಧಿಸೂಚನೆ ಅನಿಯಂತ್ರಿತ, ಕಾನೂನು ಮತ್ತು ಪರಿಸರ ವಿರೋಧಿಯಾಗಿದ್ದು ಇದನ್ನು ರದ್ದುಪಡಿಸಬೇಕು' ಎಂದು ಅರ್ಜಿದಾರರು ಮನವಿ ಮಾಡಿದ್ದಾರೆ.

ಲಂಚ: ಆರೋಗ್ಯ ಇಲಾಖೆ ಅಧಿಕಾರಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುನಾನಿ ಚಿಕಿತ್ಸಾ ಕ್ಲಿನಿಕ್ ಆರಂಭಿಸುವ ಸಲುವಾಗಿ ಪರವಾನಗಿ ನೀಡಲು ₹15,000 ಲಂಚ ಪಡೆಯುತ್ತಿದ್ದ ವೇಳೆ ಆರೋಗ್ಯ ಇಲಾಖೆಯ ಬೆಂಗಳೂರು ಜಿಲ್ಲಾ ಕುಷ್ಠರೋಗ ಅಧಿಕಾರಿ ಡಾ.ಭುಜಬಲಿ ಡಿ.ವೈ. ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ನಗರದ ಎಚ್‌ಬಿಆರ್ ಬಡಾವಣೆ ನಿವಾಸಿ ಡಾ.ಮುಫಾಸ್ಸಿರ್ ಅಹಮದ್ ಮುಜಮ್ಮಿಲ್ ಅವರು ಕ್ಲಿನಿಕ್ ಆರಂಭಿಸಲು ಪರವಾನಗಿಗಾಗಿ ಅರ್ಜಿ ಸಲ್ಲಿಸಿದ್ದರು. ಪರವಾನಗಿ ನೀಡಲು ಭುಜಬಲಿ ಅವರು ₹30,000 ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಬಗ್ಗೆ ಮುಫಾಸ್ಸಿರ್ ಅವರು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

ಕೊಲೆ: ಮೂವರು ರೌಡಿಗಳಿಗೆ ಜೀವಾವಧಿ ಶಿಕ್ಷೆ

ಬೆಂಗಳೂರು: ಪಶ್ಚಿಮ ವಿಭಾಗದ ಕೆ.ಪಿ. ಅಗ್ರಹಾರ ಠಾಣಾ ವ್ಯಾಪ್ತಿಯಲ್ಲಿ ₹2 ಸಾವಿರ ಸಾಲದ ವಿಚಾರಕ್ಕೆ 10 ವರ್ಷಗಳ ಹಿಂದೆ ನಡೆದಿದ್ದ ಕೊಲೆ ಪ್ರಕರಣವೊಂದರಲ್ಲಿ ಮೂವರು ರೌಡಿಗಳಿಗೆ 66ನೇ ಸಿಸಿಎಚ್ ನ್ಯಾಯಾಲಯವು ಜೀವಾವಧಿ ಶಿಕ್ಷೆ ವಿಧಿಸಿ ಆದೇಶಿಸಿದೆ.

ಕೆ.ಪಿ. ಅಗ್ರಹಾರ ಠಾಣೆಯ ರೌಡಿಶೀ-ಟರ್‌ಗಳಾದ ವೆಂಕಟೇಶ್ ಅಲಿಯಾಸ್ 'ಕಪ್ಪೆ', ನಾಗರಾಜ್ ಅಲಿಯಾಸ್ 'ಕರಿಷ್ಮಾ' ಹಾಗೂ ಪುನೀತ್ ಅಲಿಯಾಸ್ 'ಕಣ್ಣುರಿ' ಜೀವಾವಧಿ ಶಿಕ್ಷೆಗೆ ಒಳಗಾದವರು.

ನಾಗರಾಜ್ ಅವರಿಂದ ಆರೋಪಿಗಳು ₹2 ಸಾವಿರ ಸಾಲ ಪಡೆದುಕೊಂಡಿದ್ದರು. 2016ರ ಮಾರ್ಚ್‌ನಲ್ಲಿ ನಾಗರಾಜ್ ಅವರಿಗೆ ಸಾಲ ಹಿಂದಿರುಗಿಸುವ ನೆಪದಲ್ಲಿ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಹಲ್ಲೆ ನಡೆಸಿ ಕೊಲೆ ಮಾಡಿ ಪರಾರಿ ಆಗಿದ್ದರು. ಈ ಸಂಬಂಧ ಕೆ.ಪಿ. ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. . ಪ್ರಕರಣದ ವಿಚಾರಣೆಯು 66ನೇ ಸಿಸಿಎಚ್ ನ್ಯಾಯಾಲಯದಲ್ಲಿ ನಡೆದಿತ್ತು. ಇನ್‌ಸ್ಪೆಕ್ಟರ್ ಎಂ.ಎಚ್.ಉಮೇಶ್ ಅವರು ಕೊಲೆ ಪ್ರಕರಣದ ತನಿಖೆ ನಡೆಸಿದ್ದರು. ಕೆ.ಶರಣಬಸಪ್ಪ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ವಾದ ಮಂಡಿಸಿದ್ದರು.

IN THE COURT OF CITY CIVIL AND SESSION JUDGE AT BANGALORE (CCH-7) O.S.2014/2024
BETWEEN
SRI. SRINIVASA B Aged about 58 years, S/o Late. Boraiah R/at No.208/A, 9th Cross Road, Vidyaranya Road, Lakshmipura Govipuram Extension, K.G. Nagar Bengaluru-560019. ...PLAINTIFF
AND.
Smt.puttalingamma And Others.. ...Defendants
SUMMONS TO THE DEFENDANT NO.9
To: Smt. T.Vijayalaxmi D/o Thimmegowda, No.338, 3rd Main Road, Sindhu Nadhi Road, Brundahvannagar Bengaluru - 560050
Where, as the above name plaintiff institute a suit in O.S.2014/2024 against defendant, for the relief of their partition and separate possession of their 1/7 share in the suit schedule property. You are hereby summoned to appear before this court on 4/8/2026 at 11.am in person or through advocate/pleader to answer the question to the same. Failing which the suit will be heard and determined as Ex-parte.
SCHEDULE PROPERTY
All the piece and parcel of the residential property bearing NO.208/A/15, New No.372/A, PID No.52-41-372/A, originally layout was framed by the Bangalore Development Authority in the survey No.1 to 72 of the situated at Vidyaranya Road, Govipuram Layout, Kempegowda Nagar, Bengaluru, measuring East West 34+30/2 North to South 35+34/2, totally measuring 122.66 square Gaja now comes within the jurisdiction of BBMP at Bangalore and bounded on: East by: Road. West by: Site No.209. North by: Road: South by: Site No.208 Given Under my hand and seal of the court, this dated 29/6/2026
By order of the Court
Asst. Registrar City Civil Court Bengaluru
ADDRESS OF THE ADVOCATEF
JAGADEESHA P - ADVOCATE Office at NO.6, Mayura Building,1st Floor, 3rd Cross, 4th Main, Chamrajpet, Bengaluru - 560018

'ಪ್ರಜಾಸೇವೆ'ಗೆ ಹರ್ಷ ಗುಪ್ತಾ ಪ್ರಧಾನ ಕಾರ್ಯದರ್ಶಿ

ಬೆಂಗಳೂರು: ಹೊಸದಾಗಿ ರಚಿಸಲಾದ 'ಪ್ರಜಾಸೇವಾ' ಇಲಾಖೆಗೆ ಪ್ರಧಾನ ಕಾರ್ಯದರ್ಶಿಯಾಗಿ ಐಎಎಸ್ ಅಧಿಕಾರಿ ಹರ್ಷ ಗುಪ್ತಾ ಅವರನ್ನು ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ.

ಹರ್ಷ ಗುಪ್ತಾ ಅವರಿಗೆ ಕರ್ನಾಟಕ ಮೇಲ್ಮನವಿ ಪ್ರಾಧಿಕಾರದ ಅಧ್ಯಕ್ಷರ ಹುದ್ದೆಯ ಹೆಚ್ಚುವರಿ ಹೊಣೆಯನ್ನೂ ನೀಡಲಾಗಿದೆ. ಕಾರ್ಮಿಕ ಆಯುಕ್ತರಾಗಿ ರಾಗಪ್ರಿಯಾ ಆರ್., ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರಾಗಿ ಗೋಪಾಲಕೃಷ್ಣ ಎಚ್.ಎನ್., ತಾಂತ್ರಿಕ ಶಿಕ್ಷಣ ಇಲಾಖೆ ನಿರ್ದೇಶಕರಾಗಿ ಹರೀಶ್ ಕುಮಾರ್ ಕೆ. ಅವರನ್ನು ವರ್ಗಾವಣೆ ಮಾಡಲಾಗಿದೆ.

ಕನ್ನಡ ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಜೆ.ಮಂಜುನಾಥ್ ಅವರಿಗೆ ವಾರ್ತಾ, ಸಾರ್ವಜನಿಕ ಸಂಪರ್ಕ ಇಲಾಖೆ ಕಾರ್ಯದರ್ಶಿ ಹುದ್ದೆಯ ಹೆಚ್ಚುವರಿ ಹೊಣೆ ನೀಡಲಾಗಿದೆ.

ಫಲಾನುಭವಿಗಳಿಂದ ಮಾಹಿತಿ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೃಹ ಜ್ಯೋತಿ ಯೋಜನೆ ಫಲಾನುಭವಿಗಳ ಮಾಹಿತಿ ಸಂಗ್ರಹಿಸುವ ಕಾರ್ಯ ವೇಗ ಪಡೆದುಕೊಂಡಿದ್ದು, ಎರಡು ದಿನಗಳಲ್ಲಿ ಐದು ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಒಟ್ಟು 85,331 ಗ್ರಾಹಕರಿಂದ ವಿವರಗಳನ್ನು ಪಡೆಯಲಾಗಿದೆ.

ಸರ್ವರ್ ಸಮಸ್ಯೆ ಸೇರಿ ತಾಂತ್ರಿಕ ಅಡಚಣೆಗಳ ನಡುವೆಯೂ ಮೀಟರ್ ರೀಡರ್ ಮತ್ತು ಎಸ್ಕಾಂಗಳ ಸಿಬ್ಬಂದಿ ಮನೆ ಮನೆಗೆ ಭೇಟಿ ನೀಡಿ ಫಲಾನು-ಭವಿಗಳಿಂದ ಮಾಹಿತಿ ಸಂಗ್ರಹಿಸುವ ಕಾರ್ಯವನ್ನು ಗುರುವಾರವೂ ಮುಂದುವರಿಸಿದರು.

ಬೆಸ್ಕಾಂ ವ್ಯಾಪ್ತಿಯಲ್ಲಿ ಅತಿ ಹೆಚ್ಚು, 35,970 ಗ್ರಾಹಕರಿಂದ ಮಾಹಿತಿ ಸಂಗ್ರಹಿಸಲಾಗಿದೆ. ಹೆಸ್ಕಾಂ ವ್ಯಾಪ್ತಿಯಲ್ಲಿ 24,423, ಜೆಸ್ಕಾಂನಲ್ಲಿ 16,985, ಚೆಸ್ಕಾಂನಲ್ಲಿ 6,490 ಹಾಗೂ ಮೆಸ್ಕಾಂ ವ್ಯಾಪ್ತಿಯಲ್ಲಿ 1,463 ಫಲಾ-ನುಭವಿಗಳಿಂದ ದಾಖಲೆಗಳನ್ನು ಸಂಗ್ರ-ಹಿಸಲಾಗಿದೆ. ಇದು ಗುರುವಾರ ಸಂಜೆ 7 ಗಂಟೆವರೆಗಿನ ಮಾಹಿತಿಯಾಗಿದೆ.

ಫಲಾನುಭವಿಗಳ ವಿದ್ಯುತ್ ಸಂಪರ್ಕ ಸಂಖ್ಯೆ, ವಿಳಾಸ, ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್, ಬಾಡಿಗೆ/ಲೀಸ್ ಕರಾರು ಪತ್ರ, ಪ್ರವರ್ಗ, ಭಾವಚಿತ್ರ ಇತ್ಯಾದಿ ದಾಖಲೆಗಳನ್ನು ಪಡೆಯಲಾಯಿತು.

ಮೀಟರ್ ರೀಡರ್ ಮನೆಗೆ ಭೇಟಿ ವೇಳೆ ಫಲಾನುಭವಿ ಲಭ್ಯವಿಲ್ಲದೆ ಇದ್ದರೂ, ಅವರ ಸಂಬಂಧಿಕರು ಮಾಹಿತಿ ನೀಡುತ್ತಿದ್ದಾರೆ. ಫಲಾನುಭವಿಯ ಭಾವಚಿತ್ರವನ್ನು ಸಂಬಂಧಿಯಿಂದಲೇ ಪಡೆಯಲಾಯಿತು.

ಗೃಹ ಜ್ಯೋತಿ

'ಭೌತಿಕ ಪರಿಶೀಲನೆ ಅಗತ್ಯ'

ಸೇವಾ ಸಿಂಧು ಮೊಬೈಲ್ ಆ್ಯಪ್‌ನಲ್ಲಿ ದಾಖಲೆಗಳನ್ನು ಅಪ್‌ಲೋಡ್ ಮಾಡಲಾಗುತ್ತಿದೆ. ಆದರೆ, ಆ ದಾಖಲೆಗಳು ನಿಜವಾದ ಫಲಾನುಭವಿಗೆ ಸಂಬಂಧಿಸಿದ್ದಾಗಿದೆಯೇ ಎಂಬುದು ಸಾಫ್ಟ್‌ವೇರ್‌ನಲ್ಲಿ ಪತ್ತೆಯಾಗುವುದಿಲ್ಲ. ಉದಾಹರಣೆಗೆ ಮನೆಯ ಬಾಡಿಗೆಯ ಕರಾರು ಪತ್ರದ ಬದಲು, ಬೇರೆ ಯಾವುದಾದರೂ ಪತ್ರ ಅಪ್‌ಲೋಡ್ ಮಾಡಿದರೂ ತೆಗೆದುಕೊಳ್ಳುತ್ತದೆ. ಹೀಗಾಗಿ ಆನ್‌ಲೈನ್ ಮೂಲಕವೇ ನಿಜವಾದ ಫಲಾನುಭವಿಗಳನ್ನು ಪತ್ತೆಹಚ್ಚಲು ಸಾಧ್ಯವಾಗುವುದಿಲ್ಲ. ಭೌತಿಕವಾಗಿ ಪರಿಶೀಲನೆ ಮಾಡಬೇಕಾಗುತ್ತದೆ ಎಂದು ಸಿಬ್ಬಂದಿಯೊಬ್ಬರು ಹೇಳಿದರು.

ಸ್ನೇಹಿತನ ಮನೆಯಲ್ಲಿ ಚಿನ್ನ ಕದ್ದು ಸಿಕ್ಕಿಬಿದ್ದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ನೇಹಿತನ ಮನೆಯಲ್ಲಿ ದೇವರ ವಿಗ್ರಹದ ಮೇಲಿದ್ದ ಚಿನ್ನದ ಸರ ಕಳವು ಮಾಡಿದ್ದ ಆರೋಪಿಯನ್ನು ಕೊಡಿಗೇಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.ಮೈಸೂರಿನ ದಟ್ಟಗಳ್ಳಿ ಕನಕದಾಸ ನಗರದ ನಿವಾಸಿ ಅಭಿಷೇಕ್(22) ಬಂಧಿತ.

ಆರೋಪಿಯಿಂದ ₹1.5 ಲಕ್ಷ ಮೌಲ್ಯದ 8.5 ಗ್ರಾಂನ ಚಿನ್ನದ ಸರ ಕಳವು ಮಾಡಿದ್ದ ಎಂದು ಪೊಲೀಸರು ಮಾಹಿತಿ ನೀಡಿದರು.

ಕೊಡಿಗೇಹಳ್ಳಿಯ ಕೆನರಾ ಬ್ಯಾಂಕ್ ಲೇಔಟ್‌ನಲ್ಲಿ ವಾಸವಿರುವ ದೂರುದಾರರು, ಮನೆಯಲ್ಲಿ ಇರುವ ದೇವರ ವಿಗ್ರಹಕ್ಕೆ ಚಿನ್ನದ ಸರ ಹಾಕಿದ್ದರು. ದೂರುದಾರರ ಪುತ್ರನ ಸ್ನೇಹಿತನೇ ಆಗಿದ್ದ ಆರೋಪಿ ಅಭಿಷೇಕ್ ಕಿರುಚಿತ್ರ ಚಿತ್ರೀಕರಣಕ್ಕೆಂದು ಮನೆಗೆ ಬಂದಿದ್ದ. ಆಗ ದೇವರ ವಿಗ್ರಹದ ಮೇಲೆ ಹಾಕಿದ್ದ ಚಿನ್ನದ ಸರವನ್ನು ನೋಡಿದ್ದ. ಬಳಿಕ ಸರವನ್ನು ಕಳ್ಳತನ ಮಾಡಿದ್ದ ಎಂದು ಪೊಲೀಸರು ಹೇಳಿದರು.

ಮನೆ ಕೆಲಸದ ಮಹಿಳೆ ಹಾಗೂ ಪುತ್ರನ ಸ್ನೇಹಿತನ ಮೇಲೆ ಅನುಮಾನ ವ್ಯಕ್ತಪಡಿಸಿ ಮನೆ ಮಾಲೀಕರು ದೂರು ನೀಡಿದ್ದರು. ತನಿಖೆ ನಡೆಸಿದಾಗ ದೂರುದಾರರ ಪುತ್ರನ ಸ್ನೇಹಿತ ಕಳ್ಳತನ ಮಾಡಿರುವುದು ಗೊತ್ತಾಗಿತ್ತು. ನಂತರ ಆರೋಪಿಯನ್ನು ಮೈಸೂರಿನಲ್ಲಿ ಬಂಧಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಮೋಜಿನ ಜೀವನಕ್ಕಾಗಿ ಚಿನ್ನದ ಸರ ಕಳ್ಳತನ ಮಾಡಿರುವುದಾಗಿ ಆರೋಪಿ ವಿಚಾರಣೆ ವೇಳೆ ತಪ್ಪೊಪ್ಪಿಕೊಂಡಿದ್ದಾನೆ ಎಂದು ಪೊಲೀಸರು ಹೇಳಿದರು.

ಕೊಡಿಗೇಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮರಸೂರು ಗ್ರಾಮ ಪಂಚಾಯತ್ ಕಾರ್ಯಾಲಯ
ಕಸಬಾ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು – 562106.
ಇ–ಮೇಲ್: maranekal@gmail.com / marasuru.ank.bngu@gmail.com

ಸಂಖ್ಯೆ: ಮ.ಗ್ರಾ.ಪಂ/02/2026–27 ದಿನಾಂಕ: 02–07–2026

ಇ–ಟೆಂಡರ್ ಪ್ರಕಟಣೆ

ಆಡಳಿತ ಅಧಿಕಾರಿ ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಮರಸೂರು ಗ್ರಾಮ ಪಂಚಾಯತಿಯಲ್ಲಿ 2026–27 ನೇ ಸಾಲಿನ ವರ್ಗ–1 / 15ನೇ ಹಣಕಾಸು ಯೋಜನೆ / ವಿವಿಧ ಯೋಜನೆಯಡಿ ವಿವಿಧ ಸಾಮಾಗ್ರಿ ಖರೀದಿ / ಸೇವೆ ಪಡೆಯಲು ಇ–ಟೆಂಡರ್ ಆಹ್ವಾನಿಸಲಾಗಿದೆ ವಿವರ ಈ ಕೆಳಗಿನಂತಿದೆ.

ಕ್ರ. ಸಂ.	ವಿವರ	ಟೆಂಡರ್ ಸಂಖ್ಯೆ
1	Procurement of Goods Vehicle for Solid Waste Management (SWM) Under Marasuru Grama Panchayath.	RDPR/2026-27/IND14430
2	Procurement of PVC, CPVC, HDPE Pipes and Electrofusion Fittings for Water Supply Works.	RDPR/2026-27/IND14294/CALL-2
3	Procurement of Pump Motors and Allied Accessories.	RDPR/2026-27/IND14296/CALL-2
4	Annual Pump and Motor Maintenance Work.	RDPR/2026-27/SE3971/CALL-2
5	Tender for Procurement, Supply, Delivery, Registration & Commissioning of Eicher 32 - Seater School Bus with Standard Safety Features, Accessories and Comprehensive Warranty.	RDPR/2026-27/IND14431

ಟೆಂಡರ್ ದಾಖಲಾತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಂಡು ದಿನಾಂಕ: 30–06–2026 ರಿಂದ 14–07–2026 ರಂದು ಸಂಜೆ 16.00 ಗಂಟೆಯವರೆಗೆ ಸಲ್ಲಿಸಬಹುದು. ಕೆಲಸದ ಹೆಸರು / ಪೂರೈಕೆದಾರರ ಅರ್ಹತೆ / ಟೆಂಡರ್ ನಿಯಮಗಳು / ಟೆಂಡರ್ ಪ್ರೋಸೆಸ್ಸಿಂಗ್ / ಇ.ಎಂ.ಡಿ ಫೀ ಇತ್ಯಾದಿ ವಿವರಗಳಿಗೆ ವೆಬ್‌ಸೈಟ್: www.kppp.karnataka.gov.in ಮೂಲಕ ಪಡೆಯಬಹುದು.

ಸಹಿ/– ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಮರಸೂರು ಗ್ರಾಮ ಪಂಚಾಯತ್
ಸಹಿ/– ಆಡಳಿತ ಅಧಿಕಾರಿ, ಮರಸೂರು ಗ್ರಾಮ ಪಂಚಾಯತ್
ವಾಸಾಸಂಇ/ವಾ.ಪ್ರ/1438/ಅಡ್ವರ್ಟೋರ್/2026–27

ನಗರದಲ್ಲಿ ಇಂದು

ವರಸಿದ್ಧಿ ವಿನಾಯಕ ದೇವಸ್ಥಾನದ ಮಹಾ ಕುಂಭಾಭಿಷೇಕ: ಆಯೋಜನೆ ಮತ್ತು ಸ್ಥಳ: ದೇವಾಲಯದ ಆವರಣ, ತಂಬುಚೆಟ್ಟಿ ರಸ್ತೆ, ಕಾಕ್ಸ್ ಟೌನ್, ಬೆಳಿಗ್ಗೆ 6

'ತೋಟಗಾರಿಕೆ 5.0' ಅಂತರರಾಷ್ಟ್ರೀಯ ಸಮ್ಮೇಳನ: ಉದ್ಘಾಟನೆ: ಶೋಭಾ ಕರಂದ್ಲಾಜೆ, ಅತಿಥಿ: ಎಂ. ಕೂರ್ಮಾರಾವ್, ಸಿ.ಮುರುಗನ್, ಎಂ.ಎಸ್.ಮಣಿವಣ್ಣನ್, ಆಯೋಜನೆ ಮತ್ತು ಸ್ಥಳ: ಭಾರತೀಯ ತೋಟಗಾರಿಕೆ ನಿರ್ವಹಣಾ ಸಂಸ್ಥೆ (ಐಐಪಿಎಂಬಿ), ಜ್ಞಾನಭಾರತಿ, ಮಲ್ಲತ್ತಹಳ್ಳಿ, ಬೆಳಿಗ್ಗೆ 9.30

ಪದವೀಧರ ದಿನಾಚರಣೆ: ಅತಿಥಿ: ಪದ್ಮರಾಜ ಎನ್. ದೇಸಾಯಿ, ಉಪಸ್ಥಿತಿ: ಬಿ.ಎಸ್.ರಾಗಿಣಿ ನಾರಾಯಣ್, ಪಿ.ದಯಾನಂದ ಪೈ, ತಿರುಮಲಾಚಾರಿ ರಾಮಸ್ವಾಮಿ, ಅಧ್ಯಕ್ಷತೆ: ಅವಿರಾಮ್ ಶರ್ಮಾ, ಆಯೋಜನೆ ಮತ್ತು ಸ್ಥಳ: ಬಿಎಂಎಸ್ ಕಾನೂನು ಕಾಲೇಜು, ಬುಲ್ ಟೆಂಪಲ್ ರಸ್ತೆ, ಬಸವನಗುಡಿ, ಬೆಳಿಗ್ಗೆ 11

'ದೇಸಿ' ಖಾದಿ ಮಳಿಗೆ ಉದ್ಘಾಟನೆ: ಸಿ.ಎನ್. ಅಶ್ವತ್ಥನಾರಾಯಣ, ಸ್ಥಳ: 57/1, ಮಾತೃ ನಿಲಯ, ಈಸ್ಟ್ ಪಾರ್ಕ್ ರಸ್ತೆ, 15ನೇ ಕ್ರಾಸ್, ಮಲ್ಲೇಶ್ವರ, ಬೆಳಿಗ್ಗೆ 11.30

'ಅನುಭವಾಮೃತ' ಸರಣಿ ಉಪನ್ಯಾಸ ಮಾಲಿಕೆ: ಅತಿಥಿ: ಸಿ.ಎಚ್.ಹನುಮಂತರಾಯ, ಉಪಸ್ಥಿತಿ: ಮಂಜುನಾಥ್ ಬಿ. ಗೌಡ, ವಿವೇಕ್ ಸುಬ್ಬಾರೆಡ್ಡಿ, ವಿ.ಆನಂದ, ಜೆ.ಹರೀಶ್, ಆಯೋಜನೆ ಮತ್ತು ಸ್ಥಳ: ಬೆಂಗಳೂರು ವಕೀಲರ ಸಾಹಿತ್ಯ ಕೂಟ, 6ನೇ ಮಹಡಿ, ವಕೀಲರ ಭವನ, ಸಿಟಿ ಸಿವಿಲ್ ಕೋರ್ಟ್ ಆವರಣ, ಸಂಜೆ 4

'ನೃತ್ಯ ನೀರಾಜನ' ಉತ್ಸವ: ಭರತನಾಟ್ಯ: ಹರ್ಷಿತಾ ಶ್ರೀರಾಮ್, ಪ್ರಾರ್ಥನಾ ಯೋಗಾನಂದ, ವರ್ಷಾ ಎಸ್. ಏಕ್ಬೋಟೆ, ಅತಿಥಿ: ಪಲ್ಲವಿ ರಾಘವೇಂದ್ರ, ಬಿ. ಎಸ್.ಬಾಲಚಂದ್ರನ್, ಹಂಸವೀಣಾ ಸುರೇಶ್, ಆಯೋಜನೆ: ನೃತ್ಯ ದಿಶಾ ಟ್ರಸ್ಟ್, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ.ರಸ್ತೆ, ಸಂಜೆ 5

'ಮತ್ತೆ ವಸಂತ' ಏಕವ್ಯಕ್ತಿ ನಾಟಕ: ಪ್ರಸ್ತುತಿ: ಸಂಚಯ ವಿಜಯ್ ಭಾರದ್ವಾಜ್, ನಿರ್ದೇಶನ: ಸಂಚಯ ಗಣೇಶ್, ಆಯೋಜನೆ ಮತ್ತು ಸ್ಥಳ: ಸೂರ್ಯ ಕಲಾವಿದರು, # 247, 6ನೇ ಬ್ಲಾಕ್, ಸರ್‌ಎಂವಿ ಬಡಾವಣೆ, ಸಂಜೆ 6.30

'ಪೋಲೀ ಕಿಟ್ಟಿ' ನಾಟಕ ಪ್ರದರ್ಶನ: ರಚನೆ: ಟಿ.ಪಿ. ಕೈಲಾಸಂ, ನಿರ್ದೇಶನ: ಎ.ದಾಕ್ಷಾಯಿಣಿ ಭಟ್, ಆಯೋಜನೆ: ದೃಶ್ಯ ರಂಗ ತಂಡ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

'ಅಡವಿ' ನಾಟಕ ಪ್ರದರ್ಶನ: ನಿರ್ದೇಶನ: ಅರುಣ್ ಸೂರ್ಯ, ಆಯೋಜನೆ: ಪಯಣ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 7.15

ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು nagaradalli_indu@prajavani.co.in ಇ-ಮೇಲ್‌ಗೆ ಕಳುಹಿಸಿ.

ಇಲ್ಲಿದೆ ನೋಡಿ ಕಸ...

DH DECCAN HERALD
ಪ್ರಜಾವಾಣಿ
ಸಿಟಿಜನ್ ಕನೆಕ್ಟ್
ಉತ್ತಮ ಬೆಂಗಳೂರಿಗಾಗಿ ಸಹಯೋಗ
96060 38256
dhpvcitizenconnect@printersmysore.co.in

ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳ ಸಂಪರ್ಕ
- ಕರೀಗೌಡ-ಸಿಇಒ- 77605 04651
- ರಮಾಮಣಿ-ಸಿಒಒ- 94481 97256
- ರಾಜೇಶ್-ಸಿಜಿಎಂ- 94806 84046
- ರಾಘವೇಂದ್ರ ಪ್ರಸಾದ್ -ಸಿಜಿಎಂ-91102 89696

ನಗರದಲ್ಲಿ ದಿನವೂ ಕಸ ವಿಲೇವಾರಿ ಆಗುತ್ತಿದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳು ಹೇಳುತ್ತಿದ್ದರೂ, ಮುಖ್ಯರಸ್ತೆ, ವಾರ್ಡ್ ರಸ್ತೆಗಳಲ್ಲಿ ಕಸದ ರಾಶಿ ನಿತ್ಯವೂ ಬಿದ್ದಿರುತ್ತದೆ. ನಿಮ್ಮ ಪ್ರದೇಶಗಳಲ್ಲಿ ಇಂತಹ ಸಮಸ್ಯೆ ಇದ್ದರೆ, ಚಿತ್ರಸಹಿತ ವಿವರಗಳೊಂದಿಗೆ ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳಿಗೆ ಹಾಗೂ ಪ್ರಜಾವಾಣಿಗೆ ಕಳುಹಿಸಿಕೊಡಿ. ಅಲ್ಲದೆ ಕಸ ತೆರವು ಮಾಡಿದ ಮೇಲೆ ಅದರ ಚಿತ್ರ ಮಾಹಿತಿಯನ್ನು 96060 38256 ವಾಟ್ಸ್‌ಆ್ಯಪ್ ನಂಬರ್‌ಗೆ ಕಳುಹಿಸಿ. ಅದನ್ನೂ ಪ್ರಕಟಿಸಲಾಗುತ್ತದೆ.

ಅವೆನ್ಯೂ ರಸ್ತೆಯನ್ನು ವ್ಯಾಪಿಸಿಕೊಂಡಿರುವ ಕಸದ ರಾಶಿ

ಸುಲ್ತಾನ್ ಪಾಳ್ಯದ ಭುವನೇಶ್ವರಿ ನಗರದ ಒಂದನೇ ಮುಖ್ಯರಸ್ತೆಯಲ್ಲಿರುವ ಕಸದ ರಾಶಿ —ಪಿ.ಯು. ಪ್ರದೀಪ್ ಕುಮಾರ್

ಥಣಿಸಂದ್ರದ ಅಮರಜ್ಯೋತಿ ಲೇಔಟ್‌ನಲ್ಲಿ ರಸ್ತೆಬದಿ ಎಸೆದಿರುವ ತ್ಯಾಜ್ಯ —ಎ.ಆರ್. ಸಂಕಲಾಪುರ

ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದ ಶಾಸ್ತ್ರಿ ಮೆಮೋರಿಯಲ್ ಶಾಲೆ ಹತ್ತಿರ ಸೀಗೆಹಳ್ಳಿ ಮುಖ್ಯರಸ್ತೆಯಲ್ಲಿ ಹಾಕಿರುವ ಕಸ —ಜಾನ್ ವಿಲಿಯಮ್ಸ್

ಎಂ.ಎಸ್ ಪಾಳ್ಯದಲ್ಲಿರುವ ಸಂಭ್ರಮ ಕಾಲೇಜು ಬಳಿ ಬಿದ್ದಿರುವ ಕಸದ ರಾಶಿ —ಪುರುಷೋತ್ತಮ

ಆರ್‌ಟಿ.ನಗರದ ಸುಲ್ತಾನ್ ಪಾಳ್ಯದಲ್ಲಿರುವ ಜಿಎಂ ಇನ್ಫಿನಿಟಿ ಸಿಲ್ವರ್ ಕಾರ್ನರ್ ಅಪಾರ್ಟ್‌ಮೆಂಟ್ ಬಳಿ ಎಸೆಯಲಾದ ತ್ಯಾಜ್ಯ

ಕಾವಲ್ ಭೈರಸಂದ್ರದ ಅಂಬೇಡ್ಕರ್ ಬಡಾವಣೆಯ ಒಂದನೇ ಮುಖ್ಯ ರಸ್ತೆಯ ಸೇಂಟ್ ವಿನ್ ಶಾಲೆಯ ಮುಂಭಾಗ ತೆರವಾಗದ ಕಸದ ರಾಶಿ —ಅಶೋಕ್ ಕುಮಾರ್

ವಿನಯ್ ರಾಜ್‌ಕುಮಾರ್

ನಾನು ಪ್ರಯೋಗಶೀಲ ನಟ: ವಿನಯ್

ವಿನಯ್ ರಾಜ್‌ಕುಮಾರ್ ನಟನೆಯ 'ಗ್ರಾಮಾಯಣ' ಚಿತ್ರ ಇಂದು (ಜು.3) ತೆರೆ ಕಾಣುತ್ತಿದೆ. ಮತ್ತೆರಡು ಸಿನಿಮಾಗಳು ಕೈಯಲ್ಲಿವೆ. ಸದಾ ಭಿನ್ನ ಕಥೆಗಳ ಸಿನಿಮಾಗಳನ್ನು ಯತ್ನಿಸುವ ಅವರು ತಮ್ಮ ಸಿನಿ ಪಯಣ ಕುರಿತು ಮಾತನಾಡಿದ್ದಾರೆ.

• ವಿನಾಯಕ ಕೆ.ಎಸ್.

• ಚಿತ್ರದ ಟ್ರೇಲರ್ ವಿಭಿನ್ನವಾಗಿದೆ. ಆದರೆ ನಿಮ್ಮ ಪಾತ್ರದಲ್ಲಿ ಹಿಂದಿನ 'ಪೆಪೆ' ಚಿತ್ರದ ಛಾಯೆ ಕಾಣುತ್ತಿದೆಯಲ್ಲವೇ?

ಈ ಚಿತ್ರದಲ್ಲಿ ಸಿಕ್ಸ್ತ್ ಸೆನ್ಸ್ ಇರುವ ಯುವಕನ ಪಾತ್ರ ಮಾಡಿದ್ದೇನೆ. ಪ್ರತಿಯೊಂದು ಊರಿನಲ್ಲೂ ಇಂಥ ವ್ಯಕ್ತಿಯೊಬ್ಬ ಇರುತ್ತಾನೆ ಎಂಬುದನ್ನು ಈ ಪಾತ್ರ ಪ್ರತಿನಿಧಿಸುತ್ತದೆ. ಪ್ರೇಕ್ಷಕರಿಗೆ ತುಂಬ ಹತ್ತಿರವಾಗುವ ಪಾತ್ರ ಇದು. 'ಪೆಪೆ'ಗೂ ಈ ಚಿತ್ರಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಲುಕ್ ಮಾತ್ರ ಒಂದೇ ರೀತಿ ಕಾಣಬಹುದು. ಆದರೆ ಪಾತ್ರದ ಸ್ವಭಾವ ಸಂಪೂರ್ಣ ಭಿನ್ನ. 'ಪೆಪೆ'ಯಲ್ಲಿ ಮೃದುವಾದ ವ್ಯಕ್ತಿತ್ವದ ಪಾತ್ರವಾಗಿದ್ದರೂ ಹೊಡೆದಾಟ ಹೆಚ್ಚಿತ್ತು. ಮಾತನಾಡುವ ರೀತಿ, ಹಾವಭಾವ ಎಲ್ಲವೂ ಮೃದುವಾಗಿದ್ದವು. ಆದರೆ ಈ ಚಿತ್ರದಲ್ಲಿ ಕ್ಷಣಾರ್ಧದಲ್ಲೇ ಪ್ರತಿಕ್ರಿಯಿಸುವ, ಒರಟು ಸ್ವಭಾವದ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತೇನೆ.

• ಇದು ಯಾವ ಭಾಗದ ಹಳ್ಳಿಯ ಕಥೆ?

ಕರ್ನಾಟಕದ ಪ್ರತಿಯೊಂದು ಹಳ್ಳಿಗೂ ತನ್ನದೇ ಆದ ವೈಶಿಷ್ಟ್ಯವಿದೆ. ಉತ್ತರ ಕರ್ನಾಟಕದ ಹಳ್ಳಿಗಳು, ಅಲ್ಲಿನ ಆಚರಣೆಗಳು ಒಂದು ರೀತಿಯದ್ದಾದರೆ, ಕೋಲಾರ ಭಾಗದ ಹಳ್ಳಿಗಳ ಬದುಕು ಮತ್ತೊಂದು ರೀತಿಯದ್ದು. ಉಡುಗೆ–ತೊಡುಗೆ, ಮಾತಿನ ಶೈಲಿ, ಜನಜೀವನ ಎಲ್ಲವೂ ಹಳ್ಳಿಯಿಂದ ಹಳ್ಳಿಗೆ ಬದಲಾಗುತ್ತವೆ. 'ಗ್ರಾಮಾಯಣ' ಕಡೂರು, ದೇವನೂರು, ಬಾಣಾವರ ಭಾಗದ ಬದುಕು ಮತ್ತು ಅಲ್ಲಿನ ಆಚರಣೆಗಳನ್ನು ಆಧರಿಸಿದ ಕಥೆಯಾಗಿದೆ.

• ಈ ಸಿನಿಮಾ ತೆರೆಗೆ ಬರಲು ಇಷ್ಟು ತಡವಾದದ್ದು ಏಕೆ?

2018ರಲ್ಲಿ ಚಿತ್ರ ಆರಂಭವಾಗಿತ್ತು. ಶೇ 20ರಷ್ಟು ಚಿತ್ರೀಕರಣ ನಡೆದ ಬಳಿಕ ಕೆಲವು ಸಮಸ್ಯೆಗಳು ಎದುರಾದವು. ನಿರ್ಮಾಪಕರು ಹಿಂದೆ ಸರಿದ ಕಾರಣ ಸಿನಿಮಾ ನಿಂತುಹೋಯಿತು. ನಂತರ ಎರಡು–ಮೂರು ವರ್ಷ ಹೊಸ ನಿರ್ಮಾಪಕರ ಹುಡುಕಾಟ ನಡೆಯಿತು. ಒಂದು ಹಂತದಲ್ಲಿ ಸಿನಿಮಾವನ್ನು ಬದಿಗಿಟ್ಟಿದ್ದೆವು. ಆಗ ಚಿತ್ರದ ಹಳೆಯ ಟ್ರೇಲರ್ ನೋಡಿದ ಲಹರಿ ವೇಲು ಮತ್ತು ಕೆ.ಪಿ. ಶ್ರೀಕಾಂತ್ ಅವರಿಗೆ ಕಥೆ ಇಷ್ಟವಾಗಿ, ಚಿತ್ರಕ್ಕೆ ಮರುಜೀವ ನೀಡಿದರು. ನಂತರ ಸಂಪೂರ್ಣ ಚಿತ್ರವನ್ನು ಹೊಸದಾಗಿ ಚಿತ್ರೀಕರಿಸಿ ಈಗ ಬಿಡುಗಡೆ ಹಂತಕ್ಕೆ ತಂದಿದ್ದೇವೆ.

• ನೀವು ನಿರಂತರವಾಗಿ ವಿಭಿನ್ನ ಕಥೆಗಳನ್ನು ಆಯ್ಕೆ ಮಾಡುತ್ತೀರಿ. ಆದರೂ ಆ ಸಿನಿಮಾಗಳಿಗೆ ನಿರೀಕ್ಷಿತ ಮಟ್ಟದ ಪ್ರೇಕ್ಷಕರ ಪ್ರತಿಕ್ರಿಯೆ ಸಿಗುತ್ತಿಲ್ಲ ಎಂದು ಅನಿಸುವುದಿಲ್ಲವೇ?

ಪ್ರತಿಯೊಂದು ಕಥೆಗೂ ತನ್ನದೇ ಆದ ಪ್ರೇಕ್ಷಕರ ವರ್ಗ ಇರುತ್ತದೆ. ಎಲ್ಲ ಸಿನಿಮಾಗಳೂ ಎಲ್ಲರಿಗೂ ಇಷ್ಟವಾಗಬೇಕು ಎಂದಿಲ್ಲ. ಇದನ್ನು ಕ್ರಿಕೆಟ್ ಮತ್ತು ಹಾಕಿಗೆ ಹೋಲಿಸಬಹುದು. ಎರಡೂ ಉತ್ತಮ ಕ್ರೀಡೆಗಳೇ. ಆದರೆ ಕ್ರಿಕೆಟ್‌ಗೆ ಇರುವಷ್ಟು ಅಭಿಮಾನಿಗಳು ಹಾಕಿಗೆ ಇರುವುದಿಲ್ಲ. 'ಗ್ರಾಮಾಯಣ' ಮಾತ್ರ ಎಲ್ಲ ವರ್ಗದ ಪ್ರೇಕ್ಷಕರಿಗೂ ತಲುಪುವ ಯೂನಿವರ್ಸಲ್ ಕಥೆ. ಆದ್ದರಿಂದ ಹೆಚ್ಚು ಜನರಿಗೆ ಇಷ್ಟವಾಗುವ ವಿಶ್ವಾಸವಿದೆ.

• ಕಥೆಗಳನ್ನು ಆಯ್ಕೆ ಮಾಡುವಾಗ ಯಾವ ಅಂಶಗಳಿಗೆ ಆದ್ಯತೆ ನೀಡುತ್ತೀರಿ?

ಒಂದೇ ರೀತಿಯ ಪಾತ್ರಗಳನ್ನು ಮಾಡುವುದು ನನಗೆ ಬೇಸರ ತರಿಸುತ್ತದೆ. ಪಾತ್ರದಲ್ಲಿ ಸತ್ವ ಇರಬೇಕು, ಹೊಸತನ ಇರಬೇಕು. ಒಬ್ಬ ನಟನಾಗಿ ಪಾತ್ರದ ಬಗ್ಗೆ ಸಂಶೋಧನೆ ಮಾಡಲು ಅವಕಾಶ ಕೊಡುವ ಅಂಶಗಳು ಅದರಲ್ಲಿರಬೇಕು. ನಾನು ಇಂಥ ಸಿನಿಮಾಗಳನ್ನೇ ಮಾಡುತ್ತಿರುವುದರಿಂದ, ನಿರ್ದೇಶಕರು ಕೂಡ ವಿಭಿನ್ನ ಕಥೆಗಳನ್ನೇ ನನ್ನ ಬಳಿ ತರುತ್ತಾರೆ. ನಟನಾಗಿ ಪ್ರಯೋಗಗಳನ್ನು ಮಾಡಬೇಕು, ಬೇರೆ ಬೇರೆ ರೀತಿಯ ಪಾತ್ರಗಳನ್ನು ನಿರ್ವಹಿಸಬೇಕು ಎಂಬುದು ನನ್ನ ನಂಬಿಕೆ. ಆ ಅನುಭವವೇ ನನಗೆ ಮುಖ್ಯ.

• ದುನಿಯಾ ವಿಜಯ್ ನಿರ್ದೇಶನದ 'ಸಿಟಿ ಲೈಟ್ಸ್' ಯಾವ ಹಂತದಲ್ಲಿದೆ?

ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದೆ. ಇದು ಕಚ್ಚಾ, ನೈಜತೆಯ ಸೊಗಡಿನ ಸಿನಿಮಾ. ಒಂದು ಮಹಾನಗರ ಸಾವಿರಾರು ಜನರನ್ನು ತನ್ನತ್ತ ಸೆಳೆಯುತ್ತದೆ. ಬದುಕು ಕಟ್ಟಿಕೊಳ್ಳುವ ಕನಸಿನೊಂದಿಗೆ ಬೇರೆ ಊರುಗಳಿಂದ ನಗರಕ್ಕೆ ಬರುವ ಇಬ್ಬರ ಪಯಣವನ್ನು ಈ ಚಿತ್ರ ಹೇಳುತ್ತದೆ. ನಗರಕ್ಕೆ ಬಂದ ನಂತರ ಅವರ ಬದುಕಿನಲ್ಲಿ ಏನೆಲ್ಲ ಆಗುತ್ತದೆ ಎಂಬುದೇ ಕಥೆಯ ಕೇಂದ್ರ. ಇನ್ನೆರಡು ತಿಂಗಳಲ್ಲಿ ಸಿನಿಮಾ ಬಿಡುಗಡೆಯಾಗಲಿದೆ.

• ಹೊಸ ಚಿತ್ರಗಳನ್ನು ಒಪ್ಪಿಕೊಂಡಿದ್ದೀರಾ?

ಪ್ರದೀಪ್ ವರ್ಮಾ ನಿರ್ದೇಶನದ 'ಮಾಚಿಸ್' ಚಿತ್ರದಲ್ಲಿ ನಟಿಸುತ್ತಿದ್ದೇನೆ. ಸದ್ಯಕ್ಕೆ ಅದೊಂದೇ ಹೊಸ ಸಿನಿಮಾ.

ದಿಯಾ ಕೀರ್ತಿ

ಕನಸಿಗೆ ರೆಕ್ಕೆ ಕಟ್ಟಿದ ದಿಯಾ

ಇಂದು ತೆರೆ ಕಾಣುತ್ತಿರುವ 'ಲವ್ ಸೀಸನ್ಸ್' ಚಿತ್ರದ ಮೂಲಕ ನಾಯಕಿಯಾಗಿ ಕನ್ನಡ ಚಿತ್ರರಂಗಕ್ಕೆ ಕಾಲಿಡುತ್ತಿರುವ ದಿಯಾ ಕೀರ್ತಿ, ಮಾಡೆಲಿಂಗ್‌ನಿಂದ ಸಿನಿಮಾದವರೆಗಿನ ತಮ್ಮ ಪಯಣವನ್ನು ಹಂಚಿಕೊಂಡರು.

ಚಿತ್ರದಲ್ಲಿ ನಾನು 'ಮೇರಿ' ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಮನೆಯಲ್ಲಿ ಇಂಥ ಹುಡುಗಿಯೊಬ್ಬಳು ಇದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂಬ ಭಾವನೆ ಮೂಡಿಸುವ, ಒಳ್ಳೆಯ ಮನಸ್ಸಿನ ಹುಡುಗಿಯ ಪಾತ್ರ ಇದು. ನಾಯಕನ ಪ್ರೇಮ ಪಯಣದಲ್ಲಿ ಮೇರಿ ಪ್ರಮುಖ ಭಾಗವಾಗಿರುತ್ತಾಳೆ ಎಂದು ದಿಯಾ ಮಾತು ಆರಂಭಿಸಿದರು.

'ಲವ್ ಸೀಸನ್ಸ್' ನನ್ನ ಮೊದಲ ಸಿನಿಮಾ. ಈ ಅವಕಾಶ ಸಿಗಲು ನಾಯಕ ಮುಕುಂದ್ ಅವರೇ ಕಾರಣ. 2018ರಲ್ಲಿ ನಾವು ಇಬ್ಬರೂ ಒಂದೇ ಸಿನಿಮಾ ತರಬೇತಿ ಸಂಸ್ಥೆಯಲ್ಲಿ ನಟನೆ ಕಲಿತೆವು. ಆಗಲೇ ಅವರ ಬಳಿ ಈ ಕಥೆಯ ಸ್ಕ್ರಿಪ್ಟ್ ಇತ್ತು. 2022ರಲ್ಲಿ ಅದನ್ನು ಸಿನಿಮಾವಾಗಿ ರೂಪಿಸುವ ಕೆಲಸ ಆರಂಭಿಸಿದರು. ಮೇರಿ ಪಾತ್ರಕ್ಕಾಗಿ ನಾನು ಆಡಿಷನ್ ನೀಡಿದೆ. ಆಯ್ಕೆಯಾದ ಬಳಿಕ ಮೈಸೂರಿನಲ್ಲಿ ರಂಗಭೂಮಿ ತರಬೇತಿ ಪಡೆದೆ. ನಂತರ ಚಿತ್ರದ ಚಿತ್ರೀಕರಣ ಆರಂಭವಾಯಿತು ಎಂದು ತಮ್ಮ ಸಿನಿಪಯಣದ ಮೊದಲ ಹೆಜ್ಜೆಯನ್ನು ವಿವರಿಸಿದರು.

ನಾನು ಚಿಕ್ಕಬಳ್ಳಾಪುರದವಳು. ನಮ್ಮ ಮನೆಯಲ್ಲಿ ನಾನು ಕಿರಿಯವಳು. ಅಣ್ಣ ಮತ್ತು ಅಕ್ಕ ಇಬ್ಬರೂ ಓದಿನಲ್ಲಿ ತುಂಬಾ ಮುಂದಿದ್ದರು. ಆದರೆ ಅವರನ್ನು ನೋಡುತ್ತಲೇ ನನಗೆ ಓದಿನ ಬಗ್ಗೆ ಒಂದು ರೀತಿಯ ಜಿಗುಪ್ಸೆ ಉಂಟಾಯಿತು. ಹೀಗಾಗಿ ಪಿಯುಸಿ ಮುಗಿದ ಕೂಡಲೇ ನಟನೆಯ ಕನಸನ್ನು ಹೊತ್ತು ಬೆಂಗಳೂರಿಗೆ ಬಂದೆ. ನಟನೆ ಕೋರ್ಸ್‌ಗೆ ಸೇರಿದೆ. ಆದರೆ ಅಲ್ಲಿ ಸಿಕ್ಕ ಕಲಿಕೆ ನನಗೆ ತೃಪ್ತಿ ನೀಡಲಿಲ್ಲ ಎಂದು ತಮ್ಮ ಆರಂಭದ ದಿನಗಳನ್ನು ನೆನಪಿಸಿಕೊಂಡರು.

ಅದಾದ ಬಳಿಕ ಮಾಡೆಲಿಂಗ್ ಕ್ಷೇತ್ರಕ್ಕೆ ಕಾಲಿಟ್ಟೆ. ಹಲವು ಫ್ಯಾಷನ್ ಶೋಗಳಲ್ಲಿ ರೂಪದರ್ಶಿಯಾಗಿ ಕೆಲಸ ಮಾಡಿದ್ದೇನೆ. ಕೆಲವು ಮಾಡೆಲಿಂಗ್ ಶೋಗಳಿಗೆ ಕೊರಿಯೋಗ್ರಾಫರ್ ಆಗಿಯೂ ಕಾರ್ಯನಿರ್ವಹಿಸಿದ್ದೇನೆ. ಆದರೆ ನನ್ನ ಕಣ್ಣ ಮುಂದೆ ಯಾವಾಗಲೂ ಸಿನಿಮಾದ ಕನಸೇ ಇತ್ತು. ಈ ನಡುವೆ ಕೆಲವು ಕಿರುಚಿತ್ರಗಳಲ್ಲಿ ನಟಿಸಿದೆ. ಹೀಗೆ ಸುಮಾರು ಆರು–ಎಂಟು ವರ್ಷಗಳ ಹೋರಾಟದ ಬಳಿಕ ನಾಯಕಿಯಾಗಿ ಅಭಿನಯಿಸುವ ಅವಕಾಶ ಸಿಕ್ಕಿದೆ. ಈ ಚಿತ್ರದೊಂದಿಗೆ ಇನ್ನಷ್ಟು ಅವಕಾಶಗಳ ಬಾಗಿಲು ತೆರೆದಿವೆ. ಹೊಸ ಸಿನಿಮಾಗಳ ಘೋಷಣೆ ಕೂಡ ಶೀಘ್ರದಲ್ಲೇ ಆಗಲಿದೆ ಎಂದು ಅವರು ಹೇಳಿದರು.

ಸಿದ್ಧವಾಯ್ತು ಅಮೆರಿಕಾ ಅಮೆರಿಕಾ 2

ನಾಗತಿಹಳ್ಳಿ ಚಂದ್ರಶೇಖರ ನಿರ್ದೇಶನದ 90ರ ದಶಕದ ಸೂಪರ್‌ಹಿಟ್ ಚಿತ್ರ 'ಅಮೆರಿಕಾ! ಅಮೆರಿಕಾ!!' ನೆನಪುಗಳು ಇನ್ನೂ ಸಿನಿಪ್ರಿಯರಲ್ಲಿ ಹಸಿರಾಗಿವೆ. ಇದೀಗ ಅದೇ ಶೀರ್ಷಿಕೆಯಲ್ಲಿ ಅವರು 'ಅಮೆರಿಕಾ ಅಮೆರಿಕಾ 2' ಚಿತ್ರವನ್ನು ನಿರ್ದೇಶಿಸಿದ್ದು, ಚಿತ್ರದ ಶೀರ್ಷಿಕೆ ಅನಾವರಣ ಹಾಗೂ ಪೋಸ್ಟರ್ ಬಿಡುಗಡೆ ಕಾರ್ಯಕ್ರಮ ಈಚೆಗೆ ನಡೆಯಿತು.

ನಾಗತಿಹಳ್ಳಿ ಚಂದ್ರಶೇಖರ

ಚಿತ್ರದಲ್ಲಿ ನಿರೂಪ್ ಭಂಡಾರಿ, ಸಾನ್ವಿ ಶ್ರೀವಾಸ್ತವ್ ಹಾಗೂ ಪೃಥ್ವಿ ಅಂಬಾರ್ ಮುಖ್ಯಪಾತ್ರಗಳಲ್ಲಿ ಅಭಿನಯಿಸಿದ್ದಾರೆ.

'ಹಳೆಯ ಕಥೆಗಳಿಂದಲೇ ಹೊಸ ಕಥೆಗಳು ಹುಟ್ಟುತ್ತವೆ. ಪತ್ರಿಕಾಗೋಷ್ಠಿಗಳಲ್ಲಿ ಎಲ್ಲರೂ ತಮ್ಮದು ಹೊಸ ಕಥೆ ಎಂದು ಹೇಳುತ್ತಾರೆ. ಆದರೆ ಎಲ್ಲ ಹೊಸ ಕಥೆಗಳ ಬೇರು ಹಳೆಯ ಕಥೆಗಳಲ್ಲೇ ಇರುತ್ತವೆ. ಹೊಸತನದ ಹುಡುಕಾಟ ಮಾತ್ರ ನಿರಂತರ. ತೊಂಬತ್ತರ ದಶಕದಲ್ಲಿ ಭರ್ಜರಿ ಯಶಸ್ಸು ಕಂಡ ನನ್ನ 'ಅಮೆರಿಕಾ! ಅಮೆರಿಕಾ!!' ಚಿತ್ರದ ಶೀರ್ಷಿಕೆಯನ್ನೇ ಈ ಚಿತ್ರಕ್ಕೂ ಬಳಸಿದ್ದೇನೆ. ಆದರೆ ಇದು ಆ ಚಿತ್ರದ ಮುಂದುವರಿದ ಭಾಗವಲ್ಲ. ಆ ಕಥೆಯೂ ಬೇರೆ, ಈ ಕಥೆಯೂ ಬೇರೆ' ಎಂದು ನಾಗತಿಹಳ್ಳಿ ಚಂದ್ರಶೇಖರ ಸ್ಪಷ್ಟಪಡಿಸಿದರು.

'ಈ ಚಿತ್ರದಲ್ಲಿಯೂ ಮೂರು ಪ್ರಮುಖ ಪಾತ್ರಗಳಿವೆ. ಆದರೆ ಹಿಂದಿನ ಚಿತ್ರದ ಸೂರ್ಯ, ಭೂಮಿ, ಶಶಾಂಕ್ ಪಾತ್ರಗಳಲ್ಲ. ಸಂಪೂರ್ಣ ಹೊಸ ಪಾತ್ರಗಳು. ಇದು ಸ್ತ್ರೀಪ್ರಧಾನ ಚಿತ್ರ ಎನ್ನಬಹುದು. ಸಾನ್ವಿ ಶ್ರೀವಾಸ್ತವ್ ಅವರ ಅಭಿನಯ ಚಿತ್ರದ ಪ್ರಮುಖ ಆಕರ್ಷಣೆ. ನಿರೂಪ್ ಭಂಡಾರಿ ಮತ್ತು ಪೃಥ್ವಿ ಅಂಬಾರ್ ಅವರೂ ಅಷ್ಟೇ ಪರಿಣಾಮಕಾರಿಯಾಗಿ ಅಭಿನಯಿಸಿದ್ದಾರೆ. ಸಹನಾ ವಿಜಯಕುಮಾರ್ ಅವರ ಕಾದಂಬರಿ ಆಧಾರಿತ ಈ ಚಿತ್ರದ ಚಿತ್ರೀಕರಣ ಈಗಾಗಲೇ ಪೂರ್ಣಗೊಂಡಿದ್ದು, ಶೀಘ್ರದಲ್ಲೇ ಬಿಡುಗಡೆಯ ದಿನಾಂಕವನ್ನು ಘೋಷಿಸಲಾಗುವುದು' ಎಂದು ಅವರು ತಿಳಿಸಿದರು.

ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, ಮನೋಮೂರ್ತಿ ಸಂಗೀತ ಸಂಯೋಜಿಸಿದ್ದಾರೆ. ಹಿನ್ನೆಲೆ ಸಂಗೀತವನ್ನು ನಕುಲ್ ಅಭ್ಯಂಕರ್ ನೀಡಿದ್ದಾರೆ. ಎಸ್.ಕೆ. ರಾವ್ ಛಾಯಾಗ್ರಹಣ ಚಿತ್ರಕ್ಕಿದೆ.

'ಸುಮಾರು ಮೂವತ್ತು ವರ್ಷಗಳ ಹಿಂದೆ ಚಿತ್ರಮಂದಿರದಲ್ಲಿ 'ಅಮೆರಿಕಾ! ಅಮೆರಿಕಾ!!' ನೋಡಿದ ಅನುಭವ ಇನ್ನೂ ಮನಸ್ಸಿನಲ್ಲಿ ಅಚ್ಚೊತ್ತಿದಂತಿದೆ.

ಪೃಥ್ವಿ ಅಂಬಾರ್, ಸಾನ್ವಿ ಶ್ರೀವಾಸ್ತವ್, ನಿರೂಪ್ ಭಂಡಾರಿ

ಈ ಚಿತ್ರ ಅದರ ಮುಂದುವರಿದ ಭಾಗವಲ್ಲದಿದ್ದರೂ, ಇದರ ಕಥೆ ಮತ್ತು ಪಾತ್ರಗಳು ಪ್ರೇಕ್ಷಕರ ಮನಸ್ಸಿನಲ್ಲಿ ಉಳಿಯುವಂತಿವೆ. ನನಗೂ ಉತ್ತಮ ಪಾತ್ರ ಸಿಕ್ಕಿದೆ. ಈ ಅವಕಾಶ ನೀಡಿದ ನಾಗತಿಹಳ್ಳಿ ಚಂದ್ರಶೇಖರ ಅವರಿಗೆ ಧನ್ಯವಾದಗಳು' ಎಂದು ನಟ ನಿರೂಪ್ ಭಂಡಾರಿ ಹೇಳಿದರು.

ಶೇಖರ್ ಚಿತ್ರದಲ್ಲಿ ಡಾರ್ಲಿಂಗ್ ಕೃಷ್ಣ

ಡಾರ್ಲಿಂಗ್ ಕೃಷ್ಣ ನಾಯಕನಾಗಿರುವ ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಆಕಾಶ್ ಪಿಕ್ಚರ್ಸ್ ಲಾಂಛನದಲ್ಲಿ ಪ್ರಕಾಶ್ ಬೂದೂರು ನಿರ್ಮಿಸುತ್ತಿರುವ ಚಿತ್ರಕ್ಕೆ ಪಿ.ಸಿ.ಶೇಖರ್ ನಿರ್ದೇಶಕ.

ಪ್ರಶಾಂತ್ ರಾಜಪ್ಪ ಸಂಭಾಷಣೆ ಬರೆಯುತ್ತಿದ್ದಾರೆ. ಶೀರ್ಷಿಕೆ, ತಾರಾಬಳಗದ ವಿವರಗಳನ್ನು ಶೀಘ್ರವೇ ಪ್ರಕಟಿಸಲಾಗುವುದು ಎಂದು ಚಿತ್ರತಂಡ ಹೇಳಿದೆ.

'ಲವ್ ಬರ್ಡ್ಸ್' ನಂತರ ನನ್ನ ಮತ್ತು ಶೇಖರ್ ಅವರ ಕಾಂಬಿನೇಷನ್‌ನಲ್ಲಿ ಬರಲಿರುವ ಎರಡನೇ ಚಿತ್ರ ಇದು. ಹೊಸ ಕಥಾಹಂದರ ಹೊಂದಿದೆ. ಎರಡೂವರೆ ಗಂಟೆ ಭರ್ತಿ ಮನರಂಜನೆ ನೀಡುವ ಗುರಿ ಇದೆ. ನಾನು ಈವರೆಗೂ ಮಾಡಿರದ ಪಾತ್ರ ಎಂದರೂ ಆದಿತು. ನಿರ್ಮಾಪಕ ಪ್ರಕಾಶ್ ಬೂದೂರು ಈ ಚಿತ್ರದಲ್ಲಿ ಅಭಿನಯಿಸುತ್ತಿರುವುದು ಖುಷಿಯ ಸಂಗತಿ' ಎಂದು ನಾಯಕ ಡಾರ್ಲಿಂಗ್ ಕೃಷ್ಣ ಹೇಳಿದರು.

'ಪ್ರೇಕ್ಷಕರನ್ನು ತಟ್ಟುವ ಕಥನವನ್ನು ಸಮತೋಲನದಿಂದ ಕಟ್ಟಿಕೊಡುವುದು ಶೇಖರ್ ಅವರ ಸಾಮರ್ಥ್ಯ. ಡಾರ್ಲಿಂಗ್ ಕೃಷ್ಣ ಅವರ ಸಹಜ ಅಭಿನಯ, ವ್ಯಕ್ತಿತ್ವ, ಅತ್ಯುತ್ತಮ ಕಾಮಿಡಿ ಟೈಮಿಂಗ್ ಹಾಗೂ ಭಾವನಾತ್ಮಕ ಪಾತ್ರಗಳನ್ನು ಜೀವಂತಗೊಳಿಸುವ ಸಾಮರ್ಥ್ಯ ನನಗೆ ಖುಷಿ ನೀಡಿದೆ. ಈ ಚಿತ್ರ ವಿಭಿನ್ನ ಹಾಗೂ ಸ್ಮರಣೀಯ ಅಧ್ಯಾಯವಾಗುವ ವಿಶ್ವಾಸವಿದೆ' ಎಂದು ನಿರ್ಮಾಪಕ ಪ್ರಕಾಶ್ ಬೂದೂರು ಸಂತಸ ಹಂಚಿಕೊಂಡರು.

ಚಿತ್ರತಂಡದೊಂದಿಗೆ ಸೋನುಗೌಡ

ಐಟಂ ಸಾಂಗ್‌ನಲ್ಲಿ ಸೋನುಗೌಡ

ರೀಲ್ಸ್ ಹಾಗೂ ಇತರ ಕಾರಣಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ಚರ್ಚೆಗೆ ಗ್ರಾಸವಾಗಿದ್ದ ಸೋನು ಶ್ರೀನಿವಾಸಗೌಡ ಇದೀಗ ಮೊದಲ ಬಾರಿಗೆ 'ಕೇಕೆ' ಚಿತ್ರದ ಐಟಂ ಹಾಡಿಗೆ ಹೆಜ್ಜೆ ಹಾಕಿದ್ದಾರೆ.

'ಗುಂಟೂರು ಅಮ್ಮಾಯಿ...' ಎಂಬ ಐಟಂ ಗೀತೆಯಲ್ಲಿ ಸೋನುಗೌಡ ನೃತ್ಯ ಮಾಡಿದ್ದು, ಈಚೆಗೆ ಹಾಡು ಬಿಡುಗಡೆಯಾಗಿದೆ.

ಕಿರಣ್ ತೋಟಂಬೈಲ್ ಸಾಹಿತ್ಯ ಬರೆದು ಸಂಗೀತ ಸಂಯೋಜಿಸಿರುವ ಈ ಗೀತೆಯನ್ನು ಐಶ್ವರ್ಯಾ ರಂಗರಾಜನ್ ಹಾಡಿದ್ದಾರೆ. ಆಲಾಪನಾ ಆಡಿಯೊ ಮೂಲಕ ಬಿಡುಗಡೆಯಾಗಿರುವ ಈ ಹಾಡು ಅದರ ಯೂಟ್ಯೂಬ್ ಚಾನಲ್‌ನಲ್ಲಿ ವೀಕ್ಷಣೆಗೆ ಲಭ್ಯವಿದೆ.

ಹೊಸಪೇಟೆ ಮೂಲದ ರಮಾಲಿ ನಾಯ್ಕ್ ಹಾಗೂ ಕಲ್ಯಾಣ್ ನಿರ್ಮಿಸಿರುವ 'ಕೇಕೆ' ಚಿತ್ರಕ್ಕೆ ಜಿ.ಕೆ. ಸೋಮಶೇಖರ್ ನಿರ್ದೇಶನವಿದೆ. ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದ್ದು, ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಚಿತ್ರದ ಬಿಡುಗಡೆ ದಿನಾಂಕವನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು ಎಂದು ಚಿತ್ರತಂಡ ತಿಳಿಸಿದೆ.

ಜು.24ಕ್ಕೆ 'ಪಿಚ್ಚರ್' ತೆರೆಗೆ

ಶಿಲ್ಪಾ ಗಣೇಶ್ ನಿರ್ಮಿಸಿ, ಗಣೇಶ್ ತಮ್ಮ ಗೋಲ್ಡನ್ ಸಿನಿಮಾಸ್ ಮೂಲಕ ಅರ್ಪಿಸುತ್ತಿರುವ 'ಪಿಚ್ಚರ್' ಚಿತ್ರ ಜುಲೈ 24 ರಂದು ತೆರೆ ಕಾಣಲಿದೆ. ತುಳು ಮತ್ತು ಕನ್ನಡ ಭಾಷೆಗಳಲ್ಲಿ ಏಕಕಾಲದಲ್ಲಿ ಸಿದ್ಧಗೊಂಡ ಚಿತ್ರಕ್ಕೆ ಸಂದೀಪ್ ಬೆದ್ರ ನಿರ್ದೇಶನವಿದೆ. ಚಿತ್ರದ 'ಹುಣ್ಣಿಮೆ ಚಂದಿರ' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

'ನಮ್ಮ ಗೋಲ್ಡನ್ ಸಿನಿಮಾಸ್‌ನಿಂದ ಈ ಹಿಂದೆ ಕನ್ನಡದಲ್ಲಿ ಕೆಲ ಸಿನಿಮಾಗಳನ್ನು ನಿರ್ಮಾಣ ಮಾಡಿದ್ದೇವೆ. ನನ್ನದು ದಕ್ಷಿಣ ಕನ್ನಡ. ಹೀಗಾಗಿ ತುಳುವಿನಲ್ಲಿ ಒಂದು ಸಿನಿಮಾ ಮಾಡಬೇಕೆಂಬ ಆಸೆಯಿತ್ತು. ಅದಕ್ಕಾಗಿ ಉತ್ತಮ ಸ್ಕ್ರಿಪ್ಟ್ ಹುಡುಕುತ್ತಿದ್ದೆವು. ಆಗ ನಿರ್ದೇಶಕ ಸಂದೀಪ್ ಉತ್ತಮ ಸ್ಕ್ರಿಪ್ಟ್ ತೆಗೆದುಕೊಂಡು ಬಂದರು. ಕೌಟುಂಬಿಕ ಕಥಾ ಹಂದರ ಹೊಂದಿರುವ ಹಾಸ್ಯಮಯ ಚಿತ್ರ' ಎಂದರು ನಿರ್ಮಾಪಕಿ ಶಿಲ್ಪಾ ಗಣೇಶ್.

'ಪ್ರಾರಂಭದಿಂದ ಕೊನೆಯ ತನಕ ನಗಿಸುವ ಚಿತ್ರ. ಸಂಬಂಧಗಳ ಮಹತ್ವವನ್ನು ಸಾರುತ್ತದೆ. ನನಗೆ ಕೌಟುಂಬಿಕ ಪ್ರೇಕ್ಷಕರೇ ಹೆಚ್ಚು. ಹೀಗಾಗಿ ನಮ್ಮ ಬ್ಯಾನರ್ ಸಿನಿಮಾದಲ್ಲಿಯೂ ಅದೇ ರೀತಿಯ ಅಂಶಗಳಿವೆ. ಕ್ಲೈಮ್ಯಾಕ್ಸ್ ಪ್ರೇಕ್ಷಕರನ್ನು ಭಾವುಕವಾಗಿಸುತ್ತದೆ. ಕಥೆ ಕೇಳಿದಾಗಲೇ ಬಜೆಟ್ ಅಂದುಕೊಂಡಿದ್ದಕ್ಕಿಂತ ಜಾಸ್ತಿಯಾಗುತ್ತದೆ ಎಂಬುದು ಗೊತ್ತಾಯಿತು. ಹೀಗಾಗಿ ತುಳು ಮತ್ತು ಕನ್ನಡ ಎರಡೂ ಭಾಷೆಗಳಲ್ಲಿಯೂ ಚಿತ್ರೀಕರಣ ಮಾಡಿದೆವು. ಚಿತ್ರದಲ್ಲಿ ಏನಾದರೂ ವಿಶೇಷತೆ ಇರಬೇಕೆಂದು ಒಂದು ಹಾಡನ್ನು ಕಾಶ್ಮೀರದಲ್ಲಿ ಚಿತ್ರೀಕರಿಸಿದ್ದೇವೆ. ಇಷ್ಟು ದಿನ ಮನೆಯೊಳಗೆ ಹಾಡುತ್ತಿದ್ದ ಶಿಲ್ಪಾ ಗಣೇಶ್ ಈ ಸಿನಿಮಾದಿಂದ ಗಾಯಕಿಯಾಗಿ ಹೊರಹೊಮ್ಮಿದ್ದಾರೆ' ಎಂದು ಪತ್ನಿಯ ಕಾಲೆಳೆದರು ಗಣೇಶ್.

ನಿತ್ಯಪ್ರಕಾಶ್ ಬಂಟ್ವಾಳ್‌ಗೆ ಅಮೃತ ಸುದು ಜೋಡಿಯಾಗಿದ್ದಾರೆ. ದೇವದಾಸ್ ಕಾಪಿಕಡ್, ನವೀನ್ ಡಿ ಪಡೀಲ್, ಅರವಿಂದ್ ಬೋಳಾರ್ ಮುಂತಾದವರು ಚಿತ್ರದಲ್ಲಿದ್ದಾರೆ.

'ತುಳುನಾಡಿನ ಬಹುತೇಕ ಪ್ರಮುಖ ಹಾಸ್ಯ ಕಲಾವಿದರು ಚಿತ್ರದಲ್ಲಿದ್ದಾರೆ. ಉಡುಪಿ, ಮಂಗಳೂರು ಸುತ್ತ ಚಿತ್ರೀಕರಣ ಮಾಡಿದ್ದೇವೆ. ದಕ್ಷಿಣ ಕನ್ನಡದ ಕಥೆಯಾದ್ದರಿಂದ ಅಲ್ಲಿನ ಕಲಾವಿದರೇ ಹೆಚ್ಚಿದ್ದಾರೆ. ಸ್ಯಾಮುಯೆಲ್ ಅಭಿ ಸಂಗೀತ, ಚಂದ್ರಶೇಖರ್ ಛಾಯಾಚಿತ್ರಗ್ರಹಣವಿದೆ' ಎಂದರು ಸಂದೀಪ್ ಬೆದ್ರ.

ಐದು ಸಿನಿಮಾಗಳು ತೆರೆಗೆ

ಮೇಘಾ ಶೆಟ್ಟಿ

ಗ್ರಾಮಾಯಣ

ವಿನಯ್ ರಾಜಕುಮಾರ್, ಮೇಘಾ ಶೆಟ್ಟಿ ಜೋಡಿಯಾಗಿ ನಟಿಸಿರುವ ಚಿತ್ರಕ್ಕೆ ದೇವನೂರು ಚಂದ್ರು ನಿರ್ದೇಶನವಿದೆ. ಲಹರಿ ಸಂಸ್ಥೆ ಸಿನಿಮಾವನ್ನು ನಿರ್ಮಿಸಿದೆ.

ಹಳ್ಳಿಗಾಡಿನ ಆ್ಯಕ್ಷನ್, ಮಾಸ್ ಕಥೆ ಹೊಂದಿದೆ ಎಂಬುದು ಚಿತ್ರದ ಟ್ರೇಲರ್‌ನಿಂದ ಗೊತ್ತಾಗುತ್ತಿದೆ. 'ನೋಡುಗರಿಗೆ ಬೇಕಾದ ಎಲ್ಲಾ ಅಂಶಗಳಿರುವ ಸಿನಿಮಾ. ಈವರೆಗೂ ಮಾಡಿರದ ಪಾತ್ರದಲ್ಲಿ ವಿನಯ್ ರಾಜಕುಮಾರ್ ಅಭಿನಯಿಸಿದ್ದಾರೆ. ಮೇಘಾ ಶೆಟ್ಟಿ ಅವರದ್ದು ಕೂಡ ವಿಭಿನ್ನ ಪಾತ್ರ. ಅಚ್ಯುತ ಕುಮಾರ್, ಗೋಪಾಲಕೃಷ್ಣ ದೇಶಪಾಂಡೆ, ಅರುಣ್ ಸಾಗರ್, ಬಲ ರಾಜವಾಡಿ, ಅಪರ್ಣಾ ವಸ್ತಾರೆ, ಸೀತಾ ಕೋಟೆ, ಪ್ರಶಾಂತ್ ಹೊನ್ನಾಳಿ, ಅವಿನಾಶ್ ರೈ ಹೀಗೆ ಅನುಭವಿ ಕಲಾವಿದರ ದೊಡ್ಡ ತಾರಾಬಳಗವೇ ಇರುವ ಈ ಚಿತ್ರದ ವಿಶೇಷ ಪಾತ್ರದಲ್ಲಿ ಲೂಸ್ ಮಾದ ಯೋಗಿ ಅಭಿನಯಿಸಿದ್ದಾರೆ' ಎಂದಿದ್ದಾರೆ ನಿರ್ದೇಶಕ.

ಪೂರ್ಣಚಂದ್ರ ತೇಜಸ್ವಿ ಸಂಗೀತ ನಿರ್ದೇಶನ, ಸಂತೋಷ್ ರೈ ಪಾತಾಜೆ ಛಾಯಾಚಿತ್ರಗ್ರಹಣವಿದೆ.

ಡೆಡ್ಲಿ ಕಿಲ್ಲರ್

ಸಾಹಸ ನಿರ್ದೇಶಕ ಥ್ರಿಲ್ಲರ್ ಮಂಜು ಹಲವು ವರ್ಷಗಳ ಬಳಿಕ ಆ್ಯಕ್ಷನ್ ಕಟ್ ಹೇಳಿ, ನಟಿಸಿರುವ ಚಿತ್ರ. ಹೊಸಬರಾದ ಅಭಯ್‌ವೀರ್ ಹಾಗೂ ನಿರೀಕ್ಷಾ ಜೋಡಿಯಾಗಿದ್ದಾರೆ. ಕೀರ್ತಿ ಸಿಲ್ವರ್ ಸ್ಕ್ರೀನ್ ಹಾಗೂ ವೇದಿಕ್ ಕಾಸ್ಮಾಸ್ ಬ್ಯಾನರ್ ಅಡಿ ಪ್ರಶಾಂತ್ ಟಿ.ತಂಬ್ರಳ್ಳಿಮಠ ಅವರು ಈ ಚಿತ್ರವನ್ನು ನಿರ್ಮಿಸಿದ್ದಾರೆ.

ಈ ಚಿತ್ರದಲ್ಲಿ ಮೂರು ಹಾಡುಗಳಿದ್ದು, ವಿನು ಮನಸು ಅವರು ಸಂಗೀತ ಸಂಯೋಜನೆ ಮಾಡಿದ್ದಾರೆ. ಮಲ್ಲಿಕಾರ್ಜುನ್ ಛಾಯಾಚಿತ್ರಗ್ರಹಣ, ದೀಪು ಸಂಕಲನ ಈ ಚಿತ್ರಕ್ಕಿದೆ. ಆರು ಸಾಹಸ ದೃಶ್ಯಗಳಿವೆ. ಲೋಕೇಂದ್ರ ಸೂರ್ಯ, ಥ್ರಿಲ್ಲರ್ ಮಂಜು, ಸುನಿಲ್ ಬಾಲ್ಡರ್ ಮುಂತಾದವರು ತಾರಾಗಣದಲ್ಲಿದ್ದಾರೆ.

ಅಪರಾಧಿ ನಾನಲ್ಲ

ಮೂವರು ಕೈದಿಗಳು ಜೈಲಿನಿಂದ ಹೊರಬರುವ ಕಥೆಯನ್ನು ಹೊಂದಿರುವ ಚಿತ್ರ. ಅಜಿತ್ ಚೌಟಾ ದೇವಸ್ಯ ನಿರ್ಮಾಣದ ಚಿತ್ರಕ್ಕೆ ಯಶಂತ್ ಕಲ್ಲಡ್ಕ ನಿರ್ದೇಶನವಿದೆ.

'ಜೈಲಿನಲ್ಲಿ ಎಷ್ಟೋ ಜನ ಕೈದಿಗಳು ಇರುತ್ತಾರೆ. ಆದರೆ ಒಂದಷ್ಟು ಜನ ಅಪರಾಧ ಎಸಗಿರುವುದಿಲ್ಲ. ಅಂಥ ಒಂದು ಸತ್ಯ ಘಟನೆ ಇಟ್ಟುಕೊಂಡು, ಸಿನಿಮೀಯ ಅಂಶಗಳೊಂದಿಗೆ ಸಿದ್ಧಗೊಂಡ ಕಥೆ' ಎಂದಿದ್ದಾರೆ ನಿರ್ದೇಶಕ.

ಅರ್ಜುನ್ ದೇವ್‌ಗೆ ಅಮೃತಾ ಮೂರ್ತಿ ಜೋಡಿಯಾಗಿದ್ದಾರೆ. ಪ್ರಮೋದ್ ಶೆಟ್ಟಿ, ನವಿಲ್ ಪಡೀಲು, ಅಶೋಕ್ ಹೆಗ್ಡೆ, ನೀತೂ ಶೆಟ್ಟಿ ಮುಂತಾದವರು ಚಿತ್ರದಲ್ಲಿದ್ದಾರೆ.

'ಲವ್ ಸೀಸನ್ಸ್'

ವಿಭಿನ್ನ ಪ್ರೇಮಕಥೆಯನ್ನು ಹೊಂದಿರುವ ಚಿತ್ರಕ್ಕೆ ಕೃತ್ವಿಕ್ ನಿರ್ದೇಶನವಿದೆ. ಭಿನ್ನ ನಿರೂಪಣೆಯ ಅಚ್ಚುಕಟ್ಟಾದ ಕಥೆಯಿದೆ ಎಂಬುದು ಟ್ರೇಲರ್‌ನಿಂದ ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಎನ್.ಆರ್ ಸ್ಟುಡಿಯೋಸ್ ಬ್ಯಾನರಿನಡಿಯಲ್ಲಿ ಚಿತ್ರ ನಿರ್ಮಾಣಗೊಂಡಿದೆ.

ಮುಕುಂದ ರಾಮಸ್ವಾಮಿ ನಾಯಕ. ಸಂಗೀತಾ ಅನಿಲ್, ದಿಯಾ ಕೀರ್ತಿ, ಶ್ವೇತಾ ಕೊಗ್ಲೂರು, ಚಂದನಾ ಗೌಡ, ಚೇತನ್ ದುರ್ಗ, ಮಂಡ್ಯ ರಮೇಶ್, ರಾಜೇಶ್ ನಟರಂಗ, ಸದಾನಂದ, ಹುಲಿ ಕಾರ್ತಿಕ್, ಬೇಬಿ ರಿತು ಸಿಂಗ್ ಮುಂತಾದವರ ತಾರಾಗಣವಿದೆ.

ವೀರ್ ಸಮರ್ಥ್ ಸಂಗೀತ ನಿರ್ದೇಶನದ ಹಾಡುಗಳಿಗೆ ಕೆ.ಕಲ್ಯಾಣ್, ಪ್ರಮೋದ್ ಮರವಂತೆ ಸಾಹಿತ್ಯವಿದೆ. ಅವಿನಾಶ ಶಾಸ್ತ್ರಿ ಛಾಯಾಚಿತ್ರಗ್ರಹಣ, ಮಧು ತುಂಬಿನಕೆರೆ ಸಂಕಲನವಿದೆ.

ಇವುಗಳೊಂದಿಗೆ 'ನಮ್ಮ ಕಾಲದಲ್ಲಿ ಹಿಂಗಿರಲಿಲ್ಲ ಬಿಡಿ' ಚಿತ್ರ ಕೂಡ ತೆರೆ ಕಾಣುತ್ತಿದೆ.

ಲವ್ ಸೀಸನ್ಸ್ ಚಿತ್ರತಂಡ

ಪರಾರಿಯಾದ ಆರೋಪಿಗಳಿಗಾಗಿ ಶೋಧ

ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡಲಾಗಿದ್ದ ಚಿತ್ರಹಿಂಸೆಯ ವಿಡಿಯೊ ಗಮನಿಸಿ ಮಕ್ಕಳ ಪೋಷಕರು ಪೊಲೀಸರಿಗೆ ದೂರು ನೀಡಿದ್ದರು

ಡೇ ಕೇರ್ ಸೆಂಟರ್ ಬಂದ್

ಬೆಂಗಳೂರು:'ಡೇ ಕೇರ್'ನಲ್ಲಿ ಗಲಾಟೆ ಮಾಡುವ ಪುಟ್ಟ ಮಕ್ಕಳನ್ನು ವಾಷಿಂಗ್ ಮಷಿನ್‌ನಲ್ಲಿ ಹಾಕಿ, ಹಿಂಸೆ ನೀಡಿದ್ದ ಘಟನೆಗೆ ಸಂಬಂಧಿಸಿದಂತೆ ಎಚ್.ಎ.ಎಲ್ ಠಾಣಾ ವ್ಯಾಪ್ತಿಯ ಸೊಸೈಟಿ ಜನರಲ್ ಬೇಬಿ ಕೇರ್ ಸೆಂಟರ್ ಅನ್ನು ಬಂದ್ ಮಾಡಿಸಲಾಗಿದೆ.

ಮತ್ತೊಂದೆಡೆ ಪುಟ್ಟ ಮಕ್ಕಳಿಗೆ ಹಿಂಸೆ ನೀಡಿದ್ದ ಕೇರ್ ಟೇಕರ್‌ಗಳಾದ ಮಂಜುಳಾ, ವಿಜಯಲಕ್ಷ್ಮಿ, ಭವಾನಿ, ಸಿಂಧು ಹಾಗೂ ಬಿಂದು ತಲೆಮರೆಸಿಕೊಂಡಿದ್ದು, ಪೊಲೀಸರು ಶೋಧ ನಡೆಸುತ್ತಿದ್ದಾರೆ.

ಎಚ್.ಎ.ಎಲ್ ಆವರಣದ 'ಕ್ಯಾಪ್ ಜೆಮಿನಿ' ಕಂಪನಿ ಆವರಣದ ಡೇ ಕೇರ್‌ನ ಈ ಐವರು ಸಿಬ್ಬಂದಿ, ಪುಟ್ಟ ಮಕ್ಕಳ ಮೇಲೆ ದೌರ್ಜನ್ಯ ಎಸಗಿದ್ದರು. ಮಕ್ಕಳ ಮೇಲೆ ಕೇರ್ ಟೇಕರ್‌ಗಳು ದೌರ್ಜನ್ಯ ಎಸಗುತ್ತಿರುವ ದೃಶ್ಯವನ್ನು ಕೇಂದ್ರದ ಸಿಬ್ಬಂದಿಯೊಬ್ಬರು ತಮ್ಮ ಮೊಬೈಲ್‌ನಲ್ಲಿ ಸೆರೆಹಿಡಿದಿದ್ದರು.

ಡೇ ಕೇರ್ ಸೆಂಟರ್‌ಗೆ ಚಿಕ್ಕ ಮಕ್ಕಳನ್ನು ಬಿಟ್ಟು ಪೋಷಕರು ಕೆಲಸಕ್ಕೆ ಹೋಗುತ್ತಿದ್ದರು. ಮಕ್ಕಳ ಪಾಲನೆ ಹಾಗೂ ಪೋಷಣೆಗೆಂದು ಸಂಸ್ಥೆಯ ಆಡಳಿತ ಮಂಡಳಿಯವರು ಈ ಕೇರ್‌ಟೇಕರ್‌ಗಳನ್ನು ನೇಮಿಸಿದ್ದರು. ಗಲಾಟೆ ಮಾಡುವ ಹಾಗೂ ಅಳುವ ಮಕ್ಕಳನ್ನು ಕೇರ್ ಟೇಕರ್‌ಗಳು ವಾಷಿಂಗ್ ಮಷಿನ್‌ಗೆ ಹಾಕಿ ಬೆದರಿಸುವುದು ಹಾಗೂ ಕಮೋಡ್ ಒಳಗೆ ಕೂರಿಸಿ, ಬಾಯಿಗೆ ನೀರಿನ ಪೈಪ್ ತುರುಕಿ ನೀರು ಬಿಡುವುದು, ಮಕ್ಕಳನ್ನು ಕೂಡಿ ಹಾಕುವುದು, ಅಲ್ಲದೇ ದೈಹಿಕ ಹಿಂಸೆ ನೀಡುವುದನ್ನು ಮಾಡುತ್ತಿದ್ದರು ಎಂದು ಮೂಲಗಳು ತಿಳಿಸಿವೆ.

ಬರ ಸ್ಥಿತಿ ತುರ್ತು ನಿರ್ವಹಣೆ: ಸಿ.ಎಂಗೆ ವಿಪಕ್ಷ ನಾಯಕ ಆರ್. ಅಶೋಕ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬರ ಪರಿಸ್ಥಿತಿ ನಿರ್ವಹಿಸಲು ಸರ್ಕಾರ ತುರ್ತು ಕ್ರಮಗಳನ್ನು ಕೈಗೊಳ್ಳಬೇಕು. ಬರಪೀಡಿತ ಪ್ರದೇಶಗಳನ್ನು ಘೋಷಣೆ ಮಾಡಬೇಕು. ಕಾರ್ಮಿಕರ ವಲಸೆ ತಡೆಗೆ ಸೂಕ್ತ ಪ್ಯಾಕೇಜ್‌ಗಳನ್ನು ಘೋಷಿಸಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಒತ್ತಾಯಿಸಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದಿರುವ ಅವರು, 'ಮುಂಗಾರು ಮಳೆಯ ಕೊರತೆಯಿಂದ ರಾಜ್ಯದ ಹಲವು ಭಾಗಗಳಲ್ಲಿ ರೈತರು, ಕೃಷಿ ಕಾರ್ಮಿಕರು ಹಾಗೂ ಗ್ರಾಮೀಣ ಜನರು ಸಂಕಷ್ಟ ಎದುರಿಸುತ್ತಿದ್ದಾರೆ. ಬಿತ್ತನೆ ಕುಂಠಿತವಾಗಿದೆ. ಬೆಳೆಗಳು ಒಣಗುತ್ತಿವೆ. ಜಲಾಶಯಗಳ ನೀರಿನ ಮಟ್ಟ ಕುಸಿಯುತ್ತಿದೆ. ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೂ ಸಮಸ್ಯೆ ಆಗಲಿದೆ. 150ಕ್ಕೂ ಅಧಿಕ ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಇದೆ. ಕೃಷಿ ಉತ್ಪಾದನೆ, ಉದ್ಯೋಗದ ಮೇಲೂ ನೇರ ಪರಿಣಾಮ ಬೀರುತ್ತಿದೆ. ಕೃಷಿ ಕಾರ್ಮಿಕರು ನಗರಗಳು ಹಾಗೂ ನೆರೆ ರಾಜ್ಯಗಳತ್ತ ವಲಸೆ ಹೋಗುತ್ತಿದ್ದಾರೆ. ಬರ ಪರಿಸ್ಥಿತಿಯನ್ನು ನಿರ್ವಹಣೆ ಮಾಡಲು ಯುದ್ಧೋಪಾದಿಯಲ್ಲಿ ಸಿದ್ಧತೆ ಮಾಡಿಕೊಳ್ಳಬೇಕು' ಎಂದು ಹೇಳಿದ್ದಾರೆ.

ರಾಜ್ಯದ ವಾಸ್ತವ ಪರಿಸ್ಥಿತಿಯನ್ನು ಜಿಲ್ಲಾವಾರು ಮತ್ತು ತಾಲ್ಲೂಕುವಾರು ಪರಿಶೀಲಿಸಿ, ತಕ್ಷಣ ಬರಪೀಡಿತ ಪ್ರದೇಶಗಳೆಂದು ಘೋಷಿಸಬೇಕು. ಜಿಲ್ಲಾ ಉಸ್ತುವಾರಿ ಸಚಿವರು, ಉಸ್ತುವಾರಿ ಕಾರ್ಯದರ್ಶಿಗಳು ವಾರದ ಒಳಗೆ ಜಿಲ್ಲಾವಾರು ಬರ ಪರಿಶೀಲನಾ ಸಭೆ ನಡೆಸುವಂತೆ ಸೂಚಿಸಬೇಕು. ಪರ್ಯಾಯ ಬೆಳೆ, ಬಿತ್ತನೆ ಸಲಹೆ, ಬೀಜ, ಮೇವು, ಜಾನುವಾರುಗಳ ಸಂರಕ್ಷಣೆ, ಕುಡಿಯುವ ನೀರು ಹಾಗೂ ತುರ್ತು ಉದ್ಯೋಗ ಸೃಷ್ಟಿಗೆ ಸಮಗ್ರ ಕಾರ್ಯಯೋಜನೆ ರೂಪಿಸಬೇಕು ಎಂದಿದ್ದಾರೆ.

ವಿಬಿ–ಜಿ ರಾಮ್ ಜಿ ಯೋಜನೆಯನ್ನು ಜಾರಿಗೊಳಿಸಿ, ಗ್ರಾಮೀಣ ಪ್ರದೇಶಗಳಲ್ಲಿ ತಕ್ಷಣ ಕಾಮಗಾರಿಗಳನ್ನು ಆರಂಭಿಸಬೇಕು. ವಲಸೆ ಹೋಗುವ ಪರಿಸ್ಥಿತಿ ನಿರ್ಮಾಣವಾಗದಂತೆ ನೋಡಿಕೊಳ್ಳಬೇಕು. ಕುಡಿಯುವ ನೀರಿನ ಬಿಕ್ಕಟ್ಟು ಎದುರಾಗುವ ಗ್ರಾಮಗಳನ್ನು ಗುರುತಿಸಿ, ಟ್ಯಾಂಕರ್, ಕೊಳವೆಬಾವಿ ಪುನಶ್ಚೇತನ, ಪರ್ಯಾಯ ನೀರು ಪೂರೈಕೆ ಮತ್ತು ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿಗೆ ತುರ್ತು ಅನುದಾನ ಬಿಡುಗಡೆ ಮಾಡಬೇಕು ಎಂದು ಅವರು ಪತ್ರದಲ್ಲಿ ಆಗ್ರಹಿಸಿದ್ದಾರೆ.

ಸುಟ್ಟ ಸ್ಥಿತಿಯಲ್ಲಿ ಆರೋಗ್ಯ ನಿರೀಕ್ಷಕನ ಶವ ಪತ್ತೆ

ಚಿತ್ರದುರ್ಗ: ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕಿನ ಲಿಂಗದಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯ ನಿರೀಕ್ಷಕ ಶಿವಮೂರ್ತಿ (47) ಅವರನ್ನು ದುಷ್ಕರ್ಮಿಗಳು ಕೊಲೆ ಮಾಡಿ ತಾಲ್ಲೂಕಿನ ಇಂಗಳದಾಳು ಬಳಿ ಸುಟ್ಟು ಹಾಕಿದ್ದಾರೆ.

ಶಿವಮೂರ್ತಿ, ಚಳ್ಳಕೆರೆ ತಾಲ್ಲೂಕಿನ ಚೌಳೂರು ಗ್ರಾಮದ ನಿವಾಸಿ. ಬುಧವಾರ ಇಂಗಳದಾಳು, ಲಂಬಾಣಿಹಟ್ಟಿ ಬಳಿ ಕೊಳೆತ ವಾಸನೆ ಬರುತ್ತಿತ್ತು. ಸ್ಥಳೀಯರು ಈ ವಿಚಾರವನ್ನು ಪೊಲೀಸರಿಗೆ ತಿಳಿಸಿದ್ದರು. ಪರಿಶೀಲನೆ ನಡೆಸಿದ ಪೊಲೀಸರು ಅಪರಿಚಿತ ಶವ ಪತ್ತೆ ಪ್ರಕರಣ ದಾಖಲಿಸಿದ್ದರು. ವಿಚಾರಣೆ ಮುಂದುವರಿಸಿದಾಗ ಶಿವಮೂರ್ತಿ ಕೊಲೆಯಾಗಿರುವ ವಿಷಯ ಗೊತ್ತಾಗಿದೆ. ಕೊಲೆಗೆ ನಿಖರ ಕಾರಣ ತಿಳಿದುಬಂದಿಲ್ಲ.

'ದುಷ್ಕರ್ಮಿಗಳು ದಾವಣಗೆರೆ ಜಿಲ್ಲೆ ಚನ್ನಗಿರಿ ಬಳಿ ವಾರದ ಹಿಂದೆಯೇ ಕೊಲೆ ಮಾಡಿದ್ದಾರೆ. ಮೃತದೇಹವನ್ನು ಇಂಗಳದಾಳು ಬಳಿ ತಂದು ಸುಟ್ಟು ಹಾಕಿದ್ದಾರೆ. ಆರೋಪಿಗಳ ಪತ್ತೆಗೆ ತಂಡ ರಚಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಜಲಸಂಪನ್ಮೂಲ ಇಲಾಖೆ

ಮುಖ್ಯ ಇಂನಿಯರ್‌ರವರ ಕಛೇರಿ, ಜಲಸಂಪನ್ಮೂಲ ಇಲಾಖೆ, ಆನಂದರಾವ್ ವೃತ್ತ ಬೆಂಗಳೂರು.

ಸಂ: ಜಸಇ/ಇಎಸ್‌ಕ್ಯೂ/2025/ಪ.ಪು/2025 ದಿನಾಂಕ: 02/07/2026

ಪ್ರಕಟಣೆ

ಜಲಸಂಪನ್ಮೂಲ ಇಲಾಖೆಯಲ್ಲಿನ ಶ್ರೀ ಎ.ಪಿ.ದೊಡ್ಡಚನ್ನೇಗೌಡ ಮತ್ತು ಇತರರ ವಿರುದ್ಧ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಬೆಂಗಳೂರು ಇಲ್ಲಿ ದಾಖಲಿಸಿರುವ ಮೇಲ್ಮನವಿ ರಿಟ್ ಅರ್ಜಿ ಸಂ: 14022/2022 ಕುರಿತಂತೆ 40 ಪ್ರತಿವಾದಿಗಳ ಪೈಕಿ ಈ ಕೆಳಕಂಡ ಅಧಿಕಾರಿಗಳ ವಿಳಾಸಗಳು ಲಭ್ಯವಿಲ್ಲದೇ ಇರುವುದರಿಂದ ಅವರುಗಳ ವಿಳಾಸವನ್ನು ಖಚಿತ ಪಡಿಸಿಕೊಂಡು ಮಾಹಿತಿಯನ್ನು ಪ್ರಕಟಿಸಲಾಗಿದೆ. ಸದರಿಯವರು ಈ ಮಾಹಿತಿಯನ್ನು ಪಡೆದ ನಂತರ ತಮ್ಮ ವಿಳಾಸವು ಸರಿ ಇರುವುದರ ಬಗ್ಗೆ ಮುಖ್ಯ ಇಂಜಿನಿಯರ್, ಜಲಸಂಪನ್ಮೂಲ ಇಲಾಖೆ. ಆನಂದರಾವ್ ವೃತ್ತ, ಬೆಂಗಳೂರು ಈ ಕಛೇರಿಗೆ ಅಥವಾ ಸರ್ಕಾರದ ಕಾರ್ಯದರ್ಶಿವರು ಜಲಸಂಪನ್ಮೂಲ ಇಲಾಖೆ ವಿಕಾಸ ಸೌಧ, ಡಾ॥ ಬಿ.ಆರ್ ಅಂಬೇಡ್ಕರ್ ವೀದಿ, ಬೆಂಗಳೂರು ಇವರಿಗೆ ವಿಳಾಸಿಸಿ ಮಾಹಿತಿ ಸಲ್ಲಿಸಬೇಕೆಂದು ಈ ಮೂಲಕ ಕೋರಲಾಗಿದೆ.

SL. No	W.P SL. No	Respondent's Name & Address
1	28	Sri Prakash Sharanappa Alur, Junior Engineer, O/o The Assistant Executive Engineer, Krishna Bhagya Jala Nigama Niyamitha, Sub-division, No.17, Khanapur-591 302, Belagavi District.
2	35	Sri Kedhari M, kuligod, 42 yeras, S/o M.Kuligod.l-t, No.297, Ashraya Colony, Post Alarwad, Taluk & District Belgaum-590 003.
3	71	Sri Kashiranganatha, 47 years, S/o Siddaiah, No.23/24, 5th A Cross, Tigarapalya Main road, Bangalore north, Bangalore-560058.
4	81	Sri Manjunath G.N, 45 Years, S/o Narayanaswamy G.H, No.693/B, 20th Main, 21st Cross, HSR 2nd Sector, Bangalore Urban-560102
5	85	Sri H.R.Ramesha, 47 years, S/o Ramaiah, R/o Amar Yothi Nagar opp to Kannaiah Shetty Thota, Behind Hemavathi Officers And Quarters, Behind Ramakrishna Ashrama, Kunigal Road, Maralur Post. Tumkur-5.
6	89	Sri H.S. Murthy, 42 years, S/o Sarathi Hanumanthappa, Chickjajur post, Holalkere Taluk, Chitradurga District-577 523.
7	116	Sri Kenchana Gowda G.S. 47 Years, S/o Shambhulingappa G. Marikunte Village and post, Jagalur Taluk. Davanagere District.
8	128	Sri K.L. Lokesh, 51 Years, S/o K.Lakke Gowda, No.2164, 8th Main Road, E Block, 2nd stage, Rajajinagar, Bangalore-560 010.
9	145	Sri M.L.Ravi Kumar, 45 Years. S/o Lingegowda, 2nd Cross. NES Extension, Malavalli Town, Mandya District.
10	149	Sri C.Raje Gowda, 49 Years, S/o Late Chikke Gowda, Hodakahalli Village, Kikkeri Hobli Post, K.R.Pet Taluk, Mandya District.
11	160	Sri Thippeswamy, 48 years, S/o Hanumantha Bhowi Halagroo Hiriyur Taluk, Chitradurga District. Chitradurga-577545.
12	165	Sri Ananthkumar H.Choori, C/o H.Y.Choori, Bijapur Taluk And District Bijapur-586127.
13	91	Sri Maharudrappa H.B., 52 Years. S/o H.Basappa, Channapura at Post, Channagiri Taluk, Davanagere District.
14	99	Sri Umesh S.C @ Rebi 47 yesrs, S/o Late Subramanyam, R/a. 31, Near Maruthi School, M.S.Palya, Vidyaranyapura Post, Bangalore.
15	105	105 Sri B.Thippeswamy, S/o Boraiah, R/o MIG 347, Kallahalli Vinobhanagar, Shimoga-577204.
16	106	Sri K.M. Mohan Kumar, 43 years, S/o K.Mahadevappa, No.386, Neethimarga, 15th Main, 2nd Stage Siddarthanagar, Mysore-570001.
17	109	Sri Mahadevappa, 47 years, S/o Phakerappa Hyati, Kidadal Koppal Post, Koppal Taluk, Koppal-583231
18	114	Sri N.Rajagopala Babu, 47 years, S/o P.Nagabhusharam, H.No.584. Subramanya Swamy Temple Street. Oorgaumpet (po). KGF-563 121, Kolar District.
19	126	Sri Sayed Murtuza A Kolhar, 48 Years, S/o Ahmmed Saheb I, Kolhar, No. 18. 1st Floor, 3rd Main Road. Bhairaveshwara Nagar. Nagarbhavi Main Road, Bangalore-560072.
20	132	Sri V.L.Jayaram, S/o Venkatappa K.T, No.1807, 7TH A main E Block, 2nd stage, Rajajinagar, Bangalore-560 010.
21	148	Sri K.L. Manjunath, 46 Years, S/o Lakkashetty Gowda, Kothanaghatta, Shravanabelagola Houli, Channarayapatna Taluk, Hassan District.
22	158	Sri Ravindra Reddy @ Patil Ravindra Reddy, S/o Basavarajappa, C/o H.K.Patil, R/o Hothpet, Taluk.
23	164	Sri Revanasiddayya, House No-1-11-337-73, Mruthyunjaya Nilaya, Karntaka Housing Co-operative Society Colony, Near Lions School, Raichur-584101.

ಸಹಿ/– ಮುಖ್ಯ ಇಂಜಿನಿಯರ್
ಜಸಂ. ಇಲಾಖೆ, ಬೆಂಗಳೂರು–9.

DIPR/CP/VCPL/1431/2026-27

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಯ & ಪಾಲನಾ ವೃತ್ತ,
ಚಾವಿಸನಿನಿ, ಮಂಡ್ಯ–571401
Telephone No: 9449598633

CHAMUNDESHWARI ELECTRICITY SUPPLY CORPORATION LIMITED
(A Government of Karnataka Undertaking)
O&M Circle, CESC, Mandya-571401
Web Site: www.cescmysore.org
Email ID: seemdy@cescmysore.org

Company Identity Number [CIN]:- U40109KA2004SGC035177

ಸಂಖ್ಯೆ:ಅಇಂ/ಕಾಇಂ(ಕ)/ಸಕಾಇಂ(ಕ)/ಸಇಂ(ತಾಂ)ಕ–41/2026–27/1375 ದಿನಾಂಕ:01.07.2026

ಇ–ಹರಾಜು ಪ್ರಕಟಣೆ (ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)

ಚಾವಿನಸನಿನಿ, ಮಂಡ್ಯ ವೃತ್ತ ವ್ಯಾಪ್ತಿಯ ವಿಭಾಗೀಯ ಉಗ್ರಾಣಗಳಲ್ಲಿ ದಾಸ್ತಾನಿರುವ ರದ್ದಿ ವಿತರಣಾ ಪರಿವರ್ತಕಗಳು ಹಾಗೂ ಇತರೆ ಸಾಮಗ್ರಿಗಳನ್ನು 'AS IS WHERE IS BASIS' ಆಧಾರದ ಮೇಲೆ ಇ–ಹರಾಜು ವಿಲೇವಾರಿ ಮಾಡಲು ಬಿಡ್ ಆಹ್ವಾನಿಸಿದೆ. ರದ್ದಿ ಸಾಮಗ್ರಿಗಳ ಪರಿಮಾಣ ಮತ್ತು ಇತರೆ ವಿವರಗಳನ್ನು ಹಾಗೂ ಹರಾಜಿನ ದಿನಾಂಕ, ಸಮಯ ಮತ್ತು ಅರ್ಹ ಬಿಡ್‌ದಾರರು ಸದರಿ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಗ್ಗೆ ವಿವರಗಳನ್ನು https://kppp.karnataka.gov.in ನಲ್ಲಿ ದಿನಾಂಕ : 06.07.2026 ಅಥವಾ ನಂತರ ಪಡೆಯಬಹುದಾಗಿರುತ್ತದೆ. ಇ–ಪೋರ್ಟಲ್‌ನ ಬಗ್ಗೆ ಮಾಹಿತಿಗಾಗಿ ಸಹಾಯವಾಣಿ +91–8046010000, +91–8068948777 ಅಥವಾ ಇ–ಮೇಲ್ ವಿಳಾಸ support@eprochelpdesk.com ಗೆ ಸಂಪರ್ಕಿಸಬಹುದಾಗಿದೆ ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ: 1912

ಸಹಿ/–ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ,ಚಾವಿಸನಿನಿ, ಮಂಡ್ಯ.

ವಾಸಾಸಂಇ/ಹಿಸನಿ–ಮಂ/ಕೆಎಸ್‌ಎಂಸಿ&ಎ/242/2025–26

ಕರ್ನಾಟಕ ಸರಕಾರ

ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ,ಕನಕದಾಸ ಬಡಾವಣೆ, ವಿಜಯಪುರ.

ದೂರವಾಣಿ ಸಂಖ್ಯೆ: 08352–276932, ಇ–ಮೇಲ್: dobcmbijapura@gmail.com

ಸಂ: ಹಿಂವಕಇ/ಹೊ.ಸಂ.ಟೆ/ಸಿಆರ್–01/2026–27 ದಿನಾಂಕ:30.06.2026

ಕೆಪಿಪಿಪಿ ಮರು–ಟೆಂಡರ್ ಪ್ರಕಟಣೆ (Inviting Re-Tender through KPPP)

2026–27 ನೇ ಸಾಲಿಗೆ ವಿಜಯಪುರ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯ/ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಖಾಲಿ ಇರುವ ಅಡುಗೆಯವರು, ಅಡುಗೆ ಸಹಾಯಕರು ಮತ್ತು ಕಾವಲುಗಾರರು ಸ್ವಚ್ಚತ ಸಿಬ್ಬಂದಿ, ಜವಾನರು ಹಾಗೂ ಜಿಲ್ಲಾ ಕಛೇರಿ ಮತ್ತು ತಾಲ್ಲೂಕು ಕಛೇರಿಯಲ್ಲಿ ಖಾಲಿ ಇರುವ ಡಾಟಾ ಎಂಟ್ರಿ ಆಪರೇಟರ್‌ಗಳ/ ಸಿಬ್ಬಂದಿಗಳ ಸೇವೆಯನ್ನು ಹೊರಸಂಪನ್ಮೂಲದ ಏಜೆನ್ಸಿ ಮುಖಾಂತರ ಪಡೆಯುವ ಬಗ್ಗೆ ಒಂದು ವರ್ಷದ ಮರು ಟೆಂಡರ್ ಪ್ರಕಟಣೆ.

1	ಕೆಪಿಪಿಪಿ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ	BCWD/2025-26/SE0122/CALL-2 Date:24.06.2026
2	ಟೆಂಡರ್ ಪ್ರಕಟಣೆ ದಿನಾಂಕ	ಸಂಖ್ಯೆ: ಹಿಂವಕಇ/ಮರು ಹೊ.ಸಂ.ಟೆ/ಸಿ.ಆರ್–01/2026–27 ದಿನಾಂಕ : 24.06.2026
3	ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ ಮತ್ತು ಇ.ಎಂ.ಡಿ.	ರೂ. 809.37 ಲಕ್ಷಗಳು & ಇ.ಎಂ.ಡಿ 8.10 ಲಕ್ಷಗಳು
4	ಸಂಭಾವ್ಯ ಬಿಡ್‌ದಾರರೊಂದಿಗೆ ಪೂರ್ವಭಾವಿ ಸಭೆ (ಪ್ರಿ ಬಿಡ್ ಮೀಟಿಂಗ್) ದಿನಾಂಕ ಮತ್ತು ಸಮಯ	ದಿನಾಂಕ: 13.07.2026, 11.00 ಗಂಟೆಗೆ
5	ಟೆಂಡರ್ ಸಲ್ಲಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 31.07.2026, 17.00 ಗಂಟೆಗೆ
6	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ: 03.08.2026, 11.00 ಗಂಟೆಗೆ
7	ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ: 11.08.2026, 11.00 ಗಂಟೆಗೆ (ಬದಲಾವಣೆಗೆ ಒಳಪಟ್ಟಿರುತ್ತದೆ.)
8	ಪ್ರೀ–ಬಿಡ್ ಸಭೆ ನಡೆಯುವ ತಾಂತ್ರಿಕ ಹಾಗೂ ಆರ್ಥಿಕ ಬಿಡ್ ತೆರೆಯುವ ಹಾಗೂ ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ಸ್ಥಳ	ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನಕದಾಸ ಬಡಾವಣೆ, ಜಿಲ್ಲಾ ಪಂಚಾಯತ ಆವರಣ, ವಿಜಯಪುರ – 586109. ದೂರವಾಣಿ ಸಂಖ್ಯೆ: 08352–276932

ಆಸಕ್ತಿ ಹೊಂದಿರುವ ಬಿಡ್‌ದಾರರು ಮಾಹಿತಿಯನ್ನು https://kppp.karnataka.gov.in ವೆಬ್ ಸೈಟ್‌ನಲ್ಲಿ ಪಡೆಯಬಹುದಾಗಿದೆ.

ಸಹಿ/– ಜಿಲ್ಲಾ ಅಧಿಕಾರಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಿಜಯಪುರ

ವಾಸಾಸಂಇ/ವಿಜಯಪುರ/183/ಕೆಎಸ್‌ಎಂಸಿಎ/2026–27

ಚಿಟಿಕೆ ಸುದ್ದಿ

ಪಿ.ಆರ್.ದರೋಜ್‌ಗೆ 'ನಂಜುಂಡರಾವ್ ರಾಷ್ಟ್ರೀಯ ಪ್ರಶಸ್ತಿ'

ಬೆಂಗಳೂರು:ಕರ್ನಾಟಕ ಚಿತ್ರಕಲಾ ಪರಿಷತ್ತು ನೀಡುವ 'ಪ್ರೊ.ಎಂ.ಎಸ್. ನಂಜುಂಡರಾವ್ ರಾಷ್ಟ್ರೀಯ ಪ್ರಶಸ್ತಿ'ಗೆ ಕಲಾವಿದ ಪಿ.ಆರ್. ದರೋಜ್ ಆಯ್ಕೆಯಾಗಿದ್ದಾರೆ.



ಪಿ.ಆರ್. ದರೋಜ್

ಈ ಪ್ರಶಸ್ತಿಯು ₹1 ಲಕ್ಷ ನಗದು ಹಾಗೂ ಫಲಕವನ್ನು ಒಳಗೊಂಡಿದೆ. ತೆಲಂಗಾಣದ ಪಿ.ಆರ್. ದರೋಜ್ ಅವರು ದೇಶದ ಪ್ರಸಿದ್ಧ ಸೆರಾಮಿಕ್ (ಪಿಂಗಾಣಿ) ಕಲಾವಿದರಾಗಿದ್ದಾರೆ.

ಪರಿಷತ್ತು ಇದೇ 5ರಂದು ಬೆಳಿಗ್ಗೆ 11.30ಕ್ಕೆ, ಕುಮಾರಕೃಪಾ ರಸ್ತೆಯಲ್ಲಿರುವ ತನ್ನ ಕೇಂದ್ರದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಂಡಿದೆ. ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

ಭದ್ರಾ ನೀರು ಕುಡಿಯಲು ಮಾತ್ರ

ಚಿಕ್ಕಮಗಳೂರು: ಭದ್ರಾ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಪ್ರಸ್ತುತ ಮಳೆ ಕೊರತೆಯಿಂದಾಗಿ ಭದ್ರಾ ಜಲಾಶಯದಲ್ಲಿ ನೀರು ಸಂಗ್ರಹವಾಗಿಲ್ಲ. ಆದ್ದರಿಂದ ಮುಂಗಾರು ಹಂಗಾಮಿನ ಬೆಳೆಗಳಿಗೆ ಬಲದಂಡೆ ಮತ್ತು ಎಡದಂಡೆ ನಾಲೆಯಲ್ಲಿ ನೀರು ಹರಿಸಲು ಸಾಧ್ಯವಾಗುವುದಿಲ್ಲ ಎಂದು ಭದ್ರಾ ಯೋಜನಾ ವೃತ್ತದ ಸೂಪರಿಂಟೆಂಡೆಂಟ್ ಎಂಜಿನಿಯರ್ ತಿಳಿಸಿದ್ದಾರೆ.

ಪ್ರಸ್ತುತ ಜಲಾಶಯದಲ್ಲಿ ಸಂಗ್ರಹವಾಗಿರುವ ನೀರನ್ನು ಕುಡಿಯಲು ಮಾತ್ರ ಬಳಸುವಂತೆ ಸರ್ಕಾರ ಆದೇಶಿಸಿದೆ. ಆದ್ದರಿಂದ ಅಚ್ಚುಕಟ್ಟು ಭಾಗದ ಎಲ್ಲ ರೈತರು ಇಲಾಖೆ ಜತೆಗೆ ಸಹಕರಿಸಬೇಕು ಎಂದು ಅವರು ಹೇಳಿದ್ದಾರೆ.

ಮುಂದಿನ ದಿನಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮಳೆಯಾಗಿ ಜಲಾಶಯ ಭರ್ತಿಯಾದರೆ ನೀರಾವರಿ ಸಲಹಾ ಸಮಿತಿ ಸಭೆ ಆಯೋಜಿಸಿ ಬೆಳೆಗಳಿಗೆ ನೀರು ಹರಿಸುವ ಕುರಿತು ತೀರ್ಮಾನ ಕೈಗೊಳ್ಳಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ವಿವರಿಸಿದ್ದಾರೆ.

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೬೧ / Volume 161
ಬೆಂಗಳೂರು, ಬುಧವಾರ, ೨೪, ಜೂನ್, ೨೦೨೬ (ಆಷಾಡ ೦೩, ಶಕವರ್ಷ, ೧೯೪೮)
Bengaluru, Wednesday, 24,June 2026 (Ashadha, 03, Shakavarsha 1948)
ಸಂಚಿಕೆ ೧೨೨ / Issue 122

ಭಾಗ ೩

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ನಮೂನೆ–V

ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು.

[ಕರ್ನಾಟಕ ತಿದ್ದುಪಡಿ ನಿಯಮ–5, 20(1) (ಬಿ)]

ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ–2013 ಕಲಂ–11(1) ರೆ ಮೇರೆಗೆ ಅಧಿಸೂಚನೆ.

ಸಂಖ್ಯೆ: KHB/SLAO/ACQ/68/2026 (E-290080) ದಿನಾಂಕ: 12.06.2026

ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ವಸತಿ ಯೋಜನೆಗಾಗಿ ದಾವಣಗೆರೆ ಜಿಲ್ಲೆ, ಜಗಳೂರು ತಾಲ್ಲೂಕು, ಕಸಬಾ ಹೋಬಳಿ, ಮರೇನಹಳ್ಳಿ, ಗ್ರಾಮಗಳ ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿರುವ ಜಮೀನುಗಳ ಸ್ವಾಧೀನತೆಯ ಅವಶ್ಯಕತೆ ಇರುತ್ತದೆಯೆಂದು ಸರ್ಕಾರವು ಭಾವಿಸುತ್ತದೆ. ಈ ಯೋಜನೆಗೆ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ–2013 (2013 ರ ಕೇಂದ್ರ ಅಧಿನಿಯಮ ಸಂಖ್ಯೆ 30) ಕ್ಕೆ ಅನುಗುಣವಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ದಿನಾಂಕ:– 23–07–2019 ರಿಂದ ಜಾರಿಗೆ ಬಂದಿರುವ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು ಪುನರ್ ವಸತಿ ಮತ್ತು ಪುನರ್ ನಿರ್ಮಾಣ (ಕರ್ನಾಟಕ ತಿದ್ದುಪಡಿ) ಕಾಯ್ದೆ–2019 (2019 ರ ಕರ್ನಾಟಕ ಅಧಿನಿಯಮ ಸಂಖ್ಯೆ 16) ರ ಕಲಂ–10(ಎ) ರಡಿ ಮೂಲ ಕಾಯ್ದೆಯ ಅಧ್ಯಾಯ II & III ರಲ್ಲಿನ ಉಪಬಂಧಗಳನ್ನು ಅನ್ವಯಿಸುವುದರಿಂದ ವಿನಾಯಿತಿ ನೀಡಿ **ಸರ್ಕಾರದ ಸಂಖ್ಯೆ:– ಕಂಇ 27 ಎಕ್ಯೂಸಿ 2026 ದಿ:–02–05–2026**ರಲ್ಲಿ ಸರ್ಕಾರದ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಈ ಅಧಿಸೂಚನೆ **ರಾಜ್ಯ ಪತ್ರದಲ್ಲಿ ದಿನಾಂಕ: 08–05–2026ರಂದು** ಪ್ರಕಟವಾಗಿರುತ್ತದೆ.

ಆದುದರಿಂದ ಈ ಮೂಲಕ ತಿಳಿಸುವುದೇನೆಂದರೆ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ–2013 (2013 ರ ಕೇಂದ್ರ ಅಧಿನಿಯಮ ಸಂಖ್ಯೆ 30)ರ ಕಲಂ 12 ರ ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರಿಗೆ ಅಧಿಕಾರ ನೀಡಲಾಗಿದೆ.

ಈ ಜಮೀನುಗಳ ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟ ಮೋಜಣಿದಾರರಿಗಾಗಲಿ ಅಥವಾ ಈ ಕೆಲಸ ಮಾಡುವವರಿಗಾಗಲೀ ಯಾರೂ ಅಡ್ಡಿ ಮಾಡಕೂಡದೆಂದು ಎಚ್ಚರಿಸಲಾಗಿದೆ. ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ,ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣದ ಕಾಯ್ದೆ–2013 (2013ರ ಕೇಂದ್ರ ಅಧಿನಿಯಮದ ಸಂಖ್ಯೆ 30) ರ ಕಲಂ–11(1) ಮೇರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರಿ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ ಬೋಗಕ್ಕೆ, ಅಡವಿಡುವ, ಅನುಭವಿಸುವ, ಬದಲಾಯಿಸುವ ಅಥವಾ ಇನ್ನೂ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದಂತೆ ನಿರ್ಬಂದಿಸಿದೆ. ಅಂತಹ ಯಾವುದೇ ಕ್ರಮ ಅಥವಾ ಇನ್ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಲ್ಲಿ ಅದನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೇ ಅಂತಿಮವಾಗಿ ಸದರಿ ಕಾಯ್ದೆಯನ್ವಯ ಭೂ ಸ್ವಾಧೀನಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ–2013 (2013 ರ ಕೇಂದ್ರ ಅಧಿನಿಯಮ ಸಂಖ್ಯೆ 30) ರ ಕಲಂ 15(1) ರ ಮೇರೆಗೆ ಆಸಕ್ತಿಯುಳ್ಳವರು ತಮ್ಮ ಆಕ್ಷೇಪವಿದ್ದಲ್ಲಿ ಆಕ್ಷೇಪಣೆಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನಗಳೊಳಗಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸಬೇಕು. ತದನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಯಾವುದೇ ಮುನ್ಸೂಚನೆ ನೀಡದೇ ವಿಲೇಯಕ್ಕೆ ಹಾಕಲಾಗುವುದು.

ಸದರಿ ಪ್ರಕರಣದಲ್ಲಿ ಭೂಸ್ವಾಧೀನಕ್ಕೆ ಒಳಪಡುವ ಜಮೀನಿನ ಒಂದು ನಕ್ಷೆಯನ್ನು ವಿಶೇಷ ಭೂಸ್ವಾಧೀನಾಧಿಕಾರಿ–2, ಕರ್ನಾಟಕ ಗೃಹ ಮಂಡಳಿ ಬೆಂಗಳೂರು ಇವರ ಕಾರ್ಯಾಲಯದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ.

ಅನುಸೂಚಿ

ಜಿಲ್ಲೆ : ದಾವಣಗೆರೆ | ತಾಲ್ಲೂಕು: ಜಗಳೂರು | ಹೋಬಳಿ: ಕಸಬಾ | ಗ್ರಾಮ : ಮರೇನಹಳ್ಳಿ

ಕ್ರ. ಸಂ.	ಪಹಣಿಯಂತೆ ಖಾತೆದಾರರ ಹೆಸರು		ಸರ್ವೆ / ಖಾತಾ ನಂಬರ್	ಸರ್ವೆ/ಖಾತಾ ನಂಬರಿನಲ್ಲಿನ ಒಟ್ಟು ವಿಸ್ತೀರ್ಣ (ಪಹಣಿ/ಉತ್ತಾರ ಅನ್ವಯ)		ಭೂ ಸ್ವಾಧೀನಕ್ಕೊಳಪಡುವ ಒಟ್ಟು ವಿಸ್ತೀರ್ಣ		ತರಹೆ	ಚಕ್ಕುಬಂದಿ / ಸರಹದ್ದು				ಷರಾ
	ಭೂಮಾಲೀಕರು/ಹಿಡುವಳಿದಾರರ ಹೆಸರು	ಅನುಭವದಾರರ ಹೆಸರು		ಕೃಷಿ / ಕೃಷಿಯೇತರ ಜಮೀನು (ಎ–ಗುಂ)	ಖರಾಬು (ಎ–ಗುಂ)	ಕೃಷಿ / ಕೃಷಿಯೇತರ ಜಮೀನು (ಎ–ಗುಂ)	ಖರಾಬು (ಎ–ಗುಂ)		ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	
1	2	3	4	5	6	7	8	9	10	11	12	13	14
1.	ಶ್ರೀ ಕೆ.ಸಿ ಸಿದ್ದೇಶ್ ಬಿನ್ ಲೇಟ್ ಚನ್ನಪ್ಪ	ಶ್ರೀ ಕೆ.ಸಿ ಸಿದ್ದೇಶ್ ಬಿನ್ ಲೇಟ್ ಚನ್ನಪ್ಪ	17/1	01–32	0–00.08	01–32	0–00.08	ಖುಷ್ಕಿ	ಸ ನಂ. 15	ಸ ನಂ. 19/2ಎ	ಸ ನಂ. 18/2, 3 , 4, 5	ಸ ನಂ. 17/4	
2.	ಶ್ರೀ ಕೆ.ಸಿ ಶಂಭುಲಿಂಗಪ್ಪ ಬಿನ್ ಲೇಟ್ ಚನ್ನಪ್ಪ	ಶ್ರೀ ಕೆ.ಸಿ ಶಂಭುಲಿಂಗಪ್ಪ ಬಿನ್ ಲೇಟ್ ಚನ್ನಪ್ಪ	17/4	01–31.08	0–00.08	01–31.08	0–00.08	ಖುಷ್ಕಿ	ಸ ನಂ. 15	ಸ ನಂ. 19/2ಎ	ಸ ನಂ. 17/1	ಸ ನಂ. 17/5	
3.	ಶ್ರೀ ಕೆ.ಸಿ ನಾಗರಾಜು ಬಿನ್ ಲೇಟ್ ಚನ್ನಪ್ಪ	ಶ್ರೀ ಕೆ.ಸಿ ನಾಗರಾಜು ಬಿನ್ ಲೇಟ್ ಚನ್ನಪ್ಪ	17/5	01–32	0–00.08	01–32	0–00.08	ಖುಷ್ಕಿ	ಸ ನಂ. 15	ಸ ನಂ. 19/2ಎ & 19/3	ಸ ನಂ. 17/4	ಸ ನಂ. 17/6	
ಒಟ್ಟು						05–15	0–01.08						

(ವಿ.ಸೂ: ಅಧಿಸೂಚನೆಯಲ್ಲಿ ತಿಳಿಸಿರುವಂತೆ ಆಸಕ್ತಿಯುಳ್ಳವರು ತಮ್ಮ ಆಕ್ಷೇಪಣಾ ಅರ್ಜಿಯಲ್ಲಿ ಅಂಚೆ ವಿಳಾಸ ಮತ್ತು ಮೊಬೈಲ್ ನಂಬರನ್ನು ತಪ್ಪದೇ ಸ್ಪಷ್ಟವಾಗಿ ನಮೂದಿಸಿ ಸಲ್ಲಿಸುವುದು)

ಘೋಷ್ವಾರೆ

ತರಹೆ	ವಿಸ್ತೀರ್ಣ (ಎ–ಗು)		ಖರಾಬು (ಎ–ಗು)		ಒಟ್ಟು ವಿಸ್ತೀರ್ಣ (ಎ–ಗು)	
ಮರೇನಹಳ್ಳಿ	05	15	00	01.08	05	16.08

ಸಹಿ/– ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ,
ಬೆಂಗಳೂರು.

DIPR/CP/RO1435/AAPL/2026-27

ವಿದ್ಯುತ್ ಸಂಪರ್ಕ: ಆ.15ರವರೆಗೆ ಅವಕಾಶ

ರಾಜ್ಯದಾದ್ಯಂತ ಮನವಿಗೆ ಸ್ಪಂದನೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇದೇ ವರ್ಷ ಮೇ 31ರ ಒಳಗೆ ಪೂರ್ಣಗೊಂಡಿರುವ ಎಲ್ಲ ವಸತಿ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಸ್ವಾಧೀನಾನುಭವ ರಪ್ರಮಾಣಪತ್ರದಿಂದ (ಒ.ಸಿ) ವಿನಾಯಿತಿ ನೀಡಲಾಗಿದ್ದು, ಅರ್ಜಿ ಸಲ್ಲಿಸಲು ಆಗಸ್ಟ್ 15ರವರೆಗೆ ಅವಕಾಶ ನೀಡಲಾಗುವುದು' ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಗುರುವಾರ ನಡೆದ ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಒ.ಸಿ ಸಿ.ಸಿ ಸಂಬಂಧಿಸಿದಂತೆ ವಿನಾಯಿತಿ ನೀಡಬೇಕು ಎಂದು ರಾಜ್ಯದ ಎಲ್ಲ ಕಡೆಗಳಿಂದ ಮನವಿ ಬಂದಿತ್ತು. ಹೀಗಾಗಿ ಅವಕಾಶ ಕಲ್ಪಿಸಿದ್ದೆವು. ವಿದ್ಯುತ್ ಸಂಪರ್ಕಕ್ಕೆ ಅರ್ಜಿ ಸಲ್ಲಿಸಲು ಹೆಚ್ಚಿನ ಕಾಲಾವಕಾಶ ನೀಡಬೇಕೆಂದು ಕೆಲವರು ಮನವಿ ಮಾಡಿದ್ದಾರೆ' ಎಂದರು.

ವಾಣಿಜ್ಯ ಕಟ್ಟಡಗಳಿಗೂ ವಿನಾಯಿತಿ ನೀಡಬೇಕೆಂಬ ಬೇಡಿಕೆ ಬಗ್ಗೆ ಕೇಳಿದಾಗ, 'ಬೇಕಾದಷ್ಟು ಬೇಡಿಕೆಗಳು ಇರುತ್ತವೆ. ಆದರೆ, ಸುಪ್ರೀಂ ಕೋರ್ಟ್ ತೀರ್ಪು ಗಮನದಲ್ಲಿ ಇಟ್ಟುಕೊಂಡು ಕೆಲಸ ಮಾಡಬೇಕಲ್ಲವೇ' ಎಂದರು.

ವಾರ್ಷಿಕ ₹ 3,806 ಕೋಟಿ ಹೊರೆ: 'ಕೇಂದ್ರ ಸರ್ಕಾರ ಜಾರಿಗೆ ತಂದಿರುವ 'ವಿಬಿ ಜಿ ರಾಮ್ ಜಿ' ಯೋಜನೆಯ ವಿರುದ್ಧ ನಾವು ಕೋರ್ಟ್ ಮೆಟ್ಟಿಲು ಏರಿದ್ದೇವೆ. ಯೋಜನೆಯಲ್ಲಿ ಶೇ 40 ರಷ್ಟು ವೆಚ್ಚ ಭರಿಸಲು ಸಾಧ್ಯವಿಲ್ಲ ಎಂದೂ ಹೇಳಿದ್ದೇವೆ. ಷರತ್ತಿನ ಆಧಾರದಲ್ಲಿ ಯೋಜನೆ ಜಾರಿ ಮಾಡಬೇಕಾಗಿದೆ. ನಮ್ಮ ರಾಜ್ಯಕ್ಕೆ ಇದರಿಂದ ವಾರ್ಷಿಕ ₹ 3,806 ಕೋಟಿ ಹೊರೆ ಬೀಳಲಿದೆ' ಎಂದು ಮುಖ್ಯಮಂತ್ರಿ ಹೇಳಿದರು.

'ಪಂಚಾಯಿತಿಗಳಲ್ಲೂ ದಾಖಲೆ ಶುದ್ಧೀಕರಣಕ್ಕೆ ಭೂ ಗ್ಯಾರಂಟಿ ನೀಡಲಾಗುತ್ತಿದೆ. ಹೀಗಾಗಿ ಎಲ್ಲ ರಸ್ತೆಗಳನ್ನು ಸರ್ಕಾರಿ ರಸ್ತೆ



ಗಳಾಗಿ ಘೋಷಿಸಲು ತೀರ್ಮಾನಿಸಲಾಗಿದೆ. ಇದಕ್ಕಾಗಿ ಕಾನೂನು ಅವಕಾಶ ಮಾಡಿಕೊಡುತ್ತೇವೆ' ಎಂದರು.

ವರದಿ ಪಡೆದು ಬಸ್ ದರ ಏರಿಕೆ: 'ಬಸ್ ಪ್ರಯಾಣ ದರ ಹೆಚ್ಚಳದ ಬಗ್ಗೆ ಚರ್ಚೆ ಮಾಡಲಾಗಿದೆಯೇ' ಎಂಬ ಪ್ರಶ್ನೆಗೆ, 'ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಾಗಿದ್ದು, ಈ ವಿಚಾರದಲ್ಲಿ ಅಧಿಕಾರಿಗಳು ಗಾಬರಿ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಪ್ರಸ್ತಾವ ಸಲ್ಲಿಸುವಂತೆ ಅಧಿಕಾರಿಗಳಿಗೆ ಹೇಳಿದ್ದೇವೆ. ತಾಂತ್ರಿಕವಾಗಿ ಎಷ್ಟು ನಷ್ಟವಾಗುತ್ತಿದೆ ಎಂದು ಪರಿಶೀಲಿಸಿ ದರ ಹೆಚ್ಚಿಸುವ ಬಗ್ಗೆ ತೀರ್ಮಾನಿಸುತ್ತೇವೆ' ಎಂದರು.

ವಿದೇಶಿ ಹೂಡಿಕೆ ಸಚಿವಾಲಯದ ಬಗ್ಗೆ ಕೇಳಿದಾಗ, 'ಅದಕ್ಕೆ ಹೊಸರೂಪ ನೀಡಲಾಗುತ್ತಿದೆ. ಸಚಿವ ಜಿ. ಪರಮೇಶ್ವರ ನೇತೃತ್ವದಲ್ಲಿ ಸಮಿತಿ ರಚಿಸಿದ್ದು, ಈ ಕುರಿತ ಸಲಹೆಗಳನ್ನು ಸಂಗ್ರಹಿಸಿ ಸಮಿತಿಯು ಮುಂದಿನ ಸಚಿವ ಸಂಪುಟಕ್ಕೆ ವರದಿ ನೀಡಲಿದೆ' ಎಂದರು.

ಸಂಪುಟದ ಪ್ರಮುಖ ನಿರ್ಣಯಗಳು:

- ರಾಷ್ಟ್ರೀಯ ಅಂಧತ್ವ ನಿಯಂತ್ರಣ ಯೋಜನೆಯಡಿ ಸಣ್ಣ ಮಕ್ಕಳಲ್ಲಿ ದೃಷ್ಟಿ ಆರೈಕೆ ಬಲಪಡಿಸಲು ₹26 ಕೋಟಿ ಅನುದಾನ
- ಬಾಗಲಕೋಟೆಯ ಬೀಳಗಿ ತಾಲ್ಲೂಕಿನಲ್ಲಿ ಕೃಷ್ಣಾ ನದಿಯಿಂದ 7 ಸಾವಿರ ಎಕರೆ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಲು ಬೀಳಗಿ ಏತ ನೀರಾವರಿ ಯೋಜನೆಗೆ ₹98.50 ಕೋಟಿ ನೀಡಲು ಸಹಮತಿ
- ಕಲಬುರಗಿಯಲ್ಲಿ ವಾಣಿಜ್ಯ ಹಾಗೂ ಕೈಗಾರಿಕೆ ಇಲಾಖೆಯಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜಂಟಿ ಸಹಕಾರದಲ್ಲಿ ಜವಳಿ ಪಾರ್ಕ್ ನಿರ್ಮಾಣಕ್ಕೆ ಕೆಐಎಡಿಬಿ ವತಿಯಿಂದ ₹700 ಕೋಟಿ ವೆಚ್ಚದ ಯೋಜನೆ. ಮೊದಲ ಹಂತಕ್ಕೆ ₹320 ಕೋಟಿ ನೀಡಲು ಒಪ್ಪಿಗೆ
- ಎನ್‌ಜಿಇಎಫ್‌ನಲ್ಲಿ 60 ಎಕರೆ ಜಾಗದಲ್ಲಿ ಟ್ರೀ ಪಾರ್ಕ್ ನಿರ್ಮಾಣಕ್ಕೆ ₹ 26 ಕೋಟಿ ಅನುದಾನ ಮೀಸಲಿಡಲು ತೀರ್ಮಾನ
- ಅಲ್ಪಸಂಖ್ಯಾತರ ಇಲಾಖೆಯಿಂದ ಕ್ರೀಡಾ ಉಡುಪು, ವಿದ್ಯಾರ್ಥಿ ಸಾಮಗ್ರಿ ವಿತರಣೆಗೆ ₹ 33 ಕೋಟಿ ಅನುದಾನಕ್ಕೆ ಅನುಮೋದನೆ
- ದೇವನಹಳ್ಳಿಯಲ್ಲಿ ಏರೋಸ್ಪೇಸ್ ಪಾರ್ಕ್‌ನಲ್ಲಿ ವಾಣಿಜ್ಯ ಹಾಗೂ ಕೈಗಾರಿಕೆ ಇಲಾಖೆಯಿಂದ 'ಕಾಮನ್ ಫೆಸಿಲಿಟಿ ಸೆಂಟರ್' ಮಾಡಲು ₹30 ಕೋಟಿ ಅನುದಾನ ನೀಡಲು ಕೆಐಎಡಿಬಿಗೆ ಅನುಮತಿ
- ಅಂಗವಿಕಲರ ಹಕ್ಕು ಕಾಯ್ದೆ ಅನ್ವಯ ಅಂಗವಿಕಲರಿಗೆ ಕೆಐಎಡಿಬಿಯಲ್ಲಿ ಶೇ 5 ಭೂ ಮೀಸಲಾತಿ ರಿಯಾಯಿತಿಗೆ ಕಾನೂನು ತರಲಾಗಿತ್ತು. ಈಗ ಅವರಿಗೆ ಎರಡು ಆಯ್ಕೆ ನೀಡಿದ್ದು, ಭೂಮಿ ಮೌಲ್ಯದ ಶೇ 10 ಅಥವಾ ಗರಿಷ್ಠ ₹20 ಲಕ್ಷದವರೆಗೆ ರಿಯಾಯಿತಿ ಮಿತಿ

ಆಗಸ್ಟ್‌ನಲ್ಲಿ ವಿಧಾನಮಂಡಲ ಅಧಿವೇಶನ

'ಪ್ರಸಕ್ತ ಸಾಲಿನ ಮುಂಗಾರು ಅಧಿವೇಶನವನ್ನು ಇದೇ ತಿಂಗಳಲ್ಲಿ (ಜುಲೈ) ಕರೆಯಬೇಕಾಗಿತ್ತು. ಆದರೆ, ರಾಜ್ಯದಲ್ಲಿ ಎಸ್‌ಐಆರ್ ನಡೆಯುತ್ತಿರುವ ಕಾರಣ ಆಗಸ್ಟ್ ಎರಡನೇ ಅಥವಾ ಮೂರನೇ ವಾರದಲ್ಲಿ ಕರೆಯಲು ನಿರ್ಣಯಿಸಲಾಗಿದೆ' ಎಂದು ಮುಖ್ಯಮಂತ್ರಿ ತಿಳಿಸಿದರು.

'ಎಸ್‌ಐಆರ್ ಕೆಲಸದಲ್ಲಿ ಅಧಿಕಾರಿಗಳು ತೊಡಗಿಸಿಕೊಂಡಿದ್ದಾರೆ. ಶಾಸಕರು ತಮ್ಮ ಕ್ಷೇತ್ರದ ಮತದಾರರ ರಕ್ಷಣೆ ಮಾಡಿಕೊಳ್ಳಬೇಕಾಗಿದೆ. ಅವರಿಗೆ ತೊಂದರೆಯಾಗುವುದು ಬೇಡವೆಂದು ತೀರ್ಮಾನಿಸಿದ್ದು, ಚುನಾವಣಾ ಆಯೋಗವು ಆಗಸ್ಟ್ 5 ರಂದು ಕರಡು ಮತದಾರರ ಪಟ್ಟಿ ಬಿಡುಗಡೆ ಮಾಡಲಿದೆ. ಹೀಗಾಗಿ, ಆಗಸ್ಟ್ ಮೊದಲ ಅಥವಾ ಎರಡನೇ ವಾರದಲ್ಲಿ ಅಧಿವೇಶನ ನಡೆಸಲು ದಿನ ನಿಗದಿ ಮಾಡಲಾಗುವುದು' ಎಂದರು.

ಸುದ್ದಿ 2 ನಿಮಿಷ

ಹೋರಾಟದಿಂದ ಹಿಂದೆ ಸರಿಯುವಂತೆ ಆಮಿಷ, ಬೆದರಿಕೆ

ಶಿವಮೊಗ್ಗ: 'ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ವಿರುದ್ಧದ ಹೋರಾಟದಿಂದ ಹಿಂದೆ ಸರಿಯುವಂತೆ ಹಣದ ಆಮಿಷ, ಬೆದರಿಕೆ ಸೇರಿದಂತೆ ವಿವಿಧ ರೀತಿಯ ಒತ್ತಡಗಳನ್ನು ಹೇರಲಾಗುತ್ತಿದೆ. ಏನೇ ಆದರೂ ಹೋರಾಟದಿಂದ ಹಿಂದೆ ಸರಿಯುವುದಿಲ್ಲ' ಎಂದು ಬಂಗಾರಮಕ್ಕಿ ಆಶ್ರಮದ ಮಾರುತಿ ಗುರೂಜಿ ಹೇಳಿದರು.

'ಕೆಪಿಸಿಎಲ್ ಅಧಿಕಾರಿಯೇ ನೇರವಾಗಿ ಬಂದು ಹೋರಾಟ ಕೈಬಿಡುವಂತೆ ಒತ್ತಡ ಹೇರಿದ್ದಾರೆ. ಹೋರಾಟದಲ್ಲಿ ಪಾಲ್ಗೊಂಡರೆ ಪ್ರಕರಣ ದಾಖಲಿಸುವ ಬೆದರಿಕೆ ಹಾಕಿದ್ದಾರೆ. ಆಗಾಗ ಬೆದರಿಕೆ ಕರೆಗಳೂ ಬರುತ್ತಿವೆ. ಆದರೂ ಹಿಂದೆ ಸರಿದಿಲ್ಲ' ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಆಮಿಷ ಒಡ್ಡಿದ ಅಧಿಕಾರಿ ಯಾರು? ಎಷ್ಟು ಹಣ ಕೊಡುವುದಾಗಿ ಹೇಳಿದ್ದಾರೆ ಎಂಬುದನ್ನು ಅವರು ಬಹಿರಂಗಪಡಿಸಲಿಲ್ಲ. 'ಪ್ರಾಣ ಬಿಟ್ಟರೂ ಹೋರಾಟದಿಂದ ಹಿಂದಡಿ ಇಡುವುದಿಲ್ಲ. ನನ್ನ ಹೆಣದ ಮೇಲೆ ಯೋಜನೆ ಅನುಷ್ಠಾನಗೊಳಿಸಿ ಎಂದು ಈ ಹಿಂದೆಯೇ ಹೇಳಿದ್ದೇನೆ. ಅದಕ್ಕೆ ಈಗಲೂ ಬದ್ಧ' ಎಂದರು.



'ಯೋಜನೆ ಬಗ್ಗೆ ಇಂಧನ ಸಚಿವ ಕೆ.ಜೆ. ಜಾರ್ಜ್ ಸಾರ್ವಜನಿಕವಾಗಿ ತಪ್ಪು ಮಾಹಿತಿ ನೀಡುತ್ತಿದ್ದಾರೆ. ಯೋಜನೆಯ ಅಗತ್ಯತೆ ಬಗ್ಗೆ ನನಗೆ ಮನವರಿಕೆ ಮಾಡಿಕೊಡುವುದಾಗಿ ಹೇಳಿದ್ದಾರೆ. ಇದು ಹೋರಾಟ ಹತ್ತಿಕ್ಕುವ ತಂತ್ರಗಾರಿಕೆಯ ಭಾಗವಷ್ಟೇ. ಈ ವಿಚಾರವಾಗಿ ಜಾರ್ಜ್ ಅವರು ಸಾರ್ವಜನಿಕವಾಗಿ ಮುಕ್ತ ಚರ್ಚೆಗೆ ಬರಲಿ' ಎಂದು ಆಹ್ವಾನ ನೀಡಿದರು.

ಭಿಕ್ಷುಕಿ ಕೊಲೆ: ಆರೋಪಿಗೆ ಜೀವಾವಧಿ ಶಿಕ್ಷೆ

ಚಿಕ್ಕಮಗಳೂರು: ಕ್ಷುಲ್ಲಕ ಕಾರಣಕ್ಕೆ ಭಿಕ್ಷುಕಿ ಮೇಲೆ ಸೈಜುಕಲ್ಲು ಹಾಕಿ ಕೊಲೆ ಮಾಡಿದ್ದ ಅಪರಾಧಿ ನಗರದ ರಾಮನಹಳ್ಳಿಯ ಎಸ್.ಆರ್. ಪೂರ್ಣೇಶ್ ಎಂಬಾತನಿಗೆ ಇಲ್ಲಿನ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಜೀವಾವಧಿ ಶಿಕ್ಷೆ ಮತ್ತು ₹81 ಸಾವಿರ ದಂಡ ವಿಧಿಸಿದೆ.

ಕನಕ ಎಂಬ ಭಿಕ್ಷುಕಿ ಕೊಲೆಯಾದವರು. 2024ರ ಮೇ 10 ರಂದು ಬೆಳಗಿನ ಜಾವ 2.30ರ ಸುಮಾರಿಗೆ ಐ.ಜಿ.ರಸ್ತೆಯ ಗೋಡೆ ಪಕ್ಕದಲ್ಲಿ ಮಲಗಿದ್ದ ಕನಕ ಅವರನ್ನು ಎಚ್ಚರಿಸಿ ತನ್ನ ಕಾಲು ಒತ್ತುವಂತೆ ಒತ್ತಾಯಿಸಿದ್ದ. ನಿರಾಕರಿಸಿದ ಆಕೆಯ ತಲೆಯ ಮೇಲೆ ಸೈಜುಕಲ್ಲು ಎತ್ತಿ ಹಾಕಿದ್ದ. ಬಿಡಿಸಲು ಪ್ರಯತ್ನಿಸಿದವರ ಮೇಲೂ ಕಲ್ಲು ಎತ್ತಿಹಾಕುವ ಬೆದರಿಕೆ ಹಾಕಿದ್ದ ಎಂದು ನಗರ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿ, ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

ನ್ಯಾಯಾಧೀಶ ಕಿರಣ್ ಕಿಣಿ ಅವರು, ಈ ತೀರ್ಪು ಪ್ರಕಟಿಸಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಲೋಹಿತಾಶ್ವಾಚಾರ್ ಅವರು ವಾದ ಮಂಡಿಸಿದ್ದರು.

ಎಸ್‌ಐಆರ್ ಪ್ರಗತಿ

1.12 ಕೋಟಿ ಈವರೆಗೆ ವಿತರಿಸಲಾದ ಗಣತಿ ನಮೂನೆಗಳು

6.13 ಲಕ್ಷ ಈವರೆಗೆ ಮತದಾರರಿಂದ ಸಂಗ್ರಹಿಸಿ, ಡಿಜಿಟಲೀಕರಿಸಿದ ಗಣತಿ ನಮೂನೆಗಳ ಸಂಖ್ಯೆ

37,783 ಆನ್‌ಲೈನ್ ಮೂಲಕ ಮತದಾರರೇ ಸಲ್ಲಿಸಿರುವ ಗಣತಿ ನಮೂನೆಗಳು

7,582 ಸ್ಥಳದಲ್ಲಿ ಇಲ್ಲದ, ವಿಳಾಸ ಬದಲಾದ, ಮೃತಪಟ್ಟ ಮತ್ತು ಒಂದಕ್ಕಿಂತ ಹೆಚ್ಚು ಮತದಾರರ ಚೀಟಿ ಹೊಂದಿದ ಪ್ರಕರಣಗಳು

ಚಿಟಿಕೆ ಸುದ್ದಿ

ಮುದ್ದಣ ಕಾವ್ಯ ಪ್ರಶಸ್ತಿಗೆ ಹಸ್ತಪ್ರತಿ ಆಹ್ವಾನ

ಮೂಡುಬಿದಿರೆ (ದಕ್ಷಿಣ ಕನ್ನಡ): ಕಾಂತಾವರ ಕನ್ನಡ ಸಂಘವು 2026ರ ಸಾಲಿನ ಮುದ್ದಣ ಕಾವ್ಯ ಪ್ರಶಸ್ತಿಗೆ ಮುದ್ರಣಕ್ಕೆ ಸಿದ್ಧವಾಗಿರುವ ಕವನ ಸಂಗ್ರಹದ ಹಸ್ತಪ್ರತಿಗಳನ್ನು ಆಹ್ವಾನಿಸಿದೆ.

ಪ್ರಶಸ್ತಿಯು ₹10 ಸಾವಿರ ನಗದು, ಪ್ರಶಸ್ತಿ ಪತ್ರ ಒಳಗೊಂಡಿದೆ. ಹಸ್ತಪ್ರತಿ ಸ್ವೀಕರಿಸಲು ಸೆಪ್ಟೆಂಬರ್ 15 ಕೊನೆಯ ದಿನವಾಗಿದ್ದು, ನವೆಂಬರ್ 1ರಂದು ಪ್ರಶಸ್ತಿ ಘೋಷಿಸಲಾಗುತ್ತದೆ. ಕನ್ನಡ ಸಂಘದ kannadasanghakanthavara@gmail.com ಈ ಇ–ಮೇಲ್ ಮೂಲಕ ಮಾಹಿತಿ ಪಡೆದುಕೊಳ್ಳಬಹುದು ಅಥವಾ ಅಧ್ಯಕ್ಷರು (9900701666), ಪ್ರಧಾನ ಕಾರ್ಯದರ್ಶಿ (9008978366) ಅವರನ್ನು ಸಂಪರ್ಕಿಸಬಹುದು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಸದಾನಂದ ನಾರಾವಿ ತಿಳಿಸಿದ್ದಾರೆ.

ಯಕ್ಷಗಾನ ಕಲಾರಂಗ ಪ್ರಶಸ್ತಿಗೆ ಆಯ್ಕೆ

ಉಡುಪಿ: ಕಲಾ ಪೋಷಕ ಮಟ್ಟಿ ಮುರಲೀಧರ ರಾವ್, ಅರ್ಥಧಾರಿ ಪೆರ್ಲ ಕೃಷ್ಣಭಟ್ ಮತ್ತು ಹೊರನಾಡಿನ ಧರ್ಮಕರ್ತೃ ಭೀಮೇಶ್ವರ ಜೋಶಿ ಅವರು ತಮ್ಮ ಅಜ್ಜ ಡಿ.ಬಿ. ವೆಂಕಟಸುಬ್ಬಾ ಜೋಯಿಸ್ ಅವರ ನೆನಪಿನಲ್ಲಿ ಸ್ಥಾಪಿಸಿದ 'ಯಕ್ಷಗಾನ ಕಲಾರಂಗ ಪ್ರಶಸ್ತಿ'ಗೆ ಜಿ.ಕೆ. ಹೆಗಡೆ ಹೊನ್ನಾವರ, ಕೋಟೆ ರಾಮ ಭಟ್ ಕಾರ್ಕಳ ಮತ್ತು ವೆಂಕಟರಾಮ ಭಟ್ಟ ಸುಳ್ಯ ಅವರು ಆಯ್ಕೆಯಾಗಿದ್ದಾರೆ.

ಜಿ.ಕೆ. ಹೆಗಡೆ

ಕೋಟೆ ರಾಮ ಭಟ್



ವೆಂಕಟರಾಮ ಭಟ್ಟ

ಪ್ರಶಸ್ತಿಯು ತಲಾ ₹20 ಸಾವಿರ ನಗದನ್ನು ಒಳಗೊಂಡಿದೆ.

ಇದೇ 11ರಂದು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಯಕ್ಷಗಾನ ಕಲಾರಂಗ ಸಂಸ್ಥೆಯ ಅಧ್ಯಕ್ಷ ಎಂ. ಗಂಗಾಧರ ರಾವ್, ಕಾರ್ಯದರ್ಶಿ ಮುರಲಿ ಕಡೆಕಾರ್ ತಿಳಿಸಿದ್ದಾರೆ.

ಸೋಲುವ ಭೀತಿಯಿಂದ ಎಸ್‌ಐಆರ್‌ಗೆ ಕಾಂಗ್ರೆಸ್ ವಿರೋಧ: ಕಾರಜೋಳ

ನವದೆಹಲಿ: ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸೋಲುವ ಭೀತಿಯಿಂದ ಕಾಂಗ್ರೆಸ್ ಪಕ್ಷವು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ವಿರೋಧ ವ್ಯಕ್ತಪಡಿಸುತ್ತಿದೆ ಎಂದು ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ಆರೋಪಿಸಿದರು.

ಗುರುವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಇವಿಎಂ ಸರಿ ಇಲ್ಲ ಎಂದು ಕಾಂಗ್ರೆಸ್‌ನವರು ಈ ಹಿಂದೆ ಹೋರಾಟ ಮಾಡಿದ್ದರು. ರಾಹುಲ್ ಗಾಂಧಿ ರ್‍ಯಾಲಿಗಳನ್ನು ಜನರು ಲೆಕ್ಕಕ್ಕೆ ತೆಗೆದುಕೊಳ್ಳಲಿಲ್ಲ. ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ವಿರುದ್ಧ ಟಿಎಂಸಿ ಜತೆಗೂಡಿ ಗಲಾಟೆ ಮಾಡಿದರು. ರಾಹುಲ್ ಗಾಂಧಿ ಹತಾಶೆಗೊಂಡಿದ್ದಾರೆ' ಎಂದರು.

'ರಾಜ್ಯದಲ್ಲಿ ಕೆಲವು ನಾಯಕರು ಎಸ್‌ಐಆರ್‌ಗೆ ವಿರೋಧ ವ್ಯಕ್ತಪಡಿಸಿ ಜನರ ದಿಕ್ಕು ತಪ್ಪಿಸುತ್ತಿದ್ದಾರೆ' ಎಂದು ಅವರು ದೂರಿದರು.

ಬಿಜೆಪಿಯವರು ಹುಂಡಿ ಕಳ್ಳರು ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಹೇಳಿದ್ದಾರೆ. ಬಿಜೆಪಿಗೂ ರಾಮನ ಹುಂಡಿಗೂ ಸಂಬಂಧ ಇಲ್ಲ. ಕಾಂಗ್ರೆಸ್‌ನವರು ದಲಿತರ ಹಣ ದುರ್ಬಳಕೆ ಮಾಡಿಕೊಂಡಿದ್ದಾರೆ. ಹಾಗಾಗಿ, ಅವರು ದಲಿತರ ಹಣ ಕಳ್ಳರು ಎಂದು ಅವರು ಲೇವಡಿ ಮಾಡಿದರು.

ನಿಯಮ ಉಲ್ಲಂಘಿಸಿ ಎಸ್‌ಐಆರ್: ನೋಟಿಸ್

ಪ್ರಜಾವಾಣಿ ವಾರ್ತೆ

ರಾಮನಗರ: ನಗರದ ವಾರ್ಡ್– 23ರಲ್ಲಿ ಮನೆ ಮನೆಗೆ ತೆರಳಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕೆಲಸ ಮಾಡದ ಬಿಎಲ್‌ಒಗಳು, ಟಿಪ್ಪು ನಗರದ ಕುದೂಸ್ ಶಾದಿ ಮಹಲ್‌ನಲ್ಲಿ ಗುರುವಾರ ಪಟ್ಟಿ ಪರಿಷ್ಕರಣೆ ಕೆಲಸ ಮಾಡುವ ಮೂಲಕ ನಿಯಮ ಉಲ್ಲಂಘಿಸಿದ್ದಾರೆ. ವಿಷಯ ಗೊತ್ತಾಗುತ್ತಿದ್ದಂತೆ ಜಿಲ್ಲಾಧಿಕಾರಿ ಮೂವರು ಬಿಎಲ್‌ಒಗಳಿಗೆ ನೋಟಿಸ್ ಜಾರಿಗೊಳಿಸಿದ್ದಾರೆ.

ಈ ವಿಷಯ ಗಮನಕ್ಕೆ ಬರುತ್ತಿದ್ದಂತೆ ಜಿಲ್ಲಾಧಿಕಾರಿ ಯಶವಂತ್ ವಿ.ಗುರುಕರ್ ಅವರು, 'ಶಾದಿ ಮಹಲ್‌ನಲ್ಲಿ ನಡೆಯುತ್ತಿದ್ದ ಕೆಲಸ ಸ್ಥಗಿತಗೊಳಿಸುವಂತೆ ಸೂಚಿಸಿ ಬಿಎಲ್‌ಒಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ನಿಯಮಕ್ಕೆ ವಿರುದ್ಧವಾಗಿ ಯಾವುದೇ ರೀತಿಯ ಕೆಲಸ ಮಾಡಬಾರದು' ಎಂದು ತಾಕೀತು ಮಾಡಿದ್ದಾರೆ.

ಅಧಿಕಾರಿಗಳು ಶಾದಿ ಮಹಲ್‌ನಲ್ಲಿ ಕುಳಿತು ಕೆಲಸ ಮಾಡುತ್ತಿರುವ ವಿಡಿಯೊ ಮತ್ತು ಫೋಟೊವನ್ನು ಜೆಡಿಎಸ್ ತನ್ನ ಸಾಮಾಜಿಕ ಜಾಲ ತಾಣದ ಪುಟದಲ್ಲಿ ಹಂಚಿಕೊಂಡು ಪೋಸ್ಟ್ ಮಾಡಿದ ಬೆನ್ನಲ್ಲೇ, ಶಾದಿ ಮಹಲ್‌ನಲ್ಲಿ ನಡೆಯುತ್ತಿದ್ದ ಕೆಲಸಕ್ಕೆ ಬ್ರೇಕ್ ಬಿದ್ದಿದೆ.

ವಾರ್ಡ್–23ರ ಟಿಪ್ಪುನಗರದ ಮತದಾರರನ್ನು ಶಾದಿ ಮಹಲ್‌ಗೆ ಕರೆತಂದು ಅರ್ಜಿ ಭರ್ತಿ ಮಾಡಿಸಿಕೊಳ್ಳಲಾಗುತ್ತಿತ್ತು. ಅದಕ್ಕೆ ಜೆಡಿಎಸ್‌ನಿಂದ ನೇಮಕಗೊಂಡಿದ್ದ ಮತಗಟ್ಟೆ ಉಸ್ತುವಾರಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.ನಂತರ ಎಸ್‌ಐಆರ್ ಪ್ರಕ್ರಿಯೆಯ ಫೋಟೊ ತೆಗೆದು, ವಿಡಿಯೊ ಚಿತ್ರೀಕರಿಸಿ ತಮ್ಮ ಪಕ್ಷದ ನಾಯಕರ ಗಮನಕ್ಕೆ ತಂದಿದ್ದಾರೆ. ನಂತರ ನಾಯಕರು ಸಾಮಾಜಿಕ ಜಾಲ ತಾಣದಲ್ಲಿ ವಿಡಿಯೊ ಮತ್ತು ಚಿತ್ರ ಹಂಚಿಕೊಂಡಿದ್ದಾರೆ.

ರಾಮನಗರದ ಟಿಪ್ಪು ನಗರದ ಕುದೂಸ್ ಶಾದಿ ಮಹಲ್‌ನಲ್ಲಿ ಗುರುವಾರ ಎಸ್‌ಐಆರ್ ಕಾರ್ಯ ಜರುಗಿತು

> **ಮೂವರು ಬಿಎಲ್‌ಒಗಳಿಗೆ ನೋಟಿಸ್ ನೀಡಲಾಗಿದೆ. ನಿಯಮದ ಪ್ರಕಾರ ಮನೆ ಮನೆಗೆ ಹೋಗಿ ಎಸ್‌ಐಆರ್ ಪ್ರಕ್ರಿಯೆ ಮುಗಿಸಬೇಕು. ಇಲ್ಲದಿದ್ದರೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು**
> **ಯಶವಂತ್ ವಿ. ಗುರುಕರ್,** ಜಿಲ್ಲಾಧಿಕಾರಿ, ಬೆಂಗಳೂರು ದಕ್ಷಿಣ

ಛತ್ರದಲ್ಲಿ ಗಣತಿ ನಮೂನೆ ವಿತರಣೆ: ಜೆಡಿಎಸ್ ದೂರು

ಬೆಂಗಳೂರು: ರಾಮನಗರ ವಿಧಾನಸಭಾ ಕ್ಷೇತ್ರದ ಹಲವು ಮತಗಟ್ಟೆಗಳ ವ್ಯಾಪ್ತಿಯ ಮತದಾರರನ್ನು ಒಂದೆಡೆ ಸೇರಿಸಿ ಗಣತಿ ನಮೂನೆಯನ್ನು ವಿತರಿಸುವ ಮೂಲಕ ಸಂಬಂಧಪಟ್ಟ ಮತಗಟ್ಟೆ ಅಧಿಕಾರಿಗಳು (ಬಿಎಲ್‌ಒ) ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ ನಿಯಮ ಉಲ್ಲಂಘಿಸಿದ್ದಾರೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ವಿ.ಅನ್ಬುಕುಮಾರ್ ಅವರಿಗೆ ಜೆಡಿಎಸ್ ದೂರು ನೀಡಿದೆ.

ಜೆಡಿಎಸ್ ಕಾನೂನು ಘಟಕದ ಅಧ್ಯಕ್ಷ ಎ.ಪಿ.ರಂಗನಾಥ್ ದೂರು ದಾಖಲಿಸಿದ್ದಾರೆ.

'ಮತದಾರರ ಪಟ್ಟಿಯ ಎಸ್‌ಐಆರ್ ಬಿಎಲ್‌ಒಗಳು ಮತದಾರರ ಮನೆ–ಮನೆಗೆ ಭೇಟಿ ನೀಡಿ ಗಣತಿ ನಮೂನೆ (ಎನ್ಯೂಮರೇಷನ್ ಅರ್ಜಿ) ವಿತರಣೆ ಮಾಡಬೇಕು ಎಂಬುದು ನಿಯಮ. ಆದರೆ, ರಾಮನಗರ ವಿಧಾನಸಭಾ ಕ್ಷೇತ್ರದ ಟಿಪ್ಪುನಗರ ವ್ಯಾಪ್ತಿಯ ಮತಗಟ್ಟೆ ಸಂಖ್ಯೆಗಳಾದ 92, 101, 108 ಮತ್ತು 114ರ ಮತದಾರರನ್ನು ಗುರುವಾರ ಸಮುದಾಯ ಭವನದಲ್ಲಿ ಸೇರಿಸಲಾಗಿತ್ತು' ಎಂದು ದೂರಿನಲ್ಲಿ ವಿವರಿಸಿದ್ದಾರೆ.

'ಕಾಂಗ್ರೆಸ್ ಪಕ್ಷದ ಬಿಎಲ್‌ಎಗಳು ಮತದಾರರನ್ನು ಸೇರಿಸಿದ್ದರು. ನಾಲ್ಕೂ ಮತಗಟ್ಟೆಗಳ ಬಿಎಲ್‌ಒಗಳು ಅಲ್ಲಿಗೆ ತೆರಳಿ ಗಣತಿ ನಮೂನೆಗಳನ್ನು ವಿತರಿಸಿದ್ದಾರೆ ಮತ್ತು ಭರ್ತಿ ಮಾಡಿದ ನಮೂನೆಗಳನ್ನು ಸಂಗ್ರಹಿಸಿದ್ದಾರೆ. ಇದು ಎಸ್‌ಐಆರ್ ಕರ್ತವ್ಯ ನಿಯಮಗಳ ಸ್ಪಷ್ಟ ಉಲ್ಲಂಘನೆ. ಆಯಾ ಬಿಎಲ್‌ಒಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಮತ್ತು ಅವರನ್ನು ಈ ಕರ್ತವ್ಯದಿಂದ ಕೈಬಿಡಬೇಕು' ಎಂದು ಅವರು ದೂರಿನಲ್ಲಿ ಒತ್ತಾಯಿಸಿದ್ದಾರೆ.

'ಮನೆ–ಮನೆಗೆ ಭೇಟಿ ನೀಡಿಯೇ ಗಣತಿ ನಮೂನೆ ವಿತರಿಸಬೇಕು ಎಂದು ಎಸ್‌ಐಆರ್ ಕರ್ತವ್ಯಕ್ಕೆ ನಿಯೋಜಿತರಾಗಿರುವ ರಾಜ್ಯದ ಎಲ್ಲ ಬಿಎಲ್‌ಒ, ಸಹಾಯಕ ಮತದಾರರ ನೋಂದಣಾಧಿಕಾರಿ, ಮತದಾರರ ನೋಂದಣಾಧಿಕಾರಿಗಳಿಗೆ ನಿರ್ದೇಶನ ನೀಡಬೇಕು' ಎಂದು ಕೋರಿದ್ದಾರೆ.

'ನುಸುಳುಕೋರರಿಗೆ ಮತದಾನದ ಹಕ್ಕು'

ದೇಶದ ಭದ್ರತೆಗೆ ಸವಾಲಾಗಿರುವ ಬಾಂಗ್ಲಾ ನುಸುಳುಕೋರರನ್ನು ಪೋಷಿಸಿ, ಅವರಿಗೆ ಮತದಾನದ ಹಕ್ಕು ಕೊಡಿಸುವ ವ್ಯವಸ್ಥಿತ ಸಂಚು ರಾಮನಗರ ವಿಧಾನಸಭಾ ಕ್ಷೇತ್ರದಲ್ಲಿ ನಡೆದಿದೆ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮುಖ್ಯಮಂತ್ರಿಯ ನೇರ ಪ್ರಭಾವ ಬಳಸಿ ಬಾಂಗ್ಲಾದೇಶದ ಅಕ್ರಮ ವಲಸಿಗರು ಸೇರಿ, ಸಾವಿರಾರು ಕಳ್ಳ ಮತದಾರರಿಗೆ ದಾಖಲೆ ಸೃಷ್ಟಿಸುವ ಯತ್ನ ನಡೆಯುತ್ತಿದೆ. ಇದಕ್ಕಾಗಿಯೇ ರಾಮನಗರದ ಸಮುದಾಯ ಭವನ ಒಂದರಲ್ಲಿ ಅಕ್ರಮ ವಲಸಿಗರನ್ನು ಸೇರಿಸಿ, ಎಸ್‌ಐಆರ್‌ನಲ್ಲಿ ಅವರನ್ನು ಸೇರಿಸಲಾಗಿದೆ' ಎಂದು ದೂರಿದರು.

'ಈ ಕೆಲಸದಲ್ಲಿ ಕ್ಷೇತ್ರದ ಮತದಾರರ ನೋಂದಣಾಧಿಕಾರಿಗಳು, ಮತಗಟ್ಟೆ ಅಧಿಕಾರಿಗಳು ನೇರವಾಗಿ ಭಾಗಿಯಾಗಿದ್ದಾರೆ. ಅವರನ್ನು ಕೂಡಲೇ ಅಮಾನತು ಮಾಡಬೇಕು. ಈ ಅಕ್ರಮಕ್ಕೆ ಸಾಕ್ಷ್ಯವಾಗಿ ವಿಡಿಯೊ ಇದ್ದು, ಅದನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಸಲ್ಲಿಸುತ್ತೇನೆ' ಎಂದಿದ್ದಾರೆ.

'ಎಸ್‌ಐಆರ್‌ನಿಂದ ಹೊರಗೆ ಉಳಿದವರಿಗೆ ಗ್ಯಾರಂಟಿ ಕೊಡುವುದಿಲ್ಲ ಎಂದು ಮುಖ್ಯಮಂತ್ರಿ ಬೆದರಿಕೆ ಹಾಕಿದ್ದಾರೆ. ಇದು ಸರಿಯಲ್ಲ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಬಿಎಲ್‌ಒ ಗಣತಿ ನಮೂನೆ ವಿತರಿಸಬೇಕು'

'ಬಿಎಲ್‌ಒಗಳು ಮನೆ ಮನೆಗೆ ಹೋಗಿ ಗಣತಿ ನಮೂನೆ ವಿತರಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಭರ್ತಿ ಮಾಡಿದ ಗಣತಿ ನಮೂನೆಗಳನ್ನು ಬೇಕಾದರೆ ಬಿಎಲ್‌ಎಗಳು ಜನರಿಂದ ಸಂಗ್ರಹಿಸಿ ಬಿಎಲ್ ಒಗಳಿಗೆ ನೀಡಲು ಅವಕಾಶವಿದೆ' ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

'ಕಲ್ಯಾಣ ಮಂಟಪಗಳಲ್ಲಿ ಗಣತಿ ನಮೂನೆ ವಿತರಿಸಲಾಗುತ್ತಿದೆ' ಎಂಬ ಆರೋಪಗಳ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಈ ವಿಚಾರ ನನ್ನ ಗಮನಕ್ಕೂ ಬಂದಿದೆ. ಜಯನಗರದಲ್ಲಿ ಬಿಜೆಪಿ ಶಾಸಕರು ಇದನ್ನೇ ಮಾಡುತ್ತಿದ್ದಾರೆ. ಎಲ್ಲೇ ಆದರೂ ಬಿಎಲ್‌ಒಗಳೇ ವಿತರಣೆ ಮಾಡಬೇಕು. ಇದು ಕಾನೂನುಬಾಹಿರ. ಇದಕ್ಕೆ ಅವಕಾಶ ನೀಡುವುದಿಲ್ಲ. ನಮ್ಮ ಶಾಸಕರು ಮಾಡಿದರೂ ಅವಕಾಶ ನೀಡುವುದಿಲ್ಲ' ಎಂದರು.

'ಎಸ್‌ಐಆರ್ ಪ್ರಕ್ರಿಯೆಯನ್ನು ನೀವು ಬಹಳ ಗಂಭೀರವಾಗಿ ಪರಿಗಣಿಸಿದ್ದೀರಿ' ಎಂದು ಕೇಳಿದಾಗ, 'ಪ್ರತಿಯೊಬ್ಬ ನಾಗರಿಕರ ಮತದಾನದ ಹಕ್ಕನ್ನು ಕಾಪಾಡುವುದು ನಮ್ಮ ಸರ್ಕಾರದ ಜವಾಬ್ದಾರಿ. ಹೀಗಾಗಿ ಪ್ರತಿ ವಾರ್ಡ್ ಹಾಗೂ ಮತಗಟ್ಟೆ ಹಂತದಲ್ಲಿ ಸಹಾಯ ಕೇಂದ್ರ ಸ್ಥಾಪಿಸಲು ಮುಂದಾಗಿದ್ದೇವೆ' ಎಂದರು.

ಸಾಕ್ಷ್ಯ ಹೇಳದಂತೆ ಬೆದರಿಕೆ: ಆರೋಪಿಗಳು ಪೊಲೀಸ್ ಕಸ್ಟಡಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ 49ನೇ ಸಾಕ್ಷಿದಾರ ಸಂದೀಪ್ ಸಾಕ್ಷ್ಯ ಹೇಳದಂತೆ ಬೆದರಿಕೆಯೊಡ್ಡಿದ್ದ ಆರೋಪದಡಿ ಮೂವರನ್ನು ಬಂಧಿಸಿರುವ ಕಾಮಾಕ್ಷಿಪಾಳ್ಯ ಠಾಣೆಯ ಪೊಲೀಸರು, ಹೆಚ್ಚಿನ ವಿಚಾರಣೆಗಾಗಿ ಐದು ದಿನ ಕಸ್ಟಡಿಗೆ ಪಡೆದುಕೊಂಡಿದ್ದಾರೆ.

ತುಮಕೂರಿನ ಪುನೀತ್, ವೇಣು ಹಾಗೂ ಸುಹಾಸ್ ಬಂಧಿತರು. ಮೂವರ ವಿರುದ್ಧವೂ ಕಾಮಾಕ್ಷಿಪಾಳ್ಯ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ನ್ಯಾಯಾಲಯದ ಸೂಚನೆ ಮೇರೆಗೆ ತುಮಕೂರಿನಲ್ಲಿ ಕಾರ್ಯಾಚರಣೆ ನಡೆಸಿ, ಮೂವರನ್ನು ಬಂಧಿಸಲಾಗಿತ್ತು. ಗುರುವಾರ ನ್ಯಾಯಾಲಯಕ್ಕೆ ಹಾಜರುಪಡಿಸಿ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ನ್ಯಾಯಾಲಯದಲ್ಲಿ ಸಾಕ್ಷ್ಯ ತಿರುಚಿ ಹೇಳುವಂತೆ ಬೆದರಿಕೆವೊಡ್ಡಿದ್ದ ಆರೋಪವು ಮೂವರ ಮೇಲಿದೆ. ವೇಣು ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಟೆಕಿಯಾಗಿ ಕೆಲಸ ಮಾಡುತ್ತಿದ್ದಾರೆ. ಪುನೀತ್ ದಿನಸಿ ಸಾಮಗ್ರಿಗಳ ವ್ಯಾಪಾರ ಮಾಡುತ್ತಿದ್ದರೆ, ಸುಹಾಸ್ ಕಟ್ಟಡ ನಿರ್ಮಾಣದ ಸಣ್ಣಪುಟ್ಟ ಗುತ್ತಿಗೆ ಕೆಲಸ ಮಾಡುತ್ತಿದ್ದಾರೆ' ಎಂದು ತನಿಖಾ ಮೂಲಗಳು ತಿಳಿಸಿವೆ.

ಪುನೀತ್



ವೇಣು

ಸುಹಾಸ್

ಬಂಧಿತರಲ್ಲಿ ಪುನೀತ್ 'ಡಿ-ಕಂಪನಿ' ಹೆಸರಿನ ಫ್ಯಾನ್ ಪೇಜ್ ನಿರ್ವಹಿಸುತ್ತಿದ್ದರು. ಸುಹಾಸ್ ಮತ್ತು ವೇಣು ತುಮಕೂರಿನ ದರ್ಶನ್ ಅಭಿಮಾನಿ ಸಂಘದ ಸದಸ್ಯರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆರೋಪಿಗಳ ಪೈಕಿ ಪುನೀತ್ ಸಹ ಈ ಪ್ರಕರಣದಲ್ಲಿ ಸಾಕ್ಷಿದಾರ. ರೇಣುಕಸ್ವಾಮಿ ಮೃತದೇಹವನ್ನು ಪುನೀತ್‌ಗೆ ಸೇರಿದ್ದ ಕಾರಿನಲ್ಲೇ ಪಟ್ಟಣಗೆರೆಯ ಶೆಡ್‌ನಿಂದ ಕಾಮಾಕ್ಷಿಪಾಳ್ಯದ ರಾಜಕಾಲುವೆ ಬಳಿಗೆ ಕೊಂಡೊಯ್ಯಲಾಗಿತ್ತು' ಎಂದು ಮೂಲಗಳು ಹೇಳಿವೆ.

'ಸಾಕ್ಷಿದಾರ ಸಂದೀಪ್ ಅವರನ್ನು ಮಾತುಕತೆ ನಡೆಸುವ ನೆಪದಲ್ಲಿ ಸುಹಾಸ್ ಕರೆಸಿಕೊಂಡು, ಕಾರಿನಲ್ಲಿ ಸುತ್ತಾಡಿಸಿದ್ದರು. ಅಲ್ಲದೇ ಸಾಕ್ಷ್ಯ ಹೇಳದಂತೆ ತಾಕೀತು ಮಾಡಿದ್ದರು. ಅದಕ್ಕೆ ಒಪ್ಪದಿದ್ದಾಗ ಸಂದೀಪ್‌ಗೆ ಮೂವರು ಬೆದರಿಕೆ ಹಾಕಿದ್ದರು' ಎಂದು ಮೂಲಗಳು ಹೇಳಿವೆ.

ಸಾಕ್ಷಿದಾರ ಸಂದೀಪ್‌ಗೆ ದರ್ಶನ್ ಅಭಿಮಾನಿಗಳು ಸಾಕ್ಷ್ಯ ಹೇಳದಂತೆ ಬೆದರಿಕೆ ಹಾಕಿದ್ದರು. ಈ ಬಗ್ಗೆ ಸಾಕ್ಷಿದಾರ ನ್ಯಾಯಾಲಯದಲ್ಲಿ ಹೇಳಿಕೆ ದಾಖಲಿಸಿದ್ದರು. ಸಂದೀಪ್‌ಗೆ ರಕ್ಷಣೆ ನೀಡುವಂತೆ ನ್ಯಾಯಾಧೀಶರು ಆದೇಶಿಸಿದ್ದು, ಅವರಿಗೆ ಪೊಲೀಸ್ ಭದ್ರತೆ ಒದಗಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಒಳಮೀಸಲು ಪ್ರಮಾಣಪತ್ರ ನಿರ್ದೇಶನಕ್ಕೆ ಕೆಇಎ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್, ಕೃಷಿ ವಿಜ್ಞಾನ, ಪಶುವೈದ್ಯಕೀಯ, ನರ್ಸಿಂಗ್ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ಪರಿಶಿಷ್ಟ ಜಾತಿಯ ಒಳಮೀಸಲಾತಿಯಡಿ ಸೀಟು ಕೋರಿರುವ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ತ್ವರಿತವಾಗಿ ನೀಡುವಂತೆ ಸೂಕ್ತ ನಿರ್ದೇಶನ ನೀಡಲು ಕೋರಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಕಂದಾಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದೆ.

ಹಲವು ಅಭ್ಯರ್ಥಿಗಳು ಒಳ ಮೀಸಲಾತಿಯಡಿ ಸೀಟು ಕೋರಿದ್ದು, ಅಂತಹ ಅಭ್ಯರ್ಥಿಗಳು ಒಳಮೀಸಲಾತಿ ಮುದ್ರಿತವಾಗಿರುವ ಜಾತಿ ಪ್ರಮಾಣಪತ್ರಗಳನ್ನು ಪಡೆದು ಜುಲೈ 8ರ ಒಳಗೆ ಆರ್‌ಡಿ ಸಂಖ್ಯೆಯೊಂದಿಗೆ ನಮೂದಿಸಿ, ನಂತರ ಆಯ್ಕೆಗಳನ್ನು ದಾಖಲಿಸಲು ಸೂಚಿಸಲಾಗಿದೆ. ಆದರೆ, ಬಹಳಷ್ಟು ಅಭ್ಯರ್ಥಿಗಳು ನಿಗದಿತ ಪ್ರಮಾಣಪತ್ರ ಪಡೆಯಲು ವಿಳಂಬವಾಗುತ್ತಿದೆ ಎಂದು ಹೇಳಿದ್ದಾರೆ. ಈ ಬಗ್ಗೆ ಗಮನಹರಿಸಿದರೆ ಮೊದಲನೇ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆಯನ್ನು ಯಶಸ್ವಿಯಾಗಿ ನಡೆಸಲು ಅನುಕೂಲವಾಗುತ್ತದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಅವರು ಕಂದಾಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ ಅವರಿಗೆ ಪತ್ರ ಬರೆದ ಪತ್ರದಲ್ಲಿ ವಿನಂತಿಸಿದ್ದಾರೆ.

ರಾಜ್ಯದ ಎಲ್ಲ ತಹಶಿಲ್ದಾರ್‌ಗಳು ಅರ್ಜಿಗಳನ್ನು ಆದ್ಯತೆ ಮೇರೆಗೆ ವಿಲೇವಾರಿ ಮಾಡಬೇಕು. ಆಯಾ ಜಿಲ್ಲಾಧಿಕಾರಿಗಳು ಗಮನಹರಿಸಬೇಕು. ಈ ಕುರಿತು ತಕ್ಷಣ ಕ್ರಮಕೈಗೊಳ್ಳಲು ಸೂಚನೆ ನೀಡಬೇಕು ಎಂದಿದ್ದಾರೆ.

ಕ್ರಿಮಿನಲ್ ಪ್ರಕರಣ ಹಿಂದಕ್ಕೆ ಆದೇಶಕ್ಕೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಬುರಗಿ ಜಿಲ್ಲೆ ಆಳಂದ ತಾಲ್ಲೂಕಿನ ಲಾಡ್ಲೆ ಮಶಾಕ್ ದರ್ಗಾ ಗಲಭೆ, ಕೆಲವು ಕೋಮುಗಲಭೆ ಪ್ರಕರಣಗಳೂ ಸೇರಿದಂತೆ ಹಲವು ರಾಜಕಾರಣಿಗಳು, ರೈತಪರ, ಕನ್ನಡಪರ ಹಾಗೂ ಸಾಮಾಜಿಕ ಹೋರಾಟಗಾರರ ವಿರುದ್ಧ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ 52 ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆದಿರುವ ರಾಜ್ಯ ಸರ್ಕಾರದ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದೆ.

ಸರ್ಕಾರದ ಆದೇಶವನ್ನು ಪ್ರಶ್ನಿಸಿ ಗಿರೀಶ್ ಭಾರದ್ವಾಜ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿತು.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ವೆಂಕಟೇಶ ಪಿ.ದಳವಾಯಿ ಅವರ ವಾದಕ್ಕೆ ಪ್ರತಿಯಾಗಿ ಸರ್ಕಾರದ ಪರ ಹಾಜರಾಗಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ತಾರಾನಾಥ್ ಪೂಜಾರಿ ಅವರು, 'ಆಕ್ಷೇಪಣೆ ಸಲ್ಲಿಸಲು



ಕಾಲಾವಕಾಶ ನೀಡಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದೇ ವೇಳೆ ನ್ಯಾಯಪೀಠವು, ಅರ್ಜಿಯಲ್ಲಿ ಕಾಣಿಸಲಾಗಿರುವ ಮೂರನೇ ಪ್ರತಿವಾದಿ ಹಾಲಿ ಆರೋಗ್ಯ ಸಚಿವ ಯು.ಟಿ.ಖಾದರ್‌ಗೆ ನೋಟಿಸ್ ಜಾರಿಗೊಳಿಸಲು ನಿರಾಕರಿಸಿತು. ರಾಜ್ಯ ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಪ್ರಾಸಿಕ್ಯೂಷನ್ ನಿರ್ದೇಶನಾಲಯದ ನಿರ್ದೇಶಕರಿಗೆ ಮಾತ್ರವೇ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಸೆಪ್ಟೆಂಬರ್ 28ಕ್ಕೆ ಮುಂದೂಡಿತು.

ಪ್ರಕರಣ: 'ಕರ್ನಾಟಕ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಪ್ರಕರಣಗಳನ್ನು ಹಿಂಪಡೆಯುವ ನಿಟ್ಟಿನಲ್ಲಿ; ಅಪರಾಧ ಪ್ರಕ್ರಿಯಾ ಸಂಹಿತೆ–1973ರ ಕಲಂ 321ರ ಅಡಿಯಲ್ಲಿ ರಾಜ್ಯ ಗೃಹ ಇಲಾಖೆ 2026ರ ಮೇ 27ರಂದು ಹೊರಡಿಸಲಾದ ಆದೇಶವನ್ನು ರದ್ದುಪಡಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಮಂತ್ರಾಲಯ ರಾಘವೇಂದ್ರ ಸ್ವಾಮಿ ಮಠದಿಂದ ನಿರ್ಮಾಣ; ಉಚಿತ ಆರೋಗ್ಯ ಸೇವೆಯ ವ್ಯವಸ್ಥೆ

ಆರೋಗ್ಯ ಸೇವೆಗೆ 300 ಹಾಸಿಗೆಗಳ ಆಸ್ಪತ್ರೆ

• ಚಂದ್ರಹಾಸ ಹಿರೇಮಳಲಿ

ಮಂತ್ರಾಲಯ (ಆಂಧ್ರಪ್ರದೇಶ): ಗಡಿನಾಡ ಕನ್ನಡಿಗರು, ಕ್ಷೇತ್ರಕ್ಕೆ ಬರುವ ಭಕ್ತರು ಹಾಗೂ ಸುತ್ತಲ ಗ್ರಾಮಗಳ ಬಡಜನರ ಆರೋಗ್ಯ ಸೇವೆಗಾಗಿ ಮಂತ್ರಾಲಯದ ರಾಘವೇಂದ್ರ ಸ್ವಾಮಿ ಮಠವು 300 ಹಾಸಿಗೆಗಳ ಆಸ್ಪತ್ರೆ ಆರಂಭಿಸಲು ನಿರ್ಧರಿಸಿದೆ.

ಕರ್ನೂಲ್ ಜಿಲ್ಲೆಯಲ್ಲಿರುವ ಮಂತ್ರಾಲಯವು ತುಂಗಭದ್ರಾ ನದಿಯ ದಂಡೆಯ ಮೇಲಿರುವ ಪ್ರಸಿದ್ಧ ಧಾರ್ಮಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರ. ರಾಘವೇಂದ್ರ ಸ್ವಾಮಿ ಅವರ ಬೃಂದಾವನ ಇರುವ ಈ ಕ್ಷೇತ್ರಕ್ಕೆ ಪ್ರತಿದಿನ ಸರಾಸರಿ 30 ಸಾವಿರದಿಂದ 50 ಸಾವಿರ ಭಕ್ತರು ಭೇಟಿ ನೀಡುತ್ತಾರೆ. ಮಂತ್ರಾಲಯ ಮಂಡಲದ ಜನಸಂಖ್ಯೆ ಸುಮಾರು 1 ಲಕ್ಷದಷ್ಟಿದೆ. ಸಮೀಪದಲ್ಲೇ ನದಿ ಹರಿದರೂ ಬಹುತೇಕ ಮಳೆ ಆಶ್ರಿತ ಕೃಷಿ ಭೂಮಿ ಹೊಂದಿದ್ದು, ಆರ್ಥಿಕವಾಗಿ ಹಿಂದುಳಿದವರೇ ಅಧಿಕ ಸಂಖ್ಯೆಯಲ್ಲಿ ಇದ್ದಾರೆ. ಅವರೆಲ್ಲರಿಗೂ ಉಚಿತ ಆರೋಗ್ಯ ಸೇವೆ ಒದಗಿಸಲು ಸುಸಜ್ಜಿತ ಆಸ್ಪತ್ರೆ ನಿರ್ಮಾಣಕ್ಕೆ ಮಠ ಮುಂದಾಗಿದೆ.

'ಮಠಕ್ಕೆ ದೊಡ್ಡ ಸಂಖ್ಯೆಯಲ್ಲಿ ಬರುವ ಭಕ್ತರಿಗೆ ಆರೋಗ್ಯ ಸಮಸ್ಯೆಯಾದಾಗ ಸಮೀಪದಲ್ಲಿ ಉತ್ತಮ, ಸುಸಜ್ಜಿತ ಆಸ್ಪತ್ರೆ ಇಲ್ಲದಿರುವುದು, ಬಡಜನರಿಗೆ ಹೈಟೆಕ್ ಆಸ್ಪತ್ರೆಗಳಲ್ಲಿ ಸಿಗುವಂತಹ ಉತ್ತಮ ಆರೋಗ್ಯ ಸೇವೆ ಒದಗಿಸಲು ಮಠದ ಸಮೀಪದಲ್ಲೇ ಆಸ್ಪತ್ರೆ ಕಟ್ಟಲು ಸಂಕಲ್ಪವಾಗಿದೆ. ಕೋವಿಡ್ ಸಮಯದಲ್ಲಿ ಜನ ಅನುಭವಿಸಿದ ಸಂಕಷ್ಟ, ಪರದಾಟ ನೋಡಿದ ನಂತರ ಇಂತಹ ಒಂದು ನಿರ್ಧಾರ ಹುಟ್ಟಿತ್ತು. ಈಗ ಅದನ್ನು ಸಾಕಾರಗೊಳಿಸುವ ಸಮಯ ಬಂದಿದೆ' ಎನ್ನುತ್ತಾರೆ ರಾಘವೇಂದ್ರ ಸ್ವಾಮಿ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರು.

> **ಸಾವಿರಾರು ಭಕ್ತರು ನಿತ್ಯವೂ ಬರುವ ಧಾರ್ಮಿಕ ಕೇಂದ್ರಗಳಲ್ಲಿ ಸ್ವಚ್ಛತೆ ದೊಡ್ಡ ಸವಾಲು. ಸ್ಥಳೀಯ ಸಂಸ್ಥೆಗಳ ಮೇಲೆ ಅವಲಂಬಿತವಾಗದೆ ಮಠದಿಂದಲೇ ನಿತ್ಯವೂ ಮಂತ್ರಾಲಯ ನಗರವನ್ನು ಎರಡು ಬಾರಿ ಸ್ವಚ್ಛಗೊಳಿಸಲಾಗುತ್ತಿದೆ**
> **ಸುಬುಧೇಂದ್ರ ತೀರ್ಥರು,** ಪೀಠಾಧಿಪತಿ, ಮಂತ್ರಾಲಯ

100 ಎಕರೆಯಲ್ಲಿ ಜಲ ಸಂಗ್ರಹಾಗಾರ: ತುಂಗಭದ್ರಾ ನದಿ ತೀರದಲ್ಲಿ ಕ್ಷೇತ್ರವಿದ್ದರೂ ಇಂದಿಗೂ ಶುದ್ಧ, ಸಮರ್ಪಕ ಕುಡಿಯುವ ನೀರು ಸಿಗುತ್ತಿಲ್ಲ. ಕೆಲವೆಡೆ ನೀರಿನಲ್ಲಿ ಫ್ಲೋರೈಡ್ ಅಂಶಗಳು ಕಂಡುಬಂದಿವೆ. ಇದು ಸ್ಥಳೀಯರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಕೆಲವರು ಕೀಲು, ಮೂಳೆ ಹಾಗೂ ಹಲ್ಲಿನ ಆರೋಗ್ಯ ಸಮಸ್ಯೆಯಿಂದ ಬಳಲುವಂತಾಗಿದೆ. ಹಾಗಾಗಿ, ವರ್ಷದ 365 ದಿನವೂ ಶುದ್ಧ ಕುಡಿಯುವ ನೀರು ಪೂರೈಸಲು ಮಠ ಮುಂದಾಗಿದೆ. ತುಂಗಾ ನದಿಗೆ ಚೆಕ್‌ಡ್ಯಾಂ ಕಟ್ಟಿ 100 ಎಕರೆಯಲ್ಲಿ ನೀರು ಸಂಗ್ರಹಾಗಾರ ನಿರ್ಮಿಸಲು ಯೋಜನೆ ರೂಪಿಸಲಾಗಿದೆ. ನೀರಿನ ಸಮಸ್ಯೆ ಎದುರಾಗದಂತೆ ತಡೆಯುವಲ್ಲಿ ಈ ಸಂಗ್ರಹಾಗಾರ ಜೀವಸೆಲೆಯಾಗಲಿದೆ.

'ಭವಿಷ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳಲು ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ನದಿ ನೀರನ್ನು ಸಂಗ್ರಹಾಗಾರದಲ್ಲಿ ಸಂಗ್ರಹಿಸಿ, ವೈಜ್ಞಾನಿಕವಾಗಿ ಶುದ್ಧೀಕರಿಸಿ ಭಕ್ತರಿಗೆ ಹಾಗೂ ಸ್ಥಳೀಯರಿಗೆ ಪೂರೈಸಲಾಗುವುದು. ಎಚ್‌ಎಎಲ್ ಸೇರಿದಂತೆ ಕೆಲ ಕಂಪನಿಗಳು ತಮ್ಮ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕಾ ನಿಧಿಯಡಿ (ಸಿಎಸ್‌ಆರ್) ವೆಚ್ಚ ಭರಿಸುವ ಭರವಸೆ ನೀಡಿವೆ' ಎಂದು ಸುಬುಧೇಂದ್ರ ತೀರ್ಥರು ಮಾಹಿತಿ ನೀಡಿದರು.

ಸ್ವಾಯತ್ತ ವಿಶ್ವವಿದ್ಯಾಲಯ ಸ್ಥಾಪನೆ

ಸ್ಥಳೀಯ ಜನರ ಶಿಕ್ಷಣಕ್ಕೆ ಈಗಾಗಲೇ ಸಾಕಷ್ಟು ಆದ್ಯತೆ ನೀಡಿರುವ ಮಠವು ಎಂಜಿನಿಯರಿಂಗ್, ವೈದ್ಯಕೀಯ ಕಾಲೇಜುಗಳನ್ನು ಒಳಗೊಂಡ ಸ್ವಾಯತ್ತ ವಿಶ್ವವಿದ್ಯಾಲಯ ಸ್ಥಾಪಿಸುತ್ತಿದೆ.

ಎಲ್‌ಕೆಜಿಯಿಂದ ಉನ್ನತ ಶಿಕ್ಷಣದವರೆಗೆ, ಉದ್ಯೋಗಾಧಾರಿತ ವೃತ್ತಿ ಶಿಕ್ಷಣ ಕೋರ್ಸ್‌ಗಳು ವಿದ್ಯಾರ್ಥಿಗಳಿಗೆ ನೀಡಬೇಕು. ವೇದ, ಪಾಠಗಳ ಜತೆಗೆ ವಿದೇಶಿ ವಿಶ್ವವಿದ್ಯಾಲಯಗಳ ಗುಣಮಟ್ಟದ ಆಧುನಿಕ ಶಿಕ್ಷಣವೂ ಸಿಗಬೇಕು ಎಂಬ ಆಶಯ ಇಟ್ಟುಕೊಂಡು ಸ್ವಾಯತ್ತ ವಿಶ್ವವಿದ್ಯಾಲಯ ತೆರೆಯಲಾಗುತ್ತಿದೆ. ಎಲ್ಲ ಜಾತಿ, ಧರ್ಮದ ಜನರಿಗೂ ಶಿಕ್ಷಣ, ಆರೋಗ್ಯದ ಸೌಲಭ್ಯ ಸಿಗಬೇಕು ಎನ್ನುವ ಆಶಯವನ್ನು ಈ ವಿಶ್ವವಿದ್ಯಾಲಯ ಹೊಂದಿದೆ ಎನ್ನುತ್ತಾರೆ ಸುಬುಧೇಂದ್ರ ತೀರ್ಥರು.

ವಿದ್ಯಾರ್ಥಿನಿ ಮೇಲೆ ಉಪನ್ಯಾಸಕನಿಂದ ಅತ್ಯಾಚಾರ

ಬಳ್ಳಾರಿ: ದ್ವಿತೀಯ ಪಿಯುಸಿ ವಿದ್ಯಾರ್ಥಿನಿಯೊಬ್ಬಳ ಮೇಲೆ ಕಾಲೇಜಿನ ಉಪನ್ಯಾಸಕನೊಬ್ಬ ಕಾರಿನಲ್ಲಿ ಅತ್ಯಾಚಾರವೆಸಗಿದ ಘಟನೆ ನಡೆದಿದೆ.

ನಗರದ ಕಾಲೇಜೊಂದರ ಉಪನ್ಯಾಸಕ ರವಿಕಿರಣ್ (45) ಆರೋಪಿಯಾಗಿದ್ದು, ಬಳ್ಳಾರಿ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಆಂಧ್ರಪ್ರದೇಶದ ತಿರುಪತಿಯ ಆರೋಪಿ ರವಿಕಿರಣ್ ಪ್ರಸ್ತುತ ಕಾಲೇಜು ಕ್ಯಾಂಪಸ್‌ನಲ್ಲೇ ವಾಸವಿದ್ದ. ವಿದ್ಯಾರ್ಥಿನಿ ಜೊತೆ ಪರಿಚಯ ಏರ್ಪಟ್ಟು, ಮೊಬೈಲ್‌ನಲ್ಲಿ ಚಾಟ್ ಮಾಡುತ್ತಿದ್ದ. ಅಜ್ಞಾತ ಸ್ಥಳವೊಂದಕ್ಕೆ ಕಾರಿನಲ್ಲಿ ಕರೆದೊಯ್ದ ಆರೋಪಿಯು ತನ್ನ ಮೇಲೆ ಅತ್ಯಾಚಾರ ಮಾಡಿರುವುದಾಗಿ ವಿದ್ಯಾರ್ಥಿನಿ ದೂರು ನೀಡಿದ್ದಾಳೆ. ಸದ್ಯ ಆರೋಪಿಯನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಸರ್ವೇಯರ್ ಲೋಕಾಯುಕ್ತ ಬಲೆಗೆ

ಪ್ರಜಾವಾಣಿ ವಾರ್ತೆ

ಮೈಸೂರು: ಜಮೀನು ತತ್ಕಾಲ್ ಪೋಡಿ ಮಾಡಿಕೊಡಲು ಅರ್ಜಿದಾರರ ಬಳಿ ₹1.20 ಲಕ್ಷ ಲಂಚ ಪಡೆಯುತ್ತಿದ್ದಾಗ ನಂಜನಗೂಡಿನ ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಯ ಸರ್ವೇಯರ್ ಜಯಪ್ರಕಾಶ್ ಅವರನ್ನು ಲೋಕಾಯುಕ್ತ ಪೊಲೀಸರು ವಶಪಡಿಸಿಕೊಂಡು, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಜಯಪ್ರಕಾಶ್

'ಜಯಪ್ರಕಾಶ್ ಅವರು ತತ್ಕಾಲ್ ಪೋಡಿ ಮಾಡಿಸಿಕೊಡಲು ಲಂಚದ ಹಣಕ್ಕೆ ಒತ್ತಾಯಿಸಿದ್ದಾಗಿ ದೂರು ಬಂದಿತ್ತು, ಗುರುವಾರ ನಗರದ ಮೈಲಾರಿ ಹೋಟೆಲ್ ಬಳಿ ಹಣ ಪಡೆಯುತ್ತಿದ್ದಾಗ ದಾಳಿ ನಡೆಸಿದ್ದೇವೆ' ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದರು.

'ಅಡ್ಡ ಮತದಾನದ ಗೊಂದಲ ಮುಗಿದಿದೆ'

ಪ್ರಜಾವಾಣಿ ವಾರ್ತೆ

ಮೈಸೂರು: ' ವಿಧಾನಪರಿಷತ್‌ಗೆ ನಡೆದ ಚುನಾವಣೆಯಲ್ಲಾದ ಅಡ್ಡ ಮತದಾನದಿಂದ ಉಂಟಾಗಿದ್ದ ಗೊಂದಲಗಳು ಈಗ ಮುಗಿದಿವೆ. ಎಲ್ಲ ವಿಚಾರವನ್ನೂ ಹೈಕಮಾಂಡ್‌ಗೆ ತಲುಪಿಸಿದ್ದೇವೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಇಲ್ಲಿ ಗುರುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಮತ್ತೆ ಆ ಬಗ್ಗೆ ಚರ್ಚೆ ಬೇಡ' ಎಂದು ಕೋರಿದರು.

ಬಿ.ವೈ. ವಿಜಯೇಂದ್ರ

ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ ಅವರ ಆಡಿಯೊ ಪ್ರಕರಣದ ಬಗ್ಗೆ ಪ್ರತಿಕ್ರಿಯಿಸಿ, 'ಆ ಧ್ವನಿ ನನ್ನದಲ್ಲ ಎಂದು ಖುದ್ದು ಸದಾನಂದಗೌಡರೇ ಸ್ಪಷ್ಟನೆ ನೀಡಿದ್ದಾರೆ. ಆದ್ದರಿಂದ ಆ ಬಗ್ಗೆ ಚರ್ಚೆ ಏಕೆ? ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಅವರೊಂದಿಗೂ ಮಾತನಾಡಿದ್ದೇನೆ. ರಾಜಕೀಯ ಪಕ್ಷ ಎಂದ ಮೇಲೆ ಸಣ್ಣಪುಟ್ಟ ಗೊಂದಲಗಳು ಸಹಜ. ಅವೆಲ್ಲವನ್ನೂ ನಿಭಾಯಿಸಿಕೊಂಡೇ ನಾನು ಪಕ್ಷ ಕಟ್ಟುತ್ತಿದ್ದೇನೆ' ಎಂದರು.

ಮುಂಬೈನಲ್ಲಿ ಮಳೆ: ಸಂಚಾರ ಅಸ್ತವ್ಯಸ್ತ

ಮುಂಬೈ (ಪಿಟಿಐ): ಮುಂಬೈನ ಹಲವು ಪ್ರದೇಶಗಳಲ್ಲಿ ಗುರುವಾರ ಭಾರಿ ಮಳೆಯಾಗಿದೆ. ಇದರಿಂದ ಹಲವೆಡೆ ವಾಹನಗಳ ಸಂಚಾರಕ್ಕೆ ಅಡೆತಡೆಯಾಗಿದ್ದು, ಇನ್ನೂ ಹೆಚ್ಚು ಮಳೆಯಾಗುವ ಬಗ್ಗೆ ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಎಚ್ಚರಿಕೆ ನೀಡಿದೆ.

ಕಳೆದ 24 ಗಂಟೆಯಲ್ಲಿ ಹಲವು ಪ್ರದೇಶಗಳಲ್ಲಿ 200 ಮಿ.ಮೀಗಿಂತಲೂ ಹೆಚ್ಚು ಮಳೆಯಾಗಿದೆ. ಪ್ರಮುಖ ಪ್ರದೇಶಗಳ ರಸ್ತೆಗಳಲ್ಲಿ ಮಳೆ ನೀರು ನಿಂತಿತ್ತು. ರೈಲ್ವೆ ಹಳಿಗಳ ಮೇಲೂ ಮಳೆ ನೀರು ನಿಂತಿದ್ದರಿಂದ ಸ್ಥಳೀಯ ರೈಲು ಸಂಚಾರದಲ್ಲೂ ವ್ಯತ್ಯಯವಾಗಿದೆ ಎಂದು ಸ್ಥಳೀಯ ಅಧಿಕಾರಿಗಳು ಹೇಳಿದ್ದಾರೆ.

ತೆರೆದ ಒಳಚರಂಡಿಗೆ ಬಿದ್ದು ವ್ಯಕ್ತಿ ಸಾವು: ಚಾಂದಿವಲಿ ನಗರದಲ್ಲಿ ತೆರೆದ ಒಳಚರಂಡಿಯ ಗುಂಡಿಗೆ (ಮ್ಯಾನ್‌ಹೋಲ್) ಬಿದ್ದು ಅಸ್ಲಾಂ ಇಶಾಖ್ ಶೇಖ್ (55) ಎಂಬವರು ಗುರುವಾರ ಮೃತಪಟ್ಟಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಬೃಹನ್ ಮುಂಬೈ ಮಹಾನಗರ ಪಾಲಿಕೆಯ ನಾಲ್ವರು ಅಧಿಕಾರಿಗಳನ್ನು ಅಮಾನತುಗೊಳಿಸಲಾಗಿದೆ.

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ | DR. MANMOHAN SINGH BENGALURU CITY UNIVERSITY

ಆಗು ನೀ ಅನಿಕೇತನ / BE BOUNDLESS

ಕುಲಸಚಿವರ ಕಛೇರಿ, ಸೆಂಟ್ರಲ್ ಕಾಲೇಜ್ ಕ್ಯಾಂಪಸ್, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560001.
ಇ–ಮೇಲ್: registrar@bcu.ac.in

ಸಂಖ್ಯೆ: ಬೆಂ.ನ.ವಿ/ಶೈಕ್ಷಣಿಕ/ಸ್ನಾ.ಕೋ–ಪ್ರವೇಶ/2026-27/033 ದಿನಾಂಕ: 01.07.2026

2026–27ನೇ ಸಾಲಿನ ಸ್ನಾತಕೋತ್ತರ ಪದವಿ ಪ್ರವೇಶಾತಿಗೆ ಅಧಿಸೂಚನೆ

2026–27ನೇ ಶೈಕ್ಷಣಿಕ ಸಾಲಿಗೆ ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ, ಸೆಂಟ್ರಲ್ ಕಾಲೇಜು ಆವರಣದ ಸ್ನಾತಕೋತ್ತರ ವಿಭಾಗಗಳು / ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಬ್ಯಾಟರಾಯನಪುರ, ಬಾಗಲೂರು ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಲಭ್ಯವಿರುವ ಈ ಕೆಳಕಂಡ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

(**Through the UUCMS Online portal https://uucms.karnataka.gov.in/Login/Index**) ವಿಶ್ವವಿದ್ಯಾನಿಲಯದ ವಿಭಾಗಗಳಲ್ಲಿ/ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಬ್ಯಾಟರಾಯನಪುರ, ಬಾಗಲೂರು/ ಸಂಯೋಜಿತ ಕಾಲೇಜುಗಳಲ್ಲಿ ಲಭ್ಯವಿರುವ ಸ್ನಾತಕೋತ್ತರ ವಿಷಯಗಳು:

ಕ್ರ.ಸಂ.	ಕೋರ್ಸುಗಳು	ಕೇಂದ್ರಗಳು
1	**ಕಲಾ ನಿಕಾಯ: ಎಂ.ಎ.:** 1. ಕನ್ನಡ 2. ಇಂಗ್ಲೀಷ್ 3. ಫ್ರೆಂಚ್ 4. ಜರ್ಮನ್ 5. ಸ್ಪಾನಿಷ್ 6. ಜಪಾನೀಸ್ 7. ಅರ್ಥಶಾಸ್ತ್ರ 8. ಇತಿಹಾಸ 9. ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ 10. ರಾಜ್ಯಶಾಸ್ತ್ರ 11. ಸಮಾಜ ಶಾಸ್ತ್ರ 12. ಸಮಾಜಕಾರ್ಯ **ಪಿಜಿ ಡಿಪ್ಲೋಮಾ:** 1. ಚೈನಿಸ್ 2. ಜರ್ಮನ್ 3. ಜಪಾನೀಸ್ 4. ಫ್ರೆಂಚ್ 5. ಸ್ಪಾನಿಷ್ 6. ಕೊರಿಯನ್ 7. ಇಟಲಿಯನ್ **ವಿಜ್ಞಾನ ನಿಕಾಯ: ಎಂ.ಎಸ್ಸಿ:** 1. ಭೌತಶಾಸ್ತ್ರ 2. ರಸಾಯನಶಾಸ್ತ್ರ 3. ಗಣಿತಶಾಸ್ತ್ರ 4. ಜೀವರಸಾಯನಶಾಸ್ತ್ರ 5. ಪರಿಸರ ಮತ್ತು ಹವಮಾನ ಬದಲಾವಣೆ 6.ಸಸ್ಯಶಾಸ್ತ್ರ 7. ಪ್ರಾಣಿಶಾಸ್ತ್ರ 8. ಗಣಕ ವಿಜ್ಞಾನ 9.ಉಡುಪು ತಂತ್ರಜ್ಞಾನ ಮತ್ತು ನಿರ್ವಹಣೆ **ಸ್ವಯಂ ಹಣಕಾಸು ಯೋಜನೆ ಅಡಿಯಲ್ಲಿ:** 10. ಜೈವಿಕ ತಂತ್ರಜ್ಞಾನ 11.ಸೂಕ್ಷ್ಮಜೀವಶಾಸ್ತ್ರ 12.ಗ್ರಂಥಾಲಯ ಮತ್ತು ಮಾಹಿತಿ ತಂತ್ರಜ್ಞಾನ 13. ಮನಃಶಾಸ್ತ್ರ 14. ವಿಧಿ ವಿಜ್ಞಾನ (ಫೋರೆನ್ಸಿಕ್ ಸೈನ್ಸ್) 15. ಆಹಾರ ಮತ್ತು ಪೌಷ್ಠಿಕಾಂಶ ವಿಜ್ಞಾನ 16. ಭ್ರೂಣಶಾಸ್ತ್ರ ಮತ್ತು ಸಂತಾನೋತ್ಪತ್ತಿ ತಂತ್ರಜ್ಞಾನ **ಪಿಜಿ ಡಿಪ್ಲೋಮಾ:** 1. ಸೈಬರ್ ಸೆಕ್ಯುರಿಟಿ 2. ಬಯೋ ಇನ್ಫೋಮೆಟಿಕ್ಸ್ **ವಾಣಿಜ್ಯ ನಿಕಾಯ: ಎಂ.ಕಾಂ.** 1. ಸಾಮಾನ್ಯ 2. ಇಂಟರ್‌ನ್ಯಾಷನಲ್ ಬಿಸಿನೆಸ್ 3. ಫೈನಾನ್ಷಿಯಲ್ ಅನಾಲಿಸಿಸ್ 4. ಫಿನ್ ಟೆಕ್. **ಪಿಜಿ ಡಿಪ್ಲೋಮಾ:** 1. ಬಿಸಿನೆಸ್ ಅಡ್ಮಿನಿಸ್ಟ್ರೇಷನ್ 2. ಮಾನವ ಸಂಪನ್ಮೂಲ ನಿರ್ವಹಣೆ 3. ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ 4.ಫೈನಾನ್ಷಿಯಲ್ ಮ್ಯಾನೇಜ್‌ಮೆಂಟ್ 5.ಫಿನ್ ಟೆಕ್ **ಶಿಕ್ಷಣ ನಿಕಾಯ** ಎಂ.ಎ: ಎಜುಕೇಷನ್	ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಸೆಂಟ್ರಲ್ ಕಾಲೇಜು ಮುಖ್ಯ ಆವರಣ.
2	**ವಾಣಿಜ್ಯ ನಿಕಾಯ: ಎಂ.ಕಾಂ:** ಸಾಮಾನ್ಯ	ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಬ್ಯಾಟರಾಯನಪುರ, ಬಾಗಲೂರು ಬೆಂಗಳೂರು
3	**ಕಲಾ ನಿಕಾಯ: ಎಂ.ಎ:** 1. ಕನ್ನಡ 2. ಇಂಗ್ಲೀಷ್ 3. ಇತಿಹಾಸ 4. ಅರ್ಥಶಾಸ್ತ್ರ 5. ಸಮಾಜ ಶಾಸ್ತ್ರ 6. ರಾಜ್ಯಶಾಸ್ತ್ರ 7. ಸಮಾಜಕಾರ್ಯ 8. ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ **ಎಂ.ವಿ.ಎ:** 1. ಅನಿಮೇಷನ್‌ಡಿಸೈನ್ 2. ಇಂಟಿರಿಯರ್‌ಡಿಸೈನ್ 3. ಅಪ್ಲೈಡ್‌ಆರ್ಟ್ಸ್, 4. ಆರ್ಟ್ ಹಿಸ್ಟ್ರಿ 5. ಪೇಯಿಂಟಿಂಗ್ 6. ಪ್ರಿಂಟ್ ಮೆಕಿಂಗ್ 7.ಸ್ಕಲ್ಪಚರ್ **ವಿಜ್ಞಾನ ನಿಕಾಯ: ಎಂ.ಎಸ್ಸಿ:** 1. ಭೌತಶಾಸ್ತ್ರ, 2. ರಸಾಯನಶಾಸ್ತ್ರ 3. ಗಣಿತಶಾಸ್ತ್ರ 4. ಜೀವರಸಾಯನಶಾಸ್ತ್ರ 5.ಸಸ್ಯಶಾಸ್ತ್ರ 6.ಪ್ರಾಣಿಶಾಸ್ತ್ರ 7.ಉಡುಪು ತಂತ್ರಜ್ಞಾನ ಮತ್ತು ನಿರ್ವಹಣೆ 8.ಗಣಕ ವಿಜ್ಞಾನ 10.ಜೈವಿಕ ತಂತ್ರಜ್ಞಾನ 11.ಸೂಕ್ಷ್ಮಜೀವಶಾಸ್ತ್ರ 12. ಮನಃಶಾಸ್ತ್ರ 13.ಮಾನಸಿಕ ಸಮಾಲೋಚನೆ 14.ಸ್ಪೀಚ್ ಲ್ಯಾಂಗ್ವೇಜ್ ಪ್ಯಾಥಾಲಾಜಿ 15.ಇಂಟೀರಿಯರ್ ಡಿಜೈನ್ ಅಂಡ್ ಡೆಕೊರೇಷನ್ 16.ನ್ಯೂಟ್ರೀಷನ್ ಅಂಡ್ ಡೈಟಿಟಿಕ್ಸ್ **ಪಿಜಿ ಡಿಪ್ಲೋಮಾ:** ಮನೋವೈಜ್ಞಾನಿಕ ಸಮಾಲೋಚನೆ **ವಾಣಿಜ್ಯ ನಿಕಾಯ: ಎಂ.ಕಾಂ:** 1.ಸಾಮಾನ್ಯ 2. ಫೈನಾನ್ಷಿಯಲ್ ಅನಾಲಿಸಿಸ್ 3.ಇಂಟರ್‌ನ್ಯಾಷನಲ್ ಬಿಸಿನೆಸ್ 4. ಎಂಟಿಟಿಎಂ: ಮಾಸ್ಟರ್ ಆಫ್ ಟೂರಿಸಂ ಅಂಡ್ ಟ್ರಾವೆಲ್ ಮ್ಯಾನೇಜ್‌ಮೆಂಟ್ **ಪಿಜಿ ಡಿಪ್ಲೋಮಾ:** 1. ಬಿಸಿನೆಸ್ ಅಡ್ಮಿನಿಸ್ಟ್ರೇಷನ್ 2. ಹ್ಯುಮನ್ ರಿಸೋರ್ಸ್ ಮ್ಯಾನೇಜ್‌ಮೆಂಟ್ 3. ಫೈನಾನ್ಷಿಯಲ್ ಮ್ಯಾನೇಜ್‌ಮೆಂಟ್	ಸಂಯೋಜಿತ ಕಾಲೇಜುಗಳು (ವಿವರಗಳಿಗೆ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ಅನ್ನು ಪರಿಶೀಲಿಸುವುದು)

ಅರ್ಜಿ ಸಲ್ಲಿಸಲು ಮಾರ್ಗಸೂಚಿಗಳು: 1) ಅರ್ಹ ಅಭ್ಯರ್ಥಿಗಳು ಸ್ನಾತಕೋತ್ತರ ಕೋರ್ಸುಗಳಿಗೆ **UUCMS Portal ಮೂಲಕವೇ Online ನಲ್ಲಿ ದಿನಾಂಕ: 01.07.2026 ರಿಂದ https://uucms.karnataka.gov.in ನಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ. 2)** ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಅರ್ಹ ಕೋರ್ಸ್‌ಗಳಿಗೆ ಅರ್ಜಿಯನ್ನು ಸಲ್ಲಿಸಬಹುದು. **3)** ಪದವಿಯ ಅಂತಿಮ ಪರೀಕ್ಷೆಗಳ ಫಲಿತಾಂಶ ನಿರೀಕ್ಷಿಸುತ್ತಿರುವ ಅಭ್ಯರ್ಥಿಗಳೂ ಸಹ ಅರ್ಜಿಯನ್ನು ಸಲ್ಲಿಸಬಹುದು. **4)** ವಿದ್ಯಾರ್ಥಿಗಳು **ರೂ. 500/–** ಅರ್ಜಿ (ಪ.ಜಾ/ಪ.ಪಂ, ಪ್ರವರ್ಗ–1 ಮತ್ತು ತೃತೀಯ ಲಿಂಗ ಅಭ್ಯರ್ಥಿಗಳಿಗೆ ರೂ. 250/– ಕರ್ನಾಟಕ ಅಭ್ಯರ್ಥಿಗಳಿಗೆ ಮಾತ್ರ) ಶುಲ್ಕದೊಂದಿಗೆ **ಗರಿಷ್ಠ 3 ವಿಷಯಗಳಿಗೆ** ಅರ್ಜಿ ಸಲ್ಲಿಸಲು UUCMS Portal ನಲ್ಲಿ ಅವಕಾಶ ಕಲ್ಪಿಸಿದೆ. ಹಾಗೂ 3 ವಿಷಯಗಳಿಗಿಂತ ಹೆಚ್ಚಿನ ವಿಷಯಗಳಿಗೆ ಅರ್ಜಿ ಸಲ್ಲಿಸಿದಲ್ಲಿ ಹೆಚ್ಚುವರಿಯಾಗಿ ರೂ. 100/– ಗಳನ್ನು ಪ್ರತಿ ವಿಷಯಕ್ಕೆ ಪಾವತಿಸಬೇಕಾಗಿರುತ್ತದೆ. ಅಭ್ಯರ್ಥಿಗಳು ಆನ್‌ಲೈನ್ ಮೂಲಕವೇ UUCMS Payment link ಮೂಲಕ ಪಾವತಿಸಬೇಕು. 5. ಅರ್ಹತೆ, ಸೀಟ್ ಮ್ಯಾಟ್ರಿಕ್ಸ್ ಮತ್ತು ಕೋರ್ಸುಗಳ ಶುಲ್ಕದ ಮಾಹಿತಿಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಜಾಲತಾಣ: http://bcu.ac.in / http://bcu.karnataka.gov.in ಸಂಪರ್ಕಿಸಲು ಕೋರಿದೆ. **6)** 2026–27ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಅರ್ಹ ಅಭ್ಯರ್ಥಿಗಳು ಆನ್‌ಲೈನ್‌ಯಲ್ಲಿ ಅರ್ಜಿಗಳನ್ನು **ದಿನಾಂಕ: 31.07.2026 ವರೆಗೆ ಯಾವುದೇ ದಂಡ ಶುಲ್ಕವಿಲ್ಲದೆ ಸಲ್ಲಿಸಬಹುದಾಗಿದ್ದು ಆನಂತರ ದಿನಾಂಕ: 10.08.2026 ರ ವರೆಗೆ ರೂ. 250/– ದಂಡ ಶುಲ್ಕದೊಂದಿಗೆ ಸಲ್ಲಿಸಬಹುದಾಗಿದೆ. 7)** UUCMS ಮುಖಾಂತರ ಸಲ್ಲಿಸಿದ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು. **8)** ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಭರ್ತಿ ಮಾಡಿದ ಮುದ್ರಿತ ಪ್ರತಿಯನ್ನು ಅಗತ್ಯವಿರುವ ಪೂರಕ ದಾಖಲೆಗಳೊಂದಿಗೆ ಖುದ್ದಾಗಿ ಅಥವಾ ನೊಂದಾಯಿತ ಅಂಚೆಯ ಮುಖಾಂತರ ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ತಾವು ಅರ್ಜಿಯಲ್ಲಿ ಆಯ್ದುಕೊಂಡಿರುವ ವಿಷಯಗಳ ವಿಭಾಗದ **"ಅಧ್ಯಕ್ಷರುಗಳಿಗೆ ಪ್ರತ್ಯೇಕವಾಗಿ ಸಲ್ಲಿಸಲು ಕೋರಿದೆ, ವಿಳಾಸ: ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಸೆಂಟ್ರಲ್ ಕಾಲೇಜು ಆವರಣ, ಡಾ|| ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001"** ಸಲ್ಲಿಸತಕ್ಕದ್ದು. **9)** ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಸಲ್ಲಿಸಿದ ಅಥವಾ ಅಪೂರ್ಣವಾದ ಅರ್ಜಿಗಳನ್ನು ಯಾವುದೇ ಮಾಹಿತಿ ನೀಡದೇ ತಿರಸ್ಕರಿಸಲಾಗುವುದು. **10) ಸೂಚನೆ:** ಯಾವುದೇ ಸ್ನಾತಕೋತ್ತರ ವಿಭಾಗಕ್ಕೆ ಕನಿಷ್ಠ 20 ವಿದ್ಯಾರ್ಥಿಗಳು ನೋಂದಣಿಯಾಗದಿದ್ದ ಪಕ್ಷದಲ್ಲಿ ವಿಶ್ವವಿದ್ಯಾನಿಲಯವು ಆ ಸ್ನಾಕತೋತ್ತರ ಕೋರ್ಸನ್ನು ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಆರಂಭಿಸುವುದಿಲ್ಲ. 11) ಹೆಚ್ಚಿನ ಮಾಹಿತಿಗಾಗಿ ಕುಲಸಚಿವರು, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಇವರನ್ನು ಸಂಪರ್ಕಿಸಬಹುದಾಗಿದೆ. ಮಿಂಚಂಚೆ: **registrar@bcu.ac.in& registrarbcu@gmail.com.**

ಸಹಿ/– ಕುಲಸಚಿವರು

DIPR/CP/1454./Adverto/2026-27

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ನಂ.16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು – 560 052. ದೂರವಾಣಿ : 080–22268677/78/79
ಫ್ಯಾಕ್ಸ್ : 080–22268667 ಇ–ಮೇಲ್: kerc-ka@nic.in
ವೆಬ್‌ಸೈಟ್ : https://kerc.karnataka.gov.in

ಸಂಖ್ಯೆ:ಕವಿನಿಆ/ಎಫ್–32/ವಾ–29/2026–27/2218 ದಿನಾಂಕ:02.07.2026

ಸಾರ್ವಜನಿಕ ವಿಚಾರಣೆ ಬಗ್ಗೆ ಸೂಚನೆ

ವಿಷಯ: ಸೌರಶಕ್ತಿ ಯೋಜನೆಗಳಿಗೆ (ವಿವಿಧ ಮೀಟರಿಂಗ್ ವ್ಯವಸ್ಥೆ ಹೊಂದಿರುವ ವಿತರಣಾ ಸೌರ ಫೋಟೊವೋಲ್ಟಾಯಿಕ್ (DSPV) ಸ್ಥಾವರಗಳನ್ನು ಒಳಗೊಂಡಂತೆ) ಜುಲೈ 1, 2026 ರಿಂದ ಜೂನ್ 30, 2029ರವರೆಗಿನ ಅವಧಿಗೆ ದರ ಮತ್ತು ಮಾನದಂಡಗಳ ನಿಗದಿಪಡಿಸುವ ಚರ್ಚಾಪತ್ರ ಕುರಿತು, ಸಾರ್ವಜನಿಕ ವಿಚಾರಣೆ ಬಗ್ಗೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಈ ಮೇಲಿನ ವಿಷಯದ ಬಗ್ಗೆ ಚರ್ಚಾಪತ್ರ ಹೊರಡಿಸಿದ್ದು, ಅದು ಆಯೋಗದ ಅಂತರ್ಜಾಲ ತಾಣ: **https://kerc.karnataka.gov.in** ಯಲ್ಲಿ ಲಭ್ಯವಿರುತ್ತದೆ.

ಆಯೋಗವು ಈ ವಿಷಯದ ಬಗ್ಗೆ ಭಾಗೀದಾರರ ಅಭಿಪ್ರಾಯ ಪಡೆಯಲು ಮಂಗಳವಾರ ದಿನಾಂಕ: **14.07.2026ರಂದು ಮಧ್ಯಾಹ್ನ 3.00 ಗಂಟೆಗೆ, ಆಯೋಗದ ಕೋರ್ಟ್‌ಹಾಲ್‌ನ ಒಂದನೆಯ ಮಹಡಿ, ನಂ.16ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052** ಇಲ್ಲಿ ಸಾರ್ವಜನಿಕ ವಿಚಾರಣೆಯನ್ನು ನಿಗದಿಪಡಿಸಿದೆ. ಆಸಕ್ತರು ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಿ ತಮ್ಮ ಅನಿಸಿಕೆ/ಅಭಿಪ್ರಾಯ/ಸಲಹೆಗಳನ್ನು ಆಯೋಗದ ಮುಂದೆ ಸಲ್ಲಿಸಲು ಕೋರಲಾಗಿದೆ.

ವಾಸಾಸಂಇ/ಉನಿ-ಸಿ.ಪಿ/1444/ಕೆಎಸ್‌ಎಂಸಿಎ/2026-27 ಸಹಿ/- ಕಾರ್ಯದರ್ಶಿ, ಕ.ವಿ.ನಿ.ಆ.

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
(www.kpwd.gov.in)

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಬೆಂಗಳೂರು ವಿಭಾಗ, 2ನೇ ಮಹಡಿ, ಲೋಕೋಪಯೋಗಿ ಇಲಾಖೆ ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–01.
ದೂರವಾಣಿ ಸಂಖ್ಯೆ: 080–22133370 Email ID: eepwdbngdn@yahoo.com
E-Portal : https://kppp.karnataka.gov.in/#/portal/portal-home

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 12/2026–27 ದಿನಾಂಕ: 01.07.2026

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ ಆನೇಕಲ್ & ನೆಲಮಂಗಲ ಉಪವಿಭಾಗಕ್ಕೆ ಸಂಬಂಧಿಸಿದಂತೆ 03 ಸಂಖ್ಯೆಯ (ರೂ. 46.00 ರಿಂದ 650.00 ಲಕ್ಷಗಳ) ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಗಳ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ.

ಕಾಮಗಾರಿಯ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಕೆಪಿಪಿ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

1. ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ: 16.07.2026 ಸಂಜೆ 4.00 ಗಂಟೆ ಯವರೆಗೆ.
2. ಟೆಂಡರ್‌ಗಳನ್ನು ಇ–ಪೋರ್ಟಲ್ ಮೂಲಕ ತೆರೆಯುವ ದಿನಾಂಕ: 17.07.2026 ಸಂಜೆ 04.30 ಗಂಟೆಗೆ ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಲೋ.ಇ. ಬೆಂಗಳೂರು ವಿಭಾಗ, ಬೆಂಗಳೂರು.

DIPR/CP/1442/Zen/2026-27

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರಿ ಸ್ವಾಮ್ಯದ ಒಂದು ಉದ್ಯಮ)
ಅಧಿಕೃತ ಕಚೇರಿ: 3ನೇ ಮಹಡಿ, ಕೆ.ಹೆಚ್.ಬಿ. ಶಾಪಿಂಗ್ ಕಾಂಪ್ಲೆಕ್ಸ್ ನ್ಯಾಷನಲ್ ಗೇಮ್ಸ್ ವಿಲೇಜ್, ಕೋರಮಂಗಲ, ಬೆಂಗಳೂರು–560 047
ದೂರವಾಣಿ: 2571 0501, ಫ್ಯಾಕ್ಸ್: 2570 7380, ಇ–ಮೇಲ್: rohgml@gmail.com
No. CIN U85110KA1947SGC001321

ಸಂಖ್ಯೆ: ಹಚಿಗಕಂ/ಅಕ/ಇ–ಹರಾಜು/2025–26 ದಿನಾಂಕ: 03.07.2026

ಅಧಿಸೂಚನೆ
ನಿಗದಿತ ಠೇವಣಿಗಾಗಿ ಬಿಡ್‌ಗಳ ಆಹ್ವಾನ

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ (ಹೆಚ್‌ಜಿಎಂಎಲ್) ಇವರು ತಮ್ಮ ಹೆಚ್ಚುವರಿ ಹಣವನ್ನು ಈ ಕೆಳಗೆ ನಮೂದಿಸಿದ ಸಾರ್ವಜನಿಕ ವಲಯದ ಮತ್ತು ಆರ್‌ಆರ್‌ಬಿ ಬ್ಯಾಂಕುಗಳಲ್ಲಿ ಅವಧಿ ಠೇವಣಿಯಲ್ಲಿ ಇ–ಹರಾಜಿನ ಮೂಲಕ ಹೂಡಿಕೆ ಮಾಡಲು ಉದ್ದೇಶಿಸಿದ್ದಾರೆ.

ಕ್ರ.ಸಂ.	ಸಾರ್ವಜನಿಕ ವಲಯದ ಮತ್ತು ಆರ್‌ಆರ್‌ಬಿ ಬ್ಯಾಂಕುಗಳಲ್ಲಿ (Non-Callable FD)	ಹೂಡಿಕೆ ಅವಧಿ
1	ರೂ. 200.00 ಕೋಟಿಗಳು	ಒಂದು ವರ್ಷ (365 ದಿನ)

ಸದರಿ ಟೆಂಡರ್‌ನ ಇ–ಹರಾಜಿನ ವಿವರಗಳನ್ನು **ದಿನಾಂಕ: 04.07.2026** ರಿಂದ ಕರ್ನಾಟಕ ಸರ್ಕಾರದ ಇ–ಪೋರ್ಟಲ್ **https://kppp.karnataka.gov.in** ಇಲ್ಲಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

<u>ಇ–ಹರಾಜಿನ ವೇಳಾಪಟ್ಟಿ ಈ ಕೆಳಗಿನಂತೆ:</u>

1) ಇ–ಪೋರ್ಟಲ್‌ನಲ್ಲಿ ಬಿಡ್‌ಗಳನ್ನು ದಿನಾಂಕ: **06.07.2026ರ ಮಧ್ಯಾಹ್ನ 12.00 ಗಂಟೆಗೆ** ಅಪ್‌ಲೋಡ್ ಮಾಡಲಾಗುವುದು. 2) ಅನೆಕ್ಸರ್–ಎ ಡಿಕ್ಲರೇಷನ್ ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **13.07.2026ರ ಮಧ್ಯಾಹ್ನ 1.00 ಗಂಟೆಯವರೆಗೆ. 3)** ಬಡ್ಡಿದರದ ಲೈವ್ ಬಿಡ್ಡಿಂಗ್ ದಿನಾಂಕ: **15.07.2026ರ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 2.00 ಗಂಟೆವರೆಗೆ.**

ಸಹಿ/– ವ್ಯವಸ್ಥಾಪಕ ನಿರ್ದೇಶಕರು

DIPR/CP/1446/SA/2026-27

ಭಾರತದ ಅತಿ ಹೆಚ್ಚು ಚಿನ್ನದ ಉತ್ಪಾದಕರು

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಕಾಮಗಾರಿ ವಿಭಾಗ ಬೆಳಗಾವಿ.

ಸಂ: ವಾಕರಸಾ/ಕಾನಿಅ/ಬೆವಿ/ನಕ್ಷೆ/263/2026–27 ದಿನಾಂಕ: 01/07/2026

ಕೆ.ಪಿ.ಪಿ.ಪಿ ಪೋರ್ಟಲ್ ಟೆಂಡರ್ ಪ್ರಕಟಣೆ ಸಂ: 10/2026–27
(Through Gok Karnataka Public Procurement Portal www.kppp.karnataka.gov.in)

ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ/ಕೇಂದ್ರ ಲೋಕೋಪಯೋಗಿ ಇಲಾಖೆ, ಎಂ.ಇ.ಎಸ್ ಗಳಲ್ಲಿ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ Gok Karnataka Public Procurement Portal ಮುಖಾಂತರ ಟೆಂಡರ್ ಅಹ್ವಾನಿಸಲಾಗಿದೆ. ಟೆಂಡರ್ ಶೆಡ್ಯೂಲ್‌ನ ವಿವರಗಳಿಗಾಗಿ www.kppp.karnataka.gov.in ವೆಬ್‌ಸೈಟ್‌ಗೆ ಲಾಗ್‌ಆನ್ ಮಾಡಿ ಪಡೆದುಕೊಳ್ಳಬಹುದು.

ಕ್ರ. ಸಂ.1 ಟೆಂಡರ್ ಪ್ರಕಟಣೆ ಸಂಖ್ಯೆ :10 ಕಾಮಗಾರಿಯ ಹೆಸರು : ಬೆಳಗಾವಿ ಬಸ್ ಘಟಕ–2 ರ ಆವರಣದಲ್ಲಿ PM-eBus Sewa ಯೋಜನೆಯಡಿಯಲ್ಲಿ ವಿದ್ಯುತ್ ಬಸ್ ಘಟಕದ ನಿರ್ಮಾಣಕ್ಕಾಗಿ ಸಿವಿಲ್ ಕಾಮಗಾರಿ ಕೈಗೊಳ್ಳುವುದು. ಟೆಂಡರ್ ಆಧಾರ : ದ್ವಿ ಲಕೋಟೆ ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) : 1024=38 ಮುಂಗಡ ಠೇವಣಿ ಮೊತ್ತ (ರೂ.ಗಳಲ್ಲಿ) : 15,00,000=00 ಗುತ್ತಿಗೆದಾರರ ದರ್ಜೆ : ದರ್ಜೆ–1, ಭರ್ತಿಮಾಡಿದ ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ : 30/07/2026

ಇನ್ನುಳಿದ ವಿವರಗಳನ್ನು ವಿವರವಾದ ಟೆಂಡರ್ ಪ್ರಕಟಣೆಯಲ್ಲಿರುವಂತೆ ಖಚಿತ ಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸತಕ್ಕದ್ದು. ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಪಡೆಯಬಹುದಾಗಿದೆ ಮತ್ತು ಈ ಕಛೇರಿ ದೂರವಾಣಿ ಸಂ. 0831–2451475 ಗೆ ಸಂಪರ್ಕಿಸ ಬಹುದಾಗಿದೆ ಹಾಗೂ ಸಹಾಯವಾಣಿ (help desk) : +91–8046010000 and +91–8068948777 ಸಂಪರ್ಕಿಸ ಬಹುದಾಗಿದೆ. ಯಾವುದೇ ತಿದ್ದುಪಡಿ ಮತ್ತು ದಿನಾಂಕಗಳಲ್ಲಿನ ಮುಂದೂಡಿಕೆಗಳಿದ್ದಲ್ಲಿ Gok Karnataka Public Procurement Portal ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು, ವಾಕರಸಾ ಸಂಸ್ಥೆ, ಕಾಮಗಾರಿ ವಿಭಾಗ, ಬೆಳಗಾವಿ.

DIPR/BGM/RO-NO-523/KSMCA/2026-27

ಕರ್ನಾಟಕ ಸರ್ಕಾರ
ಆಡಳಿತ ವೈದ್ಯಾಧಿಕಾರಿಗಳ ಕಛೇರಿ, ಉಪವಿಭಾಗೀಯ ಆಸ್ಪತ್ರೆ ಸಾಗರ, ಶಿವಮೊಗ್ಗ ಜಿಲ್ಲೆ–577401

ಸಂ:sdh/e-tender/drugs/28/2026–27 ದಿನಾಂಕ:25.06.2026

ಔಷಧ ಮತ್ತು ಪ್ರಯೋಗಶಾಲಾ ರಾಸಾಯನಿಕಗಳ ಖರೀದಿ ಸಂಬಂಧ ಇ–ಟೆಂಡರ್ ಪ್ರಕಟಣೆ

ಉಪವಿಭಾಗೀಯ ಆಸ್ಪತ್ರೆ ಸಾಗರ ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಸಾಗರ ಇಲ್ಲಿಗೆ ಔಷಧಗಳ ಪೂರೈಕೆ ಪಡೆಯಲು ಅರ್ಹ ಸಂಸ್ಥೆಗಳಿಂದ two tender document system ರಂತೆ Karnataka Public Procurement Portal (KPPP) ಮುಖಾಂತರ ಇ–ಟೆಂಡರ್ ಆಹ್ವಾನಿಸಿದ್ದು, ಆಸಕ್ತ ಅರ್ಹ ಟೆಂಡರ್‌ದಾರರು ದರಗಳನ್ನು upload ಮಾಡಬಹುದಾಗಿದೆ. ದರಗಳನ್ನು upload ಮಾಡಲು ಕಡೆಯ ದಿನಾಂಕ: 21.07.2026 ಹಾಗೂ ಈ ಕುರಿತು ಹೆಚ್ಚಿನ ಮಾಹಿತಿಗಾಗಿ https://kppp.karnataka.gov.in ವೆಬ್ ಸೈಟ್‌ಗೆ ಲಾಗ್ ಇನ್ ಮಾಡಲು ಕೋರಲಾಗಿದೆ.

ಸಹಿ/– ಆಡಳಿತ ವೈದ್ಯಾಧಿಕಾರಿಗಳು, ಉಪವಿಭಾಗೀಯ ಆಸ್ಪತ್ರೆ, ಸಾಗರ

ವಾ.ಸಾ.ಸಂ.ಇ/ಕೆ.ಎಸ್.ಎಂ.ಸಿ.ಎ/ಶಿ/26–27/10/07/453

ಪಿ.ಎಂ.ಶ್ರೀ ಕೇಂದ್ರೀಯ ವಿದ್ಯಾಲಯ ಎಂ.ಇ.ಜಿ. ಮತ್ತು ಕೇಂದ್ರ
ಸೆಂಟ್ ಜಾನ್ಸ್ ರಸ್ತೆ, ಬೆಂಗಳೂರು - 560 042. ದೂರವಾಣಿ : 080-25365053.
ಇ-ಮೇಲ್ : kvmegbangalore@gmail.com, ವೆಬ್‌ಸೈಟ್ : megcentre.kvs.ac.in

ವಾಕ್ – ಇನ್ – ಇಂಟರ್‌ವ್ಯೂ

ಬೆಂಗಳೂರಿನ ಪಿ.ಎಂ.ಶ್ರೀ ಕೇಂದ್ರೀಯ ವಿದ್ಯಾಲಯ ಎಂ.ಇ.ಜಿ. & ಸೆಂಟರ್‌ಗೆ ಪೂರ್ಣ ಅರೆಕಾಲಿಕ ಗುತ್ತಿಗೆ ಆಧಾರದ ಮೇಲೆ ಶಿಕ್ಷಕರ ಆಯ್ಕೆ ಪಟ್ಟಿಯನ್ನು 2026-27 (ಪ್ಯಾನಲ್) ಸಿದ್ಧಪಡಿಸಲು, ಅಭ್ಯರ್ಥಿಗಳ (18 ರಿಂದ 65 ವಯೋಮಾನದವರು) ಸಂದರ್ಶನವನ್ನು ನಡೆಸಲಾಗುವುದು. ಎಲ್ಲಾ ಅಭ್ಯರ್ಥಿಗಳು ತಮ್ಮ ಸ್ವಂತ ವೆಚ್ಚದಲ್ಲಿ ಪಿ.ಎಂ.ಶ್ರೀ ಕೇಂದ್ರೀಯ ವಿದ್ಯಾಲಯ ಎಂ.ಇ.ಜಿ. ಮತ್ತು ಕೇಂದ್ರದಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು ಮತ್ತು ಪ್ರಮಾಣಪತ್ರಗಳ ಮೂಲ ಮತ್ತು ಫೋಟೋಕಾಪಿಗಳು ಮತ್ತು ಪಾಸ್‌ಪೋರ್ಟ್ ಗಾತ್ರದ ಭಾವಚಿತ್ರದೊಂದಿಗೆ ಹಾಜರಾಗಬೇಕು. **ನೋಂದಣಿಯ ಸಮಯ ಬೆಳಗ್ಗೆ 9.00 ಗಂಟೆಗೆ.**

ಸಂದರ್ಶನ ದಿನಾಂಕ	ಹುದ್ದೆ
24.07.2026	ಪಿಜಿಟಿ (ಸ್ನಾತಕೋತ್ತರ ಶಿಕ್ಷಕರು) – ರಾಜಕೀಯ ವಿಜ್ಞಾನ, ಭೌತಶಾಸ್ತ್ರ, ಇತಿಹಾಸ, ಅರ್ಥಶಾಸ್ತ್ರ
	ಟಿಜಿಟಿ (ಪದವೀಧರ ಶಿಕ್ಷಕರು) – ಸಮಾಜ ವಿಜ್ಞಾನ
	ಪ್ರಾಥಮಿಕ ಶಿಕ್ಷಕ (ಪಿ.ಆರ್.ಟಿ.), ಬಾಲವಾಟಿಕಾ ಶಿಕ್ಷಕ / ಶಿಕ್ಷಕಿ
	ಸಮಾಲೋಚಕ (ಕೌನ್ಸೆಲರ್), ಕಲಾ ತರಬೇತುದಾರ, ಕ್ರೀಡಾ ತರಬೇತುದಾರ, ಯೋಗ ಶಿಕ್ಷಕ / ಶಿಕ್ಷಕಿ, ಕನ್ನಡ ಶಿಕ್ಷಕ / ಶಿಕ್ಷಕಿ, ಸಂಗೀತ / ನೃತ್ಯ ತರಬೇತುದಾರ

ಅಭ್ಯರ್ಥಿಗಳು ಕೆಳಗಿನ ಲಿಂಕ್ ಮೂಲಕ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು : https://samvida-sathi.kvs.gov.in
ಗಮನಿಸಿ : ವಿದ್ಯಾರ್ಹತೆ ಮತ್ತು ಇತರೆ ವಿವರಗಳಿಗಾಗಿ ದಯವಿಟ್ಟು ನಮ್ಮ ವೆಬ್‌ಸೈಟ್ : www.megcentre.kvs.ac.in ಗೆ ಭೇಟಿ ನೀಡಿ.

ಸಹಿ/- ಪ್ರಾಂಶುಪಾಲರು, ಪಿ.ಎಂ.ಶ್ರೀ ಕೆ.ವಿ. ಎಂ.ಇ.ಜಿ. ಮತ್ತು ಕೇಂದ್ರ, ಬೆಂಗಳೂರು

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ಸಂಖ್ಯೆ 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79, ಫ್ಯಾಕ್ಸ್: 080–22268667
ಇಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ನಂ: ಕವಿನಿಆ/ಕೆಇಡಿಸಿ/2026–27/2219 ದಿನಾಂಕ: 02–07–2026

ಸಾರ್ವಜನಿಕ ವಿಚಾರಣೆ ಬಗ್ಗೆ ಸೂಚನೆ

<u>ವಿಷಯ</u>: ಕರಡು–ಕರ್ನಾಟಕ ವಿದ್ಯುಚ್ಛಕ್ತಿ ವಿತರಣಾ ಸಂಹಿತೆ (ಒಂದನೇ ತಿದ್ದುಪಡಿ) 2026.

<u>ಉಲ್ಲೇಖ</u>: ಕವಿನಿಆ/ಕೆಇಡಿಸಿ/2026–27/2080, ದಿನಾಂಕ: 04.06.2026.

ಮೇಲ್ಕಂಡ ವಿಷಯದಲ್ಲಿ ಪ್ರಸ್ತಾಪಿಸಿರುವ ಕರಡು ವಿನಿಯಮಗಳನ್ನು ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ: 11–06–2026ರಂದು ಪ್ರಕಟಗೊಳಿಸಲಾಗಿದೆ. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಂತರ್ಜಾಲ ತಾಣ **https://kerc.karnataka.gov.in**ದಲ್ಲಿ ಸದರಿ ಕರಡನ್ನು ಲಭ್ಯವಿರಿಸಲಾಗಿದೆ.

ಆಯೋಗವು **ದಿನಾಂಕ: 14–07–2026ರಂದು ಮಧ್ಯಾಹ್ನ 2.30ಕ್ಕೆ ಆಯೋಗದ ನ್ಯಾಯಾಂಗ ಸಭಾಂಗಣದಲ್ಲಿ** ಸಾರ್ವಜನಿಕ ವಿಚಾರಣೆಯನ್ನು ಏರ್ಪಡಿಸಿದ್ದು, ಆಸಕ್ತರು ಈ ವಿಚಾರಣೆಯಲ್ಲಿ ಭಾಗವಹಿಸಿ ಆಯೋಗದ ಮುಂದೆ ಖುದ್ದಾಗಿ ಹಾಜರಾಗಬಹುದು ಮತ್ತು ಮೌಖಿಕ ಸಲ್ಲಿಕೆಗಳನ್ನು ಮಾಡಬಹುದು.

ಸಹಿ/– ಕಾರ್ಯದರ್ಶಿ
DIPR/CP/YC/1436/2026-27 ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

ಬನ್ನೇರುಘಟ್ಟ ಜೈವಿಕ ಉದ್ಯಾನವನ
ಕಾರ್ಯನಿರ್ವಾಹಕ ನಿರ್ದೇಶಕರ ಕಛೇರಿ, ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು – 560083. ದೂರವಾಣಿ ಸಂಖ್ಯೆ: 080–29776466/67
ಇ–ಮೇಲ್: ed@bannerughattabiopark.org

ಸಂಖ್ಯೆ:ಎ3/ಬಜಉಪಾ/ಇ–ಟೆಂಡರ್/ಫೀಡ್/ಸಿಆರ್–1/2026–27 ದಿನಾಂಕ: 30–06–2026

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಉಪ ನಿರ್ದೇಶಕರು, ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು ರವರು **ಬನ್ನೇರುಘಟ್ಟ ಜೈವಿಕ ಉದ್ಯಾನವನ ಇಲ್ಲಿನ ವಿವಿಧ ಘಟಕಗಳಲ್ಲಿರುವ ಪ್ರಾಣಿ–ಪಕ್ಷಿಗಳ ಆಹಾರಕ್ಕೆ ಅವಶ್ಯವಿರುವ ವಿವಿಧ ಆಹಾರ ಸಾಮಾಗ್ರಿಗಳನ್ನು ಸರಬರಾಜು ಮಾಡಲು** ಅಸಕ್ತ ಸಂಸ್ಥೆ / ಸರಬರಾಜುದಾರರಿಂದ ಕಾರ್ಯಾದೇಶ ಪಡೆದ ದಿನದಿಂದ ಒಂದು ವರ್ಷದ ಅವಧಿಗೆ ಸರಬರಾಜು ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ವಿವರಗಳು	ಟೆಂಡರಿಗೆ ಇಡಲಾದ ಆಹಾರ ಪದಾರ್ಥಗಳ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಸಲ್ಲಿಸಬೇಕಾದ ಇ.ಎಂ.ಡಿ ಹಣ (ರೂ.ಲಕ್ಷಗಳಲ್ಲಿ)
1	ದವಸ ಧಾನ್ಯಗಳು, ದ್ವಿ–ದಳ ಧಾನ್ಯಗಳು, ಫೀಡ್ ಇತರೆ ಸರಬರಾಜು ಮಾಡುವುದು.	200.00	3.00
2	ಹಸಿರು ಹುಲ್ಲು ಸರಬರಾಜು ಮಾಡುವುದು.	455.00	6.825

ವಿವರವಾದ ಟೆಂಡರ್ ಅಧಿಸೂಚನೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ.ಎಂ.ಡಿ ಹಾಗೂ ಟೆಂಡರ್ ಫೀಯೊಂದಿಗೆ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: **15–07–2026 ರಂದು ಸಂಜೆ 4.00 ಗಂಟೆಯವರೆಗೆ.** ಟೆಂಡರ್‌ನ್ನು ತೆರೆಯುವ ದಿನಾಂಕ: **18–07–2026 ರಂದು ಬೆಳಿಗ್ಗೆ 11.30 ಗಂಟೆಗೆ.**

ಸಹಿ/– ಉಪ ನಿರ್ದೇಶಕರು

ವಾಸಾಸಂಇ/ವಾ.ಪ್ರ/1441/ಅಡ್ವರ್ಟೋ/2026–27

ಬೆವಿಕಂ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)
BESCOM

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕೆಪಿಪಿ ವಿಧಾನ ಮೂಲಕ ಮಾತ್ರ)

ಪ್ರಧಾನ ವ್ಯವಸ್ಥಾಪಕರು (ಸಿವಿಲ್), ನಿಗಮ ಕಛೇರಿ, ಬೆವಿಕಂ, ಇವರು, ಟೆಂಡರ್ ಸಂಖ್ಯೆ:**BESCOM/2026-27/BD/WORK_INDENT1148** ರಂತೆ ಕೆಳಕಂಡ ಕಾಮಗಾರಿಗೆ ಕೆಪಿಪಿ ಮಾದರಿ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
ಕಾಮಗಾರಿಯ ಹೆಸರು: ಬೆಂಗಳೂರಿನ ಬೆವಿಕಂನ ನಿಗಮ ಕಚೇರಿಯ ಬ್ಲಾಕ್ II ಕಟ್ಟಡದಲ್ಲಿರುವ ಎಲ್ಲಾ ಮಹಡಿಯ ಶೌಚಾಲಯಗಳ ನವೀಕರಣ, ಎರಡನೇ ಮಹಡಿಯಲ್ಲಿರುವ GM(QS&S) ಶಾಖೆ ಮತ್ತು ನೆಲ ಮಹಡಿಯಲ್ಲಿರುವ ಕಾನೂನು ಶಾಖೆಯ ನವೀಕರಣ ಮತ್ತು ಇತರ ಸಂಬಂಧಿತ ಕೆಲಸಗಳು.
ಟೆಂಡರಿಗಿಟ್ಟ ಅಂದಾಜು ಮೊತ್ತ (ಜಿಎಸ್‌ಟಿ ಹೊರತುಪಡಿಸಿ):**ರೂ.105.72 ಲಕ್ಷಗಳು.**
ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:**18.07.2026**
ಟೆಂಡರ್‌ನಲ್ಲಿ ಪಾಲ್ಗೊಳ್ಳುವ ಬಗ್ಗೆ ಮಾಹಿತಿಗಳನ್ನು ವೆಬ್‌ಸೈಟ್ **https://kppp.karnataka.gov.in.** ಹೈಪರ್‌ಲಿಂಕ್‌ನಿಂದ ದಿನಾಂಕ:**04.07.2026** ರಂದು ಅಥವಾ ನಂತರ ಪಡೆದುಕೊಳ್ಳಬಹುದು.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ: 1912
"ಬೆಸ್ಕಾಂ ಮಿತ್ರ" Mobile App ಡೌನ್‌ಲೋಡ್ ಮಾಡಿಕೊಳ್ಳಿ

ಸಹಿ/– ಪ್ರಧಾನ ವ್ಯವಸ್ಥಾಪಕರು (ಸಿವಿಲ್) ಬೆವಿಕಂ, ಬೆಂಗಳೂರು

ಬೆಂಗಳೂರು ಪೂರ್ವ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ದೊಡ್ಡನೆಕ್ಕುಂದಿ ವಿಭಾಗ, ಫೀನಿಕ್ಸ್ ಮಾಲ್ ಎದುರು, ಆರ್‌ಹೆಚ್‌ಬಿ ಕಾಲೋನಿ, ವೈಟ್‌ಫೀಲ್ಡ್ ಮುಖ್ಯರಸ್ತೆ, ಬೆಂಗಳೂರು-560048.

ಸಂ. ಬೆಂಪೂನಪಾ/ಕಾಪಾಅ/ದೊಡ್ಡನೆಕ್ಕುಂದಿ/ಟೆಂ/03/2026–27 ದಿನಾಂಕ: 02.07.2026

ಟೆಂಡರ್‌ಗೆ ಆಹ್ವಾನ (ಅಲ್ಪಾವಧಿ) (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ದೊಡ್ಡನೆಕ್ಕುಂದಿ ವಿಭಾಗದ ಕಾರ್ಯಪಾಲಕ ಅಭಿಯಂತರರು, ಕೆಳಗೆ ನೀಡಲಾದ ಕೋಷ್ಟಕದಲ್ಲಿನ ಕಾಮಗಾರಿ ವಿವರಗಳಿಗಾಗಿ ಅರ್ಹ ಟೆಂಡರುದಾರರಿಂದ **ಐಟಂ ದರದ** ಟೆಂಡರ್‌ಗಳನ್ನು ಆಹ್ವಾನಿಸುತ್ತಾರೆ. ಬಿಡ್ಡುದಾರರು ಸಿಪಿಡಬ್ಲ್ಯೂಡಿ/ಕೆಪಿಡಬ್ಲ್ಯೂಡಿ/ರೈಲ್ವೆಸ್/ಎಂಇಎಸ್/ ಯಾವುದೇ ರಾಜ್ಯ ಅಥವಾ ಕೇಂದ್ರ ಸರ್ಕಾರಿ ಸಂಸ್ಥೆಯಲ್ಲಿ ನೋಂದಾಯಿತರಾಗಿರಬೇಕು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in/eporta/index.seam** ಕಾಂಟ್ರಾಕ್ಟ್ ಲಾಗಿನ್ ಅಡಿಯಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಕ್ರ ಸಂ.	ಕಾಮಗಾರಿ ಹೆಸರು/ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)/ ಇಎಂಡಿ ರೂ.ಗಳಲ್ಲಿ/ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸಿದ ಅವಧಿ
1	2011 ರ ಜನಗಣತಿ ಪ್ರಕಾರ ಪ.ಜಾ/ಪ.ಪಂ ಪ್ರದೇಶಗಳಲ್ಲಿ ಸಮಗ್ರ ಅಭಿವೃದ್ಧಿ ಕಾಮಗಾರಿಗಳು ಬ್ಲಾಕ್ ನಂ. 107/2, 109, 206, 119, 178, 23, 24, 22, 118, 121 ಹಾಗೂ 106 ಕುಂದಲಹಳ್ಳಿ ಗ್ರಾಮ, ಲಕ್ಷ್ಮೀ ನಾರಾಯಣಪುರ, ದೊಡ್ಡನೆಕ್ಕುಂದಿ, ಎ.ಕೆ. ಕಾಲೊನಿ, ಅಶ್ವಥ್‌ನಗರ, ಚಿನ್ನಪ್ಪನಹಳ್ಳಿ, ಅಂಬೇಡ್ಕರ್‌ನಗರ, ಮಹೇಶ್ವರನಗರ ಮತ್ತು ಗರುಡಾಚಾರ್‌ಪಾಳ್ಯ ಸುತ್ತಮುತ್ತಲಿನ ಪ್ರದೇಶ ಮತ್ತು ಮಹದೇವಪುರ ಕ್ಷೇತ್ರದಲ್ಲಿರುವ ಎಇಸಿಎಸ್ ಲೇಔಟ್, ಗರುಡಾಚಾರ್‌ಪಾಳ್ಯ ಮತ್ತು ದೊಡ್ಡನೆಕ್ಕುಂದಿ ವಾರ್ಡ್‌ಗಳಲ್ಲಿ ಸಂಬಂಧಿತ ಕಾಮಗಾರಿಗಳು. ಟೆಂಡರ್‌ಗಿಟ್ಟ ಮೊತ್ತ: **ರೂ.639.17 ಲಕ್ಷಗಳು.** ಇಎಂಡಿ: **ರೂ.9,60,000/-.** ಕಾಮಗಾರಿ ಪೂರ್ಣಗೊಳಿಸುವ ಅವಧಿ: **09 ತಿಂಗಳು.**

ಕಾರ್ಯಕ್ರಮಗಳ ಕ್ಯಾಲೆಂಡರ್:
1. ಪ್ರಶ್ನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **09.07.2026 ರಂದು ಮಧ್ಯಾಹ್ನ 3.00 ಗಂಟೆಯೊಳಗೆ**
2. ಪೂರ್ವ–ಬಿಡ್ ಸಭೆಯ ದಿನಾಂಕ ಮತ್ತು ಸಮಯ: **09.07.2026 ರಂದು ಸಂಜೆ 4.00 ಗಂಟೆಗೆ**
3, ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **10.07.2026 ರಂದು ಸಂಜೆ 4.00 ಗಂಟೆಯವರೆಗೆ**
4. ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **13.07.2026 ರಂದು ಸಂಜೆ 4.30 ಗಂಟೆಗೆ**
5. ಹಣಕಾಸು ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **14.07.2026 ರಂದು ಸಂಜೆ 4.00 ಗಂಟೆಗೆ**
6. ಟೆಂಡರ್‌ನ ಸಿಂಧುತ್ವ: **180 ದಿನಗಳು**

ಬಿಡ್ ದಾಖಲೆಯನ್ನು ಇತರ ನಿಯಮಗಳು ಮತ್ತು ಷರತ್ತುಗಳಿಗಾಗಿ ಉಲ್ಲೇಖಿಸಬಹುದು ಮತ್ತು ಯಾವುದೇ ತಿದ್ದುಪಡಿ/ಅನುಬಂಧವನ್ನು **https://kppp.karnataka.gov.in** ಅಥವಾ ಕಾಂಟ್ರಾಕ್ಟ್ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುತ್ತದೆ ಮತ್ತು ಸೂಚಿಸಲಾಗುತ್ತದೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ದೊಡ್ಡನೆಕ್ಕುಂದಿ ವಿಭಾಗ, ಬಿಇಸಿಸಿ

ನಗರಸಭಾ ಕಾರ್ಯಾಲಯ, ಕನಕಪುರ
ದೂ : 080–27522428. ಇ–ಮೇಲ್: ka.kanakapuracmc@gmail.com
ವೆಬ್‌ಸೈಟ್: http://www.kanakapuracity.mrc.gov.in

ಸಂ: ಕನಸ/ತಾಂ.ಶಾ/ಸಿ.ಆರ್/ಟೆಂ–04/2026–27 ದಿನಾಂಕ: 01.07.2026

ಟೆಂಡರ್ ಪ್ರಕಟಣೆ

ಕನಕಪುರ ನಗರಸಭೆಯ ವ್ಯಾಪ್ತಿಯಲ್ಲಿ UIDF, UCF ಹಾಗೂ ನಗರಸಭಾ ಅನುದಾನದಡಿ ಈ ಕೆಳಕಂಡ ವಾರ್ಷಿಕ ನಿರ್ವಹಣೆ, DPR, PMC ಹಾಗೂ ವಿವಿಧ ಕಾಮಗಾರಿಗಳನ್ನು ನಿರ್ವಹಿಸಲು ಸಂಬಂಧಪಟ್ಟ ಟೆಂಡರ್ ಡಾಕ್ಯೂಮೆಂಟ್‌ನ ಷರತ್ತು ಹಾಗೂ ಸೂಚನೆಗೊಳಪಟ್ಟು ಏಜೆನ್ಸಿದಾರರು/ಲೋಕೋಪಯೋಗಿ ಇಲಾಖೆಯಲ್ಲಿ ಸಿವಿಲ್ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

1) DMA/2026-27/SE7975/CALL-2 ಅಂದಾಜು ಮೊತ್ತ ರೂ. 17.26 ಲಕ್ಷ
2) DMA/2026-27/SE7972/CALL-2 ಅಂದಾಜು ಮೊತ್ತ ರೂ. 21.74 ಲಕ್ಷ
3) DMA/2026-27/SE7973/CALL-2 ಅಂದಾಜು ಮೊತ್ತ ರೂ. 11.05 ಲಕ್ಷ
4) DMA/2026-27/OW/WORK_INDENT59485/CALL-2 ಅಂದಾಜು ಮೊತ್ತ ರೂ. 25.00 ಲಕ್ಷ **5)** DMA/2026-27/OW/WORK_INDENT59486 ಅಂದಾಜು ಮೊತ್ತ ರೂ. 25.00 ಲಕ್ಷ **6)** DMA/2026-27/OW/WORK_INDENT59467/CALL-2 ಅಂದಾಜು ಮೊತ್ತ ರೂ. 13.00 ಲಕ್ಷ **7)** DMA/2026-27/WS/WORK_INDENT 59489/CALL-2 ಅಂದಾಜು ಮೊತ್ತ ರೂ. 15.00 ಲಕ್ಷ. **8)** DMA/2026-27/ SE/7999 ಅಂದಾಜು ಮೊತ್ತ ರೂ. 77.80 ಲಕ್ಷ. **9)** DMA/2026-27/OW/WORK_INDENT 59954 ಅಂದಾಜು ಮೊತ್ತ ರೂ. 2000.00 ಲಕ್ಷ. **10)** DMA/2026-27/SE8109 (Non ECV) **11)** DMA/2026-27/SE8112 (Non ECV). **12)** DMA/2026-27/SE8113 ಅಂದಾಜು ಮೊತ್ತ ರೂ. 46.32 ಲಕ್ಷ. **13)** DMA/2026-27/SE7981 (Non ECV)

ಟೆಂಡರ್ ದಿನಾಂಕದ ವಿವರಗಳು ಹಾಗೂ ಇತರೆ ಮಾಹಿತಿಗಳು ಕೆಳಕಂಡಂತಿವೆ. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 15.07.2026 ಸಂಜೆ 17:30 ಗಂಟೆಯವರೆಗೆ.** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 17.07.2026 ಬೆಳಿಗ್ಗೆ 11.00 ಗಂಟೆಗೆ.** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 23.07.2026 ಬೆಳಿಗ್ಗೆ 11:00 ಗಂಟೆಗೆ.** ಯಾವುದೇ ದಿನಾಂಕಗಳಲ್ಲಿನ ಮುಂದೂಡಿಕೆ ಮತ್ತು ತಿದ್ದುಪಡಿಗಳಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು. ಯಾವುದೇ ವಾರ್ತಾ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಹೆಚ್ಚಿನ ವಿವರಗಳನ್ನು ಕಛೇರಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿದೆ.

ಸಹಿ/– **ಪೌರಾಯುಕ್ತರು** ನಗರಸಭೆ, ಕನಕಪುರ

DIPR/BSD/155/SA/2025-26

ಸಿಟಿ ಸಿವಿಲ್ ನ್ಯಾಯಾಲಯ ಕಛೇರಿ, ಬೆಂಗಳೂರು

ಸಂಖ್ಯೆ: ಸಿಸಿಸಿ.ಎಡಿಎಂ–II. 9&15/2026/ಮಾನವ ಸಂಪನ್ಮೂಲ ಹೊರಗುತ್ತಿಗೆ–ಸಿಸಿಹೆಚ್ 94ಎನ್‌ಐಎ ಮತ್ತು 54&55 ಎಸಿಜೆಎಂ ಮತ್ತು ಹೌಸ್‌ಕೀಪಿಂಗ್ & ಸ್ಯಾನಿಟೇಷನ್

ದಿನಾಂಕ: 01.07.2026

ಇ–ಟೆಂಡರ್ ಪ್ರಕಟಣೆ

ಸಿಟಿ ಸಿವಿಲ್ ನ್ಯಾಯಾಲಯವು ಕೆಳಕಂಡ ಸೇವಾ ಗುತ್ತಿಗೆ ಒದಗಿಸಲು ಅರ್ಹ ಸಂಸ್ಥೆಗಳು / ಏಜೆನ್ಸಿಗಳು / ವ್ಯವಹಾರ ಹೊಂದಿರುವ ನಿರ್ವಾಹಕರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಇ–ಬಿಡ್ಡಿಂಗ್ ಪ್ರಸ್ತಾವನೆ (ಕೊಟೇಶನ್‌ಗಳು)ಗಳನ್ನು ಆಹ್ವಾನಿಸಿದೆ.

(1) ಟೆಂಡರ್ ಸಂಖ್ಯೆ (ಕೆಪಿಪಿ ಇಂದ ನೀಡಿದಂತೆ): ಹೆಚ್‌ಸಿಕೆ/2026–27/ಎಸ್‌ಇ 0172 ದಿನಾಂಕ: 01.07.2026. ಸೇವೆಯ ಹೆಸರು: **ಬೆಂಗಳೂರು ನಗರದ XCIII ಅಡಿಷನಲ್ ಸಿಟಿ ಸಿವಿಲ್ ನ್ಯಾಯಾಲಯ ಮತ್ತು ಅದರ ಘಟಕಗಳಿಗೆ ಹೊರಗುತ್ತಿಗೆ ಮೂಲಕ ಮಾನವ ಸಂಪನ್ಮೂಲವನ್ನು ಒದಗಿಸುವುದು.** ಟೆಂಡರ್‌ನ ಅಂದಾಜು ವೆಚ್ಚ ವಾರ್ಷಿಕ: **ರೂ.16,18,284/–.** ಇಎಂಡಿ ಮೊತ್ತ: **ರೂ.16,182/–**

(2) ಟೆಂಡರ್ ಸಂಖ್ಯೆ (ಕೆಪಿಪಿ ಇಂದ ನೀಡಿದಂತೆ): ಹೆಚ್‌ಸಿಕೆ/2026–27/ಎಸ್‌ಇ0173 ದಿನಾಂಕ: 01.07.2026. ಸೇವೆಯ ಹೆಸರು: **ಬೆಂಗಳೂರು ನಗರದ LIV ಮತ್ತು LV ಅಡಿಷನಲ್ ಚೀಫ್ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳಿಗೆ ಹೊರಗುತ್ತಿಗೆ ಮೂಲಕ ಮಾನವ ಸಂಪನ್ಮೂಲವನ್ನು ಒದಗಿಸುವುದು.** ಟೆಂಡರ್‌ನ ಅಂದಾಜು ವೆಚ್ಚ ವಾರ್ಷಿಕ: **ರೂ.32,36,568/–.** ಇಎಂಡಿ ಮೊತ್ತ: **ರೂ.16,182/–**

(3) ಟೆಂಡರ್ ಸಂಖ್ಯೆ (ಕೆಪಿಪಿ ಇಂದ ನೀಡಿದಂತೆ): ಹೆಚ್‌ಸಿಕೆ/2026–27/ಎಸ್‌ಇ0174 ದಿನಾಂಕ: 01.07.2026. ಸೇವೆಯ ಹೆಸರು: **ಬೆಂಗಳೂರು ನಗರದ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಶೌಚಾಲಯಗಳು ಮತ್ತು ವಾಷ್‌ಬೇಸಿನ್‌ಗಳಿಗೆ ಸ್ಯಾನಿಟೈಜೇಷನ್ ಸೇವೆಗಳನ್ನು ಒದಗಿಸುವುದು.** ಟೆಂಡರ್‌ನ ಅಂದಾಜು ವೆಚ್ಚ ವಾರ್ಷಿಕ: **ರೂ.7,73,052/–.** ಇಎಂಡಿ ಮೊತ್ತ: **ರೂ.7,731/–**

ಪ್ರತೀ ಕಾಮಗಾರಿಗೆ ಟೆಂಡರ್ ಗುತ್ತಿಗೆಯ ಕಾಲಾವಧಿ: 3 ವರ್ಷಗಳು, ತೃಪ್ತಿಕರ ಗುಣಮಟ್ಟ/ಕಾರ್ಯಕ್ಷಮತೆಗೆ ಒಳಪಟ್ಟು ಪ್ರತಿ ವರ್ಷ ನವೀಕರಿಸಬಹುದಾಗಿದೆ. ಟೆಂಡರ್ ಪ್ರಸ್ತಾವನೆ ಸಲ್ಲಿಸುವ ಕಡೆಯ ದಿನಾಂಕ ಮತ್ತು ಸಮಯ: **16.07.2026ರಂದು ಕ್ರ.ಸಂ.1 ಮತ್ತು 2ಕ್ಕೆ ಮಧ್ಯಾಹ್ನ 3.00 ಗಂಟೆಗೆ** ಮತ್ತು **ಕ್ರ.ಸಂ.3ಕ್ಕೆ ಮಧ್ಯಾಹ್ನ 3.01 ಗಂಟೆಗೆ.** ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: ತಾಂತ್ರಿಕ ಬಿಡ್: **17.07.2026, ಮಧ್ಯಾಹ್ನ 3.01 ಗಂಟೆ.** ಆರ್ಥಿಕ ಬಿಡ್: ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ. ಬಿಡ್ ಪೂರ್ವ ಸಭೆ **ದಿನಾಂಕ: 09.07.2026 ರಂದು ಕ್ರ.ಸಂ. 1 ಮತ್ತು 2ಕ್ಕೆ ಮಧ್ಯಾಹ್ನ 1.00 ಗಂಟೆಗೆ** ಮತ್ತು **ಕ್ರ.ಸಂ. 3ಕ್ಕೆ ಮಧ್ಯಾಹ್ನ 1.30 ಗಂಟೆಗೆ.** ಹೆಚ್ಚಿನ ವಿವರಗಳಿಗೆ ಸದರಿ ನ್ಯಾಯಾಲಯದ ಸಂಪರ್ಕ ಸಂಖ್ಯೆ: 080–22939220, ಇ–ಮೇಲ್ ಐಡಿ: **cccadm2@gmail.com** ಸಂಪರ್ಕಿಸಿ.

ಸಹಿ/– ರಿಜಿಸ್ಟ್ರಾರ್, ನಗರ ಸಿವಿಲ್ ನ್ಯಾಯಾಲಯ, ಬೆಂಗಳೂರು.

ವಾಸಾಸಂಇ/ಉನಿ–ಸಿ.ಪಿ/1433/ಕೆಎಸ್‌ಎಂಸಿಎ/2026–27

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಜೀವನವು ಹೋರಾಟದ ಕಣ. ಹೋರಾಟದ ಮೂಲಕವೇ ನಾವು ಮುಂದಕ್ಕೆ ಸಾಗಬೇಕಾಗಿದೆ.

–ಸ್ವಾಮಿ ವಿವೇಕಾನಂದ

ಸಂಪಾದಕೀಯ

ಹುತಾತ್ಮರಿಗೆ ವಿಳಂಬ ಗೌರವ ಸರ್ಕಾರದ ವಿಶ್ವಾಸಾರ್ಹತೆಗೆ ಧಕ್ಕೆ

‘ಆಪರೇಷನ್ ಸಿಂಧೂರ’ ಕಾರ್ಯಾಚರಣೆಯಲ್ಲಿ ಆರು ಯೋಧರು ಹುತಾತ್ಮರಾಗಿರುವ ವಿಷಯವನ್ನು ಕೇಂದ್ರ ಸರ್ಕಾರ ಅತ್ಯಂತ ವಿಳಂಬವಾಗಿ ಬಹಿರಂಗಪಡಿಸಿರುವುದು ದುರದೃಷ್ಟಕರ ಸಂಗತಿ. ಈ ನಡವಳಿಕೆಯು, ಪ್ರಜಾಪ್ರಭುತ್ವದ ಅತ್ಯುತ್ತಮ ಮೌಲ್ಯಗಳಾದ ಪಾರದರ್ಶಕತೆ ಮತ್ತು ಮುಕ್ತ ಮನೋಭಾವವನ್ನು ಎತ್ತಿಹಿಡಿಯುವುದರಲ್ಲಿ ಸರ್ಕಾರ ವಿಫಲವಾಗಿರುವುದರ ಸಂಕೇತವಾಗಿದೆ. ಸುಬೇದಾರ್ ಮೇಜರ್ ಪವನ್ ಕುಮಾರ್, ರೈಫಲ್‌ಮನ್ ಸುನೀಲ್ ಕುಮಾರ್, ಲ್ಯಾನ್ಸ್ ನಾಯಕ್ ದಿನೇಶ್ ಕುಮಾರ್, ಹವಾಲ್ದಾರ್ ಸುನೀಲ್ ಕುಮಾರ್ ಸಿಂಗ್, ಸಾರ್ಜೆಂಟ್ ಸುರೇಂದ್ರ ಕುಮಾರ್ ಮತ್ತು ಅಗ್ನಿವೀರ್ ಮೂದ್ ಮುರಳಿನಾಯಕ್ ಅವರ ಹೆಸರುಗಳನ್ನು ದೆಹಲಿಯ ರಾಷ್ಟ್ರೀಯ ಯುದ್ಧ ಸ್ಮಾರಕದ ‘ತ್ಯಾಗಚಕ್ರ’ ಗೋಡೆಯ ‘3-ಡಿ’ ಭಾಗದಲ್ಲಿ ಕೆತ್ತನೆ ಮಾಡಿಸಲಾಗಿದೆ. ಈ ವಿಷಯ ಜೂನ್ 26ರಂದು ಬೆಳಕಿಗೆ ಬಂದಿದೆ. ‘ಆಪರೇಷನ್ ಸಿಂಧೂರ’ ಕಾರ್ಯಾಚರಣೆ ನಡೆದ ಒಂದು ವರ್ಷಕ್ಕೂ ಹೆಚ್ಚಿನ ಸಮಯದ ನಂತರವಾದರೂ ದೇಶಕ್ಕಾಗಿ ಹುತಾತ್ಮರಾದ ಯೋಧರನ್ನು ಸ್ಮರಿಸಿ ಗೌರವಿಸಿರುವುದು ಸ್ವಾಗತಾರ್ಹ. ದೇಶಕ್ಕಾಗಿ ಹೋರಾಡಿ ಜೀವತ್ಯಾಗ ಮಾಡಿದ ಪ್ರತಿಯೊಬ್ಬ ಯೋಧನೂ ರಾಷ್ಟ್ರದ ಗೌರವಕ್ಕೆ ಅರ್ಹನಾಗಿದ್ದಾನೆ. ಆದರೆ, ಈ ಆರು ಹುತಾತ್ಮರ ಹೆಸರು ಮತ್ತು ಗುರುತನ್ನು ಅಧಿಕೃತವಾಗಿ ದಾಖಲಿಸಲು ಇಷ್ಟು ವಿಳಂಬ ಮಾಡಿರುವುದು ಸರ್ಕಾರದ ಪಾರದರ್ಶಕತೆ ಮತ್ತು ಹೇಳಿಕೆಗಳ ವಿಶ್ವಾಸಾರ್ಹತೆಯ ಕುರಿತು ಅನುಮಾನ ಹುಟ್ಟಿಸುವಂತಿದೆ ಹಾಗೂ ಈ ಕುರಿತು ಸರ್ಕಾರ ನೀಡಿರುವ ವಿವರಣೆ ತೃಪ್ತಿಕರವಾಗಿಲ್ಲ.



‘ಆಪರೇಷನ್ ಸಿಂಧೂರ’ ಕಾರ್ಯಾಚರಣೆಯಲ್ಲಿ ಹುತಾತ್ಮರಾದ ಯೋಧರ ವಿವರಗಳನ್ನು ಮರೆಮಾಚಿದ್ದರಿಂದ ಸರ್ಕಾರದ ವಿಶ್ವಾಸಾರ್ಹತೆಯೇ ಪ್ರಶ್ನಾರ್ಹವಾಗಿದೆ.

2025ರ ಮೇ ತಿಂಗಳಲ್ಲಿ ಆಗಿನ ಸೇನಾ ಕಾರ್ಯಾಚರಣೆಗಳ ಮಹಾ ನಿರ್ದೇಶಕ (ಡಿಜಿಎಂಒ) ಲೆಫ್ಟಿನೆಂಟ್ ಜನರಲ್ ರಾಜೀವ್ ಘಯಿ ಅವರು, ‘ಆಪರೇಷನ್ ಸಿಂಧೂರ’ ಕಾರ್ಯಾಚರಣೆಯಲ್ಲಿ ಜೀವಹಾನಿ ಸಂಭವಿಸಿರುವುದಾಗಿ ಹೇಳಿದ್ದರು. ಆದರೆ, ದೇಶ ಕಳೆದುಕೊಂಡ ಯೋಧರ ಹೆಸರುಗಳನ್ನು ಅವರು ಬಹಿರಂಗಪಡಿಸಿರಲಿಲ್ಲ. ವಾಯುಪಡೆ ಮುಖ್ಯಸ್ಥ ಏರ್‌ಚೀಫ್ ಮಾರ್ಷಲ್ ಎ.ಪಿ. ಸಿಂಗ್ ಅವರು ಸಾರ್ಜೆಂಟ್ ಸುರೇಂದ್ರ ಕುಮಾರ್ ಅವರ ಕುಟುಂಬವನ್ನು ಭೇಟಿ ಮಾಡಿದ್ದರು; ಹುತಾತ್ಮರ ಕುಟುಂಬಗಳಿಗೆ ಶೌರ್ಯ ಪ್ರಶಸ್ತಿಗಳನ್ನೂ ನೀಡಲಾಗಿತ್ತು. ಇಷ್ಟಾದರೂ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು, ‘ಆಪರೇಷನ್ ಸಿಂಧೂರ’ ಕಾರ್ಯಾಚರಣೆಯ ವೇಳೆ ಭಾರತದ ಯಾವೊಬ್ಬ ಯೋಧನಿಗೂ ಹಾನಿಯಾಗಿಲ್ಲ ಎಂದು ಲೋಕಸಭೆಯಲ್ಲಿ ಸ್ಪಷ್ಟವಾಗಿ ಹೇಳಿದ್ದರು. ಸಚಿವರು ಓರ್ವ ಪೈಲಟ್ ಸಾವಿಗೆ ಸಂಬಂಧಿಸಿದ ವರದಿಯನ್ನಷ್ಟೇ ನಿರಾಕರಿಸಿದ್ದರು ಎಂದು ಈಗ ಸಮರ್ಥಿಸಿಕೊಳ್ಳಲಾಗುತ್ತಿದೆ ಹಾಗೂ ಈ ವಿವರಣೆ ನಂಬುವಂತಿಲ್ಲ. ರಕ್ಷಣಾ ಸಚಿವರು ತಪ್ಪು ಮಾಹಿತಿ ನೀಡಿದ್ದಕ್ಕಾಗಿ ಲೋಕಸಭೆಯಲ್ಲಿ ಹಕ್ಕುಚ್ಯುತಿ ನಿರ್ಣಯ ಎದುರಿಸಬೇಕಾದ ಸ್ಥಿತಿ ಪ್ರಸ್ತುತ ರೂಪುಗೊಂಡಿದೆ. ಕಾರ್ಯಾಚರಣೆಯಲ್ಲಿ ಸಂಭವಿಸಿದ ಜೀವಹಾನಿಯ ಕುರಿತು ವಿವರಗಳನ್ನು ಬಹಿರಂಗಪಡಿಸಲು ಸರ್ಕಾರ ನಿರಾಕರಿಸಿದ್ದನ್ನು, ಕಾರ್ಯಾಚರಣೆಯಿಂದ ಉಂಟಾದ ನಷ್ಟದ ಕುರಿತು ಸೇನಾ ಅಧಿಕಾರಿಗಳು ನೀಡಿರುವ ಹೇಳಿಕೆಗಳ ಹಿನ್ನೆಲೆಯಲ್ಲಿ ಪರಿಶೀಲಿಸಬೇಕಾಗಿದೆ. 2019ರಲ್ಲಿ ನಡೆದ ಬಾಲಾಕೋಟ್ ಕಾರ್ಯಾಚರಣೆ ಸಂದರ್ಭದಲ್ಲಿಯೂ ಎಲ್ಲ ಭಾರತೀಯ ವಿಮಾನಗಳು ಮತ್ತು ಪೈಲಟ್‌ಗಳು ಸುರಕ್ಷಿತವಾಗಿ ಮರಳಿದ್ದಾರೆ ಎಂದು ಸೇನಾ ಅಧಿಕಾರಿಗಳು ಹೇಳಿದ್ದರು. ಆದರೆ, ನಂತರದಲ್ಲಿ ವಿಂಗ್ ಕಮಾಂಡರ್ ಅಭಿನಂದನ್ ವರ್ತಮಾನ್ ಅವರು ಪಾಕಿಸ್ತಾನದಲ್ಲಿ ಸೆರೆಯಾದುದನ್ನು ಸರ್ಕಾರ ಒಪ್ಪಿಕೊಳ್ಳಬೇಕಾಯಿತು.

ಸಂಘರ್ಷಕ್ಕೆ ಸಂಬಂಧಿಸಿದಂತೆ ಕಾರ್ಯಾಚರಣೆಯ ವಿವರಗಳು ಹಾಗೂ ಇತರ ಗೋಪ್ಯ ಮಾಹಿತಿಗಳನ್ನು ಸರ್ಕಾರ ಅಥವಾ ಸೇನೆ ಬಹಿರಂಗಪಡಿಸಬೇಕೆಂದು ಯಾರೂ ನಿರೀಕ್ಷಿಸುವುದಿಲ್ಲ. ಆದರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ದೇಶ ಅನುಭವಿಸಿದ ನಷ್ಟ ಹಾಗೂ ಹಿನ್ನಡೆಯ ಮಾಹಿತಿ ನೀಡುವುದರಲ್ಲಿ ಸರ್ಕಾರ ಪಾರದರ್ಶಕವಾಗಿರಬೇಕು. ಸತ್ಯಾಂಶಗಳನ್ನು ಮುಚ್ಚಿಡುವ ಅಥವಾ ಉತ್ಪ್ರೇಕ್ಷಿಸುವ ಮೂಲಕ ಸುಳ್ಳು ಸಂಕಥನಗಳನ್ನು ಸೃಷ್ಟಿಸಬಾರದು. ಮುಕ್ತವಾಗಿದ್ದಾಗ ಹಾಗೂ ಜನರಿಗೆ ಉತ್ತರದಾಯಿಯಾಗಿದ್ದಾಗ ಮಾತ್ರ ಸರ್ಕಾರ ಸಾರ್ವಜನಿಕ ವಿಶ್ವಾಸವನ್ನು ಪಡೆದುಕೊಳ್ಳುತ್ತದೆ. ಸತ್ಯ ಮತ್ತು ವಾಸ್ತವಾಂಶಗಳನ್ನು ಆಯ್ದ ರೀತಿಯಲ್ಲಿ ಬಹಿರಂಗಪಡಿಸುವ ಸರ್ಕಾರದ ನಡವಳಿಕೆ, ಹೇಳಿಕೆ ಹಾಗೂ ಪ್ರತಿಪಾದನೆಗಳು ಜನರಲ್ಲಿ ಅಪನಂಬಿಕೆ ಉಂಟು ಮಾಡುತ್ತವೆ. ಅತಿಮಾನವ ಶಕ್ತಿ ಅಥವಾ ತಪ್ಪೇ ಮಾಡದ ವ್ಯವಸ್ಥೆ ಎಂದು ಬಿಂಬಿಸಿಕೊಳ್ಳುವುದರಲ್ಲಿ ಪ್ರಜಾಪ್ರಭುತ್ವದ ಹೆಚ್ಚುಗಾರಿಕೆ ಇಲ್ಲ. ಪ್ರಜಾಪ್ರಭುತ್ವ ಅತ್ಯಂತ ಮಾನವೀಯ ವ್ಯವಸ್ಥೆಯಾಗಿದ್ದು, ಅದರಲ್ಲಿ ವೈಫಲ್ಯಗಳು ಸಹಜ. ಸತ್ಯಾಂಶಗಳು ಹಾಗೂ ವೈಫಲ್ಯಗಳನ್ನು ಮುಚ್ಚಿಡುವುದರಿಂದ ಪ್ರಜಾಪ್ರಭುತ್ವ ಶಿಥಿಲಗೊಳ್ಳುವುದೇ ಹೊರತು, ಬಲಗೊಳ್ಳುವುದಿಲ್ಲ.

ಚಾಟಿ

ಲೂಟಿಕೋರರ ಸಾಮ್ಯತೆ!

ರಾಮನ ಹೆಸರಲ್ಲಿ ಗುಡಿ ಕಟ್ಟಿದವರಲ್ಲೂ ಲೂಟಿಕೋರರಿದ್ದಾರೆ, ಸಂವಿಧಾನದ ಹೆಸರಲ್ಲಿ ಪ್ರಮಾಣ ಮಾಡಿದವರಲ್ಲೂ ಲೂಟಿಕೋರರಿದ್ದಾರೆ.

ಎಂ.ಜಿ. ಚಂದ್ರಶೇಖರಯ್ಯ, ಲೇಖಕ, ‘ಫೇಸ್‌ಬುಕ್’ನಿಂದ

ಕಿಡಿನುಡಿ

ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ರಾಜ್ಯ ಸರ್ಕಾರ ತಾನು ಮಾಡಿದ್ದೆಲ್ಲಾ ಸರಿ ಎಂಬ ಧೋರಣೆಯಲ್ಲಿದೆ. ರೈತರನ್ನು ಬೀದಿಗೆ ತರಲು ಹೊರಟಿದೆ; ಈ ಧೋರಣೆ ಒಳ್ಳೆಯದಲ್ಲ.

ಬಿ.ವೈ. ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

25 ವರ್ಷಗಳ ಹಿಂದೆ

ಮಂಗಳವಾರ, 3-7-2001

• ಉತ್ತರ ಕರ್ನಾಟಕಕ್ಕೆ ಶಿಕ್ಷಣ ನಿರ್ದೇಶನಾಲಯ

ಬೆಂಗಳೂರು, ಜುಲೈ 2– ಉತ್ತರ ಕರ್ನಾಟಕ ಭಾಗದಲ್ಲಿ ಪ್ರತ್ಯೇಕ ಪ್ರಾಥಮಿಕ ಶಿಕ್ಷಣ ನಿರ್ದೇಶನಾಲಯ ಸ್ಥಾಪಿಸಲು ರಾಜ್ಯ ಸರ್ಕಾರ ಇಂದು ಇಲ್ಲಿ ನಿರ್ಧರಿಸಿತು.

ರಾಜ್ಯದಲ್ಲಿ ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದ ಜಿಲ್ಲೆಗಳಾದ ಕಲ್ಬುರ್ಗಿ, ರಾಯಚೂರು, ಕೊಪ್ಪಳ, ಬೀದರ್, ಬಳ್ಳಾರಿ, ವಿಜಾಪುರ ಹಾಗೂ ಬಾಗಲಕೋಟೆ ಪ್ರದೇಶದಲ್ಲಿ ಶೈಕ್ಷಣಿಕ ಅಭಿವೃದ್ಧಿ ಸಾಧಿಸಲು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಅಧ್ಯಕ್ಷತೆಯಲ್ಲಿ ನಡೆದ ಉನ್ನತಮಟ್ಟದ ಸಮಿತಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು.

• ಆನೆ ಅರ್ಪಣೆ: ಲಾಠಿ ಪ್ರಹಾರ

ಗುರುವಾಯೂರು, ಜುಲೈ 2 (ಪಿಟಿಐ, ಯುಎನ್‌ಐ)– ತಮಿಳುನಾಡು ಮುಖ್ಯಮಂತ್ರಿ ಜಯಲಲಿತಾ ಅವರನ್ನು ಇಲ್ಲಿನ ಶ್ರೀಕೃಷ್ಣ ದೇವಾಲಯದ ಒಳಗೆ ಬಾರದಂತೆ ತಡೆಯಲು ಯತ್ನಿಸಿದ ಬಿಜೆಪಿ ಕಾರ್ಯಕರ್ತರ ಮೇಲೆ ಪೊಲೀಸರು ಇಂದು ಲಾಠಿ ಪ್ರಹಾರ ನಡೆಸಿದರು.

ಚುನಾವಣಾ ಹರಕೆ ತೀರಿಸಲು ಆನೆ ಅರ್ಪಣೆಗಾಗಿ ಅವರು ಆಗಮಿಸಿದ್ದರು. ಆಗ ಭಕ್ತರಂತೆ ಬಟ್ಟೆ ತೊಟ್ಟಿದ್ದ ಬಿಜೆಪಿ ಕಾರ್ಯಕರ್ತರು ಜಯಲಲಿತಾ ಅವರನ್ನು ತಡೆದರು. ಆಗ ಪೊಲೀಸರು ನಡೆಸಿದ ಲಾಠಿ ಪ್ರಹಾರದಿಂದ ಬಿಜೆಪಿಯ ಹಲವು ಕಾರ್ಯಕರ್ತರು ಗಾಯಗೊಂಡರು.

75 ವರ್ಷಗಳ ಹಿಂದೆ

ಮಂಗಳವಾರ, 3-7-1951

• ನಗರದಲ್ಲಿ ಬಿಳಿ ಬ್ರೆಡ್ ಅಭಾವ ಕುರಿತು ಪದ್ಮನಾಭನ್ ಪರಿಶೀಲನೆ

ಬೆಂಗಳೂರು, ಜುಲೈ 2– ಆಸ್ಟ್ರೇಲಿಯಾದ ಬಿಳಿಗೋಧಿ ಹಿಟ್ಟನ್ನು ಬ್ರೆಡ್ ತಯಾರಿಕೆಗಾರರಿಗೆ ಸರಬರಾಜು ಮಾಡಲಾಗುತ್ತಿತ್ತೆಂದೂ, ಕ್ರಮೇಣ ಸರಬರಾಜು ಕಡಿಮೆಯಾದಂತೆಲ್ಲಾ ಆಸ್ಪತ್ರೆಗಳಿಗೆ ಮಾತ್ರ ಸರಬರಾಜು ಮಾಡಲಾಗುತ್ತಿತ್ತೆಂದೂ ಬೆಂಗಳೂರು ನಗರ ರೇಷನಿಂಗ್ ಅಧಿಕಾರಿಗಳನ್ನು ನಮ್ಮ ಪ್ರತಿನಿಧಿ ಭೇಟಿ ಮಾಡಿದಾಗ ತಿಳಿಸಿದರು.

ಬ್ರೆಡ್ಡಿನ ಬಗ್ಗೆ ಹಲವು ಪತ್ರಿಕೆಗಳಲ್ಲಿ ಪ್ರಕಟಿಸಲಾಗಿದ್ದ ಸಾರ್ವಜನಿಕರ ಕುಂದುಕೊರತೆಗಳ ಉತ್ತರವಾಗಿ ಪದ್ಮನಾಭನ್ ಅವರು ಈ ರೀತಿ ತಿಳಿಸಿದ್ದಾರೆ.

‘ಮಾರ್ಚ್ 7ರವರೆಗೆ ಆಸ್ಟ್ರೇಲಿಯಾ ಹಿಟ್ಟನ್ನು ಬ್ರೆಡ್ ತಯಾರಿಕೆಗಾರರಿಗೂ ತದನಂತರ ಸರಬರಾಜು ಕಡಿಮೆಯಾದ ಕಾರಣ ಆಸ್ಪತ್ರೆಗಳಿಗೆ ಮಾತ್ರ ಸರಬರಾಜು ಮಾಡಲಾಗುತ್ತಿತ್ತು. ಆದರೆ, ಈಗ ಅದರ ಸುಳಿವೇ ಇಲ್ಲದ ಪರಿಣಾಮವಾಗಿ ಈಗ ಆಸ್ಪತ್ರೆಗಳಿಗೂ ಸಹ ಎಲ್ಲರಿಗೂ ಕೊಡುವಂತೆ ಗೋಧಿಯನ್ನೇ ಕೊಡಲಾಗುತ್ತಿದೆ’ ಎಂದು ತಿಳಿಸಿದರು.

ಶಿಕ್ಷಣ ಗ್ಯಾರಂಟಿ: ಇರುವುದೆಲ್ಲಿ?

ವಿಶ್ಲೇಷಣೆ

ನಿರಂಜನಾರಾಧ್ಯ ವಿ.ಪಿ.

> ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ವ್ಯವಸ್ಥಿತವಾಗಿ ದುರ್ಬಲಗೊಳಿಸುತ್ತಲೇ ‘ಶಿಕ್ಷಣ ಗ್ಯಾರಂಟಿ’ಯ ಬಗ್ಗೆ ಸರ್ಕಾರ ಮೋಹಕವಾಗಿ ಮಾತನಾಡುತ್ತದೆ. ಮೂಲಭೂತ ಸೌಕರ್ಯಗಳೇ ಇಲ್ಲದ ಮೂಲಭೂತ ಹಕ್ಕಿನಿಂದ ಗುಣಮಟ್ಟದ ಶಿಕ್ಷಣ ದೊರೆಯುವುದು ಸಾಧ್ಯವೆ? ‘ಸಮಾನ ಶಿಕ್ಷಣ’ ಕಾರ್ಯರೂಪಕ್ಕೆ ಬರುತ್ತದೆಂದು ನಿರೀಕ್ಷಿಸಬಹುದೆ?

ರಾಜ್ಯದ 34 ಶೈಕ್ಷಣಿಕ ಜಿಲ್ಲೆಗಳಲ್ಲಿನ ಸರ್ಕಾರಿ ಶಾಲೆಗಳ ಶೋಚನೀಯ ಪರಿಸ್ಥಿತಿಯ ಬಗ್ಗೆ ಮಾಧ್ಯಮಗಳು ನಿರಂತರವಾಗಿ ಬರೆಯುತ್ತಿವೆ. ಕುಸಿಯುವ ಸ್ಥಿತಿಯಲ್ಲಿನ ಕಟ್ಟಡಗಳು; ಮಳೆ-ಗಾಳಿ ಬಂದಾಗ ಹಾರಿ ಹೋಗುವ ಸೂರು; ತರಗತಿ ಕೋಣೆಯಿಲ್ಲದೆ ಮರದ ಕೆಳಗೆ ತರಗತಿ ನಡೆಸಬೇಕಾದ ಪರಿಸ್ಥಿತಿ; ಶೂನ್ಯ ಶಿಕ್ಷಕ ಶಾಲೆಗಳು; ಇದ್ದರೂ ಬಳಸಲಾಗದ ಶೌಚಾಲಯಗಳು; ಒಂದೇ ಎರಡೇ... ಸಮಸ್ಯೆಗಳ ಸುಳಿಯಲ್ಲಿ ಶಾಲೆಗಳು ಸಿಲುಕಿ ಕಲಿಕೆ ಬಹುತೇಕ ಇಲ್ಲದಂತಾಗಿದೆ. ‘ಪ್ರಜಾವಾಣಿ’ ತನ್ನ ಸಂಪಾದಕೀಯದಲ್ಲಿ (ಜೂನ್ 9) ಸರ್ಕಾರಿ ಶಾಲೆಗಳ ದಯನೀಯ ಸ್ಥಿತಿಯ ಬಗ್ಗೆ ‘ಸುರಕ್ಷಿತ ಹಾಗೂ ಅಗತ್ಯ ಪ್ರಮಾಣದ ಮೂಲಸೌಕರ್ಯಗಳನ್ನು ಒದಗಿಸದೇ ಹೋದರೆ ಎಲ್ಲವೂ ಘೋಷಣೆಯಾಗಿ ಉಳಿಯಲಿವೆ’ ಎಂದು ಹೇಳಿರುವುದು ಅಕ್ಷರಶಃ ಸತ್ಯ.

ಶಿಕ್ಷಣ ಸೇರಿದಂತೆ ಯಾವುದೇ ಸಾರ್ವಜನಿಕ ವ್ಯವಸ್ಥೆಯನ್ನು ಹಾಳುಗೆಡವಲು ಬಂಡವಾಳಶಾಹಿ ವ್ಯವಸ್ಥೆ ಅನುಸರಿಸುವ ರಾಜಕೀಯ ಸೂತ್ರದ ಬಗ್ಗೆ ನೋಮ್ ಚಾಮ್‌ಸ್ಕಿ (1999) ತಮ್ಮ ‘ಜನರ ಮೀರಿದ ಲಾಭ: ನವ ಉದಾರವಾದ ಮತ್ತು ಜಾಗತಿಕ ಕ್ರಮ’ ಕೃತಿಯಲ್ಲಿ ಹೀಗೆ ಹೇಳುತ್ತಾರೆ: ‘ಮೊದಲಿಗೆ, ಸಾರ್ವಜನಿಕ ಸಂಸ್ಥೆಗಳನ್ನು ಬಲವರ್ಧನೆಗೊಳಿಸಲು ಅಗತ್ಯವಾದ ಹಣ, ಸಂಪನ್ಮೂಲ ಮತ್ತು ಸಿಬ್ಬಂದಿ ನೀಡದೆ ದುರ್ಬಲಗೊಳಿಸಿ ಸಮರ್ಪಕವಾಗಿ ಕಾರ್ಯ ನಿರ್ವಹಿಸಲಾಗದಂತೆ ಮಾಡುವುದು; ನಂತರ ಅದರ ವೈಫಲ್ಯವನ್ನು ತೋರಿಸಿ ಜನರಲ್ಲಿ ಅಸಮಾಧಾನ ಹುಟ್ಟಿಸಿ ದೂರಸರಿಯುವಂತೆ ಮಾಡುವುದು; ಕೊನೆಗೆ ಖಾಸಗೀಕರಣವೇ ಪರ್ಯಾಯವೆಂದು ಪ್ರತಿಪಾದಿಸಿ ಖಾಸಗೀಕರಣಗೊಳಿಸುವುದು’. ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ದುರ್ಬಲಗೊಳಿಸಿ ಖಾಸಗೀಕರಣವನ್ನು ವೇಗವರ್ಧನೆಗೊಳಿಸಲು ಸರ್ಕಾರ ಅಳವಡಿಸಿಕೊಂಡಿರುವ ರಾಜಕೀಯ ಸೂತ್ರ ಇದೇ ಆಗಿದೆ.

ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿ ವರದಿಯ (2026) ಪ್ರಕಾರ, ರಾಜ್ಯದ ಒಟ್ಟು ವೆಚ್ಚದಲ್ಲಿ ಶಿಕ್ಷಣದ ಪಾಲು 2000–01ರಲ್ಲಿ ಶೇ 18.7ರಷ್ಟು ಇದ್ದುದು 2023–24ರಲ್ಲಿ ಶೇ 10.9ಕ್ಕೆ ಇಳಿದಿದೆ. ಶಿಕ್ಷಣ, ಕಲೆ ಮತ್ತು ಸಂಸ್ಕೃತಿಯ ಮೇಲಿನ ವೆಚ್ಚವು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇ 2.3ರಿಂದ ಶೇ 1.7ಕ್ಕೆ ಇಳಿದಿದೆ. ಈ ಅಂಕಿಅಂಶಗಳು ಶಿಕ್ಷಣ ಮತ್ತು ಮಾನವ ಅಭಿವೃದ್ಧಿಗೆ ನೀಡಿದ ಆದ್ಯತೆ ಕ್ಷೀಣಿಸಿರುವುದನ್ನು ಸೂಚಿಸುತ್ತದೆ.

ಮೂಲಸೌಕರ್ಯವೆಂದರೆ ಸೌಲಭ್ಯ ಇದೆಯೇ ಇಲ್ಲವೇ ಎಂಬುದಷ್ಟೇ ಅಲ್ಲ. ಉದಾಹರಣೆಗೆ, ಶೌಚಾಲಯ ಇದೆಯೆಂದರೆ, ಅದಕ್ಕೆ ನಿರಂತರ ನೀರಿನ ಸೌಕರ್ಯ, ಸುಸ್ಥಿತಿಯ ಬಾಗಿಲು, ಸ್ವಚ್ಛತೆ, ಇತ್ಯಾದಿಗಳನ್ನು ನೋಡಬೇಕಾಗುತ್ತದೆ. ಇಲ್ಲವಾದಲ್ಲಿ ಶೇ 99ರಷ್ಟು ಲಭ್ಯ ಎನ್ನುವುದು ಅರ್ಥಹೀನವಾಗುತ್ತದೆ. ಆದ್ದರಿಂದ, ಶಾಲೆಯ ಮೂಲಭೂತ ಸೌಕರ್ಯಗಳನ್ನು ಲಭ್ಯತೆ, ಕಾರ್ಯ ನಿರ್ವಹಣಾ ಸ್ಥಿತಿ, ಅಗತ್ಯಕ್ಕೆ ಸಾಕಷ್ಟು ಮತ್ತು ನೈಜ ಬಳಕೆಗೆ ಯೋಗ್ಯವೇ ಎಂಬ ಮಾನದಂಡಗಳಿಂದ ಅಳೆಯಬೇಕಾಗುತ್ತದೆ. ಸರ್ಕಾರಿ ಶಾಲೆಗಳಲ್ಲಿ ಕಲಿಕೆ ಹಾಗೂ ಗುಣಮಟ್ಟದ ಶಿಕ್ಷಣಕ್ಕೆ ಶಿಕ್ಷಕರೇ ಪ್ರಧಾನವಾಗಿರುವುದರಿಂದ, ಶಿಕ್ಷಕರ ಸ್ಥಿತಿಗತಿಯನ್ನು ಕೇಂದ್ರೀಕರಿಸಿ ಚರ್ಚಿಸಬೇಕಾಗಿದೆ.

ಶಿಕ್ಷಕರ ಲಭ್ಯತೆ ವಿಷಯದಲ್ಲಿ ರಾಜ್ಯ ಅಥವಾ ಜಿಲ್ಲಾ ಹಂತದ ಸರಾಸರಿಯನ್ನು ಪರಿಗಣಿಸಿ ವಿದ್ಯಾರ್ಥಿ–ಶಿಕ್ಷಕ ಅನುಪಾತವನ್ನು ಲೆಕ್ಕ ಹಾಕುವುದು ಅಥವಾ ಪುನರ್ ವ್ಯವಸ್ಥೆಗೊಳಿಸುವುದು ವಾಸ್ತವ ಸಮಸ್ಯೆಯನ್ನು ಮರೆಮಾಚುತ್ತದೆ, ಕಲಿಕೆಯನ್ನು ಅನೂರ್ಜಿತಗೊಳಿಸುತ್ತದೆ. ಶಿಕ್ಷಣ ಹಕ್ಕು ಕಾಯ್ದೆ ಪ್ರಕರಣ 25ರ ಅನ್ವಯ, ರಾಜ್ಯ ಹಾಗೂ ಸ್ಥಳೀಯ ಸರ್ಕಾರಗಳು ವಿದ್ಯಾರ್ಥಿ–ಶಿಕ್ಷಕರ ಅನುಪಾತವನ್ನು ಶಾಲಾ ಹಂತದಲ್ಲಿ ಲೆಕ್ಕ ಹಾಕಿ, ಪ್ರತೀ ಶಾಲೆಯಲ್ಲಿ ನಿಗದಿಗೊಳಿಸಿರುವ ವಿದ್ಯಾರ್ಥಿ–ಶಿಕ್ಷಕರ ಅನುಪಾತವನ್ನು ಕಾಯ್ದುಕೊಳ್ಳಬೇಕೆಂದು ಹೇಳುತ್ತದೆ. ಶಾಲೆಗೆ ಮಂಜೂರಾಗಿರುವ ಒಟ್ಟು ಶಿಕ್ಷಕರ ಹುದ್ದೆಗಳಲ್ಲಿ ಶೇ 10ಕ್ಕಿಂತ ಹೆಚ್ಚು ಹುದ್ದೆಗಳು ಖಾಲಿ ಇರಬಾರದೆಂದು ಸೂಚಿಸುತ್ತದೆ. ಅಂದರೆ, ಒಂದು ಶಾಲೆಗೆ 10 ಶಿಕ್ಷಕರ ಹುದ್ದೆಗಳು ಮಂಜೂರಾಗಿದ್ದರೆ, ಗರಿಷ್ಠ ಒಂದು ಶಿಕ್ಷಕರ ಹುದ್ದೆ ಖಾಲಿ ಇರಬಹುದು. ಅದನ್ನೂ ಶೀಘ್ರವಾಗಿ ತುಂಬಬೇಕಾಗುತ್ತದೆ.

ರಾಜ್ಯದಲ್ಲಿ 41,088 ಸರ್ಕಾರಿ ಪ್ರಾಥಮಿಕ ಶಾಲೆಗಳಿದ್ದು, 1,78,935 ಶಿಕ್ಷಕರ ಹುದ್ದೆಗಳು ಮಂಜೂರಾಗಿವೆ. ಈ ಪೈಕಿ 1,33,345 ಹುದ್ದೆಗಳಲ್ಲಿ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದು, 45,590 ಹುದ್ದೆಗಳು ಖಾಲಿ ಇವೆ. ಇದೇ ರೀತಿ 5,024 ಸರ್ಕಾರಿ ಪ್ರೌಢಶಾಲೆಗಳಿದ್ದು, 44,144 ಹುದ್ದೆಗಳು ಮಂಜೂರಾಗಿವೆ. ಈ ಪೈಕಿ 32,010 ಹುದ್ದೆಗಳಲ್ಲಿ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದು, 12,134 ಹುದ್ದೆಗಳು ಖಾಲಿ ಇವೆ (ವಿಧಾನಸಭೆ ಅಧಿವೇಶನದಲ್ಲಿ ಸಚಿವರ ಲಿಖಿತ ಉತ್ತರ: ಡಿ. 18, 2025).

ಸಮಸ್ಯೆಯ ತೀವ್ರತೆ ಎಷ್ಟಿದೆಯೆಂದರೆ, ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಮಂಜೂರಾದ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು 45,431. ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರು 27,114. ಅಂದರೆ, 18,317 ಹುದ್ದೆಗಳು (ಶೇ 40.3ರಷ್ಟು) ಖಾಲಿ ಇವೆ. ಖಾಲಿ ಇರುವ ಹುದ್ದೆಗಳಲ್ಲಿ ಹೆಚ್ಚಿನ ಹುದ್ದೆಗಳು ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಹಂತದಲ್ಲಿರುವುದು ಆತಂಕಕಾರಿ. ಕಲಿಕೆಗೆ ಮೂಲಭೂತವಾಗಿ ಬೇಕಾದ ಓದು, ಬರಹ, ಸಂಖ್ಯಾ ಜ್ಞಾನ ಮತ್ತು ಭಾಷಾ ಸಾಮರ್ಥ್ಯದ ಅಡಿಪಾಯ ನಿರ್ಮಾಣವಾಗುವ ಹಂತದಲ್ಲಿ ಶಿಕ್ಷಕರ ಕೊರತೆ ಉಂಟಾದಾಗ ಗುಣಮಟ್ಟದ ಶಿಕ್ಷಣ ದೂರದ ಮಾತು.

‘ಶಿಕ್ಷಣ ಹಕ್ಕು ಕಾಯ್ದೆ’ ಪ್ರತಿಯೊಂದು ಶಾಲೆಗೂ ಕನಿಷ್ಠ ಸಂಖ್ಯೆಯ ಶಿಕ್ಷಕರನ್ನು ಒದಗಿಸಬೇಕೆಂದು ಹೇಳುತ್ತದೆ. ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ದಾಖಲಾತಿಗೆ ಅನುಗುಣವಾಗಿ ಕನಿಷ್ಠ ಶಿಕ್ಷಕರ ಸಂಖ್ಯೆಯನ್ನು ಸೂಚಿಸಿದೆ. ಅರವತ್ತರವರೆಗೆ ಎರಡು, ಅರವತ್ತೊಂದರಿಂದ ತೊಂಬತ್ತರವರೆಗೆ ಮೂರು, ತೊಂಬತ್ತೊಂದರಿಂದ ನೂರಿಪ್ಪತ್ತರವರೆಗೆ ನಾಲ್ಕು, ನೂರ ಇಪ್ಪತ್ತೊಂದರಿಂದ ಇನ್ನೂರರವರೆಗೆ ಐದು ಹಾಗೂ ನೂರೈವತ್ತು ಮಕ್ಕಳ ಸಂಖ್ಯೆ ದಾಟಿದ ನಂತರ ಐದು ಶಿಕ್ಷಕರ ಜೊತೆಗೆ ಒಬ್ಬ ಮುಖ್ಯೋಪಾಧ್ಯಾಯರನ್ನು ಒದಗಿಸಬೇಕಿದೆ. ಮಕ್ಕಳ ಸಂಖ್ಯೆ ಇನ್ನೂರು ದಾಟಿದ ನಂತರ ವಿದ್ಯಾರ್ಥಿ–ಶಿಕ್ಷಕರ ಅನುಪಾತ (ಮುಖ್ಯೋಪಾಧ್ಯಾಯರನ್ನು ಹೊರತುಪಡಿಸಿ) ನಲವತ್ತನ್ನು ಮೀರತಕ್ಕದ್ದಲ್ಲ ಎಂದು ನಿಗದಿಗೊಳಿಸಿದೆ.

ಉದಾಹರಣೆಗೆ, ಶಾಲೆಯೊಂದರಲ್ಲಿ ಒಂದು ಮಗುವಿರಲಿ ಅಥವಾ ಅರವತ್ತು ಮಕ್ಕಳಿರಲಿ, ಕನಿಷ್ಠ ಇಬ್ಬರು ಶಿಕ್ಷಕರು ಇರಲೇಬೇಕು. ಅದು ಕಾನೂನು.

ಯುಡೈಸ್ 2024–25ರ ವರದಿಯ ಪ್ರಕಾರ, ರಾಜ್ಯದಲ್ಲಿ 7,349 ಏಕೋಪಾಧ್ಯಾಯ ಶಾಲೆಗಳಿವೆ. ಈ ಶಾಲೆಗಳಲ್ಲಿ ಒಬ್ಬನೇ ಶಿಕ್ಷಕ/ಕಿ ವಿವಿಧ ತರಗತಿಗಳಿಗೆ ವಿವಿಧ ವಿಷಯಗಳ ಪಾಠ, ದಾಖಲಾತಿ ನಿರ್ವಹಣೆ, ಬಿಸಿಯೂಟ, ಹಾಜರಾತಿ, ವಿದ್ಯಾರ್ಥಿವೇತನ, ಸಮೀಕ್ಷೆ, ಪೋಷಕರ ಸಭೆ ಮತ್ತು ಇಲಾಖೆಯ ಎಲ್ಲಾ ಆನ್‌ಲೈನ್ ವರದಿಗಳನ್ನು ನಿರ್ವಹಿಸಬೇಕು. ತರಬೇತಿ, ರಜೆ ಅಥವಾ ಅಧಿಕೃತ ಕರ್ತವ್ಯಕ್ಕಾಗಿ ಶಿಕ್ಷಕ ಹೊರಗಿದ್ದರೆ, ಶಾಲೆ ಕಾರ್ಯತಃ ಶೂನ್ಯಶಿಕ್ಷಕ ಶಾಲೆಯಾಗುತ್ತದೆ.

ಕನಿಷ್ಠ ಇಬ್ಬರು ಶಿಕ್ಷಕರು ಇರಬೇಕೆಂಬ ಶಿಕ್ಷಣ ಕಾಯ್ದೆಯ ಮೂಲತತ್ತ್ವದ ಬೆಳಕಿನಲ್ಲಿ, ಏಕೋಪಾಧ್ಯಾಯ ಶಾಲೆಗಳನ್ನು ನಡೆಸುವುದು ಗುಣಮಟ್ಟದ ಸಮಸ್ಯೆ ಮಾತ್ರವಲ್ಲ; ಅದು ಹಕ್ಕು ಆಧಾರಿತ ಮಾನದಂಡಕ್ಕೆ ವಿರುದ್ಧವಾದ ವ್ಯವಸ್ಥೆ. ಸರ್ಕಾರ ಬಡಮಕ್ಕಳಿಗೆ ಎಸಗುವ ದ್ರೋಹ. ಮಕ್ಕಳ ಸಂಖ್ಯೆ ಕಡಿಮೆ ಎಂಬುದು ಇದಕ್ಕೆ ಸಮರ್ಥನೆಯಾಗುವುದಿಲ್ಲ. ಒಂದು ಮಗುವಿನ ಶಿಕ್ಷಣದ ಹಕ್ಕು ಕೂಡ ದೊಡ್ಡ ಶಾಲೆಯಲ್ಲಿರುವ ಮಗುವಿನ ಹಕ್ಕಿನಷ್ಟೇ ಸಮಾನವಾಗಿರುತ್ತದೆ. ಆದರೆ, ನಮ್ಮ ಅಧಿಕಾರಿಗಳು ಮಾಡಿದ್ದೇ ನೀತಿ, ಹೇಳಿದ್ದೇ ಕಾನೂನು.

ರಾಜ್ಯದಲ್ಲಿ ದೊಡ್ಡ ಸಂಖ್ಯೆಯ ಶಿಕ್ಷಕರ ಹುದ್ದೆಗಳು ಖಾಲಿ ಇರುವುದಕ್ಕೆ ಅರ್ಹ ವಿದ್ಯಾರ್ಹತೆಯುಳ್ಳ ಶಿಕ್ಷಕರು ಇಲ್ಲವೆಂದಲ್ಲ. ಪೂರ್ವ ಪ್ರಾಥಮಿಕ (ಡಿಪಿಎಸ್‌ಇ), ಪ್ರಾಥಮಿಕ (ಡಿ.ಇಡಿ), ಹಿರಿಯ ಪ್ರಾಥಮಿಕ ಹಾಗೂ ಪ್ರೌಢ (ಬಿ.ಇಡಿ) ಶಿಕ್ಷಣ ಪಡೆದ ಸಾವಿರಾರು ಅಭ್ಯರ್ಥಿಗಳು ನೇಮಕಾತಿಗಾಗಿ ಹಲವು ವರ್ಷಗಳಿಂದ ಕಾಯುತ್ತಿದ್ದಾರೆ. ಕಾಯಂ ಶಿಕ್ಷಕರ ನೇಮಕಾತಿ ಮೂಲಕ ಸರ್ಕಾರಿ ಶಾಲೆಗಳನ್ನು ಬಲಪಡಿಸುವ ಬದಲು, ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳುವ ಪರಿಪಾಠವನ್ನು ನಿರಂತರವಾಗಿ ಮುಂದುವರಿಸಲಾಗುತ್ತಿದೆ. ಹೀಗಾದರೆ, ಜನರು ಸರ್ಕಾರಿ ಶಾಲೆಗಳ ಮೇಲೆ ಭರವಸೆ ಇಟ್ಟುಕೊಳ್ಳಲು ಹೇಗೆತಾನೆ ಸಾಧ್ಯ? ನಮ್ಮ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಇದು ಅರ್ಥವಾಗುವುದಿಲ್ಲ. ಅವರ ಮಕ್ಕಳು ಸರ್ಕಾರಿ ಶಾಲೆಯಲ್ಲಿ ಕಲಿಯುತ್ತಿಲ್ಲ.

ಪೋಷಕರು ಸರ್ಕಾರಿ ಶಾಲೆಯನ್ನು ತೊರೆಯಲು ಕಾರಣ ‘ಇಂಗ್ಲಿಷ್ ವ್ಯಾಮೋಹ’ ಮಾತ್ರವಲ್ಲ. ಐದು ಅಥವಾ ಏಳು ತರಗತಿಗಳಿಗೆ ಒಬ್ಬರೇ ಶಿಕ್ಷಕ, ಕುಸಿಯುವ ಸ್ಥಿತಿಯಲ್ಲಿನ ಕಟ್ಟಡ, ಕಾರ್ಯ ನಿರ್ವಹಿಸದ ಶೌಚಾಲಯ, ಶಾಲೆ ವಿಲೀನಗೊಳ್ಳಬಹುದೆಂಬ ಅನಿಶ್ಚಿತತೆ, ಸಾರಿಗೆ ಕೊರತೆ, ಇತ್ಯಾದಿಗಳು ಪೋಷಕರ ಆಯ್ಕೆಯನ್ನು ರೂಪಿಸುತ್ತವೆ. ಕುಗ್ರಾಮದಲ್ಲಿನ ಬಡತನರೇಖೆಯ ಕೆಳಗಿರುವ ಕುಟುಂಬಗಳು ಸಹ ಖಾಸಗಿ ಶಾಲೆಗಳತ್ತ ಮುಖ ಮಾಡಿರುವುದನ್ನು ಖಾಸಗಿ ಶಾಲೆಗಳ ಗೆಲುವೆಂದು ಹೇಳಲಾಗುವುದಿಲ್ಲ. ಬದಲಿಗೆ, ಬಲಿಷ್ಠ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಕಟ್ಟಿಕೊಡುವಲ್ಲಿ ಸರ್ಕಾರಗಳ ದಯನೀಯ ಸೋಲು ಎನ್ನಬೇಕಾಗುತ್ತದೆ. ‘ಶಿಕ್ಷಣ ಗ್ಯಾರಂಟಿ’ ಎನ್ನುತ್ತಲೇ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಸದ್ದಿಲ್ಲದೆ ದುರ್ಬಲಗೊಳಿಸುತ್ತಿರುವ ಸರ್ಕಾರಗಳನ್ನು ಪ್ರಶ್ನಿಸುವ ಸಮಯ ಪ್ರಜ್ಞಾವಂತರದಾಗಿದೆ.

ಸಮಾನತೆ ಹಾಗೂ ಸಾಮಾಜಿಕ ನ್ಯಾಯದ ಆಶಯದಿಂದ ಶಿಕ್ಷಣ ಹಕ್ಕು ಕಾಯ್ದೆಯನ್ನು ರೂಪಿಸಿ ಜಾರಿಗೆ ತಂದ ರಾಜಕೀಯ ಪಕ್ಷ, ತನ್ನದೇ ಆಡಳಿತದ ಅವಧಿಯಲ್ಲಿ ಕಾಯ್ದೆಯನ್ನು ದಿನನಿತ್ಯ ಉಲ್ಲಂಘಿಸುತ್ತಿದೆ. ದೌರ್ಭಾಗ್ಯವೆಂದರೆ ಇದೇ ತಾನೆ?



ವಾಚಕರ ವಾಣಿ

ಶಿಕ್ಷಕರಿಗೆ ಬಡ್ತಿ: ಕಠಿಣ ಷರತ್ತುಗಳ ಸಡಿಲಿಸಿ

ಪ್ರೌಢಶಾಲಾ ಶಿಕ್ಷಕರಿಗೆ ಪದವಿಪೂರ್ವ ಕಾಲೇಜು ಉಪನ್ಯಾಸಕರಾಗಿ ಬಡ್ತಿ ನೀಡುವ ಪ್ರಕ್ರಿಯೆಯು ಹಲವಾರು ಕಠಿಣ ಷರತ್ತುಗಳಿಂದ ಕೂಡಿದೆ. ಇದು ಶಿಕ್ಷಕರ ಪಾಲಿಗೆ ನುಂಗಲಾರದ ಬಿಸಿತುಪ್ಪವಾಗಿದೆ. ಮುಖ್ಯವಾಗಿ, ವಿಶ್ವವಿದ್ಯಾಲಯಗಳಿಂದ ಪಡೆದ ಪದವಿಗಳ ‘ನೈಜತೆ ಪ್ರಮಾಣಪತ್ರ’ವನ್ನು ಕಡ್ಡಾಯಗೊಳಿಸಲಾಗಿದೆ. ಇದರ ಉದ್ದೇಶ ಉತ್ತಮವಾಗಿದ್ದರೂ, ಬಹುಪಾಲು ಅಭ್ಯರ್ಥಿಗಳ ಬಳಿ ಈ ಪ್ರಮಾಣಪತ್ರಗಳಿಲ್ಲ. ಇವುಗಳನ್ನು ಪಡೆಯಲು ಸಮಯಬೇಕಿದೆ. ಈ ಪ್ರಕ್ರಿಯೆ ಬಗ್ಗೆ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೇ ಸ್ಪಷ್ಟತೆ ಇಲ್ಲ. 20 ವರ್ಷಗಳಿಗೂ ಹೆಚ್ಚು ಅವಧಿಗೆ ಸೇವೆ ಸಲ್ಲಿಸಿರುವ ಶಿಕ್ಷಕರು ಬಡ್ತಿಯ ಹೊಸ್ತಿಲಲ್ಲಿ ನೈಜತೆ ಪ್ರಮಾಣಪತ್ರ ಪಡೆಯಲು ಒಂದೊಂದು ವಿಶ್ವವಿದ್ಯಾಲಯಕ್ಕೂ ಸಾವಿರಾರು ರೂಪಾಯಿ ಶುಲ್ಕ ಪಾವತಿಸಬೇಕಿದೆ. ಇಲಾಖೆಯ ಮಟ್ಟದಲ್ಲೇ ವಿ.ವಿ.ಗಳೊಂದಿಗೆ ಸಮನ್ವಯ ಸಾಧಿಸಿ ಆನ್‌ಲೈನ್ ಮೂಲಕ ಈ ಪ್ರಕ್ರಿಯೆಯನ್ನು ಉಚಿತವಾಗಿ ಅಥವಾ ಕಡಿಮೆ ವೆಚ್ಚದಲ್ಲಿ ಸರಳಗೊಳಿಸಬೇಕು. ಆ ಮೂಲಕ ಶಿಕ್ಷಕರಿಗೆ ಆಗುತ್ತಿರುವ ಆರ್ಥಿಕ ಹೊರೆಯನ್ನು ತಪ್ಪಿಸಬೇಕು.

ಸಾಯಿರಾಘವ್ ಎಸ್., ಧಾರವಾಡ

ಅರಚಾಟ ಜೋರು: ಅಭಿವೃದ್ಧಿ ಚೂರು!

ಕೋಗಿಲೆಯು ವಸಂತ ಋತುವಿನಲ್ಲಿ ಮಾತ್ರ ಕುಹೂ... ಕುಹೂ... ಎಂದು ಮಧುರವಾಗಿ ಕೂಗುತ್ತದೆ. ಜನರಿಗೆ ಈ ಇಂಪಾದ ಸ್ವರ ಆನಂದ ನೀಡುತ್ತದೆ. ಆದರೆ, ಕಾಗೆ ಮಾತ್ರ ವರ್ಷದ ಎಲ್ಲ ದಿನಗಳಲ್ಲಿಯೂ ಕರ್ಕಶವಾಗಿ ಕೂಗುತ್ತಲೇ ಇರುತ್ತದೆ. ಮೌನ ಪಂಡಿತ ಲಕ್ಷಣ; ಸಂದರ್ಭಾನುಸಾರ ಅಗತ್ಯವಾದ ಮಾತುಗಳನ್ನು ಆಡುವ ಪಂಡಿತ ಕೋಗಿಲೆಯಂತೆ. ಇವತ್ತು ಬಹಳಷ್ಟು ರಾಜಕಾರಣಿಗಳು ಕಾಗೆಯೇ ಆಗಿದ್ದಾರೆ. ದಿನವೂ ಒಂದಲ್ಲ ಒಂದು ವಿಷಯ ಕುರಿತು ಕೂಗಿದ್ದೇ ಕೂಗಿದ್ದು. ಸುದ್ದಿವಾಹಿನಿಗಳಂತೂ ಆ ಕೂಗಾಟವನ್ನು ಪ್ರಸಾರ ಮಾಡಿದ್ದೇ ಮಾಡಿದ್ದು. ಸಚಿವರು, ಶಾಸಕರು ಮತದಾರರ ಕಷ್ಟಗಳ ಬೇಕುಬೇಡಗಳನ್ನು ಅರಿಯಲು ಕ್ಷೇತ್ರದಲ್ಲಿ ಸಂಚರಿಸುತ್ತ ಅವರ ಧ್ವನಿಯಾಗಲಿ. ಮಾತಾಡದೆ ಕೆಲಸ ಮಾಡಲಿ; ಕೆಲಸವೇ ಅವರ ಮಾತಾಗಲಿ.

ಸತ್ಯಬೋಧ, ಬೆಂಗಳೂರು

ಚಾಮುಂಡಿ ದರ್ಶನ ಬಲು ದುಬಾರಿ

ಮೈಸೂರಿನಲ್ಲಿ ಆಷಾಢ ಮಾಸದಲ್ಲಿ ಚಾಮುಂಡಿ ದೇವಿ ದರ್ಶನಕ್ಕೆ ವಿಶೇಷ ಸಿದ್ಧತೆಗಳು ನಡೆಯುತ್ತಿವೆ. ಜಿಲ್ಲಾಡಳಿತ ಮತ್ತು ಚಾಮುಂಡೇಶ್ವರಿ ಕ್ಷೇತ್ರ ಪ್ರಾಧಿಕಾರವು ಭಕ್ತರ ಸುರಕ್ಷತೆಗಾಗಿ ಹಲವಾರು ಮಾರ್ಗಸೂಚಿಗಳನ್ನು ಸಿದ್ಧಪಡಿಸಿದೆ. ಅದರಲ್ಲಿ ವಿಶೇಷ ದರ್ಶನಕ್ಕೆ ₹300 ಇದ್ದ ದರವನ್ನು ₹2 ಸಾವಿರಕ್ಕೇರಿಸಲಾಗಿದೆ. ಇದರರ್ಥ ದುಡ್ಡಿದ್ದವರಿಗೆ ದೇವರು ಎನ್ನುವ ಪ್ರಶ್ನೆ ಕಾಡುತ್ತಿದೆ. ಸಕಲ ಜೀವರಾಶಿಗಳಲ್ಲಿ ದೇವರನ್ನು ಕಾಣು, ದಾನಧರ್ಮ ಮಾಡುವುದರಲ್ಲಿ ದೇವರನ್ನು ಕಾಣು ಎನ್ನುವ ಹಿರಿಯರ ಮಾತುಗಳನ್ನು ಕೇಳಿದ್ದೇವೆ. ದುಬಾರಿ ಟಿಕೆಟ್ ದರ ನೋಡಿದರೆ ದುಡ್ಡಿದ್ದವರಿಗೆ ದೇವರ ದರ್ಶನ ಬೇಗ ಸಿಗುತ್ತದೆ ಎನ್ನುವ ಅಭಿಪ್ರಾಯ ಮೂಡುತ್ತದೆ.

ಪಿ.ಸಿ. ಕಂಗಾಣಿ ಸೋಮು, ಮೈಸೂರು

ನೇಮಕಾತಿ: ಇಸಿಇ ಪದವೀಧರರ ನಿರ್ಲಕ್ಷ್ಯ

ಸರ್ಕಾರಿ ಶಾಲೆಗಳಿಗೆ 2,500 ಕಂಪ್ಯೂಟರ್ ಶಿಕ್ಷಕರ ನೇಮಕಾತಿಗೆ ಸರ್ಕಾರ ಮುಂದಾಗಿದೆ. ಶಾಲೆಗಳಲ್ಲಿ ಡಿಜಿಟಲ್ ಶಿಕ್ಷಣ ಬಲಪಡಿಸುವ ಈ ಕ್ರಮವು ರಾಜ್ಯದ ಶೈಕ್ಷಣಿಕ ಕ್ಷೇತ್ರಕ್ಕೆ ಹೊಸದಿಕ್ಕು ನೀಡಲಿದೆ. ಆದರೆ, ನೇಮಕಾತಿಯ ಅರ್ಹತಾ ಮಾನದಂಡದಲ್ಲಿ ಬರೀ ಕಂಪ್ಯೂಟರ್ ಸೈನ್ಸ್ (ಸಿಎಸ್) ಪದವೀಧರರಿಗಷ್ಟೇ ಅವಕಾಶ ನೀಡಲಾಗಿದೆ. ಇದು ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಎಂಜಿನಿಯರಿಂಗ್ (ಇಸಿಇ) ಪದವೀಧರರಿಗೆ ನಿರಾಸೆ ಮೂಡಿಸಿದೆ. ಇಸಿಇ ಪಠ್ಯಕ್ರಮದಲ್ಲಿ ಪ್ರೋಗ್ರಾಮಿಂಗ್, ಡಿಜಿಟಲ್ ಎಲೆಕ್ಟ್ರಾನಿಕ್ಸ್, ಮೈಕ್ರೊಪ್ರೊಸೆಸರ್, ಕಂಪ್ಯೂಟರ್ ಆರ್ಕಿಟೆಕ್ಚರ್, ಕಂಪ್ಯೂಟರ್ ನೆಟ್‌ವರ್ಕ್ಸ್, ಎಂಬೆಡೆಡ್ ಸಿಸ್ಟಮ್ಸ್ ಸೇರಿದಂತೆ ಕಂಪ್ಯೂಟರ್ ವಿಜ್ಞಾನಕ್ಕೆ ಸಂಬಂಧಿಸಿದ ಹಲವು ವಿಷಯಗಳನ್ನು ಅಧ್ಯಯನ ಮಾಡಲಾಗುತ್ತದೆ. ಹೀಗಾಗಿ, ಈ ಪದವೀಧರರು ಕಂಪ್ಯೂಟರ್ ವಿಷಯ ಬೋಧಿಸುವ ಸಾಮರ್ಥ್ಯ ಹೊಂದಿದ್ದಾರೆ. ಸರ್ಕಾರಿ ಹಾಗೂ ಖಾಸಗಿ ವಲಯದ ಹಲವು ತಾಂತ್ರಿಕ ಹುದ್ದೆಗಳಿಗೆ ಸಿಎಸ್ ಮತ್ತು ಇಸಿಇ ಪದವೀಧರರನ್ನು ಸಮಾನವಾಗಿ ಪರಿಗಣಿಸಲಾಗುತ್ತದೆ. ಹೀಗಿದ್ದಾಗ, ಕಂಪ್ಯೂಟರ್ ಶಿಕ್ಷಕರ ನೇಮಕಾತಿಯಲ್ಲಿ ತಾರತಮ್ಯ ಮಾಡುವುದು ಸರಿಯೆ?

ಕದ್ರೇಶ್ ಕುಮಾರ್ ವಿ.ಎನ್., ಮಳವಳ್ಳಿ

ವಿದ್ಯುತ್ ಸಂಪರ್ಕಕ್ಕೆ ನಾಗರಿಕರ ಪರದಾಟ

ರಾಜ್ಯದಲ್ಲಿ 30 × 40 ಅಡಿ ಅಳತೆಯ ನಿವೇಶನಗಳಿಗಷ್ಟೇ ತಾತ್ಕಾಲಿಕ ವಿದ್ಯುತ್ ಸಂಪರ್ಕ ನೀಡಲಾಗುತ್ತಿದೆ. ಹೆಚ್ಚಿನ ವಿಸ್ತೀರ್ಣ ಇರುವ ನಿವೇಶನದಾರರಿಗೆ ಕಟ್ಟಡದ ನಕ್ಷೆ, ಅನುಮತಿ ಪತ್ರ ಮೊದಲಾದ ಡಿಜಿಟಲ್ ದಾಖಲೆ ನೀಡುವಂತೆ ವಿದ್ಯುತ್ ಕಂಪನಿಗಳು ಕೇಳುತ್ತಿವೆ. ಪಿಡಿಒ ಸಹಿ ಮಾಡಿ ಕೊಡುವ ದಾಖಲೆಗಳನ್ನು ಒಪ್ಪುತ್ತಿಲ್ಲ. ಗ್ರಾಮ ಪಂಚಾಯಿತಿ ಹಂತಗಳಲ್ಲಿ ಡಿಜಿಟಲ್ ದಾಖಲೆ ಒದಗಿಸುವುದು ಕಷ್ಟಸಾಧ್ಯ. ಡಿಜಿಟಲ್ ದಾಖಲೆ ಪಡೆಯಲು ಬಾಪೂಜಿ ಸೇವಾಕೇಂದ್ರಕ್ಕೆ ಹೋದರೆ ಇ-ಖಾತೆ ಕೇಳುತ್ತಾರೆ. ಅದನ್ನು ಪಡೆಯಲು ಪಂಚಾಯಿತಿಗೆ ಹೋದರೆ ಬೇಕಾದಷ್ಟು ಅರ್ಜಿಗಳು ಬಾಕಿ ಇವೆ; ನಿಮ್ಮ ಅರ್ಜಿ ಕ್ರಮಸಂಖ್ಯೆಯು ಪರಿಶೀಲನೆಗೆ ಬರಲು ಇನ್ನೂ ಆರು ತಿಂಗಳು ಬೇಕೆಂಬ ಸಬೂಬು ಹೇಳುತ್ತಾರೆ. ಮನೆ ಕಟ್ಟುವ ಮುನ್ನ ದಾಖಲೆ ಒದಗಿಸಲು ಕಚೇರಿಯಿಂದ ಕಚೇರಿಗೆ ಅಲೆಯಬೇಕಾಗಿದೆ. ಯಾವುದೇ ರಾಜ್ಯದಲ್ಲೂ ಜಾರಿಯಲ್ಲಿಲ್ಲದ ಸೆಟ್‌ಬ್ಯಾಕ್ ನಿಯಮಗಳನ್ನು ಸರ್ಕಾರ ರೂಪಿಸಿದ್ದು, ಮನೆ ಕಟ್ಟುವವರಿಗೆ, ಕೂಲಿಕಾರ್ಮಿಕರಿಗೆ ತೊಂದರೆ ಕೊಡುತ್ತಿದೆ. ಲಭ್ಯ ದಾಖಲೆ ಪಡೆದು ತಾತ್ಕಾಲಿಕ ವಿದ್ಯುತ್ ಸಂಪರ್ಕ ನೀಡಬೇಕು; ಕಾಯಂ ಸಂಪರ್ಕ ನೀಡುವಾಗ ನಿಯಮಾನುಸಾರ ದಾಖಲೆ ಒದಗಿಸುವಂತೆ ಕರಾರು ರೂಪಿಸಲಿ. ಇದರಿಂದ ಸಾವಿರಾರು ಜನರಿಗೆ ಅನುಕೂಲವಾಗಲಿದೆ.

ಉದಂತ ಶಿವಕುಮಾರ, ಬೆಂಗಳೂರು

ಚುರುಮುರಿ

ಹುಂಡಿಗೇ ಕಿಂಡಿ!

• ಬಿ.ಎನ್. ಮಲ್ಲೇಶ್

‘ರಾಮಾ, ಕೃಷ್ಣಾ’ ಅನ್ನೋತ ಮಲಗಿದ್ದ ತೆಪರೇಸಿಗೆ ರಾತ್ರಿ ಕನಸಲ್ಲಿ ಯಾರೋ ‘ಭಕ್ತಾ...’ ಎಂದು ಕೂಗಿ ಕರೆದಂತಾಯಿತು. ನೋಡಿದರೆ ಎದುರಿಗೆ ಸಾಕ್ಷಾತ್ ಶ್ರೀರಾಮ!

‘ತಂದೆ... ದಶರಥನಂದನ, ಜಾನಕೀವಲ್ಲಭ, ನೀನಾ ನನ್ನ ಕರೆದದ್ದು?’ ಕೇಳಿದ ತೆಪರೇಸಿ.

‘ಹೌದು, ನೀನು ಕರೆದೆ, ನಾನು ಬಂದೆ... ಹೇಳು ನಿನಗೇನು ಬೇಕು?’

‘ಒಳ್ಳೆ ಕತೆ... ನಿನ್ ಹುಂಡಿಗೇ ಕಿಂಡಿ ಕೊರೆದು ಎಲ್ಲ ದೋಚ್ಕಂಡ್ ಹೋಗವ್ರೆ, ಈಗ ಏನೈತೆ ನಿನ್ನತ್ರ ನಂಗೆ ಕೊಡೋಕೆ?’

‘ದೋಚಿದವರು ರವ ರವ ನರಕಕ್ಕೆ ಹೋಗ್ತಾರೆ, ನಿನಗ್ಯಾಕೆ ಆ ಚಿಂತೆ?’

‘ನರಕ ಆಮೇಲೆ, ಈಗವರು ಸ್ವರ್ಗ ಅನುಭವಿಸ್ತಿಲ್ವ? ಕಾರು, ಬಂಗಲೆ...’

‘ಅದೆಲ್ಲ ಶಾಶ್ವತ ಅಲ್ಲ ಭಕ್ತಾ...’

‘ಅದಿರ್ಲಿ, ನಿನ್ನ ಹೆಸರಲ್ಲಿ ಅಧಿಕಾರ ಹಿಡಿದೋರು ಈಗ ಯಾಕೆ ಏನೂ ಮಾತಾಡ್ತಿಲ್ಲ?’

‘ಅವರೀಗ ಕೃಷ್ಣನನ್ನ ಹಿಡ್ಕಂಡಿದಾರೆ...’

‘ಸರಿಹೋತು... ಅಲ್ಲ, ನೀನು ಗಾಂಧಿರಾಮನೋ ನಾಥೂರಾಮನೋ... ಅಂದ್ರೆ ಯಾವ ಪಕ್ಷ ಅಂತ...’

‘ನಾನು ನಿಜ ಭಕ್ತರ ಪಕ್ಷ...’

‘ಅಲ್ಲ, ಜನ ನಿಂಗೇ ಮೋಸ ಮಾಡ್ತಾರಲ್ಲ, ಅವರನ್ನೆಲ್ಲ ರಾವಣನ ತರ ಸಂಹಾರ ಮಾಡೋದಲ್ವ?’

‘ಅವತ್ತು ಒಬ್ಬ ರಾವಣ ಇದ್ದ, ಇವತ್ತು ಎಲ್ಲೆಲ್ಲೂ ರಾವಣರೇ... ಯಾರನ್ನಂತ ಸಂಹಾರ ಮಾಡಲಿ?’

‘ನೀನೇ ಹಿಂಗಂದುಬಿಟ್ರೆ ಹೆಂಗೆ ತಂದೆ, ದುಷ್ಟರನ್ನ ಹಂಗೇ ಬಿಡೋದಾ?’

‘ಅಯೋಧ್ಯೆಲಿರೋದು ಬಾಲರಾಮ... ನಾನಾಗಿದ್ರೆ ಬಾಣ ಬಿಟ್ಟು ಅವರನ್ನೆಲ್ಲ ನಾಶ ಮಾಡ್ತಿದ್ದೆ...’

‘ಬಾಣ, ಬಿಲ್ಲು ಹಳೇದಾತು... ನಾನಾಗಿದ್ರೆ ಹುಂಡಿಗೆ ಕಿಂಡಿ ಕೊರೆದವರನ್ನ ಒಂದೇ ಸಲಕ್ಕೆ ಢಂ ಅನ್ನಿಸಿಬಿಡ್ತಿದ್ದೆ...’ ತೆಪರೇಸಿಗೆ ಕೋಪ.

ಅಷ್ಟರಲ್ಲಿ ಮೈಮೇಲೆ ತಣ್ಣೀರು ಸುರಿದಂತಾಗಿ ಕಣ್ಣು ಬಿಟ್ಟ ತೆಪರೇಸಿ. ಎದುರಿಗೆ ಹೆಂಡ್ತಿ ಪಮ್ಮಿ! ‘ಏನ್ರಿ ಅದೂ ಢಂ? ಯಾರತ್ರ ಮಾತಾಡ್ತಿದ್ರಿ?’

‘ಅದೂ... ರಾಮ, ಶ್ರೀರಾಮ ಎಲ್ಲಿ?’

‘ಗುಡೀಲಿ, ಏಳ್ರಿ ಮೇಲೆ’ ಎಂದಳು ಪಮ್ಮಿ. ತೆಪರೇಸಿ ಪಿಟಿಕ್ಕನ್ನಲಿಲ್ಲ.

ಸಂಗತ

‘ಉದ್ಯೋಗ ಖಾತರಿ’ಗೆ ಕತ್ತರಿ ಪ್ರಯೋಗ?

‘ವಿಬಿ–ಜಿ ರಾಮ್ ಜಿ’ ಯೋಜನೆ ಉದ್ಯೋಗ ಖಾತರಿ ನೀಡುವ ಬದಲು, ಕೂಲಿ ಕಾರ್ಮಿಕರ ಹಕ್ಕುಗಳು ಹಾಗೂ ಅನ್ನದ ಬಟ್ಟಲನ್ನು ಕಸಿಯುವ ಪ್ರಯತ್ನದಂತಿದೆ.

• ಕೆ. ಶಿವಕುಮಾರ್

‘ಗ್ರಾಮೀಣ ಭಾರತದ ಅಭಿವೃದ್ಧಿಯೇ ದೇಶದ ನಿಜವಾದ ಪ್ರಗತಿ’ ಎಂದು ಮಹಾತ್ಮ ಗಾಂಧೀಜಿ ಪ್ರತಿಪಾದಿಸಿದ್ದರು. ಅವರ ಆಶಯದಂತೆ, ಗ್ರಾಮೀಣ ಜನರ ಸ್ವಾವಲಂಬನೆಯ ಭಾಗವಾಗಿ 2005ರಲ್ಲಿ ಅಂದಿನ ಯುಪಿಎ ಸರ್ಕಾರವು ‘ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ’ (ಮನರೇಗಾ) ಜಾರಿಗೊಳಿಸಿ, ಗ್ರಾಮೀಣ ಜನರಿಗೆ ಸ್ವಗ್ರಾಮದಲ್ಲಿಯೇ ಉದ್ಯೋಗದ ಭರವಸೆ ನೀಡಿತ್ತು.

ಬಿಜೆಪಿ ನೇತೃತ್ವದ ಈಗಿನ ಕೇಂದ್ರ ಸರ್ಕಾರವು ಮನರೇಗಾ ಯೋಜನೆಯ ಹೆಸರು ಬದಲಿಸಿ, ಒಂದಿಷ್ಟು ಮಾರ್ಪಾಡಿನೊಂದಿಗೆ ‘ವಿಬಿ–ಜಿ ರಾಮ್ ಜಿ’ (ವಿಕಸಿತ ಭಾರತ್ ಗ್ಯಾರಂಟಿ ಫಾರ್ ರೋಜ್‌ಗಾರ್ ಆ್ಯಂಡ್ ಆಜೀವಿಕ ಮಿಷನ್) ಯೋಜನೆಯನ್ನು ಜುಲೈ 1ರಿಂದ ಜಾರಿಗೊಳಿಸಿದೆ.

ಮನರೇಗಾ ಯೋಜನೆಯು ಜಾಗತಿಕಮಟ್ಟದಲ್ಲಿ ಅತ್ಯಂತ ಬೃಹತ್ ಹಾಗೂ ಯಶಸ್ವಿ ಸಾಮಾಜಿಕ ಭದ್ರತಾ ಯೋಜನೆ ಎಂಬ ಪ್ರಶಂಸೆಗೆ ಪಾತ್ರವಾಗಿತ್ತು. ‘ವಿಶ್ವದ ಅತಿದೊಡ್ಡ ಸಾರ್ವಜನಿಕ ಉದ್ಯೋಗ ಯೋಜನೆ’ ಎಂದು ವಿಶ್ವಬ್ಯಾಂಕ್ ಬಣ್ಣಿಸಿದೆ. ವಿಶ್ವಸಂಸ್ಥೆಯು ತನ್ನ ಜಾಗತಿಕ ಮೌಲ್ಯಮಾಪನ ವರದಿಯಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳು ಭಾರತದ ಈ ಮಾದರಿಯನ್ನು ಅನುಸರಿಸಬೇಕೆಂದು ಮುಕ್ತವಾಗಿ ಹೊಗಳಿದೆ. ಈ ಯೋಜನೆಯನ್ನು ಪಾಕಿಸ್ತಾನ, ನೇಪಾಳ, ಶ್ರೀಲಂಕಾ ಸೇರಿದಂತೆ ಅನೇಕ ದೇಶಗಳು ಹೆಸರು ಬದಲಿಸಿ ಅಳವಡಿಸಿಕೊಂಡಿವೆ.

ಮನರೇಗಾ ಯೋಜನೆ ಮಾತ್ರವಲ್ಲದೆ, ಕಾಯ್ದೆಯೂ ಆಗಿದ್ದುದರಿಂದ ನೂರು ದಿನಗಳ ಉದ್ಯೋಗ ಪ್ರತಿಯೊಬ್ಬ ಗ್ರಾಮೀಣರ ಹಕ್ಕಾಗಿತ್ತು. ಈಗ ಜಾರಿಯಾಗಿರುವ ನೂತನ ಯೋಜನೆಯಲ್ಲಿ 125 ದಿನಗಳ ಉದ್ಯೋಗ ದೊರಕುವುದಿದ್ದರೂ, ಮಾರ್ಗಸೂಚಿಗಳನ್ನು ಕೂಲಂಕಷವಾಗಿ ಗಮನಿಸಿದರೆ ತಂತ್ರಜ್ಞಾನದ ಹೆಸರಲ್ಲಿ ಬಡವರ ಅನ್ನದ ತಟ್ಟೆಯನ್ನು ಕಿತ್ತುಕೊಳ್ಳುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ.

ಹೊಸ ವ್ಯವಸ್ಥೆಯಲ್ಲಿ, ಕೆಲಸದ ಸ್ಥಳಗಳಲ್ಲಿ ಮೊಬೈಲ್ ಆ್ಯಪ್ ಮೂಲಕ ಮುಖ ಗುರ್ತಿಸುವಿಕೆ ಆಧಾರಿತ ಹಾಜರಾತಿ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಕಾಡಂಚಿನ, ಗುಡ್ಡಗಾಡು ಪ್ರದೇಶದ ಕುಗ್ರಾಮದ ಜನರು ಕಾಮಗಾರಿ ಸ್ಥಳದಲ್ಲಿ ದಿನಕ್ಕೆ ಎರಡು ಭಾರಿ ಕಣ್ಣು ಪಿಳುಕಿಸುವ ಪ್ರಹಸನ ಇನ್ನು ಮುಂದೆ ಜರುಗಲಿದೆ. ಕಳಪೆ ನೆಟ್‌ವರ್ಕ್ ಹೊಂದಿರುವ ಪ್ರದೇಶಗಳಲ್ಲಿ ಹಾಜರಾತಿ ದಾಖಲಿಸುವುದು ಅಸಾಧ್ಯ. ತಾಂತ್ರಿಕ ಸಮಸ್ಯೆ ಉಳ್ಳ ನೈಜ ಪ್ರಕರಣಗಳಿಗೆ ವಿನಾಯಿತಿ ಇದೆ ಎಂದು ಮಾರ್ಗಸೂಚಿಯಲ್ಲಿದ್ದರೂ, ಯಾರು, ಹೇಗೆ ವಿನಾಯಿತಿ ನೀಡುತ್ತಾರೆ ಎಂಬುದು ಸ್ಪಷ್ಟವಾಗಿಲ್ಲ. ಉದಾಹರಣೆಗೆ, ಎಚ್.ಡಿ. ಕೋಟೆ, ಹುಣಸೂರು ಭಾಗದ ಆದಿವಾಸಿ ಜನರಿಗೆ, ಹನೂರು ಹಾಗೂ ಮಲೆಮಹದೇಶ್ವರ ಬೆಟ್ಟ ಭಾಗದ ಕಾಡಂಚಿನ ಜನರಿಗೆ ಈ ಕ್ರಮವು ಮಾರಕವಾಗಲಿದೆ. ನೆಟ್‌ವರ್ಕ್ ಸಮಸ್ಯೆಯಿಂದ ಈಗಾಗಲೇ ಅನುಷ್ಠಾನ ಇಲಾಖೆಯಲ್ಲಿ ಒಂದಾದ ಅರಣ್ಯ ಇಲಾಖೆಯಲ್ಲಿ ಕಾಮಗಾರಿಗಳು ಕೆಲವು ಭಾಗಗಳಲ್ಲಿ ನಿಂತಿವೆ ಎಂದು ಅಧಿಕಾರಿ ವರ್ಗದವರು ತಿಳಿಸುತ್ತಿದ್ದಾರೆ.

ಉದ್ಯೋಗ ಬಯಸಿ ಬರುವ ವ್ಯಕ್ತಿಯು ಇ–ಕೆವೈಸಿಯಲ್ಲಿ ನೋಂದಾಯಿತ ಮುಖಚರ್ಯೆ ಹೊಂದಿರಬೇಕು. ಉದ್ಯೋಗದಲ್ಲಿ ಪಾಲ್ಗೊಂಡ ವಾರದ ಮಧ್ಯದಲ್ಲಿ ಆ ವ್ಯಕ್ತಿಯ ಮುಖದ ಆಕೃತಿ, ರೂಪ, ಬಣ್ಣ ಬದಲಾದರೆ ಮುಖಚರ್ಯೆ ಗುರ್ತಿಸುವಿಕೆ ಸಮಸ್ಯೆಯೊಂದೇ ಅಲ್ಲದೆ, ಕಣ್ಣಿನ ರೆಟಿನಾ ಸಮಸ್ಯೆ ಉಂಟಾದಲ್ಲಿ ಆ ವ್ಯಕ್ತಿಯ ಹಾಜರಾತಿ ಅಪೂರ್ಣವಾಗುತ್ತದೆ. ಅಲ್ಲಿಗೆ ಉದ್ಯೋಗಕ್ಕೆ ಕಂಟಕ ಒದಗಿ ಅವರ ಹಕ್ಕನ್ನೇ ನಿರಾಕರಿಸಲಾಗುತ್ತಿದೆ.

ಕೃಷಿ ಚಟುವಟಿಕೆ ಸಮಯದಲ್ಲಿ ಅರವತ್ತು ದಿನಗಳ ಕಾಲ ಈ ಯೋಜನೆಯಡಿ ಕೆಲಸವಿರುವುದಿಲ್ಲ ಎಂದು ಮಾರ್ಗಸೂಚಿಯಲ್ಲಿದೆ. ಇಂತಹ ಸಂದರ್ಭದಲ್ಲಿ ಭೂರಹಿತ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಲಿವೆ.

ಮನರೇಗಾ ಯೋಜನೆಯಲ್ಲಿ ಕೆಲಸ ಮಾಡಿದ ಏಳುದಿನಕ್ಕೆ ಸರಿಯಾಗಿ ಪಿಡಿಒ ಹಾಗೂ ಅಧ್ಯಕ್ಷರು ಅನುಮೋದನೆ ನೀಡಿದ ಕೂಡಲೇ ಕೂಲಿಕಾರರ ಖಾತೆಗೆ ನೇರವಾಗಿ ಹಣ ಜಮೆಯಾಗುತ್ತಿತ್ತು. ಹೊಸ ಯೋಜನೆಯಲ್ಲಿ ಹಣ ಖಜಾನೆ ಮೂಲಕ ಪಾವತಿಯಾಗಲಿದೆ ಎಂಬ ಮಾಹಿತಿ ಇದೆ. ಖಜಾನೆ ಅಧಿಕಾರಿಗಳು ಕೇಳುವ ದಾಖಲಾತಿ ಸಲ್ಲಿಸಿ, ಕೂಲಿಗಾಗಿ ಅವರಿಗೆ ದುಂಬಾಲು ಬೀಳಬೇಕಿದೆ.

ಈ ಮೊದಲಿನ ಯೋಜನೆಗೆ ಕೇಂದ್ರದಿಂದ ಶೇ 90ರಷ್ಟು ಹಾಗೂ ರಾಜ್ಯದಿಂದ ಶೇ 10ರಷ್ಟು ಅನುದಾನ ದೊರೆಯುತ್ತಿತ್ತು. ಅದೀಗ 60:40 ಅನುಪಾತಕ್ಕೆ ಹಂಚಿಕೆಯಾಗಿದೆ. ಇದರಿಂದ ರಾಜ್ಯಗಳು ಆರ್ಥಿಕ ಸಂಕಷ್ಟಕ್ಕೆ ಒಳಗಾಗಲಿವೆ. ಕೇಂದ್ರದ ಪಾಲು ವಿಳಂಬವಾದಾಗ ರಾಜ್ಯ ಸರ್ಕಾರವೇ ತನ್ನ ಹಣವನ್ನು ಮುಂಗಡವಾಗಿ ಭರಿಸಬೇಕಾಗುತ್ತದೆ. ಇದು ರಾಜ್ಯದ ನಗದು ಹರಿವಿನ ಮೇಲೆ ಒತ್ತಡ ಹೇರುತ್ತದೆ. ಈ ಕುರಿತು ಬಿಜೆಪಿ ಆಡಳಿತವಿರುವ ಮಧ್ಯಪ್ರದೇಶ, ಬಿಹಾರ ಸೇರಿದಂತೆ ಅನೇಕ ರಾಜ್ಯಗಳು ಹಾಗೂ ತೆಲಂಗಾಣ, ಕರ್ನಾಟಕ ಸರ್ಕಾರಗಳು ವಿರೋಧ ವ್ಯಕ್ತಪಡಿಸುತ್ತಿವೆ.

ಗ್ರಾಮೀಣ ಭಾಗದ ಬಡಜನರಿಗೆ ಆಸರೆಯಾಗಿ, ಮಹಿಳೆಯರಿಗೆ ಸಮಾನ ವೇತನ ನೀಡುವ ಮೂಲಕ ಜಾಗತೀಕರಣ ಮಟ್ಟದಲ್ಲಿ ಲಿಂಗ ಸಮಾನತೆ ಮತ್ತು ಗ್ರಾಮೀಣ ಮಹಿಳೆಯರ ಆರ್ಥಿಕ ಸ್ವಾತಂತ್ರ್ಯ ಹೆಚ್ಚಿಸಿದ್ದ ಮನರೇಗಾ ಯೋಜನೆಯಲ್ಲಿ ಕೂಲಿಕಾರರ ಕೈಗೆ ಅವರ ಹಣ ಸುಲಭವಾಗಿ ದೊರೆಯುತ್ತಿತ್ತು. ಹೆಸರು ಬದಲಿಸಿರುವ ಯೋಜನೆಯಲ್ಲಿ, ಕೆಲಸ ಮಾಡಿದ್ದೇನೆಂದು ರುಜುವಾತು ಮಾಡಲು ಹಾಗೂ ಹಣ ಪಡೆಯಲು ಕಾರ್ಮಿಕರು ಹರಸಾಹಸ ಪಡಬೇಕು. ಇದು ಪಾರದರ್ಶಕತೆ ನೆಪದಲ್ಲಿ ಜನರ ಹಕ್ಕು ಕಸಿಯುವ ಪ್ರಯತ್ನ ವಾಗಿದೆ.

‘ವಿಬಿ–ಜಿ ರಾಮ್ ಜಿ’ ಯೋಜನೆಯಲ್ಲಿ ರೂಪಿಸಿರುವ ನಿಯಮಗಳನ್ನು ಸರಳೀಕರಿಸಿ ಸಾಮಾನ್ಯ ಜನರಿಗೆ ಉದ್ಯೋಗದ ಹಕ್ಕು ದೊರಕುವಂತೆ ಮಾಡಬೇಕಾಗಿದೆ. ಈ ಬಗ್ಗೆ ನೀತಿನಿರೂಪಕರು ಕಣ್ತೆರೆದು ನೋಡಬೇಕಿದೆ.

ಲೇಖಕ: ಪತ್ರಕರ್ತ ಹಾಗೂ ವಿಧಾನ ಪರಿಷತ್ ಸದಸ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕುದಿಯುತ್ತಿದೆ ಯುರೋಪ್

ಯುರೋಪ್‌ನಲ್ಲಿ ತಾಪಮಾನ ಏರಿಕೆಯು ಹಿಂದಿನ ಎಲ್ಲ ದಾಖಲೆಗಳನ್ನು ಮೀರಿ ಹೊಸ ದಾಖಲೆ ನಿರ್ಮಿಸಿದೆ. ತೀವ್ರವಾದ ಬಿಸಿಗಾಳಿಗೆ ಜನ ತತ್ತರಿಸುತ್ತಿದ್ದಾರೆ. ಜನರ ಆರೋಗ್ಯ, ಪರಿಸರ, ಕೃಷಿ, ಮೂಲಸೌಕರ್ಯ ಮತ್ತು ಕಾರ್ಮಿಕರ ಉತ್ಪಾದಕತೆಯ ಮೇಲೆ ಇದು ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಉಗ್ರರೂಪದ ಚಂಡಮಾರುತ, ಬರ ಮತ್ತು ಕಾಳ್ಗಿಚ್ಚು ಕೂಡ ಕೆಲವೆಡೆ ವರದಿಯಾಗಿದೆ. ಜಗತ್ತಿನಲ್ಲಿಯೇ ಯುರೋಪ್ ಅತ್ಯಂತ ಕ್ಷಿಪ್ರಗತಿಯಲ್ಲಿ ತಾಪಮಾನ ಏರುತ್ತಿರುವ ಖಂಡವಾಗಿದೆ. ಇದು 15 ಕೋಟಿ ಜನರ ಮೇಲೆ ಪರಿಣಾಮ ಬೀರಿದ್ದು, 1,500ಕ್ಕೂ ಹೆಚ್ಚು ಸಾವು ಸಂಭವಿಸಿವೆ ಎಂದು ವರದಿಯಾಗಿದೆ. ಮುಂದಿನ ದಿನಗಳಲ್ಲಿ ತಾಪಮಾನ ಮತ್ತಷ್ಟು ಏರಲಿದ್ದು, ಅಗತ್ಯ ಎಚ್ಚರಿಕೆ ವಹಿಸಬೇಕೆಂದು ವಿಶ್ವ ಹವಾಮಾನ ಸಂಸ್ಥೆ ಮುನ್ಸೂಚನೆ ನೀಡಿದೆ

ಫ್ರಾನ್ಸ್ ರಾಜಧಾನಿ ಪ್ಯಾರಿಸ್‌ನ ಐತಿಹಾಸಿಕ ಐಫೆಲ್ ಟವರ್‌ನ ಹಿನ್ನೆಲೆಯಲ್ಲಿ ಗುರುವಾರ ಕಂಡ ಸೂರ್ಯೋದಯದ ದೃಶ್ಯ -ಎಎಫ್‌ಪಿ ಚಿತ್ರ

ಪ್ರಜಾವಾಣಿ ವಾರ್ತೆ

ಮೇ ತಿಂಗಳಲ್ಲಿ ಯುರೋಪ್‌ನ ಹಲವು ದೇಶಗಳಲ್ಲಿ ತಾಪಮಾನವು ತನ್ನ ಪ್ರತಾಪ ಮೆರೆದಿತ್ತು. ಜೂನ್ ತಿಂಗಳಲ್ಲಿ ತಾಪಮಾನವು ಮತ್ತಷ್ಟು ಏರಿಕೆಯಾಗಿದೆ. ಜೂನ್ 20ರಿಂದ ಬಿಸಿಗಾಳಿ ತೀವ್ರಸ್ವರೂಪ ಪಡೆದಿದೆ. ಹಿಂದಿನ ಹಲವು ದಾಖಲೆಗಳನ್ನು ಮುರಿದಿದೆ. ಜೂನ್ 28ರಂದು ಯುರೋಪ್ ಖಂಡದ ಹಲವು ರಾಷ್ಟ್ರಗಳಲ್ಲಿ ತಾಪಮಾನವು 40 ಡಿಗ್ರಿ ಸೆಲ್ಸಿಯಸ್ ದಾಟಿತ್ತು. ಯುರೋಪ್‌ನಲ್ಲಿ ತೀವ್ರವಾಗಿರುವ ಮತ್ತು ವ್ಯಾಪಕವಾಗಿರುವ ಬಿಸಿಗಾಳಿಯು ಹವಾಮಾನ ಬದಲಾವಣೆಯ ಫಲಶ್ರುತಿಯಾಗಿದೆ ಎಂದು ತಜ್ಞರು ವಿಶ್ಲೇಷಿಸುತ್ತಿದ್ದಾರೆ.

ಪಶ್ಚಿಮ ಯುರೋಪ್ ಅಕ್ಷರಶಃ ಅಗ್ನಿಕುಂಡವಾಗಿದೆ. ಫ್ರಾನ್ಸ್, ಜರ್ಮನಿ, ಇಟಲಿ, ಸ್ಪೇನ್ ಮತ್ತು ದಕ್ಷಿಣ ಇಂಗ್ಲೆಂಡ್ ತಾಪಮಾನದಲ್ಲಿ ಮಾಮೂಲಿಗಿಂತ 5 ಡಿಗ್ರಿಯಿಂದ 12 ಡಿಗ್ರಿ ಸೆಲ್ಸಿಯಸ್‌ವರೆಗೆ ಹೆಚ್ಚಿನ ಉಷ್ಣಾಂಶ ವರದಿಯಾಗಿದೆ. ಉತ್ತರ ಆಫ್ರಿಕಾದಿಂದ ಯುರೋಪ್‌ನ ಪಶ್ಚಿಮ ಭಾಗಕ್ಕೆ ಬಿಸಿಗಾಳಿಯು ಬರುತ್ತಿದ್ದು, ಶುಭ್ರ ಮೋಡ ಮತ್ತು ಸೂರ್ಯನ ಪ್ರಖರತೆಗೆ ಕಾರಣವಾಗಿವೆ. ಇದರಿಂದ ತಾಪಮಾನವು ಮತ್ತಷ್ಟು ಏರಿಕೆಯಾಗಿದೆ.

ಇದು ಯುರೋಪ್‌ನ ಹೆಚ್ಚಿನ ಭಾಗವು ಕಂಡ ಅತ್ಯಂತ ತೀವ್ರವಾದ ಮತ್ತು ವ್ಯಾಪಕವಾದ ಬಿಸಿಗಾಳಿಯ ಪರಿಸ್ಥಿತಿಯಾಗಿದೆ. ಖಂಡದ 850 ದೊಡ್ಡ ನಗರಗಳ ಪೈಕಿ ಅರ್ಧದಷ್ಟು ನಗರಗಳು ಬಿಸಿಗಾಳಿಯ ಕಠಿಣ ಸ್ಥಿತಿ ಎದುರಿಸುತ್ತಿದ್ದು, ಅದು ತಾಪಮಾನ ಏರಿಕೆ ಮತ್ತು ತೇವಾಂಶದ ಸಮ್ಮಿಶ್ರ ಸ್ಥಿತಿಯಾಗಿದೆ ಎಂದು ಹವಾಮಾನ ಸಂಸ್ಥೆಗಳು ಹೇಳಿವೆ.

ಪರಿಣಾಮಗಳು: ಹಿಂದೆ ಅಪರೂಪಕ್ಕೊಮ್ಮೆ ಎಂಬಂತೆ ಕಾಣಿಸಿಕೊಳ್ಳುತ್ತಿದ್ದ ಬಿಸಿಗಾಳಿ, ಈಗ ಮಾಮೂಲಿನ ವಿದ್ಯಮಾನ ಎನ್ನುವಂತಾಗಿದೆ. ಯುರೋಪ್ ಕಡಿಮೆ ತಾಪಮಾನದ ಖಂಡವಾಗಿದ್ದು, ಮನೆಗಳು, ಕಚೇರಿಗಳು, ಶಾಲೆಗಳು ಅಧಿಕ ತಾಪಮಾನಕ್ಕೆ ಸಜ್ಜಾಗಿಲ್ಲ. ಇದರಿಂದಾಗಿ ಜನರು ಹೆಚ್ಚು ಪರದಾಡುವಂತಾಗಿದೆ. ಪ್ರಸ್ತುತ 15 ಕೋಟಿ ಮಂದಿ ಬಿಸಿಗಾಳಿಗೆ ಗುರಿಯಾಗಿದ್ದು, ಸಾವಿರಾರು ಮಂದಿ ಸಾವಿಗೀಡಾಗಿದ್ದಾರೆ. ಶಾಲೆಗಳು ಮುಚ್ಚಿವೆ. ಫ್ರಾನ್ಸ್‌ನಲ್ಲಿ ಆಸ್ಪತ್ರೆಗಳು ತುಂಬಿದ್ದು, ಅಗತ್ಯ ಪ್ರಮಾಣದಲ್ಲಿ ಫ್ಯಾನ್‌ಗಳು, ಎಸಿ ವ್ಯವಸ್ಥೆ ಇಲ್ಲದೆ ರೋಗಿಗಳು ಪರದಾಡುವಂತಾಗಿದೆ.

ಫ್ರಾನ್ಸ್, ಜೆಕ್ ಗಣರಾಜ್ಯ, ಜರ್ಮನಿ ಮತ್ತು ಪೋಲೆಂಡ್ ಸೇರಿದಂತೆ ಹಲವು ದೇಶಗಳಲ್ಲಿ ವಿದ್ಯುತ್ ಸರಬರಾಜಿಗೆ ಅಡ್ಡಿಯುಂಟಾಗಿದೆ. ಸಂಚಾರ ವ್ಯವಸ್ಥೆಯಲ್ಲಿಯೂ ಸಮಸ್ಯೆಗಳು ಉಂಟಾಗಿವೆ. ರೈಲುಗಳ ಸಂಚಾರವನ್ನು ಕಡಿಮೆ ಮಾಡಲಾಗಿದ್ದು, ಕೆಲವೆಡೆ ರದ್ದುಪಡಿಸಲಾಗಿದೆ. ಜನ ಮನೆ ಬಿಟ್ಟು ಹೊರಬರಲು ಹೆದರುತ್ತಿದ್ದಾರೆ.

ಯುರೋಪ್‌ನ ಹಲವು ನದಿಗಳಲ್ಲಿ ನೀರಿನ ಹರಿವು ಕಡಿಮೆಯಾಗಿದ್ದರೆ, ಕೆಲವೆಡೆ ನೀರಿನ ಉಷ್ಣಾಂಶ ಹೆಚ್ಚಾಗಿದೆ. ಇದು ವಿದ್ಯುತ್ ಉತ್ಪಾದನೆ ಮತ್ತು ಕೃಷಿಯ ಮೇಲೆ ಪರಿಣಾಮ ಬೀರುತ್ತಿದೆ. ಹಂಗರಿಯ ಅಣುವಿದ್ಯುತ್ ಸ್ಥಾವರದಲ್ಲಿ ಡ್ಯಾನ್ಯುಬ್ ನದಿಯ ನೀರನ್ನು ಶೀತಲೀಕರಣಕ್ಕಾಗಿ ಬಳಸುತ್ತಿದ್ದರು. ಆದರೆ, ನೀರಿನ ತಾಪಮಾನ ಏರಿದ್ದರಿಂದಾಗಿ ವಿದ್ಯುತ್ ಉತ್ಪಾದನೆಗೆ ತೊಡಕುಂಟಾಗಿದೆ.

ಹವಾಮಾನ ಬದಲಾವಣೆ: ಬಿಸಿಗಾಳಿಯ ಇಂಥ ಪರಿಸ್ಥಿತಿಗೆ ಹವಾಮಾನ ಬದಲಾವಣೆಯೇ ಕಾರಣ ಎಂದು ವಿಶ್ವ ಹವಾಮಾನ ಸಂಸ್ಥೆ ಹೇಳಿದೆ. ಕಳೆದ 50 ವರ್ಷಗಳಲ್ಲಿ ಭೂಮಿಯ ತಾಪಮಾನ 1.1 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಾಗಿದ್ದು, ಇದು ಬಿಸಿಗಾಳಿಯ ಸಂಭವನೀಯತೆ ಹೆಚ್ಚಿಸಿದೆ. ಈ ವೇಳೆ ಯುರೋಪ್‌ನ ತಾಪಮಾನವು 2 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಿದ್ದು, ಇದು ಜಾಗತಿಕ ಸರಾಸರಿಗಿಂತ ಹೆಚ್ಚು. ಯುರೋಪ್ ಜಾಗತಿಕ ತಾಪಮಾನವು ಕ್ಷಿಪ್ರವಾಗಿ ಹೆಚ್ಚಾಗುತ್ತಿರುವ ಖಂಡವಾಗಿದೆ ಎಂದು ವಿಶ್ವ ಹವಾಮಾನ ಸಂಸ್ಥೆ ವಿವರಿಸಿದೆ.

ಸಾವು ನೋವು: ಜರ್ಮನಿ, ಹಂಗರಿ, ಆಸ್ಟ್ರಿಯಾ, ಫ್ರಾನ್ಸ್, ಬ್ರಿಟನ್, ನೆದರ್ಲೆಂಡ್ಸ್, ಡೆನ್ಮಾರ್ಕ್, ಸ್ವಿಟ್ಜರ್ಲೆಂಡ್, ಸ್ಪೇನ್ ದೇಶಗಳಲ್ಲಿ ಬಿಸಿಗಾಳಿ ತೀವ್ರವಾಗಿದೆ. 1,500ಕ್ಕೂ ಹೆಚ್ಚು ಜನ ಸಾವಿಗೀಡಾಗಿದ್ದಾರೆ. ಮುಂದಿನ ದಿನಗಳಲ್ಲಿ ತಾಪಮಾನ ಮತ್ತಷ್ಟು ಏರಲಿದ್ದು, ಅಗತ್ಯ ಎಚ್ಚರಿಕೆ ವಹಿಸಬೇಕೆಂದು ವಿಶ್ವ ಹವಾಮಾನ ಸಂಸ್ಥೆ ಮುನ್ಸೂಚನೆ ನೀಡಿದೆ.

ಬಿಸಿಗಾಳಿಯು ಜನರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. 2022ರ ಬೇಸಿಗೆಯಲ್ಲಿ ಯುರೋಪ್‌ನಲ್ಲಿ 60 ಸಾವಿರ ಮಂದಿ ಸಾವಿಗೀಡಾಗಿದ್ದರು. ಅದರ ಮುಂದಿನ ವರ್ಷ ತಾಪಮಾನ ಅಲ್ಪಪ್ರಮಾಣದಲ್ಲಿ ಕಡಿಮೆಯಾದರೂ 47 ಸಾವಿರ ಮಂದಿ ಬಿಸಿಗಾಳಿಯಿಂದ ಪ್ರಾಣ ಕಳೆದುಕೊಂಡಿದ್ದರು. ಕಳೆದ ವರ್ಷ ಯುರೋಪ್‌ನ 12 ನಗರಗಳಲ್ಲಿಯೇ 2,300 ಮಂದಿ ಸಾವಿಗೀಡಾಗಿದ್ದರು.

ಆಧಾರ: ವಿಶ್ವ ಹವಾಮಾನ ಸಂಸ್ಥೆ, ವಿಶ್ವ ಆರೋಗ್ಯ ಸಂಸ್ಥೆ, ವರ್ಲ್ಡ್ ವೆದರ್ ಅಟ್ರಿಬ್ಯೂಷನ್, ದಿ ಗಾರ್ಡಿಯನ್

ಇಟಲಿಯಲ್ಲಿ ದಾಖಲಾಗಿತ್ತು ಗರಿಷ್ಠ ಉಷ್ಣಾಂಶ

ಯುರೋಪ್ ಖಂಡದಲ್ಲಿಯೇ ಅತಿ ಹೆಚ್ಚು ಉಷ್ಣಾಂಶವು 2021ರ ಆಗಸ್ಟ್ 11ರಂದು ಇಟಲಿಯ ಸಿಸಿಲಿಯಾದಲ್ಲಿ ದಾಖಲಾಗಿದ್ದನ್ನು 2024ರಲ್ಲಿ ವಿಶ್ವ ಹವಾಮಾನ ಸಂಸ್ಥೆ ದೃಢಪಡಿಸಿತ್ತು. ಆ ದಿನ 48.8 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿತ್ತು. ಗ್ರೀಸ್‌ನ ನಗರಗಳಾದ ಅಥೆನ್ಸ್, ಎಲೆಫ್ಸಿನಾದಲ್ಲಿ 1977ರ ಜುಲೈ 10ರಂದು ದಾಖಲಾಗಿದ್ದ 48 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಅದಕ್ಕೂ ಹಿಂದಿನ ಗರಿಷ್ಠ ತಾಪಮಾನವಾಗಿತ್ತು.



*ದಾಖಲಾದ ಗರಿಷ್ಠ ತಾಪಮಾನ ಮತ್ತು ದಿನಾಂಕ ** ಆಯಾ ದೇಶದ ನಿರ್ದಿಷ್ಟ ಸ್ಥಳಗಳಲ್ಲಿ ಮಾತ್ರ ಗರಿಷ್ಠ ಉಷ್ಣಾಂಶ ದಾಖಲಾಗಿದೆ

ಸಾವಿರಾರು ಸಾವು

ಪ್ರಸ್ತುತ ಯುರೋಪ್‌ನ ಬಿಸಿಗಾಳಿಗೆ ಎಷ್ಟು ಮಂದಿ ಸಾವಿಗೀಡಾಗಿದ್ದಾರೆ ಎನ್ನುವುದು ಇನ್ನೂ ಸ್ಪಷ್ಟವಾಗಿಲ್ಲ. ಫ್ರಾನ್ಸ್ ಮತ್ತು ಸ್ಪೇನ್‌ನಲ್ಲಿ ಹೆಚ್ಚು ಮಂದಿ ಸಾವಿಗೀಡಾಗಿದ್ದಾರೆ ಎನ್ನಲಾಗುತ್ತಿದೆ. ಆದರೆ, ತಾಪಮಾನದ ತೀವ್ರ ಏರಿಕೆಯು ಮಕ್ಕಳು, ಮಹಿಳೆಯರು, ಕೃಷಿಕರು, ಕಾರ್ಮಿಕರು, ಬಯಲಿನಲ್ಲಿ ಕೆಲಸ ಮಾಡುವವರು, ಕಾಯಿಲೆಪೀಡಿತರು, ವೃದ್ಧರ ಆರೋಗ್ಯದ ಮೇಲೆ ಗಂಭೀರ ಪರಿಣಾಮಗಳನ್ನು ಬೀರಲಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಮತ್ತು ವಿಶ್ವ ಹವಾಮಾನ ಸಂಸ್ಥೆಯ ಹವಾಮಾನ ಮತ್ತು ಆರೋಗ್ಯ ಜಂಟಿ ಕಚೇರಿ ಎಚ್ಚರಿಕೆ ನೀಡಿದೆ.

ಅಧ್ಯಯನ ಹೇಳುವುದೇನು?

ಬಿಸಿಗಾಳಿಯ ಪ್ರಭಾವಕ್ಕೆ ತೀವ್ರವಾಗಿ ಒಳಗಾಗಿರುವ ಪ್ರದೇಶದ ಮೂರು ಅತ್ಯಂತ ಬಿಸಿ ದಿನಗಳು ಮತ್ತು ರಾತ್ರಿಗಳನ್ನು ಕೇಂದ್ರೀಕರಿಸಿ ಸ್ವೀಡನ್, ಡೆನ್ಮಾರ್ಕ್, ಅಮೆರಿಕ, ನೆದರ್ಲೆಂಡ್ಸ್, ಐರ್ಲೆಂಡ್ ಮತ್ತು ಬ್ರಿಟನ್‌ನ ತಜ್ಞರು ಅಧ್ಯಯನ ನಡೆಸಿದ್ದಾರೆ. ಅಲ್ಲದೇ ಬಿಸಿಗಾಳಿಯಿಂದ ಬಾಧಿತವಾಗಿರುವ 19 ರಾಷ್ಟ್ರಗಳ ರಾಜಧಾನಿಗಳಲ್ಲಿ ಪರಿಸ್ಥಿತಿಗಳನ್ನೂ ಅವರು ವಿಶ್ಲೇಷಣೆಗೆ ಒಳಪಡಿಸಿದ್ದಾರೆ.

ಅಧ್ಯಯನದ ಪ್ರಕಾರ,

- ಪಳೆಯುಳಿಕೆಗಳ ಇಂಧನ ಉರಿಸುತ್ತಿರುವುದರಿಂದ ಯುರೋಪ್‌ನಲ್ಲಿ ಬಿಸಿಗಾಳಿಯ ಪ್ರಭಾವ ಹೆಚ್ಚಾಗುತ್ತಿದೆ
- ಇತರ ಎಲ್ಲ ನೈಸರ್ಗಿಕ ವಿಕೋಪಕ್ಕಿಂತಲೂ ಬಿಸಿಗಾಳಿಯು ಯುರೋಪ್‌ನಲ್ಲಿ ಹೆಚ್ಚು ಸಾವು ನೋವು ತರುತ್ತದೆ
- ವಾತಾವರಣದ ಬಿಸಿಯ ತೀವ್ರತೆಯಿಂದಾಗಿ ವಯಸ್ಸಾಗಿರುವ ಜನರು ಸಾಮಾಜಿಕ ಆರ್ಥಿಕ ಸಮಸ್ಯೆಗಳನ್ನು ಎದುರಿಸುವಂತಾಗಿದೆ. ಅವರನ್ನು ಗಂಭೀರ ಅನಾರೋಗ್ಯವೂ ಬಾಧಿಸುತ್ತಿದೆ. ವಲಸಿಗರು, ಮನೆರಹಿತರ ಮೇಲೂ ಇದು ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಅಳವಡಿಸಿಕೊಳ್ಳಬಹುದಾದ ಮತ್ತು ಎಲ್ಲರಿಗೂ ಅನ್ವಯವಾಗುವಂತಹ ತಾಪಮಾನ–ಆರೋಗ್ಯ ನೀತಿ ಜಾರಿಗೆ ತರುವ ಅಗತ್ಯವಿದೆ
- ಈವರೆಗೆ ವರದಿಯಾಗಿರುವ ಬಿಸಿಗಾಳಿ ಹಾವಳಿಯಲ್ಲಿ ಈ ಬಾರಿಯದ್ದು ಅತ್ಯಂತ ತೀವ್ರವಾದುದು
- 1976ರಲ್ಲಿ ಯುರೋಪ್ ರಾಷ್ಟ್ರಗಳಲ್ಲಿ ತಾಪಮಾನಕ್ಕೆ ಸಂಬಂಧಿಸಿದಂತೆ ಕೆಲವು ದಾಖಲೆಗಳು ವರದಿಯಾಗಿದ್ದವು. ಇಡೀ ವರ್ಷದಲ್ಲಿ ಯುರೋಪ್‌ನಲ್ಲಿ ಈ ರೀತಿಯ ಬಿಸಿ ವಾತಾವರಣ ಕಂಡು ಬರಲು ಸಾಧ್ಯವಿಲ್ಲ. ಅದರಲ್ಲೂ ಜೂನ್ ತಿಂಗಳಲ್ಲಿ ಸಾಧ್ಯವೇ ಇಲ್ಲ
- ಈ ಬಾರಿಯ ಬಿಸಿಗಾಳಿಯ ಅಪಾಯವು ಹೆಚ್ಚು ನಗರಕೇಂದ್ರಿತವಾಗಿದೆ

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು **'Deccan Herald- Prajavani Relief Trust'**ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2026ನೇ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿಯ ಜತೆಗೆ ಅರ್ಜಿದಾರರ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಫ್‌ಎಸ್‌ಸಿ ನಂಬರ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ **'ಶೈಕ್ಷಣಿಕ ನೆರವಿಗೆ ಅರ್ಜಿ'** ಎಂದು ಬರೆಯಬೇಕು.

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ವಿವರವಾಗಿ ನೀಡಬೇಕು.

ವಿಳಾಸ

ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001

ರಾಷ್ಟ್ರೀಯ

ಓಂಕಾರೇಶ್ವರ: ರಕ್ತದಾನ ಮಾಡಿದವರ ಕುಟುಂಬದವರಿಗೆ ಉಚಿತ ದರ್ಶನ

ಖಾಂಡ್ವಾ (ಮಧ್ಯ ಪ್ರದೇಶ) (ಪಿಟಿಐ): ರಕ್ತದಾನ ಮಾಡುವ ಮೂಲಕ ದೇವರ ದರ್ಶನಕ್ಕೆ ಉಚಿತ ವಿಐಪಿ ಪಾಸ್ ಪಡೆಯುವ ವ್ಯವಸ್ಥೆಯನ್ನು ಮಧ್ಯಪ್ರದೇಶದ ಖಂಡ್ವಾ ಜಿಲ್ಲೆಯ ಪ್ರಸಿದ್ಧ ಓಂಕಾರೇಶ್ವರ ಶಿವ ದೇವಾಲಯದಲ್ಲಿ (ಜ್ಯೋತಿರ್ಲಿಂಗ) ಜಾರಿಗೆ ತರಲಾಗಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಈ ಹೊಸ ವ್ಯವಸ್ಥೆಯಿಂದ ಜಿಲ್ಲಾಡಳಿತವು ಪ್ರತಿ ವಾರ 150ರಿಂದ 200 ಯೂನಿಟ್ ರಕ್ತ ಸಂಗ್ರಹಿಸುತ್ತಿದೆ. ಅಲ್ಲದೆ ಭಕ್ತರು ದೀರ್ಘ ಕಾಲ ಸರತಿಯಲ್ಲಿ ನಿಲ್ಲುವ ಬದಲಿಗೆ, ತಮ್ಮ ಕುಟುಂಬದ ಜತೆ ತ್ವರಿತವಾಗಿ ದರ್ಶನ ಪಡೆದುಕೊಳ್ಳುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ.

'ಆಸ್ಪತ್ರೆಗಳಲ್ಲಿ ರೋಗಿಗಳಿಗೆ ರಕ್ತದ ಬೇಡಿಕೆ ಹೆಚ್ಚಿರುವುದನ್ನು ಗಮನಿಸಿ, ದೇಗುಲದಲ್ಲಿ ಈ ಹೊಸ ವ್ಯವಸ್ಥೆ ಜಾರಿಗೊಳಿಸಿದ್ದೇವೆ. ಈ ಮೂಲಕ ಭಕ್ತರನ್ನು ರಕ್ತದಾನಕ್ಕೆ ಪ್ರೋತ್ಸಾಹಿಸಿದ್ದೇವೆ' ಎಂದು ಜಿಲ್ಲಾಧಿಕಾರಿ ರಿಷವ್ ಗುಪ್ತಾ ಪ್ರತಿಕ್ರಿಯಿಸಿದ್ದಾರೆ.

ಸಾಮಾನ್ಯವಾಗಿ ವಿಐಪಿ ದರ್ಶನದ ಪಾಸ್ ಬೆಲೆ ಒಬ್ಬರಿಗೆ ₹300 ಇದೆ. ರಕ್ತದಾನ ಮಾಡುವ ಭಕ್ತರಿಗೆ ಹಾಗೂ ಅವರ ಕುಟುಂಬದವರಿಗೆ ಉಚಿತ ವಿಐಪಿ ಪಾಸ್, ಪ್ರಮಾಣಪತ್ರ, ಪ್ರಸಾದ ಮತ್ತು ಉಡುಗೊರೆಯಾಗಿ ಓಂಕಾರೇಶ್ವರ ದೇವರ ಚಿತ್ರ ನೀಡಲಾಗುತ್ತಿದೆ ಎಂದು ಅವರು ವಿವರಿಸಿದ್ದಾರೆ.

ಮಮತಾ, ಋತಬ್ರತಾ ಪ್ರತಿಕ್ರಿಯೆ ಕೋರಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪದಾಧಿಕಾರಿಗಳ ನೇಮಕ ಹಾಗೂ ಪಕ್ಷದ ಅಧಿಕೃತ ರುಜುದಾರರ ಕುರಿತು ಹಕ್ಕು ಹಾಗೂ ಪ್ರತಿವಾದಗಳನ್ನು ಸಲ್ಲಿಸುವಂತೆ ಚುನಾವಣಾ ಆಯೋಗವು (ಇ.ಸಿ) ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ಎರಡೂ ಬಣಗಳನ್ನು ಕೇಳಿದೆ.

ಮಮತಾ ಬ್ಯಾನರ್ಜಿ ಮತ್ತು ಬಂಡಾಯ ಬಣದ ನಾಯಕ ಋತಬ್ರತಾ ಬ್ಯಾನರ್ಜಿ ಅವರಿಗೆ ಚುನಾವಣಾ ಆಯೋಗವು ಈ ಸಂಬಂಧ ಪತ್ರಗಳನ್ನು ಕಳುಹಿಸಿದ್ದು, ಜುಲೈ 6ರಂದು ಸಂಜೆ 5.30ರೊಳಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಕೇಳಿದೆ ಎಂದು ಚುನಾವಣಾ ಆಯೋಗದ ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಪದಬಂಧ 03

ಅ.ನಾ.ಪ್ರಹ್ಲಾದರಾವ್

ಎಡದಿಂದ ಬಲಕ್ಕೆ

1 ಸಹನೆಯ ಆಕಾರಕ್ಕೆ ಪರಸ್ಪರರು ನೀಡಿದ ನೆರವು 4
3 ಹಕ್ಕಿಯ ರೆಕ್ಕೆ ಮುರಿದಾಗ ಬಟ್ಟೆ ದೃಢವಾಗಿ ನಿಂತಿತು 4
4 ಸವಣ ಗುಡಿಯ ಬಳಿ ಸಂಗಮವಾದ 3
7 ನಡು ಭಾಗದಲ್ಲಿ ನಿಂತ ಹೊಸದಾಗಿ ಕಟ್ಟಿದ ರಾಜ್ಯ 4
9 ಅನಂತಮೂರ್ತಿಗಳ ನಿಯತಕಾಲಿಕದ ಸಾಕ್ಷ್ಯ 4
11 ಸುತ್ತಮುತ್ತಲಿನ ಜನ ಮೇಲೋಗರಕ್ಕೆ ತಂದ ಸಾಮಗ್ರಿ 4
13 ಸಾಲು ಹಬ್ಬಗಳಲ್ಲಿ ಸುವಾಸನೆ ಬೀರಿದ ಪುಷ್ಪ 4
15 ಶಿವಪುತ್ರ ಸಮೂಹಗಳ ನಾಯಕನಾಗಿ ಕಂಡ 3
16 ಪಡಿಪಾಟಲು ಬಿದ್ದು ವರುಣ ಗಾಳಿ ಬೀಸಿದ ಪಶ್ಚಿಮ ದಿಕ್ಕು 4
17 ರಂಭೆ ಊರ್ವಶಿಯರಂತೆ ದೇವಲೋಕದ ನೃತ್ಯಗಾತಿ 4

ಮೇಲಿಂದ ಕೆಳಕ್ಕೆ

2 ಪಾದರಸವನ್ನು ಲೇಪಿಸಿದ ದುಂಡಗಿನ ಗಾಜಿನ ಗೋಳ 4
3 ನೆಗಡಿಗೆ ಸಿಕ್ಕ ದೇಶದಿಂದ ಹೊರ ಹೋಗುವ ಶಿಕ್ಷೆ 4
5 ಭಾನಗಡಿಯಾದಾಗ ಕಾಣಿಸಿಕೊಂಡ ಪ್ರಕಾಶ 2
6 ಎಸ್.ಎಲ್.ಭೈರಪ್ಪನವರ ಕಾದಂಬರಿ 2
8 ಯಾರಿರಬಹುದು ಈವಯ್ಯನನ್ನು ಕಂಡ ಬೆಡಗಿ 3
10 ವಸಂತಕ್ಕೆ ಗಮಗಮಿಸಿದ ಮಲ್ಲಿಗೆಯಂತಹ ಹೂವು 3
11 ಪರ್ವಕಾಲದ ಔತಣದಿಂದ ಸಿಕ್ಕ ಮೋಕ್ಷ 2
12 ಶತ್ರುಗಳು ಕಾದಾಡುವ ಯುದ್ಧಭೂಮಿಯ ಅಂಗಳ 4
13 ಸೈನ್ಯದ ಪರಮೋಚ್ಚ ಅಧಿಕಾರಿ 4
14 ಲಕ್ಷ್ಮಣ ಹಾಗೆ ಬರೆದ ರೇಖೆ 2

1			2	■	3			
■	■	■	4			■	■	■
5	■	■		■		■	■	6
7	8			■	9		10	
■		■	■	■	■	■		■
11			12	■	13			14
	■	■		■		■	■	
■	■	■	15			■	■	■
16				■	17			

02ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಂಚಾರ 3.ಅಪರ
5.ಚೌತಿ 6.ಪನಾಮ
7.ತಹ 11. ವಿಧಿ
13.ಮುಗ್ಗಟ್ಟು 14.ತಾರ
15.ರವೆಯ 16.ಡುಮಕಿ

ಮೇಲಿಂದ ಕೆಳಕ್ಕೆ:
1.ಸಂಗಾತಿ 2.ರತ್ನಪಡಿ
3.ಅನುಮತಿ 4.ರಜತ
5.ಚೌರಸಬಾವಿ 8.ಹರಿಣಧರ
9. ಸಮುದಾಯ 10.ಕಟ್ಟುಪಾಡು
12.ಧಿಕ್ಕಾರ 14.ತಾಟಕಿ

ಸುಡೊಕು 03

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5		7	3		4	8		1
3				8				
	4		5				6	
4		9	2		5			
							3	4
1	5		6			2		7
7	2			3	1		8	
						4		2
			7		2			3

02 ಸುಡೊಕು

4	8	6	2	5	3	7	1	9
2	5	1	9	7	8	6	3	4
7	3	9	4	1	6	2	5	8
3	2	8	1	6	4	5	9	7
1	6	5	8	9	7	4	2	3
9	4	7	5	3	2	1	8	6
6	1	4	3	2	9	8	7	5
8	9	2	7	4	5	3	6	1
5	7	3	6	8	1	9	4	2

ನಂಬಿಕೆಯ ಪರೀಕ್ಷೆ

ನುಡಿ ಬೆಳಗು

ರೇಣುಕಾ ನಿಡಗುಂದಿ

ಸರಳ ಜೀವನ ಮತ್ತು ಉನ್ನತ ಚಿಂತನೆ ಹೊಂದಿದ್ದ ಕಬೀರ ದಾಸ ಅವರ ಖ್ಯಾತಿ ದೂರದೂರಿಗೂ ಹರಡಿತ್ತು. ವಾರಾಣಸಿ ನಗರದ ರಾಜನಾದ ಬೀರ್ ಸಿಂಗ್ ಕೂಡ ಕಬೀರ ದಾಸರ ಭಕ್ತರಲ್ಲಿ ಒಬ್ಬನಾಗಿದ್ದನು. ಕಬೀರ ದಾಸರು ರಾಜನನ್ನು ಭೇಟಿಯಾಗಲು ಬಂದಾಗ, ರಾಜನು ಸ್ವತಃ ಅವರ ಪಾದಗಳ ಬಳಿಯಲ್ಲಿ ಕುಳಿತುಕೊಂಡು ಅವರನ್ನು ರಾಜಸಿಂಹಾಸನದಲ್ಲಿ ಕೂರಿಸುತ್ತಿದ್ದನು.

ಒಂದು ದಿನ ಕಬೀರ ದಾಸರು, 'ಬೀರ್ ಸಿಂಗ್ ನಿಜವಾಗಿಯೂ ನನ್ನ ಭಕ್ತನಾ ಅಥವಾ ಕೇವಲ ಪ್ರದರ್ಶನ ಮಾಡುತ್ತಿದ್ದಾನಾ?' ಎಂದು ಪರೀಕ್ಷಿಸಬೇಕೆಂದು ಯೋಚಿಸಿದರು.

ಮುಂದಿನ ದಿನ ಅವರು ಒಬ್ಬ ಮೋಚಿ (ಚಮ್ಮಾರ) ಹಾಗೂ ಮೊದಲು ವೇಶ್ಯೆಯಾಗಿದ್ದ ಒಬ್ಬ ಭಕ್ತೆಯೊಂದಿಗೆ ರಾಮನಾಮ ಜಪಿಸುತ್ತಾ ನಗರದ ಬೀದಿಗಳಲ್ಲಿ ಹೊರಟರು. ಅವರ ಕೈಯಲ್ಲಿ ಬಣ್ಣದ ನೀರು ತುಂಬಿದ ಎರಡು ಬಾಟಲಿಗಳು ಇದ್ದವು. ನೋಡಿದವರಿಗೆ ಅದು ಮದ್ಯದಂತೆಯೇ ಕಾಣಿಸುತ್ತಿತ್ತು.

ಇದನ್ನು ನೋಡಿ ಅವರ ವಿರೋಧಿಗಳಿಗೆ ಕಬೀರ ದಾಸರ ವಿರುದ್ಧ ಮಾತನಾಡಲು ಅವಕಾಶ ಸಿಕ್ಕಿತು. 'ಕಬೀರ ದಾಸರು ಮದ್ಯದ ಬಾಟಲಿಗಳನ್ನು ಹಿಡಿದು ಮೋಚಿ ಮತ್ತು ವೇಶ್ಯೆಯೊಂದಿಗೆ ತಿರುಗುತ್ತಿದ್ದಾರೆ' ಎಂಬ ಸುದ್ದಿ ನಗರದೆಲ್ಲೆಡೆ ಹರಡಿತು ಮತ್ತು ರಾಜನ ಕಿವಿಗೂ ತಲುಪಿತು.

ಸ್ವಲ್ಪ ಸಮಯದ ನಂತರ, ಪೂರ್ವ ಯೋಜನೆಯಂತೆ ಕಬೀರ ದಾಸರು ರಾಜದರ್ಬಾರಿಗೆ ಬಂದರು. ಅವರ ವರ್ತನೆಯಿಂದ ರಾಜನು ಮನಸ್ಸಿನಲ್ಲಿ ಈಗಾಗಲೇ ಬೇಸರಗೊಂಡಿದ್ದನು. ಈ ಬಾರಿ ಕಬೀರ ದಾಸರನ್ನು ಕಂಡರೂ, ಅವನು ತನ್ನ ಸಿಂಹಾಸನದಿಂದ ಏಳಲಿಲ್ಲ.

ಅದನ್ನು ಕಂಡ ಕಬೀರರು, ರಾಜನೂ ಸಾಮಾನ್ಯ ಜನರಂತೆ ಕಂಡವರ ಮಾತು ಕೇಳಿ ಸತ್ಯವನ್ನು ಅರಿಯಲು ಕೂಡ ಯತ್ನಿಸಲಿಲ್ಲ ಎಂದು ಅರ್ಥಮಾಡಿಕೊಂಡರು. ತಕ್ಷಣವೇ ಅವರು ಎರಡೂ ಬಾಟಲಿಗಳನ್ನು ನೆಲಕ್ಕೆ ಎಸೆದರು.

ಆಗ ರಾಜನು ಯೋಚಿಸುತ್ತಾನೆ: 'ನಿಜವಾದ ಮದ್ಯಪಾನಿ ಹೀಗೆ ಮದ್ಯದ ಬಾಟಲಿಗಳನ್ನು ಎಸೆಯುವುದಿಲ್ಲ. ಖಂಡಿತವಾಗಿಯೂ ಇದರೊಳಗೆ ಇನ್ನೇನೋ ಇದೆ'

ರಾಜನು ತಕ್ಷಣ ಕಬೀರ ದಾಸರೊಂದಿಗೆ ಬಂದಿದ್ದ ಮೋಚಿಯನ್ನು ಬದಿಗೆ ಕರೆದು ಕೇಳಿದನು: 'ಇಲ್ಲಿ ಏನು ನಡೆಯುತ್ತಿದೆ?'

ಮೋಚಿ ಉತ್ತರಿಸಿದನು: 'ಮಹಾರಾಜನೇ, ನಿಮಗೆ ಗೊತ್ತಿಲ್ಲವೇ? ಜಗನ್ನಾಥ ದೇವಸ್ಥಾನದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಸಂತ ಕಬೀರ ದಾಸರು ಈ ಬಾಟಲಿಗಳಲ್ಲಿರುವ ನೀರಿನಿಂದ ಆ ಬೆಂಕಿಯನ್ನು ಆರಿಸುತ್ತಿದ್ದಾರೆ.'

ರಾಜನು ಆ ಘಟನೆ ನಡೆದ ದಿನ ಮತ್ತು ಸಮಯವನ್ನು ಗಮನಿಸಿಕೊಂಡು ನಂತರ ಸತ್ಯಾಸತ್ಯತೆ ತಿಳಿದುಕೊಳ್ಳಲು ದೇವಸ್ಥಾನಕ್ಕೆ ದೂತನನ್ನು ಕಳುಹಿಸಿದನು. ದೇವಾಲಯದ ಸುತ್ತಮುತ್ತಲಿನ ಜನರು, ಅದೇ ದಿನ ಮತ್ತು ಸಮಯದಲ್ಲಿ ದೇವಾಲಯದಲ್ಲಿ ಬೆಂಕಿ ಕಾಣಿಸಿಕೊಂಡಿತ್ತು ಮತ್ತು ಅದನ್ನು ಆರಿಸಲಾಗಿತ್ತು ಎಂದು ದೃಢಪಡಿಸಿದರು. ಈ ಸತ್ಯ ತಿಳಿದ ನಂತರ ರಾಜನಿಗೆ ತನ್ನ ವರ್ತನೆಯ ಬಗ್ಗೆ ತುಂಬಾ ಪಶ್ಚಾತ್ತಾಪವಾಯಿತು. ಕಬೀರ ದಾಸರ ಮೇಲಿನ ಅವನ ಭಕ್ತಿ ಮತ್ತು ನಂಬಿಕೆ ಇನ್ನಷ್ಟು ಗಟ್ಟಿಯಾಯಿತು. ಯಾರಾದರೂ ಬಿತ್ತಿದ ಅನುಮಾನವನ್ನು ಸತ್ಯವೆಂದು ಬೆಳೆಸಬಾರದು. ಬದುಕಿನ ಹೆಚ್ಚಿನ ನಿರ್ಣಯಗಳನ್ನು ನಾವು ಇಂತಹದ್ದೇ ಅನುಮಾನಗಳನ್ನು ನಂಬಿ ತೆಗೆದುಕೊಳ್ಳುತ್ತಿರುತ್ತೇವೆ. ಅಸಲಿ ನಂಬಿಕೆಯ ಪರೀಕ್ಷೆ ಕಷ್ಟದ ಗಳಿಗೆಯಲ್ಲಿಯೇ ಎದುರಾಗುವುದು ಮತ್ತು ಸಮಾಜವು ಬಹಳ ಸಲ ಸತ್ಯ ತಿಳಿಯದೇ ಟೀಕೆ ಮಾಡುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

03 ಜುಲೈ 2026 ಶುಕ್ರವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು, ತಿಥಿ: ನಿಜ ಜ್ಯೇಷ್ಠ ಕೃಷ್ಣ ತೃತೀಯಾ ಗಂ. 11-21, ನಕ್ಷತ್ರ: ಶ್ರವಣ ಗಂ. 11-47, ಯೋಗ: ವಿಷ್ಕಂಭ ಗಂ. 17-00, ಕರಣ: ಭದ್ರ ಗಂ. 11-21 ಮಿಥುನ ಮಾಸದ 18 ನೇ ದಿನ. ಮಳೆ ನಕ್ಷತ್ರ: ಆರ್ದ್ರಾ 4 ನೇ ಪಾದ. ರಾಹುಕಾಲ: ಬೆಳಿಗ್ಗೆ 10-30 - 12-00, ಸೂರ್ಯೋದಯ: 06-12, ಸೂರ್ಯಾಸ್ತ: 06-58, ಮುಸ್ಲಿಂ ದಿನಾಂಕ: 17 ಮೊಹರಂ, ದಿನ ವಿಶೇಷ: ಸಂಕಷ್ಟಹರ ಚತುರ್ಥಿ, ಅದೃಷ್ಟ ಸಂಖ್ಯೆ: 1, 7.

ಮೇಷ: ಕೆಲಸದ ಒತ್ತಡದಿಂದ ನೀವು ಈ ದಿನ ನೆಮ್ಮದಿಯನ್ನು ಸಂಪಾದಿಸಬೇಕಾಗುತ್ತದೆ. ಕಾನೂನು ವಿಷಯದ ಅಧ್ಯಯನದಲ್ಲಿ ತೊಡಗಿರುವವರಿಗೆ ಶುಭವಾಗುವುದು. ಷೇರಿನ ವ್ಯವಹಾರದಲ್ಲಿ ಹೆಚ್ಚಿನ ಹಣ ಸಂಗ್ರಹವಾಗುವುದು.

ವೃಷಭ: ಚಿತ್ರ ವಿತರಕರಿಗೆ ಹೆಚ್ಚಿನ ವರಮಾನ ಅಥವಾ ಪ್ರಶಸ್ತಿ ಹಾಗೂ ಪುರಸ್ಕಾರ ದೊರೆಯುವ ಸಂಭವ ಇದೆ. ಮಹಾಗಣಪತಿಯ ಆರಾಧನೆಯಿಂದ ಹೆಚ್ಚಿನ ಇಷ್ಟಾರ್ಥ ಸಿದ್ಧಿಯೋಗ. ಹೊಸ ಯೋಜನೆಗೆ ಹಣದ ಬಗ್ಗೆ ಚಿಂತೆ ಬೇಡ.

ಮಿಥುನ: ನೀವು ಅಪೇಕ್ಷಿಸಿದ ಪ್ರಗತಿಯು ದೇವತಾನುಗ್ರಹದಿಂದ ಪ್ರಾಪ್ತಿಯಾಗುವುದು. ಕೌಟುಂಬಿಕವಾಗಿ ಎಷ್ಟೇ ಕಷ್ಟ ಬಂದರೂ ಹಿಡಿದ ದಾರಿಯನ್ನು ಬಿಡಬಾರದೆಂಬ ನಿಮ್ಮ ಮನೋಭಾವದಿಂದಾಗಿ ಯಶಸ್ಸನ್ನು ಪಡೆಯುವಿರಿ.

ಕರ್ಕಾಟಕ: ಸಜ್ಜನರ ಒಡನಾಟದಿಂದ ಯಶೋಭಿವೃದ್ಧಿ. ಅನಾರೋಗ್ಯದಿಂದಾಗಿ ನಿತ್ಯದ ಕೆಲಸಗಳಿಂದ ವಿಶ್ರಾಂತಿ ಪಡೆಯಬೇಕಾಗುತ್ತದೆ. ರಾಜಕೀಯ ನಡೆಯಲ್ಲಿ ಉತ್ತಮವಾದ ಭವಿಷ್ಯವಿದೆ ಎಂಬುದು ಅನುಭವಕ್ಕೆ ಬರಲಿದೆ.

ಸಿಂಹ: ಹಳೆಯ ಕೆಲಸಕ್ಕಿಂತ ಹೊಸ ಉದ್ಯೋಗದಲ್ಲಿ ಹೆಚ್ಚಿನ ಸ್ವಾತಂತ್ರ್ಯ ಹಾಗೂ ಅನುಕೂಲ ಇರುತ್ತದೆ. ಕಾರ್ಯಕ್ಷೇತ್ರದಲ್ಲಿ ನೀತಿ-ನಿಯಮಗಳಿಗೆ ಬದ್ಧರಾಗಿರುವ ತೀರ್ಮಾನ ಮಾಡುವುದು ಒಳ್ಳೆಯದು.

ಕನ್ಯಾ: ಚರ್ಮಸಂಬಂಧಿ ಅನಾರೋಗ್ಯವು ಕಾಣಿಸಿದಲ್ಲಿ ಆಯುರ್ವೇದದ ಮೊರೆ ಹೋಗುವುದರಿಂದ ಸಮಸ್ಯೆಗೆ ಶಾಶ್ವತವಾಗಿ ಉತ್ತರ ದೊರಕಲಿದೆ. ಕೆಲಸ ಕೊಂಚ ನಿಧಾನವಾಗಿ ಸಾಗುತ್ತಿದೆ ಎನಿಸಿದರೂ ಚಿಂತೆ ಬೇಡ.

ತುಲಾ: ಹೆಚ್ಚಿನ ಗಳಿಕೆಯ ಬಗ್ಗೆ ಚಿಂತಿಸಬೇಡಿ, ಕೆಲಸದಲ್ಲಿ ನಿರಂತರತೆ ಮತ್ತು ಅಸ್ತಿತ್ವವನ್ನು ಕಾಪಾಡಿಕೊಳ್ಳಿ. ಅಡಿಕೆ ಮಾರಾಟ ಪ್ರತಿನಿಧಿಗಳಿಗೆ ಈ ದಿನ ಹೆಚ್ಚಿನ ಕಮಿಷನ್ ಸಿಗಲಿದೆ. ವ್ಯಾವಹಾರಿಕ ಒತ್ತಡ ಕಡಿಮೆಯಾಗುವುದು.

ವೃಶ್ಚಿಕ: ಹೋಟೆಲ್ ಉದ್ಯಮಿಗಳಿಗೆ ವ್ಯವಹಾರದಲ್ಲಿ ಅತ್ಯಂತ ಲಾಭ ಮತ್ತು ಸ್ನೇಹಪರ ಸ್ವಭಾವದಿಂದ ಸುತ್ತಮುತ್ತಲಿನ ಸಮಾಜದಲ್ಲಿ ಗೌರವವು ಹೆಚ್ಚಲಿದೆ. ಮನೆಯ ಮಂಗಳ ಕಾರ್ಯಕ್ಕಾಗಿ ಶುಭದಿನದ ನಿಶ್ಚಯ ಮಾಡುವಿರಿ.

ಧನು: ಕೋರ್ಟು ವ್ಯವಹಾರಗಳಲ್ಲಿ ನಿರೀಕ್ಷಿಸಿದ ಯಾವುದೇ ತೀರ್ಮಾನ ಸಿಗದಂತಾಗುತ್ತದೆ. ಅದರಿಂದಾಗಿ ಮನಸ್ಸು ಅಸ್ಥಿರವಾಗುವುದು. ಕಾಗದ ಕಾರ್ಖಾನೆ ಮಾಲೀಕರಿಗೆ ವರಮಾನದಲ್ಲಿ ಗಣನೀಯ ಏರಿಕೆಯಾಗುವುದು.

ಮಕರ: ಜೀವನದಲ್ಲಿ ಬಯಸಿದ ನೆಲೆಯನ್ನು ಗಟ್ಟಿಗೊಳಿಸಿಕೊಂಡ ಸಂತೃಪ್ತಿ ಇರಲಿದೆ. ಕಾರ್ಖಾನೆಯ ನಿರಂತರತೆಯನ್ನು ಗಮನದಲ್ಲಿ ಇಡುವುದಕ್ಕಾಗಿ ಈಗಿರುವ ವ್ಯವಸ್ಥೆಗೆ ಹೊರತಾಗಿ ಪರ್ಯಾಯ ವ್ಯವಸ್ಥೆಗೆ ತಯಾರಾಗಿರಿ.

ಕುಂಭ: ಕೌಟುಂಬಿಕ ಸಮಸ್ಯೆಗಳನ್ನು ಎಲ್ಲರೂ ಮೆಚ್ಚುವಂತೆ ಪರಿಹರಿಸಿಕೊಳ್ಳುವ ಸಾಮರ್ಥ್ಯ ಅಭಿವೃದ್ಧಿಯಾಗಲಿದೆ. ಪಾಕ ಪ್ರವೀಣರಿಗೆ ವೃತ್ತಿಯಲ್ಲಿ ಉನ್ನತ ಸ್ಥಾನ ಪಡೆಯುವ ಕಾಲ ಒದಗಿಬರುವುದು.

ಮೀನ: ಬದುಕಿನ ಸಾರ ತಿಳಿಯುವುದು ಬಹಳ ಕಷ್ಟಕರವಾದ ವಿಷಯವಾದರೂ, ಈ ದಿನ ನೀವು ಅದರ ಬಗ್ಗೆ ಹೆಚ್ಚಿನ ಆಲೋಚನೆಯಲ್ಲಿ ತೊಡಗುವಿರಿ. ತಂತ್ರಜ್ಞಾನಿಗಳಿಗೆ ವೃತ್ತಿಯಲ್ಲಿ ಒತ್ತಡ ಕಡಿಮೆಯಾಗಲಿದೆ.

ಗುಂಡಣ್ಣ

© 2026 by King Features Syndicate, Inc. World Rights reserved

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	24,005
ಇಂದಿನ ಅಂತ್ಯ:	24,175
ದಿನದ ಗರಿಷ್ಠ:	24,194
▲	169

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು

100 ಕ್ಕೆ	₹710
12 ಕ್ಕೆ	₹94
ಮೈಸೂರು: 100 ಕ್ಕೆ	₹725

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹263.50
ಆರ್‌ಎಸ್‌ಎಸ್-5	₹258.50
ಗುಡ್ ಲಾಟ್	₹226

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹488-708
ದ್ವಿತಳಿ (ಬಿ.ವಿ)	₹536-880

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1560 (1580)
ಸೋಯಾ (ರಿಫೈನ್ಡ್)	₹1450 (1455)
ಸೂರ್ಯಕಾಂತಿ (ರಿಫೈನ್ಡ್)	₹1655 (1655)
ಪಾಮೋಲಿನ್	₹1450 (1450)

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1800-2600
ಮಧ್ಯಮ	₹1200-1800
ಸಣ್ಣ	₹600-1200

ಪ್ಯಾರಡೈಸ್: 20 ಹೊಸ ಮಳಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮರ ಕ್ಯಾಪಿಟಲ್' ಮಾಲೀಕತ್ವದ ಪ್ಯಾರಡೈಸ್ ಬಿರಿಯಾನಿ ಕಂಪನಿಯು ಬೆಂಗಳೂರಿನಲ್ಲಿ ಹೊಸದಾಗಿ 20 ಮಳಿಗೆಗಳನ್ನು ತೆರೆಯಲು ಮುಂದಾಗಿದೆ. ಈ ಮಳಿಗೆಗಳು ಸಂಪೂರ್ಣವಾಗಿ ಕಂಪನಿಯ ಮಾಲೀಕತ್ವದಲ್ಲಿ ಕಾರ್ಯಾಚರಣೆ ನಡೆಸಲಿವೆ.

ನಗರದಲ್ಲಿ ಪ್ಯಾರಡೈಸ್ ಬಿರಿಯಾನಿ ಮಳಿಗೆಗಳ ವರಮಾನವು ವಾರ್ಷಿಕ ಶೇ 30ರಷ್ಟು ಬೆಳವಣಿಗೆ ಕಾಣುತ್ತಿದ್ದು, ಈಗ ಕಂಪನಿಯು ನಗರದಲ್ಲಿ 10 ಮಳಿಗೆಗಳನ್ನು ಹೊಂದಿದೆ.

ಆದಿತ್ ಮಿತ್ರಾ

'ನಗರದಲ್ಲಿ ನಮ್ಮ ವಹಿವಾಟು, ವ್ಯಾಪ್ತಿ ವಿಸ್ತರಿಸುವ ಚಟುವಟಿಕೆಯ ಭಾಗವಾಗಿ ನಾವು ಮೂರು ವರ್ಗಗಳಲ್ಲಿ ಮಳಿಗೆಗಳನ್ನು ವಿಸ್ತರಿಸುತ್ತಿದ್ದೇವೆ. ಹೆಚ್ಚಿನ ಸಂಖ್ಯೆಯಲ್ಲಿ ಜನ ಭೇಟಿ ನೀಡುವ ಬೀದಿಗಳಲ್ಲಿ, ಮಾಲ್‌ಗಳಲ್ಲಿ ವಿಸ್ತರಣೆ ಆಗಲಿದೆ. ಗ್ರಾಹಕರು ಇರುವಲ್ಲಿಗೇ ಬಿರಿಯಾನಿ ತಲುಪಿಸುವ ಉದ್ದೇಶದಿಂದ ಕ್ಲೌಡ್ ಕಿಚನ್ ಮೂಲಕ ಕೂಡ ವಹಿವಾಟು ವಿಸ್ತರಣೆ ಕಾಣಲಿದೆ' ಎಂದು ಕಂಪನಿಯ ಸಿಇಒ ಆದಿತ್ ಮಿತ್ರಾ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಬೆಂಗಳೂರು ನಗರ ಮಾತ್ರವೇ ಅಲ್ಲದೆ, ನವದೆಹಲಿ ಹಾಗೂ ಇತರ ಕೆಲವು ನಗರಗಳಲ್ಲಿ ಒಟ್ಟಾಗಿ ಒಟ್ಟು ನೂರು ಮಳಿಗೆಗಳನ್ನು ಹೊಸದಾಗಿ ಆರಂಭಿಸಲು ಪ್ಯಾರಡೈಸ್ ಬಿರಿಯಾನಿ ಮುಂದಾಗಿದೆ. ಈ ವಿಸ್ತರಣಾ ಕಾರ್ಯಕ್ಕಾಗಿ 'ಸಮರ ಕ್ಯಾಪಿಟಲ್' ಒಟ್ಟು ₹100 ಕೋಟಿ ಹೂಡಿಕೆ ಮಾಡಲಿದೆ.

ಮಳಿಗೆಗಳ ಸಂಖ್ಯೆಯನ್ನು ವಿಸ್ತರಿಸುವ ಸಂದರ್ಭದಲ್ಲಿ ಕಂಪನಿಯು ಫ್ರ್ಯಾಂಚೈಸಿ ಮಾದರಿಯನ್ನು ಅನುಕರಿಸುವುದಿಲ್ಲ. ಗುಣಮಟ್ಟವನ್ನು ಖಾತರಿಪಡಿಸುವ ಉದ್ದೇಶದಿಂದ ಪ್ರತಿ ಮಳಿಗೆಯ ಮಾಲೀಕತ್ವವನ್ನೂ ಕಂಪನಿಯೇ ಹೊಂದಿರಲಿದೆ ಎಂದು ಮಿತ್ರಾ ಅವರು ಪ್ರಶ್ನೆಯೊಂದಕ್ಕೆ ಉತ್ತರವಾಗಿ ಹೇಳಿದ್ದಾರೆ.

ಅಡಿಕೆ ಧಾರಣೆ

ಕುಮಟಾ		ಶಿವಮೊಗ್ಗ / ಶಿರಸಿ		ಯಲ್ಲಾಪುರ	
ಚಾಲಿ	43198-43254	ಕೋಕ	13999-32699	ಬಿಳಿಗೋಟು	21600-33700
ಚಿಪ್ಪು	16160-33171	ಕೆಂಪುಗೋಟು	14199-40889	ಚಾಲಿ	43600-48000
ಕೋಕ	16001-32769	ರಾಶಿ	30999-58170	ಕೆಂಪುಗೋಟು	30099-35099
ಹಳೆಚಾಲಿ	47398-47398	ಸಿಪ್ಪೆಗೋಟು	8199-21699	ರಾಶಿ	48649-51009
ಹೊಸಚಾಲಿ	34379-46409	**ಶಿವಮೊಗ್ಗ**		**ಯಲ್ಲಾಪುರ**	
ಪುತ್ತೂರು		ಸರಕು	56599-88099	ಬಿಳಿಗೋಟು	17099-35399
ಕೋಕ	20000-33000	ಬೆಟ್ಟೆ	50119-61639	ಚಾಲಿ	37005-46705
ಹೊಸತು	30000-47000	ರಾಶಿ	41899-53299	ಕೋಕ	14099-27299
ಸಾಗರ		ಗೊರಬಲು	21200-42299	ಕೆಂಪುಗೋಟು	26101-32099
ಬಿಳಿಗೋಟು	18230-32500	**ಶಿರಸಿ**		ರಾಶಿ	49402-52499
ಚಾಲಿ	33520-41009	ಬೆಟ್ಟೆ	40000-44150	ತಟ್ಟಿಬೆಟ್ಟೆ	39919-43666

ಚಿನ್ನ ₹3 ಸಾವಿರ, ಬೆಳ್ಳಿ ₹5 ಸಾವಿರ ಏರಿಕೆ

ನವದೆಹಲಿ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಮೌಲ್ಯ ಇಳಿಕೆ ಮತ್ತು ಪ್ರಮುಖ ಲೋಹಗಳಿಗೆ ಬೇಡಿಕೆ ಹೆಚ್ಚಳವಾಗಿದ್ದರಿಂದ ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ದರ ಹೆಚ್ಚಳವಾಗಿದೆ.

ಶೇ 99.9ರಷ್ಟು ಪರಿಶುದ್ಧತೆಯ 10 ಗ್ರಾಂ ಚಿನ್ನದ ದರವು ₹3 ಸಾವಿರ ಹೆಚ್ಚಳವಾಗಿ, ₹1,47,500ರಂತೆ ಮಾರಾಟವಾಗಿದೆ. ಬೆಳ್ಳಿ ಬೆಲೆಯು ಕೆ.ಜಿಗೆ ₹5 ಸಾವಿರ ಏರಿಕೆಯಾಗಿ, ₹2.40 ಲಕ್ಷಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

'ಇಂಧನ ಬೆಲೆ ಇಳಿಕೆ ತಕ್ಷಣಕ್ಕಿಲ್ಲ'

ಕಚ್ಚಾ ತೈಲದ ಬೆಲೆಯು ಕಡಿಮೆ ಮಟ್ಟದಲ್ಲಿ ಸ್ಥಿರವಾದರೆ ಪರಿಶೀಲನೆ: ಪುರಿ

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ದರವು ನಾಲ್ಕು ತಿಂಗಳ ಕನಿಷ್ಠ ಮಟ್ಟವನ್ನು ತಲುಪಿದ್ದರೂ, ದೇಶದ ಮಾರುಕಟ್ಟೆಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯು ತಕ್ಷಣವೇ ಕಡಿಮೆ ಆಗುವ ಸಾಧ್ಯತೆ ಇಲ್ಲ.



ಏಕೆಂದರೆ ಸರ್ಕಾರಿ ಸ್ವಾಮ್ಯದ ಕಚ್ಚಾ ತೈಲ ಸಂಸ್ಕರಣಾ ಕಂಪನಿಗಳು ಪಶ್ಚಿಮ ಏಷ್ಯಾ ಬಿಕ್ಕಟ್ಟು ತೀವ್ರವಾಗಿದ್ದ ಸಂದರ್ಭದಲ್ಲಿ ಹೆಚ್ಚಿನ ಬೆಲೆಗೆ ಖರೀದಿಸಿದ್ದ ಕಚ್ಚಾ ತೈಲವನ್ನು ಈಗಲೂ ಸಂಸ್ಕರಿಸುತ್ತಿವೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರದೀಪ್ ಸಿಂಗ್ ಪುರಿ ತಿಳಿಸಿದ್ದಾರೆ.

ಮುಖ್ಯಾಂಶಗಳು
- ನಾಲ್ಕು ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿದ ಬ್ರೆಂಟ್ ಕಚ್ಚಾ ತೈಲ ದರ
- ಸರ್ಕಾರಿ ಸ್ವಾಮ್ಯದ ತೈಲೋದ್ಯಮ ಕಂಪನಿಗಳಿಗೆ ₹74 ಸಾವಿರ ಕೋಟಿ ನಷ್ಟ
- ಪ್ರಸ್ತುತ 70 ಡಾಲರ್‌ಗೆ ಇಳಿದ ಕಚ್ಚಾ ತೈಲ ದರ

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಹೆಚ್ಚಳ ಆದ ತಕ್ಷಣ ಭಾರತದ ಮಾರುಕಟ್ಟೆಯಲ್ಲಿ ಪೆಟ್ರೋಲ್, ಡೀಸೆಲ್ ದರ ಹೆಚ್ಚಳ ಆಗಿಲ್ಲ. ಅಲ್ಲದೆ, ಕಚ್ಚಾ ತೈಲದ ದರ ಏರಿಕೆ ಪ್ರಮಾಣಕ್ಕೆ ಅನುಗುಣವಾಗಿ ಪೆಟ್ರೋಲ್, ಡೀಸೆಲ್ ದರ ಹೆಚ್ಚಿಸಿಲ್ಲ. ಹೀಗಾಗಿ ಸರ್ಕಾರಿ ಸ್ವಾಮ್ಯದ ಇಂಡಿಯನ್ ಆಯಿಲ್, ಭಾರತ್ ಪೆಟ್ರೋಲಿಯಂ ಮತ್ತು ಹಿಂದುಸ್ತಾನ್ ಪೆಟ್ರೋಲಿಯಂ ಬಹಳಷ್ಟು ನಷ್ಟ ಕಂಡಿವೆ.

ಪೆಟ್ರೋಲ್, ಡೀಸೆಲ್ ಮತ್ತು ಎಲ್‌ಪಿಜಿಯನ್ನು ಮಾರುಕಟ್ಟೆ ಬೆಲೆಗಿಂತ ಕಡಿಮೆ ದರದಲ್ಲಿ ಮಾರಾಟ ಮಾಡಿದ್ದರಿಂದಾಗಿ ಸರ್ಕಾರಿ ಸ್ವಾಮ್ಯದ ತೈಲ ಸಂಸ್ಕರಣಾ ಕಂಪನಿಗಳು ಒಟ್ಟು ₹74 ಸಾವಿರ ಕೋಟಿ ನಷ್ಟ ಕಂಡಿವೆ ಎಂದು ಪುರಿ ಹೇಳಿದ್ದಾರೆ.

ಅಮೆರಿಕ ಮತ್ತು ಇರಾನ್ ನಡುವೆ ಮಧ್ಯಂತರ ಶಾಂತಿ ಒಪ್ಪಂದ ಏರ್ಪಟ್ಟ ನಂತರದಲ್ಲಿ ಕಚ್ಚಾ ತೈಲದ ದರವು ಇಳಿಕೆಯಾಗಿದೆ. ಬಿಕ್ಕಟ್ಟು ತೀವ್ರಗೊಂಡಿದ್ದ ಸಂದರ್ಭದಲ್ಲಿ ದರವು ಬ್ಯಾರಲ್‌ಗೆ 119 ಡಾಲರ್‌ಗೆ ತಲುಪಿತ್ತು. ಅದು ಈಗ 70 ಡಾಲರ್ ಆಸುಪಾಸಿಗೆ ಇಳಿದಿದೆ.

ತೈಲ ಸಂಸ್ಕರಣಾ ಕಂಪನಿಗಳು ಎರಡು ಅಥವಾ ಎರಡೂವರೆ ತಿಂಗಳ ಹಿಂದೆ ತರಿಸಿದ ಕಚ್ಚಾ ತೈಲವನ್ನು ಈಗ ಸಂಸ್ಕರಿಸುತ್ತಿವೆ ಎಂದು ಪುರಿ ಹೇಳಿದ್ದಾರೆ. ಆಗ ಕಚ್ಚಾ ತೈಲವನ್ನು ಹೆಚ್ಚಿನ ಬೆಲೆಗೆ ಖರೀದಿಸಲಾಗಿತ್ತು. ಆಗ ವಿಮಾ ವೆಚ್ಚ ಹಾಗೂ ಸರಕು ಸಾಗಣೆ ವೆಚ್ಚ ಕೂಡ ಜಾಸ್ತಿ ಇತ್ತು ಎಂದೂ ಅವರು ತಿಳಿಸಿದ್ದಾರೆ.

ಈಗ ಕಡಿಮೆ ದರಕ್ಕೆ ಸಿಗುತ್ತಿರುವ ಕಚ್ಚಾ ತೈಲವು ಸಂಸ್ಕರಣಾ ಕಂಪನಿಗಳಿಗೆ ಬರಲು 'ಇನ್ನಷ್ಟು ಸಮಯ ಬೇಕು' ಎಂದಿದ್ದಾರೆ.

ಕಚ್ಚಾ ತೈಲದ ಬೆಲೆಯು ಕಡಿಮೆ ಮಟ್ಟದಲ್ಲಿ ಸ್ಥಿರವಾಗಿ ಇದ್ದರೆ ಮಾತ್ರ ಇಂಧನ ಬೆಲೆ ಇಳಿಕೆ ಬಗ್ಗೆ ಪರಿಶೀಲಿಸಲಾಗುವುದು ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಸುದ್ದಿ 2 ನಿಮಿಷ

ಸೆನ್ಸೆಕ್ಸ್ 579 ಅಂಶ ಏರಿಕೆ

ಮುಂಬೈ / ನವದೆಹಲಿ (ಪಿಟಿಐ): ಕಚ್ಚಾ ತೈಲ ದರ ಇಳಿಕೆ ಮತ್ತು ಮಾಹಿತಿ ತಂತ್ರಜ್ಞಾನ ವಲಯದ ಕಂಪನಿಗಳ ಷೇರುಗಳ ಖರೀದಿ ಹೆಚ್ಚಳದಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಗುರುವಾರದ ವಹಿವಾಟಿನಲ್ಲಿ ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 579 ಅಂಶ ಹೆಚ್ಚಳವಾಗಿ, 77,502ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 169 ಅಂಶ ಏರಿಕೆಯಾಗಿ, 24,175ಕ್ಕೆ ಕೊನೆಗೊಂಡಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 1.45ರಷ್ಟು ಇಳಿಕೆಯಾಗಿದ್ದು, ಪ್ರತಿ ಬ್ಯಾರಲ್ ದರವು 70.53 ಡಾಲರ್‌ಗೆ ಇಳಿದಿದೆ.

'ಭಾರತದ ಪ್ರಧಾನಿ ನರೇಂದ್ರ ಮೋದಿ ಹಾಗೂ ಜಪಾನ್ ಪ್ರಧಾನಿ ಸನೆ ತಕೈಚಿ ಅವರು ಹೂಡಿಕೆ ಮತ್ತು ರಕ್ಷಣಾ ಒಪ್ಪಂದಕ್ಕೆ ಗುರುವಾರ ಸಹಿ ಹಾಕಿದ್ದಾರೆ. ಜೊತೆಗೆ ಕೃತಕ ಬುದ್ಧಿಮತ್ತೆ, ರಕ್ಷಣಾ ತಂತ್ರಜ್ಞಾನ ಮತ್ತು ಇಂಧನ ಪೂರೈಕೆಗೆ ಸಂಬಂಧಿಸಿದಂತೆ ಒಪ್ಪಂದ ಆಗಿದೆ. ಈ ಒಪ್ಪಂದವು ಸೂಚ್ಯಂಕಗಳ ಏರಿಕೆಗೆ ನೆರವಾದವು' ಎಂದು ಎನ್ರಿಚ್ ಮನಿ ಸಂಸ್ಥೆಯ ಸಿಇಒ ಪೊನ್ನುಡಿ ಆರ್. ಹೇಳಿದ್ದಾರೆ.



ಐ.ಟಿ ಷೇರು ಖರೀದಿ ಜೋರು: ಮಾಹಿತಿ ತಂತ್ರಜ್ಞಾನ ವಲಯದ ಕಂಪನಿಗಳ ಷೇರು ಖರೀದಿ ಗುರುವಾರ ಜೋರಾಗಿತ್ತು. ಬ್ಲೂಚಿಪ್ ಕಂಪನಿಗಳ ಪೈಕಿ ಇನ್ಫೊಸಿಸ್ ಕಂಪನಿಯ ಷೇರಿನ ಮೌಲ್ಯ ಶೇ 5.64ರಷ್ಟು ಏರಿಕೆ ಆಗಿದೆ.

ಭಾರತದಲ್ಲಿದ್ದರೆ ಎಂದಿಗೂ ಸಿಇಒ ಆಗುತ್ತಿರಲಿಲ್ಲ: ಇಂದ್ರಾ ನೂಯಿ

ನವದೆಹಲಿ (ಪಿಟಿಐ): 'ಅಮೆರಿಕದಲ್ಲಿನ 'ಅರ್ಹತೆ ಆಧಾರಿತ ವ್ಯವಸ್ಥೆ'ಯು ವಲಸಿಗನೊಬ್ಬ ವಿಶ್ವದ ಅತಿದೊಡ್ಡ ಕಂಪನಿಯೊಂದರ ಸಿಇಒ ಆಗಲು ಅವಕಾಶ ಮಾಡಿಕೊಟ್ಟಿತು. ಆದರೆ, ತಾವು ಹುಟ್ಟಿ ಬೆಳೆದ ಭಾರತ ಸೇರಿದಂತೆ ಬೇರೆ ಯಾವುದೇ ದೇಶದಲ್ಲಿ ಇಂತಹ ಘಟನೆ ನಡೆಯುತ್ತಿರಲಿಲ್ಲ' ಎಂದು ಪೆಪ್ಸಿಕೊದ ಮಾಜಿ ಅಧ್ಯಕ್ಷೆ ಮತ್ತು ಸಿಇಒ ಇಂದ್ರಾ ನೂಯಿ ಹೇಳಿದ್ದಾರೆ.

ಹೂವರ್ ಸಂಸ್ಥೆಯ ಪರವಾಗಿ, ಅಮೆರಿಕದ ಮಾಜಿ ವಿದೇಶಾಂಗ ಕಾರ್ಯದರ್ಶಿ ಕಾಂಡೊಲಿಸಾ ರೈಸ್ ಅವರು ಇಂದಿರಾ ನೂಯಿ ಅವರೊಂದಿಗೆ ಮಾತುಕತೆ ನಡೆಸಿದರು. ಸ್ಟಾನ್ ಫೋರ್ಡ್ ವಿಶ್ವವಿದ್ಯಾಲಯದಲ್ಲಿ ಬುಧವಾರ ನಡೆದ ಈ ಕಾರ್ಯಕ್ರಮದಲ್ಲಿ ನೂಯಿ, 'ನಾನು ಯಾವಾಗಲೂ ನನ್ನ ಹೆಣ್ಣುಮಕ್ಕಳಿಗೆ ಅಮೆರಿಕವನ್ನು ಉಲ್ಲೇಖಿಸಿ, ವಿಶ್ವದ ಶ್ರೇಷ್ಠ ದೇಶದಲ್ಲಿ ಜನಿಸಲು ನೀವೆಷ್ಟು ಅದೃಷ್ಟವಂತರು ಎನ್ನುವುದು ನಿಮಗೆ ತಿಳಿದಿಲ್ಲ ಎನ್ನುತ್ತಿದ್ದೆ. ಅದಕ್ಕೆ ಪ್ರತಿಯಾಗಿ ಅವರು, ಅದು ಹೇಗೆ ಉತ್ತಮ ಎನ್ನುವುದನ್ನು ನಮಗೂ ವಿವರಿಸಿ' ಎನ್ನುತ್ತಿದ್ದರು. ನನಗೆ ಅಮೆರಿಕದಲ್ಲಿ ಲಭಿಸಿದ ಉನ್ನತಿಯ ಮೂಲಕ ಇದಕ್ಕೆ ಉತ್ತರ ಹೇಳಿದ್ದೇನೆ' ಎಂದರು.

ಭಾರಿ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಜನರಿಗೆ ಇರಾನ್ ಆಡಳಿತ ಕರೆ

ಖಮೇನಿ ಅಂತ್ಯಕ್ರಿಯೆ ನಾಳೆಯಿಂದ

ಟೆಹರಾನ್(ಎಎಫ್‌ಪಿ): 'ಆಯತೊಲ್ಲಾ ಅಲಿ ಖಮೇನಿ ಹತ್ಯೆಗೆ ಪ್ರತೀಕಾರವಾಗಿ ಅವರ ಅಂತ್ಯಕ್ರಿಯೆಯಲ್ಲಿ ಭಾರಿ ಸಂಖ್ಯೆಯಲ್ಲಿ ಸೇರಬೇಕು' ಎಂದು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಖಿರ್ ಖಾಲೀಬಾಫ್ ದೇಶದ ಜನರಿಗೆ ಗುರುವಾರ ಕರೆ ನೀಡಿದ್ದಾರೆ.

ಆಯತೊಲ್ಲಾ ಅಲಿ ಖಮೇನಿ

'ಅಲಿ ಖಮೇನಿ ಅವರ ಅಂತ್ಯಕ್ರಿಯೆಗೆ ಸಂಬಂಧಿಸಿದ ವಿಧಿ ವಿಧಾನಗಳು ಶನಿವಾರ ಆರಂಭವಾಗಲಿದ್ದು, ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಇರಾನ್ ಜನರನ್ನು ನಾನು ಆಹ್ವಾನಿಸುತ್ತೇನೆ. ನಿಮ್ಮ ಉಪಸ್ಥಿತಿ ಮೂಲಕ ಇಸ್ಲಾಮಿಕ್ ಇರಾನ್‌ನ ಇತಿಹಾಸದಲ್ಲಿ ಹೊಸ ದಾಖಲೆ ನಿರ್ಮಿಸಬೇಕು' ಎಂದಿದ್ದಾರೆ.

'ಇರಾನ್‌ನ ಈ ಪ್ರತೀಕಾರದ ಗರ್ಜನೆ ಇಡೀ ವಿಶ್ವದೆಲ್ಲೆಡೆ ಅನುರಣಿಸುವಂತಾಗಬೇಕು' ಎಂದು ಈ ಕುರಿತು ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅಮೆರಿಕ ಹಾಗೂ ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ಯುದ್ಧ ಆರಂಭಿಸಿದಾಗ, ಮೊದಲ ದಿನವಾದ ಫೆಬ್ರುವರಿ 28ರಂದು ನಡೆದ ದಾಳಿಯಲ್ಲಿ ಅಲಿ ಖಮೇನಿ ಅವರ ಹತ್ಯೆಯಾಗಿತ್ತು. ಅವರಿಗೆ 86 ವರ್ಷವಾಗಿತ್ತು.

ಯುದ್ಧವು ತಾರಕಕ್ಕೇರಿದ ಕಾರಣಕ್ಕಾಗಿ ಖಮೇನಿ ಅವರ ಅಂತ್ಯಸಂಸ್ಕಾರವನ್ನು ಮುಂದೂಡಲಾಗಿತ್ತು. ಈಗ, ಅಮೆರಿಕ ಮತ್ತು ಇರಾನ್ ನಡುವೆ ತಾತ್ಕಾಲಿಕ ಕದನ ವಿರಾಮ ಒಪ್ಪಂದ ಏರ್ಪಟ್ಟಿರುವುದರಿಂದ, ಅಂತ್ಯಕ್ರಿಯೆಯನ್ನು ನೆರವೇರಿಸಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ ಒಂದೂವರೆಯಿಂದ ಎರಡು ಕೋಟಿ ಜನರು ಪಾಲ್ಗೊಳ್ಳುವ ನಿರೀಕ್ಷೆ ಇದೆ.

ವಿಧಿವಿಧಾನಗಳು ಶನಿವಾರದಿಂದ ಸೋಮವಾರದವರೆಗೆ ನಡೆಯಲಿದ್ದು, ಮುಖ್ಯ ಕಾರ್ಯಕ್ರಮ ಟೆಹರಾನ್‌ನಲ್ಲಿ ನೆರವೇರುವುದು. ಈ ವೇಳೆ, ಖಮೇನಿ ಅವರ ಉತ್ತರಾಧಿಕಾರಿ ಮೊಜ್ತಬಾ ಖಮೇನಿ ಉಪಸ್ಥಿತರಿರುವ ಬಗ್ಗೆ ಮಾಹಿತಿ ಇಲ್ಲ. 30 ದೇಶಗಳ ಪ್ರತಿನಿಧಿಗಳು ಪಾಲ್ಗೊಳ್ಳುವ ನಿರೀಕ್ಷೆ ಇದೆ.

ಪಾಲ್ಗೊಳ್ಳಲಿದ್ದಾರೆ ಕೇಂದ್ರ ಸಚಿವ, ಬಿಹಾರ ರಾಜ್ಯಪಾಲ

ನವದೆಹಲಿ: ಇರಾನ್ ಪರಮೋಚ್ಚ ನಾಯಕರಾಗಿದ್ದ ಆಯತೊಲ್ಲಾ ಅಲಿ ಖಮೇನಿ ಅವರ ಅಂತ್ಯಕ್ರಿಯೆ ಕಾರ್ಯಕ್ರಮದಲ್ಲಿ ಬಿಹಾರ ರಾಜ್ಯಪಾಲ ಲೆಫ್ಟಿನೆಂಟ್ ಜನರಲ್ (ನಿವೃತ್ತ) ಸಯ್ಯದ್ ಅತಾ ಹಸನೈನ್, ವಿದೇಶಾಂಗ ಖಾತೆ ರಾಜ್ಯ ಸಚಿವ ಪಬಿತ್ರ ಮಾರ್ಘೆರಿಟಾ ಅವರು ಪಾಲ್ಗೊಳ್ಳಲಿದ್ದು, ಭಾರತವನ್ನು ಪ್ರತಿನಿಧಿಸಲಿದ್ದಾರೆ.

'ಜುಲೈ 3ರಂದು ಟೆಹರಾನ್‌ನಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಸಯ್ಯದ್ ಅತಾ ಹಸನೈನ್ ಹಾಗೂ ಮಾರ್ಘೆರಿಟಾ ಪಾಲ್ಗೊಳ್ಳುವರು' ಎಂದು ವಿದೇಶಾಂಗ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಖರ್ಗೆ, ಖೇರಾ ಅವರಿಗೆ ಆಹ್ವಾನ: ಅಲಿ ಖಮೇನಿ ಅವರ ಅಂತ್ಯಕ್ರಿಯೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ಹಿರಿಯ ಮುಖಂಡರಾದ ಸಲ್ಮಾನ್ ಖುರ್ಷೀದ್ ಹಾಗೂ ಪವನ್ ಖೇರಾ ಅವರಿಗೆ ಇರಾನ್ ಆಹ್ವಾನಿಸಿದೆ.

ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಅವರು ಕೂಡ ಅಲಿ ಖಮೇನಿ ಅವರ ಅಂತ್ಯಕ್ರಿಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಮೆಹಬೂಬಾ ಅವರು, ಈ ಕಾರ್ಯಕ್ರಮಕ್ಕೆ ಇರಾನ್ ಆಹ್ವಾನಿಸಿರುವ ಜಮ್ಮು–ಕಾಶ್ಮೀರದ ಏಕೈಕ ಶಿಯಾಯೇತರ ರಾಜಕೀಯ ನಾಯಕರಾಗಿದ್ದಾರೆ.

ಬಿಜೆಪಿಯ ಹಿರಿಯ ಮುಖಂಡ ಮುಕ್ತಾರ್ ಅಬ್ಬಾಸ್ ನಖ್ವಿ ಅವರನ್ನೂ ಇರಾನ್ ಆಹ್ವಾನಿಸಿದೆ.

> **ಆಯತೊಲ್ಲಾ ಅಲಿ ಖಮೇನಿ ಅವರ ಅಂತ್ಯಕ್ರಿಯೆಗಾಗಿ ಸಿದ್ಧತೆಗಳು ನಡೆಯುತ್ತಿರುವ ಈ ಸಂದರ್ಭದಲ್ಲಿ ಅಮೆರಿಕ ಮತ್ತು ಇಸ್ರೇಲ್ ಪಡೆಗಳು ಇರಾನ್ ಮೇಲೆ ದಾಳಿ ನಡೆಸಬಾರದು. ಯಾವುದೇ ದಾಳಿಗೆ ನಮ್ಮ ಸೇನೆ ನೀಡುವ ಪ್ರತ್ಯುತ್ತರ ಘೋರವಾಗಿರಲಿದೆ**
> **ಅಲಿ ಅಬ್ದುಲ್ಲಾಹಿ,** ಕಮಾಂಡರ್, ಇರಾನ್ ಸೇನೆ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ
"I have fought the good fight, I have finished the race, I have kept the faith."-2 Timothy 4:7
ನಮ್ಮ ಪ್ರೀತಿಯ ತಂದೆಯವರ ಪವಿತ್ರ ಸ್ಮರಣೆಯಲ್ಲಿ
ಶ್ರೀ ಬಾಲರಾಜ್ .ಬಿ
11 ಸೆಪ್ಟೆಂಬರ್ 1964 – 2 ಜುಲೈ 2026
ಪಾರ್ಥಿವ ಶರೀರದ ಅಂತಿಮ ದರ್ಶನ
ಗುರುವಾರ, 2 ಜುಲೈ 2026
ಸಂಜೆ 6:00 ಗಂಟೆಗೆ
ನಮ್ಮ ನಿವಾಸ, ಕಮ್ಮನಹಳ್ಳಿ.
ಅಂತಿಮ ಪವಿತ್ರ ಬಲಿಪೂಜೆಯನ್ನು
ಶುಕ್ರವಾರ, 3 ಜುಲೈ 2026
ಮಧ್ಯಾಹ್ನ 2:00 ಗಂಟೆಗೆ
ಸೇಂಟ್ ಆಂಥೋನಿಯವರ ಚರ್ಚ್,
ಟಿ.ಸಿ. ಪಾಳ್ಯದಲ್ಲಿ ನೆರವೇರಿಸಿ
ತದನಂತರ ಟಿ.ಸಿ. ಪಾಳ್ಯ ಕ್ರೈಸ್ತರ ರುದ್ರಭೂಮಿಯಲ್ಲಿ ಅಂತಿಮ ಸಂಸ್ಕಾರವನ್ನು ಮಾಡಲಾಗುವುದು.
ಸಂಪರ್ಕಿಸಿ:
80954 67305, 96322 94351

ನಾಲ್ಕನೇ ವರ್ಷದ ಪುಣ್ಯಸ್ಮರಣೆ
ನೀವು ನಮ್ಮನಗಲಿ ಇಂದಿಗೆ
ನಾಲ್ಕು ವರ್ಷಗಳಾದರೂ
ನಿಮ್ಮ ತಾಳ್ಮೆ, ಪ್ರೀತಿ, ಕರುಣೆ
ತ್ಯಾಗಮಯ ಜೀವನ ಇನ್ನೂ ನಮ್ಮ
ಮನಸ್ಸಿನಲ್ಲಿ ಹಚ್ಚ ಹಸಿರಾಗಿ ಉಳಿದಿದೆ
ನಿಮ್ಮನ್ನು ಎಂದೆಂದಿಗೂ
ಹೆಮ್ಮೆಯಿಂದ ಸ್ಮರಿಸುವ
ಮಕ್ಕಳು ಮತ್ತು ಕುಟುಂಬ
ಕೊತ್ತನಹಳ್ಳಿ ಗ್ರಾಮ,
ಸಕಲೇಶಪುರ ತಾಲ್ಲೂಕು

ಶ್ರೀಮತಿ ನಾಗರತ್ನಮ್ಮ ಬಿ.ಎಸ್.
ನಿಧನ: 03-07-2022

ಹೊಸ ತಂಡ?: ಶಾ ಭೇಟಿ ಮಾಡಿದ ನಿತಿನ್

ನವದೆಹಲಿ(ಪಿಟಿಐ): ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಗುರುವಾರ ಭೇಟಿ ಮಾಡಿ, ಮಾತುಕತೆ ನಡೆಸಿದ್ದಾರೆ. ಪಕ್ಷದ ಕೇಂದ್ರ ತಂಡವನ್ನು ಪುನರ್‌ರಚಿಸಲಾಗುತ್ತಿದೆ ಎಂಬ ಚರ್ಚೆಗಳು ನಡೆಯುತ್ತಿರುವ ಕಾರಣ, ಈ ಭೇಟಿಗೆ ಮಹತ್ವ ಬಂದಿದೆ.

ಶಾ ಅವರ ನಿವಾಸದಲ್ಲಿ ಮೂರು ಗಂಟೆ ನಡೆದ ಈ ಸಭೆಯಲ್ಲಿ, ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ(ಸಂಘಟನೆ) ಬಿ.ಎಲ್.ಸಂತೋಷ್ ಕೂಡ ಉಪಸ್ಥಿತರಿದ್ದರು ಎಂದು ಮೂಲಗಳು ಹೇಳಿವೆ.

'ನಿತಿನ್ ನವೀನ್ ನೇತೃತ್ವದ ಹೊಸ ತಂಡವು ಅನುಭವಿ ಹಿರಿಯ ನಾಯಕರು ಹಾಗೂ ಯುವ ಮುಖಂಡರನ್ನು ಒಳಗೊಂಡಿರುವ ನಿರೀಕ್ಷೆ ಇದೆ. ಕೆಲವರಿಗೆ ಸಚಿವ ಹುದ್ದೆಗಳಿಂದ ಬಿಡುಗಡೆ ಮಾಡಿ, ಪಕ್ಷ ಸಂಘಟನೆ ಜವಾಬ್ದಾರಿ ನೀಡುವ ಸಾಧ್ಯತೆ ಇದೆ. ಪಕ್ಷದ ಹೊಸ ತಂಡದ ಭಾಗವಾಗಲಿರುವವರ ಹೆಸರುಗಳನ್ನು ಶೀಘ್ರವೇ ಘೋಷಿಸಲಾಗುತ್ತದೆ' ಎಂದು ಇವೇ ಮೂಲಗಳು ಹೇಳಿವೆ.

ವಾಟ್ಸ್‌ಆ್ಯಪ್ ಘೋಷಿಸಿರುವ ಹೊಸ 'ಯೂಸರ್‌ನೇಮ್' ಸೌಲಭ್ಯದಿಂದ ಬಳಕೆದಾರರ ಸುರಕ್ಷತೆ ಮೇಲೆ ಪರಿಣಾಮ ಬೀರಲಿದೆಯೇ?

ಹೌದು / ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಪಿ.ಎಫ್ ಕ್ಲೇಮ್: ವಿಳಂಬವಾದರೆ ದಂಡಬಡ್ಡಿ

ಒಂದನೇ ಪುಟದಿಂದ...

'ಈ ಮೊತ್ತವನ್ನು ಆಯುಕ್ತರ ವೇತನದಿಂದ ಮುರಿದುಕೊಳ್ಳಬೇಕು' ಎಂದೂ ಹೇಳಲಾಗಿದೆ.

ಅಧಿಸೂಚನೆಯಲ್ಲಿ ಹೊಸದಾಗಿ ಪ್ರಕಟಿಸಿರುವ ನಿಯಮಗಳು 'ನೌಕರರ ಪಿಂಚಣಿ ನಿಧಿ ಯೋಜನೆ 1952', 'ನೌಕರರ ಕುಟುಂಬ ಪಿಂಚಣಿ ಯೋಜನೆ 1971', 'ನೌಕರರ ಪಿಂಚಣಿ ಯೋಜನೆ 1995' ಮತ್ತು 'ನೌಕರರ ಠೇವಣಿ ಆಧಾರಿತ ವಿಮಾ ಯೋಜನೆ 1976'ರ ಬದಲಿಗೆ ಜಾರಿಗೆ ಬರಲಿವೆ.

ಕ್ಲೇಮ್ ಇತ್ಯರ್ಥ ಮಾಡುವಲ್ಲಿ ವಿಳಂಬ ಆದಾಗ ದಂಡಬಡ್ಡಿ ವಿಧಿಸಲು ಈ ಮೊದಲೂ ಅವಕಾಶ ಇತ್ತು. ಈಗ ದಂಡಬಡ್ಡಿಯ ದರವನ್ನು ಶೇ 12 ಎಂದು ನಿಗದಿ ಮಾಡಲಾಗಿದೆ ಎಂಬುದಾಗಿ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ವಿನಾಯಿತಿ ಪಡೆದಿರುವ ಕಂಪನಿಗಳು ಅಥವಾ ಇಪಿಎಫ್‌ಒ ನಿಯಮಗಳ ಅಡಿಯಲ್ಲಿ ಕೆಲಸ ಮಾಡುವ ಪಿ.ಎಫ್ ಟ್ರಸ್ಟ್‌ಗಳು ಕೂಡ ಆನ್‌ಲೈನ್ ಮೂಲಕ ಪಿ.ಎಫ್ ಹಣ ಹಿಂಪಡೆಯುವ ಸೌಲಭ್ಯ ಕಲ್ಪಿಸಬೇಕಾಗುತ್ತದೆ ಎಂದು ಅಧಿಕಾರಿ ಮಾಹಿತಿ ನೀಡಿದರು.

ಸಾರಿಗೆ ನೌಕರರಿಗೆ ವೇತನ ಹೆಚ್ಚಳ: ಜುಲೈಯಿಂದ ಜಾರಿ

ಒಂದನೇ ಪುಟದಿಂದ...

ವಾರ್ಷಿಕ ವೇತನ ಬಡ್ತಿ ಲಭ್ಯವಿದ್ದಲ್ಲಿ ಅದಕ್ಕೆ ಅನುಗುಣವಾಗಿ ಮೊತ್ತ ಸೇರಿಸಲಾಗುವುದು. ಪರಿಷ್ಕೃತ ಮೊತ್ತ ಸೇರಿಯೂ ಕನಿಷ್ಠ ಮೂಲ ವೇತನಕ್ಕಿಂತ ಕಡಿಮೆ ಇದ್ದರೆ, ಅಂಥವರ ವೇತನವನ್ನು ಕನಿಷ್ಠ ಮೂಲ ವೇತನಕ್ಕೆ ಸರಿದೂಗಿಸ ಲಾಗುವುದು. ಮೊತ್ತವು ಹುದ್ದೆಯ ಹಂತದಲ್ಲಿ ಅಥವಾ ಎರಡು ಹಂತಗಳ ಮಧ್ಯದಲ್ಲಿದ್ದರೆ ವೇತನ ಶ್ರೇಣಿಯನ್ನು ಮುಂದಿನ ಹಂತಕ್ಕೆ ನಿಗದಿಪಡಿಸಲಾಗುವುದು ಎಂದೂ ಹೇಳಿದ್ದಾರೆ.

ವಾರ್ಷಿಕ ವೇತನ ಬಡ್ತಿಯನ್ನು ಮೂಲವೇತನ ನಿಗದಿಪಡಿಸಿದ ಒಂದು ವರ್ಷದ ನಂತರ ನೀಡಲಾಗುವುದು. ಮುಂಬಡ್ತಿಗೆ ಅವಕಾಶವಿಲ್ಲದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು 15 ವರ್ಷ ಪೂರೈಸಿದ್ದರೆ ಪರಿಷ್ಕೃತ ಉನ್ನತ ಶ್ರೇಣಿಯ ಮೂಲ ವೇತನ ನಿಗದಿಪಡಿಸಲಾಗುವುದು. ಅವಕಾಶವಿದ್ದೂ ಮುಂಬಡ್ತಿ ದೊರೆಯದೇ ಇದ್ದಲ್ಲಿ, ಪರಿಷ್ಕೃತ ಮಧ್ಯವರ್ತಿ ವೇತನ ಶ್ರೇಣಿಯಲ್ಲಿ ಮೂಲ ವೇತನ ನಿಗದಿ ಮಾಡಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ವೇತನ ಪರಿಷ್ಕರಣೆಯ ಹಿಂಬಾಕಿ, ಉಪಧನ, ನಿವೃತ್ತಿ, ಗಳಿಕೆ ರಜೆ ನಗದೀಕರಣದ ವ್ಯತ್ಯಾಸದ ಮೊತ್ತವನ್ನು ಸಂಸ್ಥೆಗಳ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಹಂತ ಹಂತವಾಗಿ ಪಾವತಿಸಲು ಪ್ರತ್ಯೇಕ ಆದೇಶ ಹೊರಡಿಸಲಾಗುವುದು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ನೌಕರರ, ಅಧಿಕಾರಿಗಳ ವೇತನ ಪರಿಷ್ಕರಣೆಯ ಕೆಲವು ಉದಾಹರಣೆಗಳು

ಪ್ರಸ್ತುತ ವೇತನ ಶ್ರೇಣಿ	ಪರಿಷ್ಕೃತ ವೇತನ ಶ್ರೇಣಿ
₹24,190	₹34,780
₹31,360	₹45,060
₹33,320	₹47,850
₹42,800	₹61,460
₹48,110	₹69,060
₹75,010	₹1,07,770
₹1,09,080	₹1,56,590

₹1,800ಕ್ಕಿಂತ ಹೆಚ್ಚಿನ ಪಿ.ಎಫ್ ಕೊಡುಗೆ ಐಚ್ಛಿಕ

ನವದೆಹಲಿ (ಪಿಟಿಐ): ಮಾಸಿಕ ವೇತನ ₹15 ಸಾವಿರಕ್ಕಿಂತ ಹೆಚ್ಚಿದ್ದರೆ, ಆ ಮೊತ್ತಕ್ಕಿಂತ ಹೆಚ್ಚಿನ ವೇತನಕ್ಕೆ ಸಂಬಂಧಿಸಿದ ಇಪಿಎಫ್ ಕೊಡುಗೆಯನ್ನು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯವು ಐಚ್ಛಿಕವಾಗಿಸಿದೆ. ₹15 ಸಾವಿರ ಮೂಲ ವೇತನಕ್ಕೆ ಪಿ. ಎಫ್ ಕೊಡುಗೆ ₹1,800 ಆಗುತ್ತದೆ.

ಇದಕ್ಕೂ ಮೊದಲು ಜಾರಿಯಲ್ಲಿ ಇದ್ದ 'ನೌಕರರ ಪಿಂಚಣಿ ನಿಧಿ ಯೋಜನೆ 1952'ರ ನಿಯಮಗಳ ಪ್ರಕಾರ ವೇತನ ಮಿತಿಯು (ಈಗ ಅದು ಮಾಸಿಕ ₹15 ಸಾವಿರ) ನೌಕರರನ್ನು ಇಪಿಎಫ್‌ಒ ವ್ಯಾಪ್ತಿಗೆ ಸೇರಿಸುವುದಕ್ಕೆ ಮಾನದಂಡವಾಗಿ ಬಳಕೆಯಾಗುತ್ತಿತ್ತು.

₹15 ಸಾವಿರದವರೆಗೆ ಮೂಲವೇತನ ಹೊಂದಿರುವ ಎಲ್ಲ ನೌಕರರನ್ನು ಕಡ್ಡಾಯವಾಗಿ ಇಪಿಎಫ್‌ಒ ವ್ಯಾಪ್ತಿಗೆ ತರಲಾಗುತ್ತಿತ್ತು. ಅದಕ್ಕಿಂತ ಹೆಚ್ಚಿನ ಮೂಲವೇತನ ಹೊಂದಿರುವವರಿಗೆ ಇಪಿಎಫ್‌ಒ ಸೇರುವುದು ಐಚ್ಛಿಕವಾಗಿತ್ತು.

ಇಪಿಎಫ್‌ಒ ವ್ಯಾಪ್ತಿಗೆ ಬಂದ ನಂತರದಲ್ಲಿ ನೌಕರರು ತಮ್ಮ ವಾಸ್ತವ ಮೂಲವೇತನದ ಆಧಾರದಲ್ಲಿ ಪಿ.ಎಫ್ ನಿಧಿಗೆ ಕೊಡುಗೆ ನೀಡುತ್ತಿದ್ದರು, ಉದ್ಯೋಗದಾತರು ಆ ಮೊತ್ತಕ್ಕೆ ಸಮನಾಗಿ ತಾವೂ ಕೊಡುಗೆ ನೀಡುತ್ತಿದ್ದರು. ಇದು ಕಾಲಕಾಲಕ್ಕೆ ಸರ್ಕಾರ ನಿಗದಿ ಮಾಡುತ್ತಿದ್ದ ವೇತನ ಮಿತಿಗಿಂತ ಹೆಚ್ಚಿನ ಪ್ರಮಾಣದಲ್ಲಿಯೂ ಇರುತ್ತಿತ್ತು. ಈಗಿರುವ ವೇತನ ಮಿತಿಯಾದ ₹15 ಸಾವಿರ 2014ರಲ್ಲಿ ನಿಗದಿ ಆಗಿದೆ.

ಜಪಾನ್ ಪ್ರಧಾನಿಯನ್ನು 'ತಂಗಿ' ಎಂದ ಮೋದಿ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಇಲ್ಲಿ ನಡೆದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಭಾಷಣ ಮಾಡುತ್ತಾ, ಜಪಾನ್‌ನ ಪ್ರಧಾನಿ ಸನೇ ತಕೈಚಿ ಅವರನ್ನು ತಮ್ಮ 'ತಂಗಿ' ಎಂದು ಸಂಬೋಧಿಸಿ, ಅವರನ್ನು 'ದೂರದೃಷ್ಟಿಯ ಮತ್ತು ಜನಪ್ರಿಯ ನಾಯಕಿ' ಎಂದು ಹೊಗಳಿದರು.

ಪ್ರಧಾನಿ ಮೋದಿ ಹಿಂದಿಯಲ್ಲಿ ಭಾಷಣ ಮಾಡುತ್ತಾ ಹೇಳಿಕೆ ನೀಡಿದ್ದಾರೆ. ತಾಂತ್ರಿಕ ಸಾಧನದ ಮೂಲಕ ಅದರ ಜಪಾನಿ ಅನುವಾದ ಕೇಳುತ್ತಿದ್ದ ತಕೈಚಿ ಅವರು ಅದಕ್ಕೆ ನಗುವಿನೊಂದಿಗೆ ಪ್ರತಿಕ್ರಿಯಿಸಿದರು.

ನಂತರ ಜಪಾನಿ ಭಾಷೆಯಲ್ಲಿ ಮಾತನಾಡಿದ ತಕೈಚಿ ಅವರು, ಮೋದಿ ಅವರ ತಂಗಿ ಸಂಬೋಧನೆಯನ್ನು ಒಪ್ಪಿಕೊಳ್ಳುತ್ತಾ, '...ನಾವು ಈ ಸಂಬಧವನ್ನು 'ಅಣ್ಣ–ತಂಗಿ' ತರಹ ಬೆಳೆಸಲು ಒಪ್ಪಿಕೊಂಡಿದ್ದೇವೆ' ಎಂದು ತಿಳಿಸಿದರು.

ಭಾರತ ಮತ್ತು ಜಪಾನ್ ವಿಶೇಷ ಕಾರ್ಯತಂತ್ರ ಮತ್ತು ಜಾಗತಿಕ ಪಾಲುದಾರಿಕೆಯನ್ನು ಹೊಂದಿದ್ದು, ಉಭಯ ದೇಶಗಳ ನಡುವಿನ ಸ್ನೇಹಕ್ಕೆ ಸುದೀರ್ಘ ಇತಿಹಾಸವಿದೆ.

ಉಭಯ ರಾಷ್ಟ್ರಗಳು ದ್ವಿಪಕ್ಷೀಯ ಆರ್ಥಿಕ ಭದ್ರತೆಗೆ ಜಂಟಿ ಯೋಜನೆ ರೂಪಿಸಿವೆ ಎಂದು ಮೋದಿ ಅವರು ತಿಳಿಸಿದರು.

ಭಾರತ–ಜಪಾನ್ ವ್ಯಾಪಾರ ವೇದಿಕೆಯಲ್ಲಿ ಉಪಕ್ರಮವೊಂದನ್ನು ಪ್ರಧಾನಿ ಮೋದಿ ಮತ್ತು ಜಪಾನ್ ಪ್ರಧಾನಿ ತಕೈಚಿ ಅವರು ಜೊತೆಯಾಗಿ ಉದ್ಘಾಟಿಸಿದರು —ಪಿಟಿಐ ಚಿತ್ರ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 7795874991

Part-Time Jobs

ತಕ್ಷಣ ಬೇಕಾಗಿದ್ದಾರೆ. ಕರ್ನಾಟಕದಾದ್ಯಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ ಮೊದಲ ಆದ್ಯತೆ. 20,000 - 25,000 ಸಂಪಾದಿಸಿ. 8095222026

ವ್ಯಾಪಾರ

Business to Business

Finance

'ಬಂಡವಾಳ ಹೂಡಿಕೆ' ಲಾಭದಾಯಕ ಸ್ವತ್ತುಗಳ ಮೇಲೆ ಬಂಡವಾಳ ಹೂಡಿಕೆ ಮಾಡಲು ಇಚ್ಛಿಸುವವರು ಸಂಪರ್ಕಿಸಿ 9739627282

ವೈಯಕ್ತಿಕ

Change of Name

I, SHASHIREKHA Anjaneyalu, daughter of C V Anjaneyalu, residing at SriGurukrupa, 411, Dome light circle, Kolar- 563101, have changed my name to Shashirekha C A.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ನಕಲಿ ಪ್ರಮಾಣಪತ್ರ ಜೋರು

ಒಂದನೇ ಪುಟದಿಂದ...

'ಹಳೇ ಹುಬ್ಬಳ್ಳಿಯ ಕೆಲ ಮಂದಿ ಜನನ ಪ್ರಮಾಣ ಪತ್ರಕ್ಕಾಗಿ ಸೈಬರ್ ಕೇಂದ್ರದವರಿಗೆ ಲಕ್ಷಾಂತರ ರೂಪಾಯಿ ನೀಡಿ, ನಕಲಿ ದಾಖಲೆ ಪಡೆದಿದ್ದಾರೆ. ಇವರಲ್ಲಿ ಬಹುತೇಕರು 45 ವರ್ಷ ದಾಟಿದವರು ಇದ್ದಾರೆ. ಚಿಟಗುಪ್ಪಿ ಆಸ್ಪತ್ರೆ, ಕೆಎಂಸಿ-ಆರ್‌ಐ ಆಸ್ಪತ್ರೆ ಮತ್ತು ನಗರದಲ್ಲಿದ್ದ ಹಳೆಯ ಆಸ್ಪತ್ರೆಯಲ್ಲಿ ಜನಿಸಿರುವ ಕುರಿತು ಪ್ರಮಾಣ ಪತ್ರ ಪಡೆಯುತ್ತಿದ್ದಾರೆ. ಅರ್ಜಿ ಸಲ್ಲಿಸಿದ್ದಕ್ಕೆ ಮತ್ತು ಪಡೆದ ಹಣಕ್ಕೆ ಸ್ವೀಕೃತಿ ಇರುವುದಿಲ್ಲ. ಹಳೇಹುಬ್ಬಳ್ಳಿ, ಸದರಸೋಫಾ ಭಾಗದ ಹಲವರು ಸಾವಿರಾರು ರೂಪಾಯಿ ನೀಡಿ ಜನ್ಮದಾಖಲೆ ಪಡೆದಿದ್ದಾರೆ' ಎಂದು ಹಳೇಹುಬ್ಬಳ್ಳಿ ನಿವಾಸಿಯೊಬ್ಬರು ತಿಳಿಸಿದರು.

1969ರಲ್ಲಿ ಜನ್ಮದಾಖಲೆ ನೋಂದಣಿ ಕಾಯ್ದೆ ಜಾರಿಗೆ ಬಂದಿದೆ. ಆರಂಭದಲ್ಲಿ ಜನರು ಅದಕ್ಕೆ ಅಷ್ಟೊಂದು ಪ್ರಾಧಾನ್ಯ ನೀಡಿರಲಿಲ್ಲ. 2000ನೇ ಇಸವಿಯ ನಂತರ ಕೆಲ ಕಡೆ ಜನ್ಮದಾಖಲೆ ಕಡ್ಡಾಯವಾದ ಕಾರಣ ಜನರು ಜಾಗೃತರಾಗಿದ್ದಾರೆ. ಇದೀಗ ಎಸ್‌ಐಆರ್‌ಗೆ ಜನ್ಮಪ್ರಮಾಣ ಪತ್ರವೂ ಪ್ರಮುಖ ದಾಖಲೆ ಆಗಿರುವುದರಿಂದ, ಜನರು ನಕಲಿ ಪ್ರಮಾಣ ಪತ್ರ ಪಡೆಯುತ್ತಿದ್ದಾರೆ.

ನದಿಗಳ ನಿಯಂತ್ರಣಕ್ಕೆ ಭಾರತ ಯತ್ನ: ಪಾಕ್ ಆರೋಪ

ಇಸ್ಲಾಮಾಬಾದ್(ಪಿಟಿಐ): 'ಪಾಕಿಸ್ತಾನಕ್ಕೆ ಹರಿಯುವ ನದಿಗಳ ನಿಯಂತ್ರಣಕ್ಕೆ ಭಾರತ ಯತ್ನಿಸುತ್ತಿದೆ. ವಿಶೇಷವಾಗಿ ಸಿಂಧೂ ನದಿ ನೀರನ್ನು ತನ್ನ 'ಯುದ್ಧತಂತ್ರದ ಸಾಧನ' ಎಂಬಂತೆ ಪರಿಗಣಿಸುತ್ತದೆ' ಎಂದು ಪಾಕ್ ಆರೋಪಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿದೇಶಾಂಗ ಕಚೇರಿ ವಕ್ತಾರ ತಾಹಿರ್ ಅಂದ್ರಾಬಿ, 'ಪಾಕಿಸ್ತಾನವು ಭಯೋತ್ಪಾದಕ ಕೃತ್ಯಕ್ಕೆ ಕುಮ್ಮಕ್ಕು ನೀಡುತ್ತಿದೆ ಎಂದು ಆರೋಪಿಸುತ್ತಿರುವ ಭಾರತ, ಇದೇ ನೆಪದಲ್ಲಿ ಸಿಂಧೂ ಜಲ ಒಪ್ಪಂದವನ್ನು ಅಮಾನತಿನಲ್ಲಿಡುವ ನಿರ್ಧಾರ ಕೈಗೊಂಡಿದೆ. ಆ ಮೂಲಕ, ಪಾಕಿಸ್ತಾನಕ್ಕೆ ನ್ಯಾಯಬದ್ಧವಾದ ನೀರಿನ ಹರಿವನ್ನು ತಡೆಯುತ್ತಿದೆ' ಎಂದು ಹೇಳಿದರು.

ಹೈದರಾಬಾದ್‌ನಲ್ಲಿ ಒಪ್ಪಂದಕ್ಕೆ ಸಹಿ ಹಾಕಿದ ಎಂಇಐಎಲ್ ಮತ್ತು ಅನಲಾಗ್

'ಫಿಸಿಕಲ್ ಇಂಟೆಲಿಜೆನ್ಸ್'ಗೆ ಸಹಭಾಗಿತ್ವ

• ಶಶಿಕುಮಾರ್ ಸಿ.

ಹೈದರಾಬಾದ್: ಭಾರತದ ಮೂಲಸೌಕರ್ಯ ಕ್ಷೇತ್ರ ಸೇರಿದಂತೆ ಅಗತ್ಯವಿರುವೆಡೆ 'ಫಿಸಿಕಲ್ ಇಂಟೆಲಿಜೆನ್ಸ್' (ಭೌತಿಕ ಬುದ್ಧಿಮತ್ತೆ) ಪರಿಚಯಿಸಲು 'ಮೇಘಾ ಎಂಜಿನಿಯರಿಂಗ್ ಆ್ಯಂಡ್ ಇನ್‌ಫ್ರಾಸ್ಟ್ರಕ್ಚರ್ಸ್ ಲಿಮಿಟೆಡ್' (ಎಂಇಐಎಲ್) ಮತ್ತು 'ಅನಲಾಗ್' ಸಂಸ್ಥೆಗಳು ಬುಧವಾರ ಒಪ್ಪಂದ ಮಾಡಿಕೊಂಡಿವೆ.

ಯಂತ್ರಗಳು ವಾಸ್ತವ ಪರಿಸ್ಥಿತಿ ಅರ್ಥಮಾಡಿಕೊಳ್ಳಲು ಮತ್ತು ಅದಕ್ಕೆ ತಕ್ಕಂತೆ ಕಾರ್ಯನಿರ್ವಹಿಸಲು ಕೃತಕ ಬುದ್ಧಿಮತ್ತೆಯಂತೆಯೇ (ಎಐ) ಅತ್ಯಾಧುನಿಕ ತಂತ್ರಜ್ಞಾನ ಆಗಿ ಬೆಳೆಯುತ್ತಿರುವ 'ಫಿಸಿಕಲ್ ಇಂಟೆಲಿಜೆನ್ಸ್' ನೆರವಾಗಲಿದೆ. ಮೂಲಸೌಕರ್ಯ ನಿರ್ಮಾಣ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಎಂಇಐಎಲ್, ತನ್ನ ಭವಿಷ್ಯದ ಯೋಜನೆಗಳಲ್ಲಿ ಈ ತಂತ್ರಜ್ಞಾನದ ನೆರವನ್ನು ಬಳಸಿಕೊಳ್ಳಲಿದೆ.

ಎಂಇಐಎಲ್‌ನ ವ್ಯವಸ್ಥಾಪಕ ನಿರ್ದೇಶಕ ಪಿ.ವಿ. ಕೃಷ್ಣಾರೆಡ್ಡಿ ಮತ್ತು ಅನಲಾಗ್ ಕಂಪನಿಯ ಸಂಸ್ಥಾಪಕ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಲೆಕ್ಸ್ ಕಿಪ್‌ಮನ್ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಮೂಲಸೌಕರ್ಯ, ಮೊಬಿಲಿಟಿ, ಸಾರ್ವಜನಿಕ ಸುರಕ್ಷತೆ, ಸ್ಮಾರ್ಟ್‌ಸಿಟಿ ವ್ಯವಸ್ಥೆ, ಸುಧಾರಿತ ಸಂವೇದನೆ, ರೊಬೊಟಿಕ್ಸ್ - ಸ್ಪೇಷಿಯಲ್ ಕಂಪ್ಯೂಟಿಂಗ್, ಕೈಗಾರಿಕಾ ವ್ಯವಸ್ಥೆ, ಆರೋಗ್ಯ ಕ್ಷೇತ್ರ, ಹಾಸ್ಪಿಟಾಲಿಟಿಯಲ್ಲಿ ಇವರಿಬ್ಬರ ಸಹಭಾಗಿತ್ವವನ್ನು ಭವಿಷ್ಯದಲ್ಲಿ ಕಾಣಬಹುದು.

ಫಿಸಿಕಲ್ ಇಂಟೆಲಿಜೆನ್ಸ್ ಎನ್ನುವುದು ಕಟ್ಟುನಿಟ್ಟಾದ ಪ್ರೋಗ್ರಾಮಿಂಗ್ ಬದಲಿಗೆ ನಿರಂತರ ಕಲಿಕೆಯ ಮೂಲಕ ಕಾರ್ಯ ನಿರ್ವಹಿಸುವ ತಂತ್ರಜ್ಞಾನ. ಪ್ರತಿ ಹೆಜ್ಜೆಯ, ಪ್ರತಿ ಹಂತದ ಸಂವಹನದೊಂದಿಗೆ ತನ್ನ ಬುದ್ಧಿವಂತಿಕೆಯನ್ನು ವಿಸ್ತರಿಸಿಕೊಳ್ಳುವ ಜೀವಂತ ಮಾದರಿಯಾಗಿ ಇದು ರೂಪುಗೊಳ್ಳುತ್ತದೆ. ಈ ಒಪ್ಪಂದದಿಂದ ದೇಶದಲ್ಲಿ ಬದಲಾವಣೆಯ ಪರ್ವ ಶುರುವಾಗಲಿದೆ. ಇದಕ್ಕಾಗಿ, ಅನಲಾಗ್, ಫಿಸಿಕಲ್ ಇಂಟೆಲಿಜೆನ್ಸ್ ಒದಗಿಸಿದರೆ, ಅದನ್ನು ಕಾರ್ಯರೂಪಕ್ಕೆ ತರಲು ಎಂಇಐಎಲ್ ವೇದಿಕೆ ಕಲ್ಪಿಸಲಿದೆ ಎಂದು ಕೃಷ್ಣಾರೆಡ್ಡಿ ಹೇಳಿದರು.

ಅಲೆಕ್ಸ್ ಕಿಪ್‌ಮನ್ ಮಾತನಾಡಿ, 'ವಿಶ್ವದ ಅತ್ಯಂತ ಪ್ರಮುಖ ತಂತ್ರಜ್ಞಾನದ ಅವಕಾಶಗಳನ್ನು ಹೊಂದಿರುವ ದೇಶಗಳಲ್ಲಿ ಭಾರತವೂ ಒಂದು. ಇಲ್ಲಿನ ಎಂಜಿನಿಯರಿಂಗ್ ಜ್ಞಾನವು ಅಸಾಧಾರಣವಾಗಿದೆ. ಮೂಲ ಸೌಕರ್ಯದ ಮಹತ್ವಾಕಾಂಕ್ಷೆ ಅದ್ಭುತವಾಗಿದೆ. ಉದ್ಯಮಶೀಲತೆಯ ಶಕ್ತಿಯು ಅಪಾರವಾಗಿದೆ' ಎಂದರು.

'ಫಿಸಿಕಲ್ ಇಂಟೆಲಿಜೆನ್ಸ್ ಈ ಸಮಯದ ಅತ್ಯಗತ್ಯಗಳಲ್ಲೊಂದು. ಈ ತಂತ್ರಜ್ಞಾನವನ್ನು ಬಳಸಿಕೊಳ್ಳಲು ಎಂಇಐಎಲ್ ಮುಂದೆ ಬಂದಿದ್ದು, ಇದಕ್ಕೆ ಕಂಪನಿ ಸೂಕ್ತ ಮತ್ತು ಅರ್ಹ ಪಾಲುದಾರ ಸಂಸ್ಥೆಯಾಗಿದೆ. ಎರಡೂ ಕಂಪನಿಗಳು ಜೊತೆಗೂಡಿ ಸುಮಾರು ₹4,761 ಕೋಟಿ ಬಂಡವಾಳ ಹೂಡಲಿವೆ. ಮಾನವನ ಕೆಲಸದ ದಕ್ಷತೆಯನ್ನು ಫಿಸಿಕಲ್ ಇಂಟೆಲಿಜೆನ್ಸ್ ಹೆಚ್ಚಿಸಲಿದೆಯೇ ಹೊರತು ಉದ್ಯೋಗವನ್ನು ಕಡಿತಗೊಳಿಸುವುದಿಲ್ಲ' ಎಂದು ಹೇಳಿದರು.

ಮುಂಬೈ ಧಾರಣೆ (ಶೇಂಗಾ)

02-07-2026	
ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10200-10300
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9000-9100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1570 (1580)
ಒಂದು ವಾರದ ಡೆಲಿವರಿ	1565 (1585)
ಪಾಮ್ ವಾರದ ಡೆಲಿವರಿ	1448 (1448)
ಸೂರ್ಯಕಾಂತಿ ಎಣ್ಣೆ ಕಚ್ಚಾ	1580 (1580)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,41,600 (1,40,200)
ಬೆಳ್ಳಿ ಕೆ.ಜಿಗೆ	2,26,000 (2,25,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹31500-31500
ಪುತ್ತೂರು	₹5000-14000
ತಿಪಟೂರು	₹29500-32118
ತುರುವೇಕೆರೆ	₹23000-23000

‘ಎಐ ರಚಿತ ನಿದರ್ಶನ ಸಲ್ಲ’

‘ಅತ್ಯಂತ ಅಪಾಯಕಾರಿ’ ಅನಿಲಕ್ಕೆ ಹೋಲಿಸಿದ ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಕೃತಕ ಬುದ್ಧಿಮತ್ತೆಯಿಂದ (ಎಐ) ಸೃಷ್ಟಿಸಿದಂತಹ, ಅಸ್ತಿತ್ವದಲ್ಲೇ ಇಲ್ಲದ, ಭ್ರಾಮಕ ತೀರ್ಪುಗಳ ಬಳಕೆಗೆ ಸಂಪೂರ್ಣ ತಡೆ ನೀಡಿರುವ ಸುಪ್ರೀಂ ಕೋರ್ಟ್, ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ (ಎನ್‌ಸಿಎಲ್‌ಟಿ) ತೀರ್ಪೊಂದನ್ನು ಗುರುವಾರ ರದ್ದು ಮಾಡಿದೆ.

ಎಐ ತಂತ್ರಜ್ಞಾನದಿಂದ ಸೃಷ್ಟಿಸಲಾದ ಪೂರ್ವ ನಿದರ್ಶನಗಳ ಉಲ್ಲೇಖ ಮತ್ತು ಬಳಕೆ ವಿರುದ್ಧ ನ್ಯಾಯಾಲಯಗಳು ಶೂನ್ಯ ಸಹಿಷ್ಣುತೆಯನ್ನು ಅಳವಡಿಸಿಕೊಳ್ಳಬೇಕು ಎಂದೂ ಹೇಳಿದೆ.

ನಕಲಿ ಅಥವಾ ಭ್ರಾಮಕ ತೀರ್ಪುಗಳನ್ನು ಉಲ್ಲೇಖಿಸುವುದು ಮತ್ತು ಅವನ್ನು ಪೂರ್ವ ನಿದರ್ಶನಗಳನ್ನಾಗಿ ಬಳಸುವುದು ಎಂದರೆ ಕಾನೂನು ಮತ್ತು ನ್ಯಾಯ ಕ್ಷೇತ್ರದಲ್ಲಿ ‘ಮೀಥೈಲ್ ಐಸೋಸೈನೇಟ್’ (ಭೋಪಾಲ್ ಅನಿಲ ದುರಂತಕ್ಕೆ ಕಾರಣವಾದ ಅನಿಲ) ಬಿಡುಗಡೆ ಆದಂತೆ ಎಂದು ಹೋಲಿಸಿದ ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಅಲೋಕ್ ಆರಾಧೆ ಅವರನ್ನು ಒಳಗೊಂಡ ಪೀಠ ಕಳವಳ ವ್ಯಕ್ತಪಡಿಸಿದೆ.

‘ಕಾನೂನು ಮತ್ತು ನ್ಯಾಯಾಂಗದೊಳಗೆ ಎಐ ರಚಿತ ಭ್ರಾಮಕ ತೀರ್ಪುಗಳು ನುಸುಳುವುದನ್ನು ಗಮನಿಸುವ ಹೊತ್ತಿಗೆ ಅದು ಇಡೀ ವ್ಯವಸ್ಥೆಯನ್ನೇ ಕಲುಷಿತಗೊಳಿಸಿರುತ್ತದೆ. ಅಲ್ಲದೆ ಅದು ನ್ಯಾಯಾಂಗ ನಿರ್ಣಯದ ಜೀವಾಳವನ್ನೇ ನಾಶ ಮಾಡಿಬಿಡುತ್ತದೆ’ ಎಂದು ಪೀಠ ಆತಂಕ ವ್ಯಕ್ತಪಡಿಸಿದೆ.

‘ಎಸ್ಸೆಲ್ ಇನ್ಫ್ರಾ ಪ್ರಾಜೆಕ್ಟ್ಸ್‌ನ’ ದಿವಾಳಿತನ ಕುರಿತು ಎನ್‌ಸಿಎಲ್‌ಟಿ ನೀಡಿದ್ದ ತೀರ್ಪು, ಎಐನಿಂದ ಸೃಷ್ಟಿಸಲಾದ ಅಸ್ತಿತ್ವದಲ್ಲಿಯೇ ಇಲ್ಲದ, ನಕಲಿ ತೀರ್ಪಿನ ಪೂರ್ವ ನಿದರ್ಶನಗಳನ್ನು ಅವಲಂಬಿಸಿದೆ ಎಂಬುದನ್ನು ಕಂಡುಕೊಂಡ ಸುಪ್ರೀಂ ಕೋರ್ಟ್‌ನ ಪೀಠವು ಎನ್‌ಸಿಎಲ್‌ಟಿ ತೀರ್ಪನ್ನು ರದ್ದುಗೊಳಿಸಿತು.

ನಕಲಿ ಉಲ್ಲೇಖ ಗುರುತಿಸಿದ ‘ಸುಪ್ರೀಂ’

ಪೂಜಾ ರಮೇಶ್ ಸಿಂಗ್, ಜಮ್ಮು–ಕಾಶ್ಮೀರ ಬ್ಯಾಂಕ್ ಲಿಮಿಟೆಡ್ ಹಾಗೂ ಎಸ್ಸೆಲ್ ಇನ್ಫ್ರಾ ಪ್ರಾಜೆಕ್ಟ್ ಲಿಮಿಟೆಡ್ ನಡುವೆ ದಿವಾಳಿತನಕ್ಕೆ ಸಂಬಂಧಿಸಿದ ವಿವಾದ ಉಂಟಾಗಿತ್ತು. ಈ ಕುರಿತು ಮುಂಬೈನ ಎನ್‌ಸಿಎಲ್‌ಟಿ ನೀಡಿದ್ದ ಆದೇಶವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿತ್ತು.

ಎನ್‌ಸಿಎಲ್‌ಟಿ ತೀರ್ಪಿನಲ್ಲಿ ತನ್ನ ನಿರ್ಧಾರವನ್ನು ಸಮರ್ಥಿಸಲು ಉಲ್ಲೇಖಿಸಿದ ಹಲವು ಪೂರ್ವ ನಿದರ್ಶನಗಳು ಅಸ್ತಿತ್ವದಲ್ಲಿಯೇ ಇಲ್ಲ ಎಂಬುದನ್ನು ಸುಪ್ರೀಂ ಕೋರ್ಟ್ ಪತ್ತೆ ಮಾಡಿತು. ತೀರ್ಪಿನಲ್ಲಿ ನಿಜವಾದ ಉಲ್ಲೇಖಗಳಿಗೆ ಬದಲಾಗಿ ಕಲ್ಪಿತ ಪ್ರಕರಣದ ಹೆಸರುಗಳು ಮತ್ತು ಖಂಡಿಕೆಗಳು ಸೇರ್ಪಡೆಯಾಗಿರುವುದನ್ನು ಪೀಠ ಗುರುತಿಸಿತು.

ಅಲ್ಲದೆ, ತೀರ್ಪಿನಲ್ಲಿ ಐಸಿಐಸಿಐ ಬ್ಯಾಂಕ್ ಲಿಮಿಟೆಡ್ ವರ್ಸಸ್ ಅರ್ಬನ್ ಇನ್ಫ್ರಾ ಸ್ಟ್ರಕ್ಚರ್ ರಿಯಲ್ ಎಸ್ಟೇಟ್ ಲಿಮಿಟೆಡ್ (2019) 16 ಎಸ್‌ಸಿಸಿ 528 ಮತ್ತು ಸರಬ್ಜಿತ್ ಸಿಂಗ್ ವರ್ಸಸ್ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ (2022) 7 ಎಸ್‌ಸಿಸಿ 464 ಅನ್ನು ಉಲ್ಲೇಖಿಸಲಾಗಿದೆ. ಈ ಎರಡೂ ಅಸ್ತಿತ್ವದಲ್ಲಿಯೇ ಇಲ್ಲದ ಉಲ್ಲೇಖಗಳಾಗಿವೆ ಎಂಬುದನ್ನು ಪೀಠ ಗುರುತಿಸಿದೆ.

ಪ್ರತಿವಾದಿಯಾದ ಜಮ್ಮು ಮತ್ತು ಕಾಶ್ಮೀರ ಬ್ಯಾಂಕ್, ತಮ್ಮ ವಕೀಲರು ಈ ಉಲ್ಲೇಖಗಳನ್ನು ಪ್ರಸ್ತಾಪಿಸಿಲ್ಲ ಎಂದು ಪ್ರಮಾಣಪತ್ರ ಸಲ್ಲಿಸಿದೆ. ಇದೇ ವೇಳೆ ಎನ್‌ಸಿಎಲ್‌ಟಿ ತನ್ನ ಸ್ವಂತ ಸಂಶೋಧನೆ ಮೂಲಕ ಈ ಅಂಶಗಳನ್ನು ಪಡೆದುಕೊಂಡಿದ್ದಾಗಿ ತಿಳಿಸಿದೆ. ಆದರೆ ಈ ದೋಷದಿಂದ ಕಾನೂನಿನ ನಿಯಮಕ್ಕೆ ಹಾನಿಯಾಗಿದೆ ಎಂದು ಪೀಠ ಅಭಿಪ್ರಾಯಪಟ್ಟಿದೆ.

‘ಸುಪ್ರೀಂ’ ಹೇಳಿದ ಪ್ರಮುಖ ಅಂಶಗಳು

- ಎಐ ಬಳಸಿ ಪಡೆಯಲಾದ ಮಾಹಿತಿಯನ್ನು ಹಾಗೂ ಪೂರ್ವ ನಿದರ್ಶನಗಳನ್ನು ಸಮಗ್ರವಾಗಿ ಪರಿಶೀಲಿಸದೆ ನ್ಯಾಯಾಲಯಗಳು ಅವನ್ನು ಬಳಸಬಾರದು. ಈ ವಿಚಾರದಲ್ಲಿ ಶೂನ್ಯ ಸಹಿಷ್ಣುತೆ ವಿಧಾನವನ್ನು ಅಳವಡಿಸಿಕೊಳ್ಳಬೇಕು
- ಪರಿಶೀಲನೆ ಇಲ್ಲದೆ ಅಂತಹ ತೀರ್ಪುಗಳನ್ನು ವಕೀಲರೂ ಉಲ್ಲೇಖಿಸಕೂಡದು. ಒಂದು ವೇಳೆ ಹಾಗೆ ಮಾಡಿದರೆ ಅದು ದುರ್ವರ್ತನೆಯೇ ಸರಿ
- ನ್ಯಾಯಾಧೀಶರು ತಮ್ಮ ನಿರ್ಧಾರ ಅಥವಾ ತೀರ್ಪನ್ನು ಬೆಂಬಲಿಸಲು ಈ ರೀತಿಯ ನಕಲಿ ಅಥವಾ ಎಐ ಆಧರಿತ ವಿಷಯಗಳನ್ನು ಪೂರ್ವ ನಿದರ್ಶನಗಳಾಗಿ ಬಳಸಿದರೆ, ಅದೂ ಗಂಭೀರ ಲೋಪ
- ನ್ಯಾಯಾಧೀಶರ ಅಂತಹ ನಿರ್ಧಾರಗಳು ಕಾನೂನು ದೃಷ್ಟಿಯಲ್ಲಿ ಮಾನ್ಯವಾಗುವುದಿಲ್ಲ ಎಂದು ಘೋಷಿಸಲು ನಮಗೆ ಹಿಂಜರಿಕೆಯಿಲ್ಲ
- ಈ ರೀತಿಯ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ನಕಲಿ ಅಥವಾ ಭ್ರಾಮಕ ವಿಷಯಗಳ ಸಣ್ಣ ಉಲ್ಲೇಖ ಕಂಡುಬಂದರೂ, ಅದರಿಂದ ತೀರ್ಪಿನ ಪಾವಿತ್ರ್ಯಕ್ಕೆ ಧಕ್ಕೆಯಾಗುತ್ತದೆ. ಹೀಗಾಗಿ ಅಂತಹ ತೀರ್ಪುಗಳನ್ನು ರದ್ದುಪಡಿಸಬೇಕಾಗುತ್ತದೆ
- ಕೃತಕ ಬುದ್ಧಿಮತ್ತೆಯನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳುವುದಕ್ಕೆ ಈ ತೀರ್ಪು ಪರಿಣಾಮ ಬೀರುವುದಿಲ್ಲ
- ವಕೀಲರ ಸಂಘ ಮತ್ತು ನ್ಯಾಯಾಲಯಗಳು ಅಂತಹ ವಿಷಯಗಳ ಉಲ್ಲೇಖ ಅಥವಾ ಅವಲಂಬನೆ ವಿಚಾರದಲ್ಲಿ ಶೂನ್ಯ ಸಹಿಷ್ಣುತೆ ಹೊಂದಿರಬೇಕು. ಈ ಬಗ್ಗೆ ಘೋಷಣೆಯಷ್ಟೇ ಸಾಲದು, ಹೊಣೆಗಾರಿಕೆಯೂ ಇರಬೇಕು
- ಈ ಕುರಿತ ಜವಾಬ್ದಾರಿಗೆ ಸಂಬಂಧಿಸಿದಂತೆ ಭಾರತೀಯ ವಕೀಲರ ಸಂಘ ಸಮಿತಿಯೊಂದನ್ನು ರಚಿಸಬೇಕು. ಈ ವಿಷಯವನ್ನು ಸಂಘ ಗಂಭೀರವಾಗಿ ಪರಿಗಣಿಸಬೇಕು. ಎಐ ರಚಿತ ನಕಲಿ ತೀರ್ಪುಗಳ ಉಲ್ಲೇಖ ತಡೆಗಟ್ಟಲು ಮಾರ್ಗಸೂಚಿ ತರಬೇಕು. ಆ ನಿಯಮಗಳ ಉಲ್ಲಂಘಿಸಿದವರ ವಿರುದ್ಧ ಕೈಗೊಳ್ಳಬಹುದಾದ ಶಿಸ್ತು ಕ್ರಮವನ್ನೂ ಸಮಿತಿ ಸೂಚಿಸಬೇಕು
- ತೀರ್ಪಿನ ನೆರವಿಗಾಗಿ ಎಐ ತಂತ್ರಜ್ಞಾನ ಅಳವಡಿಕೆ ಮಹತ್ವದ್ದಾಗಿದ್ದರೂ ಅದರ ಪ್ರತಿ ಹಂತದಲ್ಲೂ ಮನುಷ್ಯನ ಒಳಗೊಳ್ಳುವಿಕೆ ಮತ್ತು ನಿಯಂತ್ರಣಕ್ಕೆ ಒತ್ತು ನೀಡಬೇಕು

ಅಮರನಾಥ ಯಾತ್ರೆಯ ಮೊದಲ ತಂಡದಲ್ಲಿರುವ ಸಾಧುಗಳು ಗುರುವಾರ ಬಸ್‌ನಲ್ಲಿ ಶ್ರೀನಗರ ತಲುಪಿದಾಗ ಧಾರ್ಮಿಕ ಘೋಷಣೆಗಳನ್ನು ಕೂಗಿದರು –ಪಿಟಿಐ ಚಿತ್ರ

‘ಅಕ್ರಮ ಎನ್ನುವುದಕ್ಕೆ ದಾಖಲೆ ಏನಿದೆ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಿಯಮ ಉಲ್ಲಂಘಿಸಿ ಕ್ವಾರಿ ನಡೆಸುತ್ತಿರುವ ಮಾಲೀಕರ ವಿರುದ್ಧ ಎಫ್‌ಐಆರ್ ದಾಖಲು ಮಾಡಲಾಗುವುದು’ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕೆಂಗೇರಿಯ ರಾಜರಾಜೇಶ್ವರಿ ಆಸ್ಪತ್ರೆಗೆ ಭೇಟಿ ನೀಡಿ, ಗಾಯಾಳುಗಳ ಆರೋಗ್ಯ ವಿಚಾರಿಸಿದ ಬಳಿಕ ಅವರು ಮಾತನಾಡಿದರು.

‘ನಿಯಮದಂತೆಯೇ ಕ್ವಾರಿಗಳು ಕೆಲಸ ಮಾಡಬೇಕು. ಮುಂದಿನ ದಿನಗಳಲ್ಲಿ ಕ್ವಾರಿಗಳ ಕಾರ್ಯಾಚರಣೆಗೆ ಸಂಬಂಧಿಸಿದಂತೆ ನಿಯಮ ರೂಪಿಸಲಾಗುವುದು. ಶೀಘ್ರವೇ ಅಧಿಕಾರಿಗಳ ಸಭೆ ಕರೆಯುತ್ತೇನೆ’ ಎಂದು ಹೇಳಿದರು.

‘ಎರಡು ಮೂರು ವರ್ಷದಿಂದ ಅಕ್ರಮ ಕ್ವಾರಿಗಳ ಸಂಖ್ಯೆ ಜಾಸ್ತಿ ಆಗಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರ ಆರೋಪದ ಬಗ್ಗೆ ಕೇಳಿದಾಗ, ‘ಎಲ್ಲರೂ ಅವರ ಕಡೆಯವರೇ ಮಾಡುತ್ತಾ ಇರೋದಲ್ಲವೇ? ಎಲ್ಲಾ ಕಡೆ ಅಕ್ರಮ ಗಣಿಗಾರಿಕೆ ಅನ್ನುವುದಕ್ಕೆ ಅವರ ಬಳಿ ದಾಖಲೆ ಏನಿದೆ’ ಎಂದು ಪ್ರಶ್ನಿಸಿದರು.

ಬಂಡೆ ಕುಸಿದು 7 ಕಾರ್ಮಿಕರ ಸಾವು

ಒಂದನೇ ಪುಟದಿಂದ...

ಚೌಟಾಲ ಸಿಂಗ್, ಆನಂದ್, ಗುಲಾಬ್ ಸಿಂಗ್, ನೋಹರ್ ಸಿಂಗ್ ಗಾಯಗೊಂಡಿದ್ದು, ಎಲ್ಲರನ್ನೂ ಕೆಂಗೇರಿಯ ರಾಜರಾಜೇಶ್ವರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಅಕ್ಕಪಕ್ಕ ಗಣಿಗಾರಿಕೆ: ಮಾದಾಪಟ್ಟಣ ಗ್ರಾಮದ ಸರ್ವೆ ನಂ. 29ರ ಸುಮಾರು 6 ಎಕರೆ ಗೋಮಾಳದಲ್ಲಿ ಬೆಂಗಳೂರಿನ ಉದ್ಯಮಿ ಉದಯ್ ಶಂಕರ್ ಅವರ ಕಾವೇರಿ ಸ್ಟೋನ್ ಕ್ರಷರ್ ಹಾಗೂ ಆನಂದಸ್ವಾಮಿ ಅವರ ಬಸವೇಶ್ವರ ಸ್ಟೋನ್ಸ್ ಕ್ವಾರಿ ಇದೆ. ಇಬ್ಬರೂ ಪರವಾನಗಿ ಪಡೆದು ಕಲ್ಲು ಗಣಿಗಾರಿಕೆ ನಡೆಸುತ್ತಿದ್ದಾರೆ. ಉದಯ್ ಅವರಿಗೆ ಮಂಜೂರಾಗಿರುವ ಜಾಗ ಕೆಳಭಾಗದಲ್ಲಿದ್ದು ಹಾಗೂ ಆನಂದಸ್ವಾಮಿ ಜಾಗ ಮೇಲ್ಭಾಗದಲ್ಲಿದ್ದು, ಪರಸ್ಪರ ಹೊಂದಿಕೊಂಡಂತಿದೆ.

ಇಬ್ಬರಿಗೂ ಸೇರಿದ ಕ್ವಾರಿಯಲ್ಲಿ ಕರ್ನಾಟಕ, ಮಧ್ಯಪ್ರದೇಶ, ಛತ್ತೀಸಗಢದ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಬೆಳಿಗ್ಗೆ 6.45ರ ಸುಮಾರಿಗೆ ಎಂದಿನಂತೆ ಕಾರ್ಮಿಕರು ಕೆಲಸ ಪ್ರಾರಂಭಿಸಿದ್ದರು. ಆನಂದ ಸ್ವಾಮಿ ಅವರಿಗೆ ಸೇರಿದ ಮೇಲ್ಭಾಗದ ಜಾಗದಲ್ಲಿ ನಾಲ್ಕೈದು ಕಾರ್ಮಿಕರು ಡ್ರಿಲ್ಲರ್‌ನಿಂದ ಕೊರೆದಿದ್ದ ಬೃಹತ್ ಗಾತ್ರದ ಬಂಡೆಯನ್ನು ಹಿಟಾಚಿ ಮೂಲಕ ಪಕ್ಕಕ್ಕೆ ಬೀಳಿಸುವಲ್ಲಿ ತೊಡಗಿದ್ದರು. ಆ ಸಮಯದಲ್ಲಿ ಅನಾಹುತ ಸಂಭವಿಸಿದೆ.

> ರಾಮನಗರ ಸುತ್ತ 55 ಕ್ರಷರ್‌ಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ, ಮೃತರಿಗೆ ತಲಾ ₹10 ಲಕ್ಷ, ಗಾಯಗೊಂಡವರಿಗೆ ₹5 ಲಕ್ಷ ಪರಿಹಾರ ನೀಡಲಾಗುವುದು
>
> **ರಂಗಪ್ಪ**, ಆಯುಕ್ತ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ

ಏಕಾಏಕಿ ಕುಸಿದ ಬಂಡೆ: ಅದೇ ಸ್ಥಳದ ಸುಮಾರು 30 ಅಡಿಗೂ ಹೆಚ್ಚು ಆಳವಿರುವ ಕೆಳಭಾಗದಲ್ಲಿ ಉದಯ್ ಶಂಕರ್ ಅವರಿಗೆ ಸೇರಿದ ಜಾಗದಲ್ಲಿ 16 ಕಾರ್ಮಿಕರು ಸಹ ಡ್ರಿಲ್ಲರ್ ಬಳಸಿ ಕಲ್ಲುಗಳನ್ನು ಒಡೆದು ಮೂರು ಟ್ರ್ಯಾಕ್ಟರ್‌ಗಳಿಗೆ ತುಂಬಿಸುತ್ತಿದ್ದರು. ಆಗ ಇದ್ದಕ್ಕಿದ್ದಂತೆ ಮೇಲ್ಭಾಗದಿಂದ ಜೋರಾದ ಶಬ್ದದೊಂದಿಗೆ ಬೃಹತ್ ಬಂಡೆ ಕುಸಿದು ಕೆಳಕ್ಕೆ ಬಿತ್ತು ಎಂದು ಕಾರ್ಮಿಕರು ತಿಳಿಸಿದರು.

ಏನಾಯಿತು ಎಂದು ನೋಡುವಷ್ಟರಲ್ಲಿ ಕೆಳಗಿದ್ದ ಕಾರ್ಮಿಕರ ಪೈಕಿ 7 ಮಂದಿ ಬಂಡೆಯ ಕೆಳಗೆ ಸಿಲುಕಿ ನಜ್ಜುಗುಜ್ಜಾಗಿ ಪ್ರಾಣಬಿಟ್ಟರು. ಅಪ್ಪಚ್ಚಿಯಾಗಿದ್ದ ಟ್ರ್ಯಾಕ್ಟರ್‌ನ ಅವಶೇಷಗಳ ನಡುವೆ ನಾಲ್ವರು ಸಿಲುಕಿಕೊಂಡರು. ಸ್ವಲ್ಪ ದೂರದಲ್ಲಿ ಕೆಲಸ ಮಾಡುತ್ತಿದ್ದವರು ಬಂಡೆ ಜಾರಿ ಬೀಳುತ್ತಿರುವುದನ್ನು ಗಮನಿಸಿ ದೂರಕ್ಕೆ ಓಡಿ ಪ್ರಾಣ ಉಳಿಸಿಕೊಂಡರು ಎಂದು ಕಾರ್ಮಿಕರು ದುರಂತವನ್ನು ಬಿಚ್ಚಿಟ್ಟರು.

ಬೇಕಾಬಿಟ್ಟಿ ಬಂಡೆ ಒಡೆದಿದ್ದೇ ಕಾರಣ

ಒಂದನೇ ಪುಟದಿಂದ...

ಅಲ್ಲದೇ, ಕ್ವಾರಿಯಲ್ಲಿ ಕೆಲಸ ಮಾಡುವಾಗ ಎಲ್ಲಿ ಅಗೆಯಬೇಕು, ಎಲ್ಲಿ ಬಂಡೆ ಒಡೆಯಬೇಕು ಎಂಬುದರ ಮೇಲ್ವಿಚಾರಣೆ ನಡೆಸಲು ತಾಂತ್ರಿಕ ಸಿಬ್ಬಂದಿ ನಿಯೋಜಿಸಿರಲಿಲ್ಲ. ಕಾರ್ಮಿಕರೇ ಬೇಕಾಬಿಟ್ಟಿಯಾಗಿ ಡ್ರಿಲ್ಲರ್ ಮತ್ತು ಹಿಟಾಚಿ ಬಳಸಿ ಬಂಡೆಯನ್ನು ಒಡೆದಿದ್ದೇ ಘಟನೆಗೆ ಕಾರಣ. ಎತ್ತರ ಮತ್ತು ಆಳವಾದ ಜಾಗದಲ್ಲಿ ಕಾರ್ಮಿಕರು ಕೆಲಸ ಮಾಡುವಾಗ ಮುನ್ನೆಚ್ಚರಿಕೆಯಾಗಿ ಯಾವುದೇ ಕ್ರಮಗಳನ್ನು ಕೈಗೊಂಡಿರಲಿಲ್ಲ ಎಂದೂ ತಿಳಿಸಿವೆ.

ನಿಯಮಾನುಸಾರ ಕ್ರಮ: ಸಿ.ಎಂ

‘ಸ್ಥಳದಲ್ಲಿ ಏಳು ಜನ ಪರವಾನಗಿ ಪಡೆದು ಕಲ್ಲು ಗಣಿಗಾರಿಕೆ ನಡೆಸುತ್ತಿದ್ದಾರೆ ಎಂದು ತಿಳಿದು ಬಂದಿದೆ. ನಿಯಮಾನುಸಾರ ಪರಿಹಾರ ನೀಡಲಾಗುವುದು. ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರು ಪ್ರತ್ಯೇಕವಾಗಿ ಪರಿಹಾರ ನೀಡುವ ಕುರಿತು ನಿರ್ಧಾರ ಕೈಗೊಳ್ಳಲಿದ್ದಾರೆ’ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಮಾಲೀಕರು ಸೇರಿ ನಾಲ್ವರ ಬಂಧನ

ಘಟನೆಗೆ ಸಂಬಂಧಿಸಿದಂತೆ ನಾಲ್ವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ತಾವರೆಕೆರೆ ಠಾಣೆ ಪೊಲೀಸರು, ಕ್ವಾರಿ ಮಾಲೀಕರಾದ ಬೆಂಗಳೂರಿನ ಎ.ಆನಂದಸ್ವಾಮಿ, ಉದಯಶಂಕರ್, ಮೇಸ್ತ್ರಿ ಪಾಂಡು ಹಾಗೂ ಇಟಾಚಿ ಆಪರೇಟರ್ ತಿರುಪತಿ ಎಂಬವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ವಿಷಯ ತಿಳಿದು ಘಟನಾ ಸ್ಥಳಕ್ಕೆ ಬಂದ ಪೊಲೀಸರು, ಅಗ್ನಿಶಾಮಕ ದಳ ಮತ್ತು ತುರ್ತು ಸೇವೆಗಳ ಸಿಬ್ಬಂದಿ ಹಿಟಾಚಿಗಳ ಸಹಾಯದಿಂದ ಬಂಡೆಯನ್ನು ಪಕ್ಕಕ್ಕೆ ಸರಿಸಿ ಶವ ಹಾಗೂ ಗಾಯಗಳುಗಳನ್ನು ಹೊರಕ್ಕೆ ತೆಗೆದರು. ಆಂಬುಲೆನ್ಸ್‌ಗಳಲ್ಲಿ ರಾಜರಾಜೇಶ್ವರಿ ಆಸ್ಪತ್ರೆಗೆ ಸಾಗಿಸಿದರು.

ರಕ್ತದ ಕಲೆ, ದೇಹದ ಭಾಗದ ಚೂರುಗಳು, ಕಾರ್ಮಿಕರ ಚಪ್ಪಲಿಗಳು, ಊಟದ ಬಾಕ್ಸ್‌ಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಘಟನೆ ಕುರಿತು ತಾವರಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯಾರ ಜತೆಯೂ ಮೈತ್ರಿ ಇಲ್ಲ: ಡಿಎಂಕೆ ನಾಯಕ ರಘುಪತಿ ಸ್ಪಷ್ಟನೆ

ಡಿಎಂಕೆ-ಎಐಎಡಿಎಂಕೆ ಮೈತ್ರಿ: ಆಧವ್

ಚೆನ್ನೈ (ಪಿಟಿಐ): ವಿರೋಧ ಪಕ್ಷಗಳಾದ ಡಿಎಂಕೆ ಮತ್ತು ಎಐಎಡಿಎಂಕೆ ಪಕ್ಷಗಳು ಚುನಾವಣಾ ಮೈತ್ರಿ ಮಾಡಿಕೊಳ್ಳಲು ಮುಂದಾಗಿವೆ ಎಂದು ತಮಿಳುನಾಡಿನ ಆಡಳಿತಾರೂಢ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪ್ರಧಾನ ಕಾರ್ಯದರ್ಶಿ ಆಧವ್ ಅರ್ಜುನ ಗುರುವಾರ ಹೇಳಿದ್ದಾರೆ. ಆದರೆ, ಡಿಎಂಕೆಯ ಹಿರಿಯ ನಾಯಕರೊಬ್ಬರು ಈ ಹೇಳಿಕೆಯನ್ನು ಅಲ್ಲಗಳೆದಿದ್ದಾರೆ.

‘ಜೊತೆಯಾಗಿ ಚುನಾವಣೆ ಎದುರಿಸುವ ಸಂಬಂಧ ಎರಡೂ ಪಕ್ಷಗಳ ನಾಯಕರು ಮಾತುಕತೆ ನಡೆಸಿದ್ದು, ಮುಂಬರುವ ಸ್ಥಳೀಯ ಸಂಸ್ಥೆ ಅಥವಾ ಲೋಕಸಭಾ ಚುನಾವಣೆಗೂ ಮುನ್ನ ಈ ಕುರಿತು ಅಧಿಕೃತ ಘೋಷಣೆ ನಿರೀಕ್ಷಿಸಲಾಗಿದೆ’ ಎಂದು ಲೋಕೋಪಯೋಗಿ ಮತ್ತು ಕ್ರೀಡಾ ಸಚಿವರೂ ಆಗಿರುವ ಆಧವ್ ಹೇಳಿದ್ದಾರೆ.

ಈ ಹೇಳಿಕೆಯನ್ನು ನಿರಾಕರಿಸಿರುವ ಡಿಎಂಕೆ ನಾಯಕ ಎಸ್. ರಘುಪತಿ, ಅಧಿಕಾರವನ್ನು ಪಡೆಯಲಿಕ್ಕಾಗಿ ಎಐಎಡಿಎಂಕೆ ಜೊತೆ ಮೈತ್ರಿ ಮಾಡಿಕೊಳ್ಳುವ ಯಾವುದೇ ಇಚ್ಛೆ ತಮ್ಮ ಪಕ್ಷಕ್ಕೆ ಇಲ್ಲ ಎಂದು ಒತ್ತಿ ಹೇಳಿದರು. ಪಕ್ಷದ ಅಧ್ಯಕ್ಷ ಎಂ.ಕೆ. ಸ್ಟಾಲಿನ್ ಅವರೂ ಅಂತಹ ಯಾವುದೇ ಉದ್ದೇಶವನ್ನು ಹೊಂದಿಲ್ಲ ಎಂದು ಪುನರುಚ್ಚರಿಸಿದರು.

ಡಿಎಂಕೆಯು ಜನಾದೇಶದ ಮೂಲಕವೇ ಅಧಿಕಾರಕ್ಕೇರಲಿದ್ದು, ಸರ್ಕಾರ ರಚಿಸಲು ಯಾವುದೇ ಅಡ್ಡದಾರಿ ಹಿಡಿಯುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಟಿವಿಕೆ ಶಾಸಕರನ್ನು ‘ಖರೀದಿ’ಸಲು ಡಿಎಂಕೆ ಪ್ರಯತ್ನಿಸುತ್ತಿದೆ ಎಂಬ ಆರೋಪಗಳಿಗೆ ಪ್ರತಿಕ್ರಿಯಿಸಿದ ರಘುಪತಿ, ‘ಪ್ರಸ್ತುತ ಸರ್ಕಾರವನ್ನು ಉರುಳಿಸಲು ಡಿಎಂಕೆ ಯಾವುದೇ ಆಸಕ್ತಿ ಹೊಂದಿಲ್ಲ. ಡಿಎಂಕೆಯು ಜವಾಬ್ದಾರಿಯುತ ವಿರೋಧ ಪಕ್ಷವಾಗಿ ಕಾರ್ಯ ನಿರ್ವಹಿಸುತ್ತದೆ ಎಂದು ಪಕ್ಷದ ನಾಯಕರು ಈಗಾಗಲೇ ಸ್ಪಷ್ಟಪಡಿಸಿದ್ದಾರೆ’ ಎಂದು ಹೇಳಿದರು.

‘ದ್ರೋಹ’ ಬಗೆದ ಪಳನಿಸ್ವಾಮಿ: ಚೆನ್ನೈಗೆ ಸಮೀಪದ ಮಾಮಲ್ಲಪುರಂನಲ್ಲಿ ಎಐಎಡಿಎಂಕೆ ಬೆಂಬಲಿಗರನ್ನು ಟಿವಿಕೆಗೆ ಬರಮಾಡಿಕೊಳ್ಳುವ ಕಾರ್ಯಕ್ರಮದಲ್ಲಿ ಮಾತನಾಡಿದ ಅರ್ಜುನ ಅವರು, ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರು ಆ ಪಕ್ಷದ ತತ್ವಗಳಿಗೆ ‘ದ್ರೋಹ’ ಬಗೆದಿದ್ದಾರೆ ಎಂದು ಆರೋಪಿಸಿದರು.

‘ಡಿಎಂಕೆ ಜೊತೆ ಮೈತ್ರಿ ಮಾಡಿಕೊಳ್ಳುವ ಎಐಎಡಿಎಂಕೆಯ ಯೋಜನೆಗೆ ಆ ಪಕ್ಷದ ಶಾಸಕರು, ಪದಾಧಿಕಾರಿಗಳು ಮತ್ತು ಬೆಂಬಲಿಗರು ಅತೃಪ್ತರಾಗಿದ್ದಾರೆ. ಮೈತ್ರಿಗೆ ವಿರೋಧ ವ್ಯಕ್ತಪಡಿಸಿ ಅವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿ ಟಿವಿಕೆ ಸೇರುತ್ತಿದ್ದಾರೆ’ ಎಂದು ಹೇಳಿದರು.

ಮೂವರು ಮಾಜಿ ಸಚಿವರು ಟಿವಿಕೆಗೆ

ಎಐಎಡಿಎಂಕೆ ಪಕ್ಷದ ಮಾಜಿ ಸಚಿವರಾದ ಡಾ.ಸಿ. ವಿಜಯಭಾಸ್ಕರ್, ಎಂ.ಆರ್. ವಿಜಯಭಾಸ್ಕರ್ ಹಾಗೂ ಎಂ.ಎಸ್.ಎಂ. ಆನಂದನ್ ಅವರು ತಮ್ಮ ಬೆಂಬಲಿಗರೊಂದಿಗೆ ಗುರುವಾರ ಟಿವಿಕೆ ಪಕ್ಷ ಸೇರಿದರು.

ಮಾಮಲ್ಲಪುರಂನಲ್ಲಿ ನಡೆದ ಕಾರ್ಯಕ್ರಮದಲ್ಲಿ ಟಿವಿಕೆ ಪ್ರಧಾನ ಕಾರ್ಯದರ್ಶಿ ‘ಬುಸ್ಸಿ’ ಎನ್.ಆನಂದ್ ಅವರು ಮೂವರು ಮಾಜಿ ಸಚಿವರುಗಳನ್ನು ತಮ್ಮ ಪಕ್ಷಕ್ಕೆ ಸ್ವಾಗತಿಸಿದರು. ಸಿ. ವಿಜಯಭಾಸ್ಕರ್ ಮತ್ತು ಎಂ.ಆರ್. ವಿಜಯಭಾಸ್ಕರ್ ಅವರು ಕೆಲ ದಿನಗಳ ಹಿಂದೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ದೇವಾಲಯ ಮುಖ್ಯಸ್ಥರಿಂದ ಆರೋಪ: ತನಿಖೆಗೆ ಅಖಿಲೇಶ್ ಆಗ್ರಹ

‘ದೇಗುಲದ ಆಸ್ತಿ ಕಬಳಿಕೆಗೆ ಸಂಚು’

ಲಖನೌ (ಉತ್ತರಪ್ರದೇಶ) (ಪಿಟಿಐ): ‘ಅಯೋಧ್ಯೆಯ ರಾಮಮಂದಿರ ಸಂಕೀರ್ಣಕ್ಕೆ ಹೊಂದಿಕೊಂಡಿರುವ ರಾಮನಿವಾಸ್ ದೇವಾಲಯದ ಆಸ್ತಿಯನ್ನು ನಕಲಿ ದಾಖಲೆ ಸೃಷ್ಟಿಸಿ ಕಬಳಿಸಲು ಶ್ರೀ ರಾಮಜನ್ಮ ಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಹಾಗೂ ಅವರ ತಂಡದವರು ಸಂಚು ರೂಪಿಸಿದ್ದರು. ಈ ಕುರಿತು ಅಧಿಕಾರಿಗಳಿಗೆ ದೂರು ನೀಡಿದ್ದರೂ ನಿರ್ಲಕ್ಷಿಸಿದ್ದರು’ ಎಂದು ದೇವಾಲಯದ ಪಂಚ ಪ್ರಮುಖರಲ್ಲಿ ಒಬ್ಬರಾದ ಹರಿಶಂಕರ್ ಸಫಾರಿವಾಲ ಆರೋಪಿಸಿದ್ದಾರೆ.

ಲಖನೌದಲ್ಲಿ ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಜೊತೆಗೆ ಪತ್ರಿಕಾಗೋಷ್ಠಿ ನಡೆಸಿದ ಅವರು, ಆರೋಪಕ್ಕೆ ಸಂಬಂಧಿಸಿದ ದಾಖಲೆಗಳನ್ನು ಬಿಡುಗಡೆಗೊಳಿಸಿದರು.

ರಾಮಕೋಟ್‌ನಲ್ಲಿರುವ ರಾಮ್ ನಿವಾಸ್ ದೇವಾಲಯವು ಶತಮಾನಗಳಷ್ಟು ಹಳೆಯದಾಗಿದೆ. ಪಂಚ ಕಮಿಟಿಯೇ ಇದರ ನಿರ್ವಹಣೆ ಮಾಡುತ್ತಿದ್ದು, ದೇವಾಲಯದ ಮೇಲುಸ್ತುವಾರಿಗೆ ಅರ್ಚಕರನ್ನು ನೇಮಿಸಲಾಗಿದೆ.

‘ರಾಯ್ ಹಾಗೂ ಅವರ ತಂಡದವರು ಆಸ್ತಿ ಒಪ್ಪಂದದ ಹೆಸರಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿದ್ದರು. ಪತ್ರದ ಅನ್ವಯ, ದೇವಾಲಯದ ಆಸ್ತಿಯನ್ನು ₹5.80 ಕೋಟಿ ಖರೀದಿಸಲಾಗಿದೆ ಎಂದು ನಕಲಿ ದಾಖಲೆ ತಯಾರಿಸಿದ್ದು, ₹60 ಲಕ್ಷ ಮೊತ್ತವನ್ನು ನಾವು ನೇಮಿಸಿದ್ದ ಅರ್ಚಕರಿಗೆ ಪಾವತಿಸಿದ್ದರು’ ಎಂದು ಆರೋಪಿಸಿದ್ದಾರೆ.

> ಬಿಜೆಪಿ, ವಿಎಚ್‌ಪಿ, ಬಜರಂಗ ದಳದವರು ರಾಮನ ಹೆಸರಿನಲ್ಲಿ ಮತ ಪಡೆದರು. ಈಗ ರಾಮನ ಹೆಸರಿನಲ್ಲಿಯೇ ಲೂಟಿಗಿಳಿದಿದ್ದಾರೆ. ಅವರೆಲ್ಲರೂ ನಕಲಿ ಹಿಂದೂಗಳು
>
> **ಕಪಿಲ್ ಸಿಬಲ್,** ರಾಜ್ಯಸಭಾ ಸದಸ್ಯ

> ಯಾವ ಮತದಾರರ ಹೆಸರುಗಳನ್ನು ಸೇರ್ಪಡೆ ಮಾಡಲಾಗಿದೆ, ತೆಗೆಯಲಾಗಿದೆ ಎಂಬುದು ಪ್ರಧಾನಿ ಅವರಿಗೆ ತಿಳಿದಿದೆ. ಮಂದಿರದ ಕಳವು ಗೊತ್ತಿಲ್ಲ ಎಂದರೆ ಹೇಗೆ ನಂಬುವುದು?
>
> **ಅರವಿಂದ ಕೇಜ್ರಿವಾಲ್**, ಎಎಪಿ ಮುಖ್ಯಸ್ಥ

> ಟ್ರಸ್ಟ್‌ನ ಹಣಕಾಸು ವ್ಯವಹಾರವನ್ನು ಸಿಎಜಿ ನೇತೃತ್ವದಲ್ಲಿ ಸಮಗ್ರ ಲೆಕ್ಕಪರಿಶೋಧನೆಗೆ ಒಳಪಡಿಸಬೇಕು
>
> **ಪಿ.ಸಂತೋಷ್ ಕುಮಾರ್**, ರಾಜ್ಯಸಭಾ ಸದಸ್ಯ

‘ದೇವಾಲಯದ ಆಸ್ತಿಯನ್ನು ಯಾವುದೇ ಕಾರಣಕ್ಕೂ ಮಾರಾಟ ಮಾಡಲು ಅವಕಾಶವಿಲ್ಲ. ಆದರೂ ನಕಲಿ ದಾಖಲೆ ಸೃಷ್ಟಿಸಿ, ಕಳೆದ ಐದು ವರ್ಷಗಳಿಂದ ಅವರೇ ಹಿಡಿತಕ್ಕೆ ಪಡೆದಿದ್ದಾರೆ’ ಎಂದು ಸಫಾರಿವಾಲ ದೂರಿದ್ದಾರೆ. ಈ ಕುರಿತು ಟ್ರಸ್ಟ್ ಹಾಗೂ ರಾಯ್ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ರಾಮಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಪದಾಧಿಕಾರಿಗಳ ವಿರುದ್ಧ ಹೊಸ ಎಫ್‌ಐಆರ್ ದಾಖಲಿಸುವಂತೆ ಒತ್ತಾಯಿಸಿದ ಫೈಜಾಬಾದ್‌ನ ವಕೀಲರ ಸಂಘದ ಸದಸ್ಯರು ಪೊಲೀಸ್ ಠಾಣೆಯವರೆಗೆ ಮೆರವಣಿಗೆ ನಡೆಸಿದರು –ಪಿಟಿಐ ಚಿತ್ರ

‘ಟ್ರಸ್ಟ್‌ನ ಪದಾಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿ’

ಅಯೋಧ್ಯೆ (ಉತ್ತರ ಪ್ರದೇಶ): ರಾಮಮಂದಿರದ ಕಾಣಿಕೆ ಹಾಗೂ ದೇಣಿಗೆ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ, ರಾಮಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್, ಟ್ರಸ್ಟ್‌ನ ಸದಸ್ಯ ಅನಿಲ್ ಮಿಶ್ರಾ ಹಾಗೂ ಮಂದಿರ ನಿರ್ಮಾಣದ ಜವಾಬ್ದಾರಿ ಹೊತ್ತಿದ್ದ ಗೋಪಾಲ್ ರಾವ್ ವಿರುದ್ಧ ಎಫ್‌ಐಆರ್ ದಾಖಲಿಸಬೇಕು ಎಂದು ಫೈಜಾಬಾದ್‌ನ ವಕೀಲರು ಪೊಲೀಸರಿಗೆ ದೂರು ನೀಡಿದ್ದಾರೆ.

ನ್ಯಾಯಾಲಯದ ಆವರಣದಿಂದ ರಾಮಜನ್ಮಭೂಮಿ ಪೊಲೀಸ್ ಠಾಣೆಯವರೆಗೂ ವಕೀಲರು ಪ್ರತಿಭಟನೆ ನಡೆಸಿದರು. ಕಾಣಿಕೆ ಕಳವು ಪ್ರಕರಣದಲ್ಲಿ ಈ ಹಿಂದೆ ದೂರು ಟ್ರಸ್ಟಿ ಕೃಷ್ಣ ಮೋಹನ್ ಅವರ ವಿರುದ್ಧವೂ ದೂರು ನೀಡಲಾಗಿತ್ತು. ಅವರ ಹೆಸರನ್ನು ಕೂಡ ಎಫ್‌ಐಆರ್‌ನಲ್ಲಿ ಸೇರಿಸಬೇಕು ಎಂದು ವಕೀಲರ ಸಂಘದ ಅಧ್ಯಕ್ಷ ಕಾಳಿಕ ಪ್ರಸಾದ್ ಮಿಶ್ರಾ ಒತ್ತಾಯಿಸಿದ್ದಾರೆ.

ಆರೋಪ ಕುರಿತಂತೆ ನ್ಯಾಯಯುತ ಹಾಗೂ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಪೊಲೀಸರಿಗೆ ಸಲ್ಲಿಸಿದ ದೂರಿನಲ್ಲಿ ತಿಳಿಸಿದ್ದಾರೆ.

‘ಕಳಂಕದೊಂದಿಗೆ ಮುಂದುವರಿಯಲ್ಲ’

‘ಅಯೋಧ್ಯೆಯಲ್ಲಿ ನನ್ನ ಸೇವೆ ಮುಗಿದಿದೆ. ಕಳಂಕದೊಂದಿಗೆ ಮುಂದುವರಿಯಲು ಇಚ್ಛಿಸುವುದಿಲ್ಲ’ –ಕಾಣಿಕೆ ಕಳವು ಪ್ರಕರಣದಲ್ಲಿ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿರುವ ಚಂಪತ್ ರಾಯ್ ಅವರು ತಮ್ಮ ಆಪ್ತರಲ್ಲಿ ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಚಂಪತ್ ರಾಯ್ ಏಕಾಂತಕ್ಕೆ ತೆರಳಿದ್ದಾರೆ. ಟ್ರಸ್ಟ್‌ನಲ್ಲಿರುವವರೇ ದ್ರೋಹ ಬಗೆದಿದ್ದಾರೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎಂದು ಹೇಳಲಾಗಿದೆ

ಭವಿಷ್ಯ ನಿರ್ಧಾರ: ಈಗಾಗಲೇ ರಾಜೀನಾಮೆ ಸಲ್ಲಿಸಿರುವ ಮಿಶ್ರಾ ಹಾಗೂ ರಾಯ್ ಅವರ ಮುಂದಿನ ಭವಿಷ್ಯದ ಕುರಿತಂತೆ ಇದೇ 6ರಂದು ನಡೆಯಲಿರುವ ಸಭೆಯಲ್ಲಿ ಟ್ರಸ್ಟ್‌ನ ಸದಸ್ಯರು ನಿರ್ಧಾರ ಕೈಗೊಳ್ಳಲಿದ್ದಾರೆ ಎಂದು ಮೂಲಗಳು ಖಚಿತಪಡಿಸಿವೆ.

ಆರೋಪಿ ಪತ್ನಿಯ ಅನಧಿಕೃತ ಮನೆ ನಿರ್ಮಾಣಕ್ಕೆ ತಡೆ

ಕಾಣಿಕೆ ಕಳವು ಪ್ರಕರಣದ ಆರೋಪಿಯಾಗಿರುವ ಲವಕುಶ್ ಮಿಶ್ರಾ ಅವರು ಪತ್ನಿಯ ಹೆಸರಿನಲ್ಲಿ ನಿರ್ಮಿಸುತ್ತಿದ್ದ ಮನೆಯ ಕಟ್ಟಡ ನಿರ್ಮಾಣ ಸ್ಥಗಿತಗೊಳಿಸುವಂತೆ ಅಯೋಧ್ಯೆ ಅಭಿವೃದ್ಧಿ ಪ್ರಾಧಿಕಾರ (ಎಡಿಎ) ನೋಟಿಸ್ ಜಾರಿ ಮಾಡಿದೆ.

ಸೋಹವಾಲ್ ತಾಲ್ಲೂಕಿನ ಬನ್ವೀರ್‌ಪುರ ಗ್ರಾಮದಲ್ಲಿ ಮನೆ ನಿರ್ಮಿಸಲಾಗುತ್ತಿತ್ತು. ಲವಕುಶ್ ಮಿಶ್ರಾ ಅವರ ಪತ್ನಿ ಸುಪ್ರಿಯಾ ಮಿಶ್ರಾ ಹೆಸರಿನಲ್ಲಿ ಮನೆ ನಿರ್ಮಿಸಿದ್ದು, ಯಾವುದೇ ಅನುಮತಿ ಪಡೆಯದೇ ಮನೆ ನಿರ್ಮಿಸಲಾಗುತ್ತಿತ್ತು ಎಂದು ಎಡಿಎ ಮೂಲಗಳು ತಿಳಿಸಿವೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಲವಕುಶ್ ಮಿಶ್ರಾ, ಅವಿನಾಶ್ ಶುಕ್ಲಾ ಹಾಗೂ ಕರುಣೇಶ್ ಪಾಂಡೆ ಹಾಗೂ ಅನುಕಲ್ಪ್ ಮಿಶ್ರಾ ಅವರ ಮನೆಯ ಮೇಲೆ ದಾಳಿ ನಡೆಸಿದರು.

ಅವಿನಾಶ್ ಶುಕ್ಲಾ ಮನೆಯಿಂದ ₹20.39 ಲಕ್ಷ ನಗದು, ಕರುಣೇಶ್ ಪಾಂಡೆ ಮನೆಯಿಂದ ₹18.07 ಲಕ್ಷ, ಅನುಕಲ್ಪ್ ಮಿಶ್ರಾ ಮನೆಯಿಂದ ₹14.25 ಲಕ್ಷ ಹಾಗೂ ಲವಕುಶ್ ಮಿಶ್ರಾ ನಿವಾಸದಿಂದ ₹7.32 ಲಕ್ಷ, ರಾಮಶಂಕರ್ ಯಾದವ್ ಮನೆಯಿಂದ ₹1 ಲಕ್ಷ ನಗದು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

11 ಗ್ರಾಂ ಚಿನ್ನ, 375 ಗ್ರಾಂ ಬೆಳ್ಳಿ ಹಾಗೂ 1,121 ಅಮೆರಿಕ ಡಾಲರ್ ವಶಪಡಿಸಿಕೊಳ್ಳಲಾಗಿದೆ.

‘ಸುಪ್ರೀಂ ನೇತೃತ್ವದಲ್ಲಿ ತನಿಖೆ ನಡೆಸಿ’

ನವದೆಹಲಿ: ‘ರಾಮಮಂದಿರ ಕಾಣಿಕೆ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ಸ್ವತಂತ್ರ ಸಂಸ್ಥೆಯಿಂದಲೇ ತನಿಖೆ ನಡೆಸಬೇಕು’ ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದು ಒತ್ತಾಯಿಸಿದ್ದಾರೆ. ‘ಉತ್ತರ ಪ್ರದೇಶ ಸರ್ಕಾರ ರಚಿಸಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ಕಣ್ಣೊರೆಸುವ ತಂತ್ರವಾಗಿದೆ’ ಎಂದು ಆರೋಪಿಸಿದ್ದಾರೆ.

ವಿಂಬಲ್ಡನ್ ಟೆನಿಸ್: ಮೂರನೇ ಸುತ್ತಿಗೆ ಅಲೆಕ್ಸಾಂಡರ್ ಜ್ವರೇವ್

ಅಮೋಘ ಲಯಕ್ಕೆ ಮರಳಿದ ಶ್ವಾಂಟೆಕ್

ಲಂಡನ್ (ಎಎಫ್‌ಪಿ): ಮೊದಲ ಸುತ್ತಿನಲ್ಲಿ ಗೆಲ್ಲಲು ಹರಸಾಹಸ ಪಟ್ಟಿದ್ದ ಹಾಲಿ ಚಾಂಪಿಯನ್ ಇಗಾ ಶ್ವಾಂಟೆಕ್ ಗುರುವಾರ ನಡೆದ ಎರಡನೇ ಸುತ್ತಿನ ಪಂದ್ಯದ ವೇಳೆ ಅಮೋಘ ಲಯಕ್ಕೆ ಮರಳಿದರು. ಪೋಲೆಂಡ್‌ನ ಆಟಗಾರ್ತಿ ವಿಂಬಲ್ಡನ್ ಮಹಿಳಾ ಸಿಂಗಲ್ಸ್ ಪಂದ್ಯದಲ್ಲಿ 6-1, 6-3 ರಿಂದ ಕರೋಲಿನಾ ಪ್ಲಿಸ್ಕೋವಾ ಅವರನ್ನು ಸದೆಬಡಿದು ಮೂರನೇ ಸುತ್ತಿಗೆ ಮುನ್ನಡೆದರು.

ಫ್ರೆಂಚ್ ಓಪನ್ ಚಾಂಪಿಯನ್ ಅಲೆಕ್ಸಾಂಡರ್ ಜ್ವರೇವ್ (ಜರ್ಮನಿ) ಅವರು ಪುರುಷರ ಸಿಂಗಲ್ಸ್ ಎರಡನೇ ಸುತ್ತಿನ ಪಂದ್ಯದಲ್ಲಿ 6-1, 6-3, 7-6 ರಿಂದ ಶ್ರೇಯಾಂಕರಹಿತ ಆಟಗಾರ ವೆಲೆಂಟಿನ್ ರೋಯರ್ (ಫ್ರಾನ್ಸ್) ಅವರನ್ನು ಸೋಲಿಸಿದರು.

ಟೇಲರ್ ಟೌನ್ಸೆಂಡ್ ಅವರನ್ನು ಸೋಮವಾರ ಮೊದಲ ಸುತ್ತಿನಲ್ಲಿ ಪ್ರಯಾಸದಿಂದ ಸೋಲಿಸಿದ್ದ ವೇಳೆ ಶ್ವಾಂಟೆಕ್ ಅವರಿಗೆ ಭಾವನೆ ತಡೆಯಲಾಗದೇ ಕಣ್ಣುತುಂಬಿದ್ದವು. ಆದರೆ ಗುರುವಾರದ ಪಂದ್ಯದಲ್ಲಿ ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರ್ತಿಯಾಗಿರುವ ಪ್ಲಿಸ್ಕೋವಾ (ಜೆಕ್ ರಿಪಬ್ಲಿಕ್) ಅವರನ್ನು 70 ನಿಮಿಷಗಳಲ್ಲಿ ಮಣಿಸಿ ಎಂದಿನ ಹದಕ್ಕೆ ಮರಳಿದರು. ಗಾಯದಿಂದ ದೀರ್ಘಾವಧಿ ವಿರಾಮ ಪಡೆದಿದ್ದ ಪ್ಲಿಸ್ಕೋವಾ ಈ ವರ್ಷ ಟೆನಿಸ್‌ಗೆ ಮರಳಿದ್ದಾರೆ.

ವರ್ಷದ ಹಿಂದೆ ವಿಂಬಲ್ಡನ್‌ನಲ್ಲೇ ಟ್ರೋಫಿ ಗೆದ್ದು, ಆರನೇ ಗ್ರ್ಯಾಂಡ್‌ಸ್ಲಾಮ್ ಪ್ರಶಸ್ತಿ ಜಯಿಸಿದ್ದ ಶ್ವಾಂಟೆಕ್ ನಂತರ ಅಸ್ಥಿರ ಪ್ರದರ್ಶನ ನೀಡಿದ್ದಾರೆ. 25 ವರ್ಷದ ಆಟಗಾರ್ತಿ ಮುಂದಿನ ಸುತ್ತಿನಲ್ಲಿ ಫಿಲಿಪ್ಪೀನ್ಸ್‌ನ ಅಲೆಕ್ಸಾಂಡ್ರಾ ಇಯಾಲಾ ಅವರನ್ನು ಎದುರಿಸಲಿದ್ದಾರೆ. ಅಲೆಕ್ಸಾಂಡ್ರಾ ಅವರು ಮಾಯಾ ಜಾಯ್ಂಟ್ ಅವರನ್ನು ಸೋಲಿಸಿದ್ದರು. ಮಾಯಾ ಅವರು ನಾಲ್ಕು ವರ್ಷಗಳ ಬಳಿಕ ಪುನರಾಮನ ಮಾಡಿದ್ದ ಸೆರೇನಾ ವಿಲಿಯಮ್ಸ್ ಅವರನ್ನು ಮೊದಲ ಸುತ್ತಿನಲ್ಲಿ ಸೋಲಿಸಿ ಗಮನ ಸೆಳೆದಿದ್ದರು.

ಆಸ್ಟ್ರೇಲಿಯಾ ಓಪನ್ ಮಾಜಿ ಚಾಂಪಿಯನ್ ಮ್ಯಾಡಿಸನ್ ಕೀಸ್ ಇನ್ನೊಂದು ಪಂದ್ಯದಲ್ಲಿ ನೇರ ಸೆಟ್‌ಗಳಿಂದ ವೈಲ್ಡ್ ಕಾರ್ಡ್ ಪ್ರವೇಶ ಪಡೆದ ಆತಿಥೇಯ ಬ್ರಿಟನ್‌ನ ಕ್ಯಾಥಿ ಸ್ವಾನ್ ಅವರನ್ನು 6-1,6-4 ರಿಂದ ಸೋಲಿಸಿದರು.

ಫ್ರಿಟ್ಜ್ ಮುನ್ನಡೆ: ಆರನೇ ಶ್ರೇಯಾಂಕದ ಟೇಲ್ ಫ್ರಿಟ್ಜ್ (ಅಮೆರಿಕ) ಉತ್ತಮ ಪ್ರದರ್ಶನ ಮುಂದುವರಿಸಿ 6-2, 6-2, 7-5 ರಿಂದ ಸ್ವದೇಶದ ಪ್ಯಾಟ್ರಿಕ್ ಕಿಪ್ಸನ್ ಅವರನ್ನು ಸೋಲಿಸಿ ಮೂರನೇ ಸುತ್ತಿಗೆ ತಲುಪಿದರು. ಹೋದ ವರ್ಷ ಫ್ರಿಟ್ಜ್ ಈ ಟೂರ್ನಿಯ ಸೆಮಿಫೈನಲ್ ತಲುಪಿದ್ದರು.

ಐದನೇ ಶ್ರೇಯಾಂಕದ ಅಲೆಕ್ಸ್ ಡಿ ಮಿನೋರ್ ಅವರು 6-3, 6-2, 6-2 ರಿಂದ ಫ್ರಾನ್ಸ್‌ನ ಅನುಭವಿ ಅಡ್ರಿಯಾನ್ ಮನ್ನಾರಿನೊ ಅವರನ್ನು ಸೋಲಿಸಿದರು.

ಬ್ರಿಟನ್‌ನ ಆರ್ಥರ್ ಫೆರಿ 5-7, 7-6 (7-3), 6-3, 6-3ರಿಂದ ಫಿನ್ಲೆಂಡ್‌ನ ಒಟ್ಟೊ ವಿರ್ಟಾನೆನ್ ಅವರನ್ನು ಮಣಿಸಿದರು.

ಜೊಕೊವಿಚ್ ಮುನ್ನಡೆ: ಮೂರನೇ ಶ್ರೇಯಾಂಕದ ನೊವಾಕ್ ಜೊಕೊವಿಚ್ (ಸರ್ಬಿಯಾ) ಅವರು ಬುಧವಾರ 6-3, 6-4, 6-2 ರಿಂದ ಸ್ಟಿಫಾನೋಸ್ ಸಿಸಿಪಸ್ (ಗ್ರೀಸ್) ಅವರನ್ನು ಸುಲಭವಾಗಿ ಸೋಲಿಸಿದರು.

ಮೂರನೇ ಸುತ್ತನ್ನು ಪ್ರವೇಶಿಸಿದ ಅಲೆಕ್ಸಾಂಡರ್ ಜ್ವರೇವ್ ಎಎಫ್‌ಪಿ ಚಿತ್ರ

ಹೊರಬಿದ್ದ ಆಂಡ್ರೇಯೇವಾ

ಫ್ರೆಂಚ್ ಓಪನ್ ಚಾಂಪಿಯನ್ ಮೀರಾ ಅಂಡ್ರೇಯೇವಾ ಅವರು ವಿಂಬಲ್ಡನ್ ಟೂರ್ನಿಯ ಮಹಿಳಾ ಸಿಂಗಲ್ಸ್ ಎರಡನೇ ಸುತ್ತಿನಲ್ಲಿ ಹೊರಬಿದ್ದರು. ಬಾರ್ಬೋರಾ ಕ್ರಾಚಿಕೋವಾ ಅವರು 4-6, 7-5, 6-4 ರಿಂದ ರಷ್ಯಾದ ಹದಿಹರೆಯದ ಆಟಗಾರ್ತಿ ಮೀರಾ ಅವರಿಗೆ ಆಘಾತ ನೀಡಿದರು.

30 ವರ್ಷ ವಯಸ್ಸಿನ ಬಾರ್ಬೋರಾ (ಜೆಕ್ ರಿಪಬ್ಲಿಕ್) ಸೆಂಟರ್ ಕೋರ್ಟ್‌ನಲ್ಲಿ ಬುಧವಾರ ಸಂಜೆ ನಡೆದ ಈ ಪಂದ್ಯ ಗೆಲ್ಲಲು 2 ಗಂಟೆ 47 ನಿಮಿಷ ತೆಗೆದುಕೊಂಡರು. ಅವರು ಮುಂದಿನ ಸುತ್ತಿನಲ್ಲಿ ಸ್ವದೇಶದ ನಿಕೋಲಾ ಬರ್ಟುನ್‌ಕೋವಾ ಅವರನ್ನು ಎದುರಿಸಲಿದ್ದಾರೆ.

ಭಾರತದ ಸವಾಲು ಅಂತ್ಯ

ವಿಂಬಲ್ಡನ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್ ಸ್ಪರ್ಧೆಯಲ್ಲಿದ್ದ ಭಾರತದ ಯುಕಿ ಭಾಂಬ್ರಿ, ಎನ್. ಶ್ರೀರಾಮ್ ಬಾಲಾಜಿ ಮತ್ತು ಅನಿರುದ್ಧ ಚಂದ್ರಶೇಖರ್ ಅವರು ಮೊದಲ ಸುತ್ತಿನಲ್ಲೇ ಹೊರಬಿದ್ದಿದ್ದಾರೆ.

ಈ ಮೂವರು ಆಟಗಾರರು ತಮ್ಮ ತಮ್ಮ ವಿದೇಶಿ ಜೊತೆಗಾರರೊಂದಿಗೆ ಕಣಕ್ಕಿಳಿದಿದ್ದರು. ಆದರೆ, ಯಾರಿಗೂ ಗೆಲುವು ಸಿಗಲಿಲ್ಲ. ಹೀಗಾಗಿ ಟೂರ್ನಿಯಲ್ಲಿ ಭಾರತದ ಸವಾಲು ಅಂತ್ಯಗೊಂಡಿತು.

ಟೇಬಲ್ ಟೆನಿಸ್: ಆಕಾಶ್‌ಗೆ ಚಾಂಪಿಯನ್ ಪಟ್ಟ

ಪ್ರಜಾವಾಣಿ ವಾರ್ತೆ

ಮಂಗಳೂರು: ರೋಚಕ ಹೋರಾಟ ಕಂಡ ಪಂದ್ಯದಲ್ಲಿ ಕೆಚ್ಚೆದೆಯಿಂದ ಆಡಿದ ಅಗ್ರ ಶ್ರೇಯಾಂಕಿತ, ಬೆಂಗಳೂರಿನ ಆಕಾಶ್ ಕೆ.ಜೆ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಕರ್ನಾಟಕ ರಾಜ್ಯ ಟೇಬಲ್ ಟೆನಿಸ್ ಸಂಸ್ಥೆಯ ಸಹಯೋಗದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆ ಆಯೋಜಿಸಿರುವ ಟೂರ್ನಿಯ ಗುರುವಾರ ನಡೆದ ಫೈನಲ್‌ನಲ್ಲಿ ಆಕಾಶ್ ಮೂರನೇ ಶ್ರೇಯಾಂಕಿತ, ಬೆಂಗಳೂರಿನ ಸಂಜಯ್ ಮಾಧವನ್ ವಿರುದ್ಧ 8-11,11-5,11-6, 7-11,11-8,16-14ರಲ್ಲಿ ಜಯ ಸಾಧಿಸಿದರು.

ಮೊದಲ ದಿನವಾದ ಬುಧವಾರ ಮಹಿಳೆಯರ ಸಿಂಗಲ್ಸ್ ವಿಭಾಗದ ಪ್ರಶಸ್ತಿ ಗೆದ್ದಿದ್ದ ಬೆಂಗಳೂರಿನ ಹಿಮಾಂಶಿ ಚೌಧರಿ ಗುರುವಾರ 19 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ಪ್ರಶಸ್ತಿ ಮುಡಿಗೇರಿಸಿಕೊಂಡರು. ಅಗ್ರ ಶ್ರೇಯಾಂಕದ ಹಿಮಾಂಶಿ ಫೈನಲ್‌ನಲ್ಲಿ ಬೆಂಗಳೂರಿನ ಎರಡನೇ ಶ್ರೇಯಾಂಕದ ರಾಶಿ ವಿ ರಾವ್ ವಿರುದ್ಧ 9-11,11-6,11-13,12-10,11-6,4-11,11-6ರಲ್ಲಿ ಗೆದ್ದರು.

19 ವರ್ಷದೊಳಗಿನ ಬಾಲಕರ ವಿಭಾಗದ ಪ್ರಶಸ್ತಿ ಎರಡನೇ ಶ್ರೇಯಾಂಕಿತ, ಬೆಂಗಳೂರಿನ ಬಿ.ಆರ್ ಗೌರವ್ ಪಾಲಾಯಿತು. ಐದನೇ ಶ್ರೇಯಾಂಕಿತ ಗೌರವ್ ಗೌಡ ಎದುರಿನ ಫೈನಲ್‌ನಲ್ಲಿ ಅವರು 11-6,12-14,11-9,11-8,9-11,11-1ರಲ್ಲಿ ಜಯ ಸಾಧಿಸಿದರು.

ಏಳನೇ ಶ್ರೇಯಾಂಕಿತೆ, ಬೆಂಗಳೂರಿನ ಮಿಹಿಕಾ ಉಡುಪ 17 ವರ್ಷದೊಳಗಿನ ಬಾಲಕಿಯರ ವಿಭಾಗದ ಪ್ರಶಸ್ತಿ ಗೆದ್ದು ಸಂಭ್ರಮಿಸಿದರು. ಫೈನಲ್‌ನಲ್ಲಿ ಅವರು ವಿಭಾ ತವಕಾರಿ ಎದುರು 11-9, 11-9, 11-6ರಲ್ಲಿ ಗೆಲುವು ದಾಖಲಿಸಿದರು.

ಆಕಾಶ್ ಕೆ.ಜೆ ಆಟದ ಶೈಲಿ
ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್

ಪುಟಿದೆದ್ದು ಗೆದ್ದ ಬೆಲ್ಜಿಯಂ

ಯುವರಿ, ಲುಕಾಕು ಛಲದ ಆಟಕ್ಕೆ ಒಲಿದ ಜಯ: ಕೊನೆಯಲ್ಲಿ ಎಡವಿದ ಸೆನಗಲ್

ಸಿಯಾಟಲ್ (ಎಪಿ): ಬುಧವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಸೆನೆಗಲ್ ತಂಡಕ್ಕೆ 'ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ' ಎಂಬಂತಾಯಿತು.

ಬೆಲ್ಜಿಯಂ ಎದುರಿನ ನಾಕೌಟ್ ಪಂದ್ಯದಲ್ಲಿ 85 ನಿಮಿಷಗಳವರೆಗೂ ಸೆನೆಗಲ್ 2–0 ಮುನ್ನಡೆ ಸಾಧಿಸಿತ್ತು. ಆದರೆ ನಂತರ ಸ್ಟಾಪೇಜ್, ಹೆಚ್ಚುವರಿ ಸಮಯ ಮತ್ತು ಪೆನಾಲ್ಟಿ ಶೂಟೌಟ್‌ನವರೆಗೂ ಲಂಬಿಸಿದ ಪಂದ್ಯದಲ್ಲಿ ಬೆಲ್ಜಿಯಂ ತಂಡವು 3–2ರ ರೋಚಕ ಜಯವನ್ನು ತನ್ನದಾಗಿಸಿಕೊಂಡಿತು. ವಿಶ್ವಕಪ್ ಇತಿಹಾಸದಲ್ಲಿ ತಂಡವೊಂದು ದೀರ್ಘ ಅವಧಿಯ ಹಿನ್ನಡೆಯಿಂದ ಪುಟಿದೆದ್ದು ಗೆದ್ದ ದಾಖಲೆ ಇದಾಗಿದೆ.

ಅನುಭವಿ ಆಟಗಾರ ರುಮೇಲು ಲುಕಾಕು ಮತ್ತು ಯುವರಿ ಟೀಲೆಮನ್ಸ್ ಅವರು ಬೆಲ್ಜಿಯಂ ತಂಡದ ರೂವಾರಿಗಳಾದರು.

ಸೆನೆಗಲ್ ತಂಡದ ಹಬಿಬ್ ಡಿಯರಾ (24ನೇ ನಿ) ಮತ್ತು ಇಸ್ಮೇಲಾ ಸಾರ್ (51ನೇ ನಿ) ಅವರು ತಲಾ ಒಂದು ಗೋಲು ಹೊಡೆದು ಮುನ್ನಡೆ ಒದಗಿಸಿದರು. ನಂತರದ 35ನಿಮಿಷಗಳಲ್ಲಿ ಉಭಯ ತಂಡಗಳ ಆಟಗಾರರ ತುರುಸಿನ ಪೈಪೋಟಿ ನಡೆಯಿತು. ಸನೆಗಲ್ ರಕ್ಷಣಾ ಆಟಗಾರರು ಅಮೋಘ ಆಟವಾಡಿದರು. ಗೋಲ್‌ಕೀಪರ್ ಮೊರಿ ದಿಯಾವ್ ಅವರು ಮಿಂಚಿದರು. ಚೆಂಡು ಎರಡು ಬಾರಿ ಗೋಲು ತಡೆದರು.

'ಸೆನೆಗಲ್ ತಂಡವು ಗೆಲುವಿಗೆ ಅರ್ಹವಾಗಿತ್ತು. ಆದರೆ ಅಂತಿಮವಾಗಿ ನಾವು ಗೆದ್ದಿರುವುದು ಖುಷಿಯಾಗಿದೆ' ಎಂದು ಬೆಲ್ಜಿಯಂ ತಂಡದ ಕೋಚ್ ರೂಡಿ ಗಾರ್ಸಿಯಾ ಹೇಳಿದರು.

86ನೇ ನಿಮಿಷದಲ್ಲಿ ಲುಕಾಕು ತಮ್ಮ ಕಾಲ್ಚಳಕ ಮೆರೆದರು. ಬೆಲ್ಜಿಯಂ ತಂಡದ ಗೋಲು ಖಾತೆ ತೆರೆದರು.

3 ನಿಮಿಷಗಳ ನಂತರ ಯುವರಿ ಟೀಲೆಮನ್ಸ್ ಗೋಲು ಹೊಡೆದರು. ಇದರಿಂದಾಗಿ 2–2ರ ಸಮಬಲವಾಯಿತು. ಸ್ಟಾಪೆಜ್ ಸಮಯದಲ್ಲಿಯೂ ಜಿದ್ದಾಜಿದ್ದಿ ನಡೆಯಿತು. ಆದರೆ ಗೋಲು ದಾಖಲಾಗಲಿಲ್ಲ. ಹೆಚ್ಚುವರಿ ಸಮಯದಲ್ಲಿಯೂ ಬಹುತೇಕ ಗೋಲು ಗಳಿಕೆ ಸಾಧ್ಯವಾಗಲಿಲ್ಲ. ಆದರೆ ಪೆನಾಲ್ಟಿ (120+5ನಿ) ಅವಕಾಶದಲ್ಲಿ ಯುವರಿ ಗಳಿಸಿದ ಗೋಲು ಬೆಲ್ಜಿಯಂ ತಂಡಕ್ಕೆ 16 ಘಟ್ಟದ ಅವಕಾಶದ ಬಾಗಿಲು ತೆರೆಯಿತು. ಸೋಮವಾರ ನಡೆಯಲಿರುವ ಪಂದ್ಯದಲ್ಲಿ ತಂಡವು ಅಮೆರಿಕ ತಂಡವನ್ನು ಎದುರಿಸಲಿದೆ.

ಬೆಲ್ಜಿಯಂ ತಂಡವು ಕಳೆದ ನಾಲ್ಕು ವಿಶ್ವಕಪ್ ಟೂರ್ನಿಗಳ ಪೈಕಿ ಮೂರರಲ್ಲಿ 16 ಘಟ್ಟ ಪ್ರವೇಶಿಸಿದೆ. 2014ರ ವಿಶ್ವಕಪ್ ಟೂರ್ನಿಯ ಕ್ವಾರ್ಟರ್‌ಫೈನಲ್ ಮತ್ತು 2018ರ ಟೂರ್ನಿಯ ಸೆಮಿಫೈನಲ್‌ಗೆ ಬೆಲ್ಜಿಯಂ ಪ್ರವೇಶಿಸಿತ್ತು.

ಸಿಯಾಟಲ್‌ನಲ್ಲಿ ಗುರುವಾರ ನಡೆದ ಫಿಫಾ ವಿಶ್ವಕಪ್ 32ರ ಘಟ್ಟದ ಪಂದ್ಯದಲ್ಲಿ ಸೆನೆಗಲ್ ಎದುರು ಬೆಲ್ಜಿಯಂ ಗೆಲುವಿಗೆ ಕಾರಣರಾದ ಯುವರಿ ಟೆಲೆಮನ್ಸ್ ಮತ್ತು ರೊಮೆಲು ಲುಕಾಕು —ಎಎಫ್‌ಪಿ ಚಿತ್ರ

ಮೆಸ್ಸಿ ಪಡೆಗೆ ಕೇಪ್ ವರ್ಡ್ ಸವಾಲು

ಮಯಾಮಿ: ಫಿಫಾ ವಿಶ್ವಕಪ್ ಟೂರ್ನಿಯಲ್ಲಿ ಇದೇ ಮೊದಲ ಸಲ ಆಡುತ್ತಿರುವ ಕೇಪ್ ವರ್ಡ್ ಎಂಬ ಪುಟ್ಟ ದೇಶದ ತಂಡವು ಶುಕ್ರವಾರ ತಡರಾತ್ರಿ ಹಾಲಿ ಚಾಂಪಿಯನ್ ಅರ್ಜೆಂಟೀನಾ ತಂಡವನ್ನು ಎದುರಿಸಲಿದೆ.

32ರ ಘಟ್ಟದ ಪಂದ್ಯದಲ್ಲಿ ಲಯೊನೆಲ್ ಮೆಸ್ಸಿ ಅವರ ಕಾಲ್ಚಳವನ್ನು ತಡೆಯುವಲ್ಲಿ ವರ್ಡ್ ತಂಡದ 'ಸ್ಟಾರ್' ಗೋಲ್‌ಕೀಪರ್ ವೋಜಿನಾ ಯಶಸ್ವಿಯಾಗುವರೇ ಎಂಬ ಕುತೂಹಲ ಈಗ ಮೂಡಿದೆ.

ಗುಂಪು ಹಂತದಲ್ಲಿ ಬಲಿಷ್ಠ ಸ್ಪೇನ್ ಮತ್ತು ಉರುಗ್ವೆ ತಂಡಗಳ ಎದುರು ವರ್ಡ್ ಬಳಗವು ಡ್ರಾ ಮಾಡಿಕೊಂಡಿತ್ತು. ಅದರಿಂದಾಗಿ ಅಪಾರ ಆತ್ಮವಿಶ್ವಾಸದಲ್ಲಿದೆ. ತನ್ನ ಗೆಲುವಿನ ಓಟ ಮುಂದುವರಿಸಬೇಕಾದರೆ ಅಗ್ರಮಾನ್ಯ ತಂಡವನ್ನು ಅರ್ಜೆಂಟೀನಾಗೆ ಸೋಲಿನ ಆಘಾತ ನೀಡಬೇಕು.

ಲಯೊನೆಲ್ ಮೆಸ್ಸಿ

ಆದರೆ ವಿಶ್ವಕಪ್ ಇತಿಹಾಸದಲ್ಲಿ ಅತ್ಯಂತ ಹೆಚ್ಚು ಗೋಲು ಗಳಿಸಿರುವ ದಿಗ್ಗಜ ಮೆಸ್ಸಿಗೆ ತಡೆಯೊಡ್ಡುವ ದೊಡ್ಡ ಸವಾಲು ವರ್ಡ್ ಮುಂದಿದೆ. ಈ ಪಂದ್ಯವು ಮೆಸ್ಸಿ ಮತ್ತು ವೋಜಿನಾ ಅವರ ನಡುವಿನ ಪೈಪೋಟಿ ಎಂದೇ ಬಿಂಬಿಸಲಾಗಿದೆ.

ಪಂದ್ಯಗಳು

ಸ್ವಿಟ್ಜರ್ಲೆಂಡ್	V/s	ಅಲ್ಜೀರಿಯಾ
ಶುಕ್ರವಾರ ಬೆಳಿಗ್ಗೆ 8.30		
ಆಸ್ಟ್ರಿಯಾ	V/s	ಈಜಿಪ್ಟ್
ಶುಕ್ರವಾರ ರಾತ್ರಿ 11.30		
ಅರ್ಜೆಂಟೀನಾ	V/s	ಕೇಪ್ ವರ್ಡ್
ಶನಿವಾರ ಬೆಳಿಗ್ಗೆ 3.30		

ಲೈವ್: ಯುನೈಟೆಡ್ 8 ಸ್ಪೋರ್ಟ್ಸ್, ಜೀ5 ಆ್ಯಪ್

ಮೊದಲ ಟಿ20 ಮಳೆಯ ಪಾಲು

ಚೆಸ್ಟರ್–ಲಿ–ಸ್ಟ್ರೀಟ್, (ಯುಕೆ), (ಪಿಟಿಐ): ಇಂಗ್ಲೆಂಡ್ ಎದುರಿನ ಟಿ20 ಸರಣಿಯ ಮೊದಲ ಪಂದ್ಯ ಬುಧವಾರ ಮಳೆಯ ಪಾಲಾಯಿತು. ಆದರೆ ಅಭಿಷೇಕ್ ಶರ್ಮಾ ಅವರ ಬಿರುಸಿನ 59 ರನ್‌ಗಳು ಮತ್ತು ನಾಯಕ ಶ್ರೇಯಸ್ ಅಯ್ಯರ್ ಅವರ ಸಂಯಮದ ಅರ್ಧಶತಕ (68 ರನ್) ಭಾರತ ತಂಡಕ್ಕೆ ಸಕಾರಾತ್ಮಕ ಅಂಶಗಳಾದವು.

ಕೆಲ ದಿನಗಳ ಹಿಂದಷ್ಟೇ ಐರ್ಲೆಂಡ್‌ಗೆ 0–2 ರಿಂದ ಸರಣಿ ಸೋತಿದ್ದ ಭಾರತ ಇಲ್ಲೂ ಉತ್ತಮ ಆರಂಭ ಮಾಡಿರಲಿಲ್ಲ. 3 ಓವರುಗಳಲ್ಲಿ 15 ರನ್‌ಗಳಾಗುವಷ್ಟರಲ್ಲಿ 2 ವಿಕೆಟ್ ಕಳೆದುಕೊಂಡಿತ್ತು. ಆದರೆ ಈ ಬಾರಿ ಜೊತೆಯಾಟಗಳ ಮೂಲಕ ಚೇತರಿಸಿಕೊಂಡು ಸವಾಲಿನ ಮೊತ್ತ ಪೇರಿಸುವಲ್ಲಿ ಯಶಸ್ವಿಯಾಯಿತು.

ಆದರೆ ಇನಿಂಗ್ಸ್ ವಿರಾಮದ ನಂತರ ಜೋರಾಗಿ ಮಳೆ ಸುರಿದು ಪಂದ್ಯ ರದ್ದು ಗೊಳಿಸಲಾಯಿತು. ಐದು ಪಂದ್ಯಗಳ ಸರಣಿಯ ಎರಡನೇ ಪಂದ್ಯ ಇದೇ ಶನಿವಾರ ಮ್ಯಾಂಚೆಸ್ಟರ್‌ನಲ್ಲಿ ನಡೆಯಲಿದೆ.

ಕನಸಿನ ಓಟ ಮುಂದುವರಿಸಿದ ಅಮೆರಿಕ

ಸ್ಯಾನ್ ಫ್ರಾನ್ಸಿಸ್ಕೊ (ಎಎಫ್‌ಪಿ/ ಎಪಿ): ಅಮೆರಿಕದ ತಾರಾ ವರ್ಚಸ್ಸಿನ ಆಟಗಾರ ಫೊಲಾರಿನ್ ಬಾಲೋಗನ್ ಅವರು ಗೋಲು ಹೊಡೆದರು. ಆದರೆ ಒರಟು ಆಟಕ್ಕೆ ಕೆಂಪುಕಾರ್ಡ್ ದರ್ಶನ ಕೂಡ ಪಡೆದರು. ಇದೆಲ್ಲದರ ನಡುವೆ ಜಂಟಿ ಆತಿಥೇಯ ಅಮೆರಿಕ ತಂಡ ಬುಧವಾರ ನಡೆದ 32ರ ಸುತ್ತಿನ ಪಂದ್ಯದಲ್ಲಿ 2–0 ಗೋಲುಗಳಿಂದ ಬೋಸ್ನಿಯಾ ಮತ್ತು ಹರ್ಜೆಗೋವಿನಾ ತಂಡವನ್ನು ಸೋಲಿಸಿ ಪ್ರಿಕ್ವಾರ್ಟರ್‌ಫೈನಲ್ ತಲುಪಿತು.

ವಿಶ್ವಕಪ್ ಇತಿಹಾಸದಲ್ಲೇ ಎರಡನೇ ಬಾರಿ ಮತ್ತು ಕಾಲು ಶತಮಾನದ ನಂತರ ಅಮೆರಿಕ ತಂಡ ನಾಕೌಟ್ ಪಂದ್ಯದಲ್ಲಿ ಜಯಗಳಿಸಿತು. ಈ ತಂಡವು ಸೋಮವಾರ ಸಿಯಾಟಲ್‌ನಲ್ಲಿ ನಡೆಯಲಿರುವ 16ರ ಸುತ್ತಿನ ಪಂದ್ಯದಲ್ಲಿ ಬೆಲ್ಜಿಯಂ ತಂಡವನ್ನು ಎದುರಿಸಲಿದೆ.

ವಿರಾಮದ ಸೀಟಿ ಊದಲು ಕೆಲವೇ ಕ್ಷಣಗಳಿರುವಾಗ ಬಾಲೋಗನ್ ಅಮೆರಿಕ ತಂಡಕ್ಕೆ ಮುನ್ನಡೆ ಒದಗಿಸಿ, ಪ್ರೇಕ್ಷಕರಲ್ಲಿ ಹುಚ್ಚೆಬ್ಬಿಸಿದರು. ಆದರೆ 64ನೇ ನಿಮಿಷ ಚೆಂಡಿನ ಮೇಲೆ ಹಿಡಿತ ಪಡೆಯುವ ಯತ್ನದಲ್ಲಿ ಅವರು ಬೋಸ್ನಿಯಾದ ರಕ್ಷಣೆ ಆಟಗಾರ ತಾರಿಕ್ ಮುಹರೆಮೋವಿಚ್ ಅವರ ಪಾದ ಮತ್ತು ಕಾಲಿನ ಮೇಲೆ ಬೂಟು ಇಟ್ಟು ಬೀಳಿಸಿದ್ದಕ್ಕೆ ಹೊರನಡೆಯಬೇಕಾಯಿತು. ಇದಕ್ಕಾಗಿ ವಿಎಆರ್ (ವಿಡಿಯೊ ಅಸಿಸ್ಟೆಂಟ್ ರೆಫ್ರಿ) ನೆರವು ಪಡೆಯಲಾಯಿತು.

ಅಮೆರಿಕ ತಂಡ 10 ಆಟಗಾರರಿಗೆ ಸೀಮಿತಗೊಂಡರೂ, ಗೆಲುವಿನ ಅಂತರ ಹೆಚ್ಚಿಸುವಲ್ಲಿ ಯಶಸ್ವಿಯಾಯಿತು. 82ನೇ ನಿಮಿಷ ಮಾಲಿಕ್ ಟಿಲ್ಮನ್ ಅವರ ಫ್ರೀಕಿಕ್‌ನಲ್ಲಿ 'ಬಿಲ್ಲಿನ ಆಕಾರದಲ್ಲಿ' (ಕರ್ವ್ಡ್) ಸಾಗಿದ ಚೆಂಡು ಗೋಲಾಯಿತು.

ಅಮೆರಿಕ	ಬೋಸ್ನಿಯಾ
2	0

ಬೋಸ್ನಿಯಾ ಆಕ್ರಮಣದ ಆಟಕ್ಕೆ ಒತ್ತು ನೀಡಲಿಲ್ಲ. ಹೀಗಾಗಿ ಅಮೆರಿಕದ ರಕ್ಷಣೆ ಆಟಗಾರರು ಮಧ್ಯದ ಗೆರೆಯ ಹತ್ತಿರ ಸುಳಿದಾಡತೊಡಗಿದರು. ಆದರೆ ಆರಂಭದಲ್ಲಿ ಉತ್ತಮ ಎನಿಸುವಂಥ ಅವಕಾಶಗಳು ದೊರೆತಿದ್ದು ಬೋಸ್ನಿಯಾಕ್ಕೆ. ಇಂಥ ಒಂದು ಯತ್ನದಲ್ಲಿ ನಾಯಕ ಎರ್ಮಾದಿನ್ ಡೆಮಿರೊವಿಚ್ ಅವರ ಹೊಡೆತ ಸೀದಾ ಅಮೆರಿಕದ ಗೋಲ್ ಕೀಪರ್ ಮ್ಯಾಟ್ ಫ್ರೀಸ್ ಕೈಸೇರಿತು.

ಫೊಲಾರಿನ್ ಬಾಲೋಗನ್

ಅಮೆರಿಕ ನಿಧಾನವಾಗಿ ಒತ್ತಡ ಹೇರತೊಡಗಿತು. ಬಾಲೋಗನ್ ಅವರನ್ನು ಗೋಲಿನ ಬಳಿ ಅಮರ್ ಡೆಡಿಕ್ ಒರಟಾಗಿ ತಡೆದರು. ಆದರೆ ಅವರ ಪೆನಾಲ್ಟಿ ಮನವಿಗೆ ರೆಫ್ರಿ ಒಪ್ಪಲಿಲ್ಲ. ಬಾಲೋಗನ್ ಮತ್ತೊಂದು ಯತ್ನದಲ್ಲಿ ಗೋಲು ಹೊಡೆದರೂ ಅದು 'ಆಫ್‌ಸೈಡ್' ಆಯಿತು. ಆದರೆ ವಿರಾಮಕ್ಕೆ ಕೆಲವೇ ಕ್ಷಣಗಳ ಮೊದಲು ಟಿಲ್ಮನ್ ಪಾಸ್‌ನಲ್ಲಿ ಅವರು ಗೋಲು ಹೊಡೆದು ಅಭಿಮಾನಿಗಳಲ್ಲಿ ಸಂಚಲನ ಮೂಡಿಸಿದರು. ಸೀಟಿ ಊದುವ ಸೆಕೆಂಡುಗಳ ಮೊದಲು ಆರು ಯಾರ್ಡ್ ದೂರದಿಂದ ಅವರು ಒದ್ದ ಚೆಂಡು ಅಡ್ಡಪಟ್ಟಿಗೆ ತಾಗಿ ಹೊರಹೋಯಿತು.

ವಿರಾಮದ ನಂತರ ಬೋಸ್ನಿಯಾದ ಕೋಚ್ ಸೆರ್ಗೆಯಿ ಬಾರ್ಬರೇಝ್ ಮೂರು ಬದಲಾವಣೆಗಳನ್ನು ತಂದು ಯುವ ಆಟಗಾರರನ್ನು ಕಣಕ್ಕಿಳಿಸಿದರು. ಆದರೆ ಇದರಿಂದ ಹೆಚ್ಚಿನ ಪ್ರಯೋಜನವಾಗಲಿಲ್ಲ.

ಪಾನೀಯ ವಿರಾಮದ ವೇಳೆ ಅಮೆರಿಕದ ಕೋಚ್ ಮೌರಿಸಿಯೊ ಪೊಚೆಟ್ಟಿನೊ ಆಟಗಾರರಲ್ಲಿ ಧೈರ್ಯ ತುಂಬಿದರು. ಇದಾಗಿ ಕೆಲವೇ ಕ್ಷಣಗಳ ನಂತರ ಪುಲಿಸೆಕ್ ಗೋಲು ಯತ್ನ ಆಫ್‌ಸೈಡ್ ಆಯಿತು. 82ನೇ ನಿಮಿಷ ಬಾಕ್ಸ್ ಅಂಚಿನಿಂದ ಕಳುಹಿಸಿದ ಫ್ರೀಕಿಕ್‌ನಲ್ಲಿ ಚೆಂಡು ಬೋಸ್ನಿಯಾ ಗೋಲ್‌ಕೀಪರ್ ನಿಕೊಲಾ ವಾಸಿಲಿ ಅವರನ್ನು ವಂಚಿಸಿ ಗೋಲಿನೊಳಕ್ಕೆ ಸೇರಿತು. ಸ್ಟಾಪೇಜ್ ಅವಧಿಯ ಕೊನೆಯಲ್ಲಿ ಬೋಸ್ನಿಯಾದ ಸಬ್‌ಸ್ಟಿಟ್ಯೂಟ್ ಎರ್ಮಿನ್ ಮಹಮಿಕ್ ಅವರ ಯತ್ನ ಇಂಚು ಅಂತರದಲ್ಲಿ ವೈಡ್ ಆಯಿತು.

BANGALORE: Indiranagar: 283, 100 Feet Road, HAL 2nd Stage, Ph: 8951914621 | **Jayanagar:** 3rd Block, 11th Main Road, Ph: 8951914620 | **Malleshwaram:** 116/5, 11th Cross, Margosa Road, Ph: 8049703080 | **Banashankari 3rd stage:** 298, 7th Block, 100ft Ring Road, Ph: 8904431212 | **HSR Layout:** No. 818, 27th Main Road, 1st Sector, Ph: 9108924286 | **Kammanahalli:** 401/B, Kammanahalli Main Road, HRBR Layout 2nd Block, Near Tanishq Showroom, Ph: 8046014779 | **Phoenix Mall of Asia:** S-10, Second Floor, Ph: 8068572691 | **Sarjapur:** No. 60, Plot No 1, Opp Wipro Gate, Ph: 9591934592 | **Phoenix Market City:** G – 28, Lower Gr. Floor, Mahadevpura, Nr, Krishnarajapura, Ph: 6366944404 | **HOSUR:** Plot No. 20 (P), Electrical and Electronic Estate, Near Anand Bhavan Hotel, Ph 9884512789

ಶಿವಮೊಗ್ಗ ಯೋಧಾಸ್‌ಗೆ ಸುಲಭ ಜಯ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ನಾಯಕ ಸ್ಮರಣ್ ಆರ್. ಮತ್ತು ಅನೀಶ್ ಕೆ.ವಿ. ಅವರ ಶತಕದ ಜೊತೆಯಾಟದ (125 ರನ್, 75 ಎ) ಬಲದಿಂದ ಶಿವಮೊಗ್ಗ ಯೋಧಾಸ್ ತಂಡವು 7 ವಿಕೆಟ್‌ಗಳಿಂದ ಕೋಸ್ಟಲ್ ಕಿಂಗ್ಸ್ ಮಂಗಳೂರು ತಂಡವನ್ನು ಮಣಿಸಿತು. ಈ ಗೆಲುವಿನೊಂದಿಗೆ ಶಿವಮೊಗ್ಗ ತಂಡವು ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿತು.

ಗುರುವಾರ ಎರಡನೇ ಪಂದ್ಯದಲ್ಲಿ ಮಂಗಳೂರು ಒಡ್ಡಿದ 163 ರನ್‌ಗಳ ಗುರಿ ಬೆನ್ನತ್ತಿದ ಶಿವಮೊಗ್ಗ ತಂಡವು 18.2 ಓವರ್‌ಗಳಲ್ಲಿ 165 ರನ್ ಗಳಿಸಿ ಸುಲಭವಾಗಿ ಜಯಿಸಿತು. ಅನೀಶ್ (ಔಟಾಗದೇ 76 ರನ್, 46 ಎ, 4X8, 6X2) ಮತ್ತು ಸ್ಮರಣ್ (ಔಟಾಗದೇ 53 ರನ್, 32 ಎ, 4X6, 6X2) ಅರ್ಧಶತಕ ಗಳಿಸಿ ಜಯ ತಂದು ಕೊಟ್ಟರು.

ಇದಕ್ಕೂ ಮುನ್ನ ಬ್ಯಾಟಿಂಗ್ ಮಾಡಿದ ಮಂಗಳೂರು ತಂಡದ ಆರಂಭ ಉತ್ತಮವಾಗಿರಲಿಲ್ಲ. ನಾಯಕ ಕರುಣ್ ನಾಯರ್, ಆಲ್‌ರೌಂಡರ್ ಶ್ರೇಯಸ್ ಗೋಪಾಲ್ ಖಾತೆ ತೆರೆಯದೆ ನಿರ್ಗಮಿಸಿದರು. ಆರಂಭಿಕ ಆಟಗಾರ ನಿಕಿನ್ ಜೋಸ್ (51 ರನ್, 41 ಎ) ಅರ್ಧಶಕ ಗಳಿಸಿ ತಂಡ ಅಲ್ಪ ಮೊತ್ತಕ್ಕೆ ಕುಸಿಯದಂತೆ ನೋಡಿಕೊಂಡರು. ಸೂರಜ್ ಅಹುಜಾ (39 ರನ್, 19 ಎ) ಮಿಂಚಿದರು.

ಅನೀಶ್ ಕೆ.ವಿ

ಸಂಕ್ಷಿಪ್ತ ಸ್ಕೋರು: ಕೋಸ್ಟಲ್ ಕಿಂಗ್ಸ್ ಮಂಗಳೂರು: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 162 (ನಿಕಿನ್ ಜೋಸ್ 51, ಸೂರಜ್ ಅಹುಜಾ 39; ಶ್ರೀಷ ಆಚಾರ್ 23ಕ್ಕೆ2, ಧನುಷ್ ಗೌಡ 33ಕ್ಕೆ 2). ಶಿವಮೊಗ್ಗ ಯೋಧಾಸ್: 18.2 ಓವರ್‌ಗಳಲ್ಲಿ 3 ವಿಕೆಟ್‌ಗೆ 165 (ಅನೀಶ್ ಕೆ.ವಿ ಔಟಾಗದೆ 76, ಸ್ಮರಣ್ ಆರ್. ಔಟಾಗದೆ 53; ನಿಶ್ಚಿತ್ ಪೈ 35ಕ್ಕೆ 2). ಪಂದ್ಯದ ಆಟಗಾರ: ಅನೀಶ್ ಕೆ.ವಿ

ಇಂದಿನ ಪಂದ್ಯಗಳು

ಗುಲ್ಬರ್ಗ ಮಿಸ್ಟಿಕ್ಸ್–ಮೈಸೂರು ವಾರಿಯರ್ಸ್ (ಮಧ್ಯಾಹ್ನ 2)

ಹುಬ್ಬಳ್ಳಿ ಟೈಗರ್ಸ್–ಬೆಂಗಳೂರು ಬ್ಲಾಸ್ಟರ್ಸ್ (ರಾತ್ರಿ 7)

ಮಳೆಯಿಂದ ಪಂದ್ಯ ರದ್ದು

ಹುಬ್ಬಳ್ಳಿ ಟೈಗರ್ಸ್ ಮತ್ತು ಮೈಸೂರು ವಾರಿಯರ್ಸ್ ನಡುವಿನ ಪಂದ್ಯವು ಮಳೆಯಿಂದಾಗಿ ರದ್ದಾಯಿತು. ಎರಡೂ ತಂಡಗಳಿಗೆ ತಲಾ 1 ಅಂಕ ಹಂಚಿಕೆ ಮಾಡಲಾಯಿತು.

ಹುಬ್ಬಳ್ಳಿ ತಂಡವು ಐದು ಓವರ್‌ಗಳಲ್ಲಿ 2 ವಿಕೆಟ್‌ಗೆ 27 ರನ್ ಗಳಿಸಿದ್ದಾಗ ಮಳೆ ಸುರಿಯಿತು. ಸಿಬ್ಬಂದಿ ಪಿಚ್ ಮತ್ತು ಹೊರಾಂಗಣವನ್ನು ಟಾರ್ಪಲ್‌ನಿಂದ ಮುಚ್ಚಿದರು.

ಮಳೆ ನಿಂತ ಬಳಿಕ ಎಂಟು ಓವರ್ ನಿಗದಿಪಡಿಸಿ ಮತ್ತೆ ಪಂದ್ಯ ಆರಂಭಿಸಲಾಯಿತು. ಹುಬ್ಬಳ್ಳಿ ತಂಡವು 8 ಓವರ್‌ಗಳಲ್ಲಿ 6 ವಿಕೆಟ್‌ಗೆ 91 ರನ್ ಗಳಿಸಿತು. ಹುಬ್ಬಳ್ಳಿ ತಂಡದ ಅಭಿನವ್ ಮನೋಹರ್ (46 ರನ್, 12ಎ, 4X2, 6X6) ಅಬ್ಬರಿಸಿದರು.

ಮೈಸೂರು ತಂಡವು ಬ್ಯಾಟಿಂಗ್ ಆರಂಭಿಸುವ ಮುನ್ನವೇ ಮತ್ತೆ ಮಳೆ ಸುರಿದಿದ್ದರಿಂದ ಪಂದ್ಯವನ್ನು ರದ್ದುಪಡಿಸಲಾಯಿತು.

ಎರಡನೇ ಸುತ್ತಿಗೆ ತಾನ್ಯಾ, ಆಕರ್ಷಿ

ಮರ್ಖಮ್ (ಪಿಟಿಐ): ಫಿಟ್ನೆಸ್ ಸಮಸ್ಯೆ ಕಾರಣದಿಂದ ಕಿದಂಬಿ ಶ್ರೀಕಾಂತ್ ಅವರು ಕೆನಡಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮೊದಲ ಸುತ್ತಿನ ಪಂದ್ಯದ ಆರಂಭದಲ್ಲೇ ಹಿಂದೆ ಸರಿದರು. ತಾನ್ಯಾ ಹೇಮಂತ್ ಮತ್ತು ಆಕರ್ಷಿ ಕಶ್ಯಪ್ ಅವರು ಮಹಿಳೆಯರ ಸಿಂಗಲ್ಸ್ ಎರಡನೇ ಸುತ್ತು ತಲುಪಿದರು.

ಬುಧವಾರ ನಡೆದ ಪಂದ್ಯದಲ್ಲಿ, 33 ವರ್ಷ ವಯಸ್ಸಿನ ಶ್ರೀಕಾಂತ್ ಅವರು ಪ್ಯಾರಿಸ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಲೀ ಝಿ ಜಿಯಾ (ಮಲೇಷ್ಯಾ) ಎದುರು ಮೊದಲ ಗೇಮ್‌ನಲ್ಲಿ 10–11 ರಿಂದ ಹಿಂದಿದ್ದಾಗ ಪಂದ್ಯ ಬಿಟ್ಟುಕೊಟ್ಟರು.

ಸೂಪರ್ 300 ಶ್ರೇಣಿಯ ಈ ಟೂರ್ನಿಯಲ್ಲಿ ಆಕರ್ಷಿ 21–14, 21–12 ರಿಂದ ಫ್ರಾನ್ಸ್‌ನ ಅನ್ನಾ ತತ್ರನೋವಾ ಅವರನ್ನು ಸೋಲಿಸಿದರು.

ತಾನ್ಯಾ 21–16, 21–18 ರಿಂದ ಅಮೆರಿಕದ ದಿಶಾ ಗುಪ್ತಾ ಅವರನ್ನು ಸೋಲಿಸಿದರು.

ಉಳಿದಂತೆ ಭಾರತಕ್ಕೆ ನಿರಾಶೆ ಕಾದಿತ್ತು. ಒಂಬತ್ತು ಮಂದಿ ಮೊದಲ ಸುತ್ತನ್ನು ದಾಟಲು ವಿಫಲರಾದರು. ಐದನೇ ಶ್ರೇಯಾಂಕದ ದೇವಿಕಾ ಸಿಹಾಗ್, ರಕ್ಷಿತಾ ರಾಮರಾಜ್, ಶ್ರೀಯಾಂಶಿ ವಲಿಶೆಟ್ಟಿ, ಅನ್ಮೋಲ್ ಖಾರ್ಬ್, ಪುರುಷರ ಸಿಂಗಲ್ಸ್‌ನಲ್ಲಿ ಸನೀತ್ ದಯಾನಂದ, ಶಂಕರ್ ಸುಬ್ರಮಣಿಯನ್ ಇವರಲ್ಲಿ ಒಳಗೊಂಡಿದ್ದಾರೆ. ಪುರುಷರ ಡಬಲ್ಸ್‌ನಲ್ಲಿ ಅಚ್ಯುತಾದಿತ್ಯ ರಾವ್ ದೊಡ್ಡವರಪು– ಅರ್ಜುನ್ ರೆಡ್ಡಿ ಕೂಡ ಹೊರಬಿದ್ದರು.

ಗರಿಷ್ಠ 15 ಅಂಕ ನಿಯಮ ಜಾರಿಗೆ

ನವದೆಹಲಿ (ಪಿಟಿಐ): ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ ಪರಿಷ್ಕರಣೆ ಮಾಡಿರುವ ಪಾಯಿಂಟ್ ಪದ್ಧತಿಯನ್ನು ಭಾರತ ಬ್ಯಾಡ್ಮಿಂಟನ್ ಸಂಸ್ಥೆಯು ದೇಶಿ ಮತ್ತು ರಾಷ್ಟ್ರೀಯ ಟೂರ್ನಿಗಳಲ್ಲಿ ಜಾರಿಗೊಳಿಸಲಿದೆ.

ಪ್ರತಿ ಗೇಮ್ ಗರಿಷ್ಠ 15 ಅಂಕಗಳಿಗೆ ಸೀಮಿತಗೊಳಿಸಿದೆ. ಈ ಮೊದಲು 21 ಅಂಕ ನೀಡಲಾಗುತ್ತಿತ್ತು. ಈ ನಿಯಮವನ್ನು ಎರ್ನಕುಲಂ ನಲ್ಲಿ ಜುಲೈ 7ರಿಂದ 14ರವರೆಗೆ ನಡೆಯಲಿರುವ ಅಕಿಲ ಭಾರತ ಸೀನಿಯರ್ ರ‍್ಯಾಂಕಿಂಗ್ ಟೂರ್ನಿಯಲ್ಲಿ ಈ ನಿಯಮವನ್ನು ಜಾರಿ ಮಾಡಲಾಗುವುದು. ಹೊಸ ನಿಯಮದಡಿಯಲ್ಲಿ ಬೆಸ್ಟ್ ಆಫ್ ತ್ರೀ ರ‍್ಯಾಲಿ ಪಾಯಿಂಟ್ ಸ್ಕೋರಿಂಗ್ ಜಾರಿಯಾಗಲಿದೆ. 14–14ರ ನಂತರ ಕಡ್ಡಾಯವಾಗಿ ಎರಡು ಅಂಕಗಳ ಮುನ್ನಡೆ ಆಧಾರದಲ್ಲಿ ಫಲಿತಾಂಶ ನಿರ್ಧಾರವಾಗುವುದು. ಮುಂದಿನ ವರ್ಷದಿಂದ ಬಿಡಬ್ಲ್ಯುಎಫ್ ಈ ನಿಯಮವನ್ನು ಜಾರಿ ಮಾಡುವ ಸಾಧ್ಯತೆ ಇದೆ.

ಶ್ರೀಲಂಕಾ ಎ ನೆರವಿಗೆ ಸಹನ್

ಚೆನ್ನೈ: ನಾಯಕ ಸಹನ್ ಅರಚ್ಚಿಗೆ (ಔಟಾಗದೇ 83;148ಎ) ಅವರ ಬ್ಯಾಟಿಂಗ್ ನೆರವಿನಿಂದ ಶ್ರೀಲಂಕಾ ಎ ತಂಡ ಎರಡನೇ 'ಟೆಸ್ಟ್' ಪಂದ್ಯದ ಮೊದಲ ದಿನವಾದ ಗುರುವಾರ ಭಾರತ ಎ ತಂಡದ ವಿರುದ್ಧ 5 ವಿಕೆಟ್‌ಗೆ 288 ರನ್‌ಗಳ ಗೌರವದ ಮೊತ್ತ ಗಳಿಸಿದೆ.

ಟಾಸ್ ಗೆದ್ದ ಭಾರತ ಎ ತಂಡವು ಫೀಲ್ಡಿಂಗ್ ಆಯ್ದುಕೊಂಡಿತು. ಪವಂತ ವೀರಸಿಂಘೆ (39;67ಎ) ಮತ್ತು ಸೋಹನ್ ಡಿ ಲಿವೇರಾ (28;50ಎ) ಅವರು ಮೊದಲ ವಿಕೆಟ್‌ಗೆ 53 ರನ್ ಗಳಿಸಿ ಉತ್ತಮ ಆರಂಭ ಒದಗಿಸಿದರು. ನಂತರ ಬಂದ ನುವನಿದು ಫೆರ್ನಾಂಡೊ (44; 65ಎ), ಅಶೆನ್ ಬಂಡಾರ (34; 63ಎ) ಮತ್ತು ಅಂಜಲಾ ಬಂಡಾರ (42; 96ಎ) ಅವರೂ ಉಪಯುಕ್ತ ಕಾಣಿಕೆ ನೀಡಿದರು. ಸಹನ್ ಮತ್ತು ಅಂಜಲಾ ಅವರು ಐದನೇ ವಿಕೆಟ್‌ಗೆ 99 ರನ್ ಸೇರಿಸಿದರು. ಆತಿಥೇಯ ತಂಡದ ಪರ ಸಾರಾಂಶ್ ಜೈನ್ ಮತ್ತು ಯಶ್ ಠಾಕೂರ್ ತಲಾ ಎರಡು ವಿಕೆಟ್ ಕಬಲಿಸಿದರು.

ಸಂಕ್ಷಿಪ್ತ ಸ್ಕೋರ್: ಶ್ರೀಲಂಕಾ ಎ: 85 ಓವರ್‌ಗಳಲ್ಲಿ 5ಕ್ಕೆ 288 (ಪವಂತ ವೀರಸಿಂಘೆ 39, ನುವನಿದು ಫೆರ್ನಾಂಡೊ 44, ಅಶೆನ್ ಬಂಡಾರ 34, ಅಂಜಲಾ ಬಂಡಾರ 42; ಸಾರಾಂಶ್ ಜೈನ್ 77ಕ್ಕೆ 2, ಯಶ್ ಠಾಕೂರ್ 32ಕ್ಕೆ 2)

ಲಂಕಾದಲ್ಲಿ ಟೆಸ್ಟ್ ಆಡಲಿರುವ ಭಾರತ

ಕೊಲಂಬೊ (ಎಎಫ್‌ಪಿ): ಭಾರತ ಕ್ರಿಕೆಟ್ ತಂಡವು ಆಗಸ್ಟ್ ತಿಂಗಳಲ್ಲಿ ಶ್ರೀಲಂಕಾದಲ್ಲಿ ಎರಡು ಪಂದ್ಯಗಳ ಟೆಸ್ಟ್ ಸರಣಿ ಆಡಲಿದೆ ಎಂದು ಶ್ರೀಲಂಕಾ ಕ್ರಿಕೆಟ್ ಗುರುವಾರ ಪ್ರಕಟಿಸಿದೆ. ಒಂಬತ್ತು ವರ್ಷಗಳಲ್ಲಿ ಇದೇ ಮೊದಲ ಬಾರಿ ಶ್ರೀಲಂಕಾದಲ್ಲಿ ಭಾರತ ತಂಡವು ಟೆಸ್ಟ್ ಸರಣಿ ಆಡಲಿದೆ.

ಸರಣಿಯ ಮೊದಲ ಪಂದ್ಯ ಆಗಸ್ಟ್ 15 ರಿಂದ ಗಾಲೆ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯಲಿದೆ. ಎರಡನೇ ಪಂದ್ಯ 23 ರಿಂದ ಕೊಲಂಬೊದ ಸಿಂಹಳೀಸ್ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ನಡೆಯಲಿದೆ ಎಂದು ತಿಳಿಸಿದೆ.

ಈ ಸರಣಿಯು 2025–2027ರ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಆವೃತ್ತಿಯ ಭಾಗವಾಗಿರಲಿದೆ ಎಂದೂ ಮಂಡಳಿ ತಿಳಿಸಿದೆ.

ಒಲಿಂಪಿಯನ್ ಎಂ.ಎಂ. ಸೋಮಯ್ಯ ವಿಶ್ವಾಸ

ಹಾಕಿ ಕ್ರೀಡೆಗೆ ಮಹತ್ವದ ವರ್ಷ

ಬೆಂಗಳೂರು: ಭಾರತದ ಹಾಕಿ ತಂಡಗಳಿಗೆ ಈ ವರ್ಷವು ಬಹಳ ಮಹತ್ವದ್ದಾಗಿದೆ. ಇದೇ ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆದ್ದರೆ ಎರಡು ವರ್ಷಗಳ ನಂತರ ನಡೆಯುವ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ಗೆ ನೇರ ಅರ್ಹತೆ ಲಭಿಸುವುದು ಖಚಿತ. ಈ ಸಾಧನೆಯನ್ನು ಭಾರತ ತಂಡವು ಮಾಡಲಿದೆ ಎಂದು ಒಲಿಂಪಿಯನ್ ಎಂ.ಎಂ. ಸೋಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

'ವಿಶ್ವ ಕ್ರೀಡಾ ಪತ್ರಕರ್ತರ ದಿನ'ದ ಅಂಗವಾಗಿ ಕರ್ನಾಟಕ ರಾಜ್ಯ ಬಿಲಿಯರ್ಡ್ಸ್ ಸಂಸ್ಥೆ ಆವರಣದಲ್ಲಿ ಬೆಂಗಳೂರು ಕ್ರೀಡಾ ಲೇಖಕರ ಸಂಘವು (ಎಸ್‌ಡಬ್ಲ್ಯುಎಬಿ) ಗುರುವಾರ ಆಯೋಜಿಸಿದ್ದ ಸಂವಾದದಲ್ಲಿ ಅವರು ಮಾತನಾಡಿದರು. 'ಭಾರತೀಯ ಹಾಕಿ: ಮಹತ್ವದ ವರ್ಷ, ದೊಡ್ಡ ಕನಸುಗಳು' ಎಂಬ ವಿಷಯದ ಕುರಿತು ಚರ್ಚೆ ನಡೆಯಿತು. 1980ರ ಮಾಸ್ಕೋ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದ ಭಾರತ ತಂಡದಲ್ಲಿ ಆಡಿದ್ದ ಎಂ.ಎಂ. ಸೋಮಯ್ಯ ಹಾಗೂ ಭಾರತ ಮಹಿಳಾ ಹಾಕಿ ತಂಡದ ಮುಖ್ಯ ಕೋಚ್ ಶೋರ್ಡ್ ಮರೀನ್ ಭಾಗವಹಿಸಿದರು.

'ವಿಶ್ವಕಪ್‌ಗೆ ನಮ್ಮ ತಂಡ ಪೂರ್ಣ ಸಾಮರ್ಥ್ಯದೊಂದಿಗೆ ಸಜ್ಜಾಗಿದೆ. ವಿಶ್ವ ರ‍್ಯಾಂಕಿಂಗ್‌ನಲ್ಲಿ ಪುರುಷರ ತಂಡವು 8ನೇ ಹಾಗೂ ಮಹಿಳೆಯರ ಬಳಗವು 9ನೇ ಸ್ಥಾನದಲ್ಲಿವೆ. ಆದ್ದರಿಂದ ಸಾಧ್ಯವಾದಷ್ಟು ಹೆಚ್ಚು ಪಂದ್ಯಗಳನ್ನು ಗೆಲ್ಲುವುದು ಮುಖ್ಯ. ಈ ಬಾರಿ ವಿಶ್ವಕಪ್‌ನ ಮಾದರಿಯಲ್ಲೂ ಬದಲಾವಣೆ ಆಗಿದ್ದು, ಮೂರು ಹಂತಗಳಲ್ಲಿ ಪಂದ್ಯಗಳು ನಡೆಯಲಿವೆ. ಹೀಗಾಗಿ ಪ್ರತಿಯೊಂದು ಪಂದ್ಯಕ್ಕೂ ಸಮಾನ ಮಹತ್ವ ನೀಡಬೇಕು' ಎಂದು ಸೋಮಯ್ಯ ಹೇಳಿದರು.

ಸಂವಾದ ಕಾರ್ಯಕ್ರಮದಲ್ಲಿ ಭಾರತದ ಹಾಕಿ ಕ್ರೀಡೆಯ ದಿಗ್ಗಜ ಎಂ.ಎಂ. ಸೋಮಯ್ಯ ಮಾತನಾಡಿದರು. ಭಾರತ ಮಹಿಳಾ ಹಾಕಿ ತಂಡದ ಮುಖ್ಯ ಕೋಚ್ ಶೋರ್ಡ್ ಮರೀನ್ ಹಾಜರಿದ್ದರು ಪ್ರಜಾವಾಣಿ ಚಿತ್ರ

ಆಟಗಾರನಾಗಿ ನಿವೃತ್ತಿಯಾದ ಬಳಿಕ 1989ರಲ್ಲಿ ಜರ್ಮನಿಯ ಬರ್ಲಿನ್‌ನಲ್ಲಿ ನಡೆದ ಚಾಂಪಿಯನ್ಸ್ ಟ್ರೋಫಿ ಟೂರ್ನಿಯ ಸಂದರ್ಭದಲ್ಲಿ ತಾವು ಕ್ರೀಡಾ ಪತ್ರಿಕೋದ್ಯಮದಲ್ಲೂ ಕೆಲಸ ಮಾಡಿದ್ದನ್ನು ಸೋಮಯ್ಯ ಇದೇ ವೇಳೆ ಸ್ಮರಿಸಿದರು.

ಎಸ್‌ಡಬ್ಲ್ಯುಎಬಿ ಅಧ್ಯಕ್ಷೆ ಮನುಜಾ ವೀರಪ್ಪ ಅವರು ಸಂವಾದ ನಿರ್ವಹಿಸಿದರು.

ಪ್ರಜಾವಾಣಿ ಪ್ರಾಪರ್ಟಿ ಕನೆಕ್ಟ್

ಕ್ಲಾಸಿಫೈಡ್ಸ್

ಸಹಕಾರದೊಂದಿಗೆ CHIYA'S ADVERTISING

RYAN EMERALD VALLEY

THE FUTURE OF LAND INVESTMENT

OWN LAND • BUILD WEALTH • SECURE YOUR FUTURE

PMV PROPMORE VENTURES Land - Legacy - Life

ಸಾಯಿಬಾಬಾ ವಿಗ್ರಹ | ಧ್ಯಾನ ಉದ್ಯಾನವನ | ಮಕ್ಕಳ ಆಟದ ಪ್ರದೇಶ | ಹೊರಾಂಗಣ ಜಿಮ್ | ಕೊಠಡಿಗಳು ಮತ್ತು ಔತಣಕೂಟ ಹಾಲ್ | ಅಡುಗೆಮನೆ ಮತ್ತು ಊಟ | ಬ್ಯಾಡ್ಮಿಂಟನ್ ಕೋರ್ಟ್ | ವಿಶ್ರಾಂತಿ ಕೊಠಡಿ ಮತ್ತು ಒಳಾಂಗಣ ಆಟಗಳು | ಗಜೆಬೊ ಮತ್ತು ಓಪನ್ ಪೆವಿಲಿಯನ್ | ಮೀನುಗಾರಿಕೆ ಡೆಕ್ | OHT ಮತ್ತು ಸಂಪ್ ಟ್ಯಾಂಕ್ | ಚಟುವಟಿಕೆ ಸ್ಥಳ | ಆಂಫಿಥಿಯೇಟರ್ | ಈಜುಕೊಳ | ಪಾರ್ಕಿಂಗ್ ಪ್ರದೇಶ | ಜಾಗಿಂಗ್ ಟ್ರ್ಯಾಕ್

ಸ್ಪಾಟ್‌ನಲ್ಲಿ ಪ್ಲಾಟ್ ಬುಕ್ ಮಾಡಿ ಮತ್ತು 4 ಖಚಿತ ಉಡುಗೊರೆಗಳನ್ನು ಉಚಿತವಾಗಿ ಪಡೆಯಿರಿ!

5 ಗ್ರಾಂ ಮೌಲ್ಯದ ಚಿನ್ನದ ನಾಣ್ಯ



₹1,00,000 ವರೆಗಿನ ಉಚಿತ ಗೃಹೋಪಯೋಗಿ ವಸ್ತುಗಳು*

PLC ಶುಲ್ಕಗಳ ಮೇಲೆ 50% ರಿಯಾಯಿತಿ*

₹3 ಲಕ್ಷದ ಮನೆ ನಿರ್ಮಾಣ ವೋಚರ್*

LIMITED PERIOD OFFER 3RD JULY - 5TH JULY ONLY

ಹತ್ತಿರದಲ್ಲಿ ಕಾರ್ಯತಂತ್ರದ ಸ್ಥಳೀಕರಣ

ಮುಂಬರುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ

www. propmoreventures.in

+91 9187 111 933

OWN A PLOT, OWN A FUTURE
STARTING FROM
₹33 LAKHS ONWARDS

WHATSAPP ಗಾಗಿ ಸ್ಕ್ಯಾನ್ ಮಾಡಿ

* ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ

ಕಲ್ಪವೃಕ್ಷ ಗ್ರೀನ್

PREMIUM SITES FOR SALE

A Landmark Opportunity to Own Premium Residential Plots Near Devanahalli
One of the Fastest Developing Areas in Bengaluru.

Near Devanahalli, North Bangalore

Plot Size Available : 30x30 | 30x40 | 30x50 | 40x60 | 50x80

NOW AT ₹1,356 PER SQFT

LOCATION ADVANTAGES

- Close to International Airport
- Just 5min Drive to IT/BT Park
- 1km away from Industrial Area
- Near Upcoming Metro Station
- Well Connected to Major Highways
- Near Railway Station

FOR BOOKING CONTACT 90355 97620 / 63615 47442

AMENITIES

- Entrance Arch
- Underground Savage Lines With Stp
- Children Play Area
- 24hrs Security
- Solar Street Light
- 60 ft Road & 35 - 40 ft Road
- Park With Jogging Track
- Underground Electricity
- Clubhouse or Party Hall
- Sanitary Connection

HILIVING ESTATES
THE LAND THAT KEEPS ON GIVING
N
W
S
ಸಕಲೇಶಪುರ
ಬೆಂಗಳೂರಿನಿಂದ ಕೇವಲ 3.5 ಗಂಟೆಗಳ ಪ್ರಯಾಣ.
ಮಳೆಗಾಲದ ರಿಯಾಯತಿ
ಖರೀದಿಯಿಂದ ಹಿಡಿದು ನಿರ್ವಹಣೆಯವರೆಗೆ, ಎಲ್ಲವನ್ನೂ ನಾವೇ ನೋಡಿಕೊಳ್ಳುತ್ತೇವೆ— ಆದ್ದರಿಂದ ನೀವು ನಿಮ್ಮ ಫಾರ್ಮ್ ಲ್ಯಾಂಡ್ ಜೀವನವನ್ನು ಚಿಂತೆಯಿಲ್ಲದೆ ಆನಂದಿಸಬಹುದು.
ಮರುಖರೀದಿ ಸೌಲಭ್ಯ ದೊಂದಿಗೆ
3 ವರ್ಷಗಳಲ್ಲಿ 40% ಮೌಲ್ಯ ದೊಂದಿಗೆ
₹1.5* ಲಕ್ಷದವರೆಗೆ ಬಾಡಿಗೆ ಆದಾಯವನ್ನು ಗಳಿಸಿ
ಹೈ ಲಿವಿಂಗ್ ಕ್ಲಬ್ ಸದಸ್ಯತ್ವ ಕಾರ್ಡ್
ಪ್ರೀಮಿಯಂ ಸೌಲಭ್ಯಗಳಿಗೆ ಪ್ರವೇಶ ನಮ್ಮ ಎಲ್ಲಾ ಫಾರ್ಮ್ ಲ್ಯಾಂಡ್ ಗಳಿಗೆ.
10 ಎಕರೆ ಕಾಫಿ ಮತ್ತು ಪೆಪ್ಪರ್ ಎಸ್ಟೇಟ್
ನೈಸರ್ಗಿಕ ಕೆರೆಯೊಂದಿಗೆ ಮತ್ತು 20+ ಸೌಲಭ್ಯ ಗಳು
6000 ಚದರ ಅಡಿ ~~₹32~~ ಲಕ್ಷ ₹ 27 ಲಕ್ಷ
8000 ಚದರ ಅಡಿ ~~₹40~~ ಲಕ್ಷ ₹ 34 ಲಕ್ಷ
10000 ಚದರ ಅಡಿ ~~₹45~~ ಲಕ್ಷ ₹ 40 ಲಕ್ಷ
100+ ಎಕರೆ ಮಾರಾಟವಾಗಿದೆ
200+ ಹ್ಯಾಪಿ ಫ್ಯಾಮಿಲೀಸ್
ಇತರೆ ಫಾರ್ಮ್ ಲ್ಯಾಂಡ್ ಗಳು, ಚಿಕ್ಕಮಗಳೂರು | ಸಕಲೇಶಪುರ | ರಾಮನಗರ
78 999 022 34
hilivingestates.com

NISCHITHA
PROPERTIES Pvt.Ltd.
More Than Real Estate
NISCHITHA
JAI DHAMA
Abode of victory
ಇಂದಿನ ನಿರ್ಮಾಣ,
ಉತ್ತಮ ಹೂಡಿಕೆ,
ನಾಳಿನ ಸ್ಥಿರ ಆದಾಯ.
ಒಂದೇ ಹೂಡಿಕೆಯಲ್ಲಿ ಮೂರು ರೀತಿಯ ಲಾಭ
GROWTH FROM
EVERY DIRECTION
N - KWIN CITY & STR ROAD
S - QUANTUM CITY & IRR ROAD
E - FOXCONN, DODDABALLAPURA & AIRPORT
W - NELAMANGALA & INDUSTRIAL HUB
Price
Starts from
₹45.6
LAKHS
Onwards*
NISCHITHA
JAI DHAMA
BMRDA
DPA
Approved
SCAN ME
FOR LOCATION
@ ಬೆಂಗಳೂರು ಉತ್ತರ
ಶ್ರೀ ಶನೇಶ್ವರ ದೇವಸ್ಥಾನದ ಹತ್ತಿರ
ಚಿಕ್ಕ ಮಧುರೆ
Near upcoming IRR 300ft Ring Road
ಕ್ವಾಂಟಂ ಸಿಟಿ & ಕ್ವಿನ್ ಸಿಟಿ
ಈ ಯೋಜನೆಯ ಸುತ್ತಮುತ್ತ ಬರಲಿರುವ ಭವಿಷ್ಯದ ಪ್ರಾಜೆಕ್ಟ್‌ಗಳು
ಹೂಡಿಕೆಗಾಗಿ ಅತ್ಯುತ್ತಮ ಆಯ್ಕೆ
01 BEST FOR CONSTRUCTION
Ready for your Dream Home
02 BEST FOR INVESTMENT
High Appreciation Assured Growth
03 ALSO GIVES RENTAL INCOME
Earn While You Own
ಸ್ಥಳದ ಮುಖ್ಯ ವೈಶಿಷ್ಟ್ಯಗಳು
ದೊಡ್ಡಬಳ್ಳಾಪುರ ಹೆದ್ದಾರಿಯಿಂದ ಕೇವಲ 200 ಮೀಟರ್
ಚಿಕ್ಕ ಮಧುರೇ ದೇವಸ್ಥಾನದ ಎದುರು
ಶಾಲೆ, ಕಾಲೇಜು ಮತ್ತು ಆಸ್ಪತ್ರೆಗಳ ಸಮೀಪ
ವೇಗವಾಗಿ ಅಭಿವೃದ್ಧಿಯಾಗುತ್ತಿರುವ ಪ್ರದೇಶ
ಈ ಯೋಜನೆ ಯಾಕೆ ಉತ್ತಮ ಆಯ್ಕೆ?
ನೊಂದಣಿಗೆ ಸಿದ್ಧ
ನಿಮ್ಮ ಕನಸಿನ ಮನೆಗೆ ಅತ್ಯುತ್ತಮ ಸ್ಥಳ
ನಿರ್ಮಾಣಕ್ಕೆ ಸೂಕ್ತ
ಹೂಡಿಕೆಗೆ ಅತ್ಯುತ್ತಮ
ಉತ್ತಮ ಬಾಡಿಗೆ ಆದಾಯದ ಅವಕಾಶ
ಇಂಟರ್ಮೀಡಿಯೇಟ್ ರಿಂಗ್ ರೋಡ್ (IRR) ಸಮೀಪ
ಉತ್ತಮ ಭವಿಷ್ಯಕ್ಕಾಗಿ ವಿನ್ಯಾಸಗೊಳಿಸಲಾಗಿದೆ
ಉದ್ಯಾನವನ
ನೆಲದಡಿ ವಿದ್ಯುತ್ ವ್ಯವಸ್ಥೆ
ಮಕ್ಕಳ ಆಟದ ಮೈದಾನ
ಕ್ರಿಕೆಟ್ ಪಿಚ್
BOOK YOUR PLOT TODAY!
+91 9164 00 9004
www.nischithaproperties.com
100% ಕಾನೂನುಬದ್ಧ ದಾಖಲೆಗಳು
ನಂಬಿಕಸ್ಥ ಡೆವಲಪರ್
ಬ್ಯಾಂಕ್ ಸಾಲ ಸೌಲಭ್ಯವಿದೆ